ಬುಧವಾರ, ಅಕ್ಟೋಬರ್ 19, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಹಬ್ಬಗಳು ಎಂದರೆ ಖರೀದಿಗಳ ಸಂಭ್ರಮ. ಆನ್‌ಲೈನ್‌ನಲ್ಲಿ ಖರೀದಿಸುವ ಮೊದಲು ಎಚ್ಚರವಿರಲಿ.

ಆಫರ್ ಇಲ್ಲಿಯೂ ಲಭ್ಯವಿದೆ

TRENDS MAN | TRENDS WOMAN | TRENDS junior | TRENDS FOOTWEAR

*ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. ಕೊಡುಗೆ ದಾಸ್ತಾನು ಮುಗಿಯುವ ವರೆಗೆ ಮಾತ್ರ. ಈ ಕೊಡುಗೆ ಇಲ್ಲದೆಯೂ ಉಡುಪುಗಳು ಲಭ್ಯವಿದೆ. 2 ಅಥವಾ ಅದಕ್ಕಿಂತ ಹೆಚ್ಚು ಬಿಲ್‌ಗಳನ್ನು ಪ್ರತ್ಯೇಕಿಸುವುದು ಅಥವಾ ಒಂದುಗೂಡಿಸುವುದಕ್ಕೆ ಅವಕಾಶವಿಲ್ಲ. ಟ್ರೆಂಡ್ಸ್ ಸ್ಟೋರ್‌ನಲ್ಲಿ ಒಂದೇ ಬಿಲ್ ಮೇಲೆ ಕನಿಷ್ಠ ₹2999/- ರ ಶಾಪಿಂಗ್ ಮಾಡಿದಾಗ ಮಾತ್ರವೇ ಕೊಡುಗೆ ಲಭ್ಯವಿರುತ್ತದೆ. ಈ ಕೆಳಗಿನ ಪ್ರಯೋಜನಗಳನ್ನು ಪಡೆಯುವುದಕ್ಕಾಗಿ ಟ್ರೆಂಡ್ಸ್ ಸ್ಟೋರ್‌ನ ಕಸ್ಟಮರ್ ಸರ್ವೀ ಸ್ಡೆಸ್ಕ್‌ನಲ್ಲಿ ದಯವಿಟ್ಟು ನಿಮ್ಮ ಬಿಲ್ ಸಲ್ಲಿಸಿ: ₹1500 ಟ್ರೆಂಡ್ಸ್ ಕೂಪನ್ಸ್ (ತಲಾ ₹500 ಮೌಲ್ಯದ 3 ಕೂಪನ್‌ಗಳು) ಮತ್ತು ₹1500 Trends.ajio.com ಕೂಪನ್ಸ್ (ತಲಾ ₹500ಮೌಲ್ಯದ 3 ಕೂಪನ್‌ಗಳು). ಸವಿವರವಾದ ನಿಯಮ ಮತ್ತು ಷರತ್ತುಗಳು, ಟ್ರೆಂಡ್ಸ್‌ಗಾಗಿ ಹೊರಡಿಸಿರುವ ಕೂಪನ್ ಮೇಲಿನ ಆಫರ್ ವಾಲಿಡಿಟಿ ಇತ್ಯಾದಿಗಳನ್ನು ಇಲ್ಲಿ ನೋಡಿರಿ Trends.ajio.com. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸ್ಟೋರ್ ಸಿಬ್ಬಂದಿಗಳನ್ನು ಸಂಪರ್ಕಿಸಿ. **ಉಡುಗೊರೆಯ ಆಫರ್‌ಗಳು ಫೂಟ್‌ವೇರ್ ಸ್ಟೋರ್‌ಗಳಲ್ಲಿ ಊರ್ಜಿತವಿರುವುದಿಲ್ಲ.**

5% INSTANT DISCOUNT# SBI card

#Min. Trxn.: ₹3,999; Max. Discount: ₹500 per card.
Validity: 15 Sep - 30 Oct 2022. T&C Apply.

ಸಂಕ್ಷಿಪ್ತ ಸುದ್ದಿ

ಕಿದ್ವಾಯಿ ನಿರ್ದೇಶಕರಾಗಿ ಡಾ.ವಿ.ಲೋಕೇಶ್ ನೇಮಕ

ಡಾ. ವಿ.ಲೋಕೇಶ್

ಬೆಂಗಳೂರು: ಇಲ್ಲಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕರಾಗಿ ಡಾ.ವಿ.ಲೋಕೇಶ್ ನೇಮಕಗೊಂಡಿದ್ದಾರೆ.

ಹಾಲಿ ನಿರ್ದೇಶಕ ಡಾ.ಸಿ. ರಾಮಚಂದ್ರ ಅವರ ಅಧಿಕಾರಾವಧಿ 2022ರ ಆಗಸ್ಟ್‌ನಲ್ಲಿ ಅಂತ್ಯಗೊಂಡಿತ್ತು. ಡಾ. ವಿ.ಲೋಕೇಶ್ ಅವರು ಸಂಸ್ಥೆಯ ರೇಡಿಯೇಷನ್ ಆಂಕಾಲಜಿ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸು-ತ್ತಿದ್ದರು. 28 ವರ್ಷಗಳಿಂದ ಸಂಸ್ಥೆಯ ವಿವಿಧ ವೃಂದದಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ.

‘ರಾತ್ರಿ 8-10ರೊಳಗೆ ಪಟಾಕಿ ಸಿಡಿಸಿ’

ಬೆಂಗಳೂರು: ರಾಜ್ಯದಲ್ಲಿ ದೀಪಾವಳಿ ಹಬ್ಬವನ್ನು ಅ.24ರಿಂದ 26ರ ತನಕ ಆಚರಣೆ ಮಾಡಲಾಗುತ್ತಿದ್ದು, ಹಬ್ಬದ ವೇಳೆ ಸುಪ್ರೀಂ ಕೋರ್ಟ್ ನಿರ್ದೇಶನಗಳನ್ನು ಪಾಲಿಸುವಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೂಚಿಸಿದೆ. ಈ ಸಂಬಂಧ ಆಯಾ ಜಿಲ್ಲಾಧಿಕಾರಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಮಂಡಳಿ ಪತ್ರ ಬರೆದಿದೆ.

‘ರಾತ್ರಿ 8ರಿಂದ ರಾತ್ರಿ 10ರ ಒಳಗಾಗಿ ಪಟಾಕಿ ಸಿಡಿಸಬೇಕು. ಉಳಿದ ಸಮಯದಲ್ಲಿ ಪಟಾಕಿ ಸಿಡಿಸುವುದನ್ನು ನಿಷೇಧಿಸಲಾಗಿದೆ. ಹಸಿರು ಪಟಾಕಿ ಹೊರತುಪಡಿಸಿ ಉಳಿದ ಎಲ್ಲ ಮಾದರಿ ಪಟಾಕಿಗಳ ಬಳಕೆ, ಮಾರಾಟ ನಿಷೇಧಿಸಲಾಗಿದೆ’ ಎಂದು ಸೂಚಿಸಿದೆ.

‘ಶಬ್ದ ಹಾಗೂ ವಾಯುಮಾಲಿನ್ಯ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಕೋರ್ಟ್‌ನ ನಿರ್ದೇಶನ ಪಾಲಿಸುವಂತೆ ಸಾರ್ವಜನಿಕರು ಹಾಗೂ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸಬೇಕು. ಘನ ತ್ಯಾಜ್ಯ ವಿಲೇವಾರಿಗೂ ಕ್ರಮ ಕೈಗೊಳ್ಳಬೇಕು’ ಎಂದು ಮಂಡಳಿ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

‘ಶಿವಕುಮಾರ’ ಪ್ರಶಸ್ತಿ ಎಂ.ಜಿ. ಈಶ್ವರಪ್ಪ ಆಯ್ಕೆ

ಎಂ.ಜಿ ಈಶ್ವರಪ್ಪ

ಹೊಸದುರ್ಗ: ದಾವಣಗೆರೆಯ ಜಾನಪದ ವಿದ್ವಾಂಸ ಡಾ.ಎಂ. ಜಿ.ಈಶ್ವರಪ್ಪ ಅವರು ರಂಗಭೂಮಿಗೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಸಾಣೇಹಳ್ಳಿಯ ಶಿವಕುಮಾರ ಕಲಾಸಂಘ ನೀಡುವ ‘ಶಿವಕುಮಾರ’ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹ 50,000 ನಗದು ಮತ್ತು ಫಲಕ ಒಳಗೊಂಡಿದೆ. ಸಾಣೇಹಳ್ಳಿಯಲ್ಲಿ ನ.2ರಿಂದ 8ರವರೆಗೆ ನಡೆಯಲಿರುವ ರಾಷ್ಟ್ರೀಯ ನಾಟಕೋತ್ಸವದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂತ್ಯಗೊಂಡಿದ್ದ ಅಕಾಡೆಮಿ, ಪ್ರಾಧಿಕಾರಗಳ ಕಾರ್ಯಕಾರಿ ಸಮಿತಿ ಅವಧಿ

ಆಡಳಿತಾಧಿಕಾರಿಗಳ ನೇಮಕ: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಯ ಅಕಾಡೆಮಿಗಳು ಹಾಗೂ ಪ್ರಾಧಿಕಾರಗಳ ಅಧ್ಯಕ್ಷರು ಮತ್ತು ಸದಸ್ಯರ ಅಧಿಕಾರಾವಧಿ ಅಂತ್ಯಗೊಂಡಿದ್ದರಿಂದ ಇಲಾಖೆಯ ಜಂಟಿ ನಿರ್ದೇಶಕರನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಈ ಸಂಬಂಧ ಸರ್ಕಾರ ಆದೇಶ ಹೊರಡಿಸಿದೆ. ಇದೇ 15ರಂದು ವಿವಿಧ ಅಕಾಡೆಮಿಗಳ ಕಾರ್ಯಕಾರಿ ಸಮಿತಿಗಳು 3 ವರ್ಷಗಳ ಅಧಿಕಾರಾವಧಿ ಪೂರ್ಣಗೊಳಿಸಿವೆ. ಆದ್ದರಿಂದ ಹೊಸದಾಗಿ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಿಸುವವರೆಗೆ ಜಂಟಿ ನಿರ್ದೇಶಕರನ್ನು ಆಡಳಿತಾಧಿ-ಕಾರಿಗಳನ್ನಾಗಿ ನೇಮಕ ಮಾಡಲಾಗಿದೆ. ಕರ್ನಾಟಕ ನಾಟಕ ಅಕಾಡೆಮಿ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಗಳಿಗೆ ಬಲವಂತರಾವ್ ಪಾಟೀಲ್ ಅವರು ಆಡಳಿತಾಧಿಕಾರಿ-ಯಾಗಿ ನೇಮಕಗೊಂಡಿದ್ದಾರೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಗಳಿಗೆ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಹಾಗೂ ಕರ್ನಾಟಕ ಯಕ್ಷಗಾನ ಅಕಾಡೆಮಿಗೆ ಅಶೋಕ್ ಚಲವಾದಿ, ಕರ್ನಾಟಕ ಬಯಲಾಟ ಅಕಾಡೆಮಿಗೆ ಬಸವರಾಜ್ ಹೂಗಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಗಳಿಗೆ ಬನಶಂಕರಿ ಅಂಗಡಿ ಅವರು ಆಡಳಿತಾಧಿಕಾರಿಯಾಗಿ ನೇಮ-ಕಗೊಂಡಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದ ಬಿ.ವಿ. ವಸಂತಕುಮಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿದ್ದ ಡಿ. ಮಹೇಂದ್ರ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾಗಿದ್ದ ಪ್ರೊ. ಭೀಮಸೇನ್ ಆರ್. ಹಾಗೂ ಕರ್ನಾಟಕ ಅರೆಭಾಷೆ ಅಕಾಡೆಮಿ ಅಧ್ಯಕ್ಷರಾಗಿದ್ದ ಲಕ್ಷ್ಮೀನಾರಾಯಣ ಕಜೆಗದ್ದೆ ಅವರನ್ನು ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಲಹಾ ಸಮಿತಿ ಸದಸ್ಯರನ್ನಾಗಿ ಮುಂದುವರಿಸಲಾಗಿದೆ.

ಬಯಲಾಟ, ಯಕ್ಷಗಾನ ಅಕಾಡೆಮಿ ಅಧ್ಯಕ್ಷರ ಅವಧಿಯೂ ಮುಕ್ತಾಯ

ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಜಿ.ಎಲ್. ಹೆಗಡೆ ಮಣಕಿ ಅವರನ್ನು ಸರ್ಕಾರ 2022ರ ಜನವರಿಯಲ್ಲಿ ನೇಮಕ ಮಾಡಿತ್ತು. ಪ್ರೊ. ಎಂ.ಎ. ಹೆಗಡೆ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಅವರನ್ನು ನೇಮಿಸಲಾಗಿತ್ತು. ವರ್ಷ ಕಳೆಯುವುದರೊಳಗೆಯೇ ಅವರ ಸ್ಥಾನಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿದೆ. ಅದೇ ರೀತಿ, ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಸ್ಥಾನಕ್ಕೆ ಹುಬ್ಬಳ್ಳಿಯ ಅಜಿತ್ ನಾಗಪ್ಪ ಬಸಾಪುರ ಅವರನ್ನು 2022ರ ಆಗಸ್ಟ್ ತಿಂಗಳಲ್ಲಿ ನೇಮಕ ಮಾಡಿತ್ತು. ಈ ವೇಳೆ ನಾಟಕ, ಜಾನಪದ ಸೇರಿ ವಿವಿಧ ಅಕಾಡೆಮಿಗಳಿಗೆ ಸದಸ್ಯರನ್ನೂ ನೇಮಕ ಮಾಡಲಾಗಿತ್ತು. ಆ ನೇಮಕಾತಿಯೂ ಈಗ ರದ್ದಾಗಿದೆ.

ಕನ್ನಡ ಪ್ರಾಧಿಕಾರಕ್ಕೆ ಸಚಿವರೇ ಅಧ್ಯಕ್ಷರು

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರ ಅಧಿಕಾರಾವಧಿಯು 2022ರ ಅ.14ರಂದು ಮುಕ್ತಾಯಗೊಂಡಿದೆ. ಹೊಸ ಅಧ್ಯಕ್ಷರ ನೇಮಕದವರೆಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

‘ಅಕ್ರಮ ನೇಮಕಾತಿ ದಾಖಲೆ ರಾಹುಲ್‌ಗೆ’

ಕಾಂಗ್ರೆಸ್ ಮುಖಂಡರಿಗೆ ಶಿಕ್ಷೆ ಕೊಡುವರೇ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸವಾಲು

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ‘ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನೇಮಕಾತಿಯಲ್ಲಿ ನಡೆದ ಅಕ್ರಮ ವ್ಯವಹಾರಗಳ ಮಾಹಿತಿ ಕಲೆ ಹಾಕಲಾಗಿದ್ದು, ಎಲ್ಲ ದಾಖಲೆಗಳನ್ನು ರಾಹುಲ್ ಗಾಂಧಿ ಅವರಿಗೆ ಕಳಿಸಿಕೊಡಲಾಗುವು-ದು. ಅವರು ತಪ್ಪು ಮಾಡಿದವರಿಗೆ ಏನಾದರೂ ಶಿಕ್ಷೆ ಕೊಡುತ್ತಾರೆಯೇ ಎನ್ನುವುದು ನನ್ನ ನೇರ ಪ್ರಶ್ನೆಯಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಹೇಳಿದರು.

ಪಟ್ಟಣದಲ್ಲಿ ಆಯೋಜಿಸಿದ್ದ ಬಿಜೆಪಿಯ ಜನ ಸಂಕಲ್ಪ ಯಾತ್ರೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಭಾರತ ಜೋಡೊ ಯಾತ್ರೆ ಸಂದರ್ಭದಲ್ಲಿ ಬಳ್ಳಾರಿಯಲ್ಲಿ ರಾಹುಲ್ ಅವರು ಬಿಜೆಪಿ ಸರ್ಕಾರದಲ್ಲಿ ಹಣ ಕೊಟ್ಟರೆ ನೌಕರಿ ಸಿಗುತ್ತದೆ ಎಂದು ಆರೋಪಿಸಿದ್ದಾರೆ. ಸಿದ್ದರಾಮಯ್ಯ ಅವಧಿಯಲ್ಲಿ ನಡೆದ ನೇಮಕಾತಿ ಅಕ್ರಮಗ-ಳನ್ನು ಈಗಾಗಲೇ ಸಿಐಡಿ ಬಯಲು ಮಾಡಿದೆ. ಇಬ್ಬರನ್ನು ಬಂಧಿಸಲಾಗಿದೆ. ಇನ್ನೂ ನಾಲ್ವರು ಬಂಧನಕ್ಕೆ ಒಳಗಾಗಲಿದ್ದಾರೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅರ್ಜಿ ಹಾಕದವರಿಗೂ ನೌಕರಿ ಸಿಕ್ಕಿದೆ’ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

‘ಪೊಲೀಸ್ ನೇಮಕಾತಿ ಸಂದರ್ಭದಲ್ಲಿ ಡಿಐಜಿ ಮನೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಯಿತು. ಡಿಐಜಿ ಅವರೇ ಹಣ ಪಡೆದು ನೌಕರಿ ಕೊಡಿಸಿದ್ದರು. ಡಿಐಜಿ ಶ್ರೀಧರನ್ ವಿರುದ್ಧ ಎಫ್‌ಐಆರ್ ಆದರೂ ಕಾಂಗ್ರೆಸ್‌ನವರು ಪ್ರಕರಣ ಮುಚ್ಚಿ ಹಾಕಿದರು. ಪ್ರಾಸಿಕ್ಯೂಟರ್ ನೇಮಕಾತಿಯಲ್ಲೂ ಹಣ ಪಡೆದರು. ನಾನು ಬಂದ ಮೇಲೆ ಎಲ್ಲರನ್ನೂ ಅಮಾನತು ಮಾಡಿದೆ. ನಂತರ ವಿಶೇಷ ನೇಮಕಾತಿ ಮೂಲಕ ಅರ್ಹರನ್ನು ನೇಮಕ ಮಾಡಿಕೊಳ್ಳಲಾಯಿತು’ ಎಂದರು.

‘ತಪ್ಪು ಮಾಡಿದ ಯಾರನ್ನೂ ಬಿಟ್ಟಿಲ್ಲ. ಕಾಂಗ್ರೆಸ್‌ನವರಿಗೆ ಡಿಐಜಿ ಮುಟ್ಟಲು ಸಾಧ್ಯವಾಗಿರಲಿಲ್ಲ. ಅವರಿಗೆ ದಮ್ ಇರಲಿಲ್ಲ. ಶ್ರೀಧರನ್ ವಿರುದ್ಧ ಕ್ರಮಕ್ಕೆ ನಾನೇ ಅನುಮತಿ ಕೊಟ್ಟಿದ್ದೇನೆ. ಇದೆಲ್ಲವನ್ನೂ ಸನ್ಮಾನ್ಯಶ್ರೀ ರಾಹುಲ್ ಗಾಂಧಿ ಅವರಿಗೆ ಮುಟ್ಟಿಸುತ್ತೇನೆ’ ಎಂದು ಅವರು ತಿಳಿಸಿದರು.

‘ಬಿಜೆಪಿ ಸರ್ಕಾರ 23 ಸಾವಿರ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿದೆ. ಮನೆಗಳ ಹಕ್ಕುಪತ್ರಗಳನ್ನೂ ಕೊಟ್ಟಿದೆ. ಕರ್ನಾಟಕದಲ್ಲಿ ಮತ್ತೊಮ್ಮೆ ಕಮಲ ಅರಳಿಸುವುದೇ ಜನರ ಸಂಕಲ್ಪವಾಗಿದೆ’ ಎಂದು ಹೇಳಿದರು.

ಬೀದರ್ ಜಿಲ್ಲೆಯ ಔರಾದ್‌ನಲ್ಲಿ ಬಿಜೆಪಿಯ ಜನ ಸಂಕಲ್ಪ ಯಾತ್ರೆಗೆ ಗೋಪೂಜೆ ಸಲ್ಲಿಸುವ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ, ಪಶು ಸಂಗೋಪನೆ ಸಚಿವ ಪ್ರಭು ಚವಾಣ್ ಇದ್ದಾರೆ

ಹುಮನಾಬಾದ್ ಮರುನಾಮಕರಣಕ್ಕೆ ಆಗ್ರಹ

ಹುಮನಾಬಾದ್ (ಬೀದರ್ ಜಿಲ್ಲೆ): ‘ರಾಜಾ ಜಯಸಿಂಹನ ಅವಧಿಯಲ್ಲಿ ನಿರ್ಮಾಣ-ಗೊಂಡಿದ್ದ ಜಯಸಿಂಹನಗರಕ್ಕೆ ನಿಜಾಮ್ ಸಂಸ್ಥಾನದ ಅವಧಿಯಿಂದ ಹುಮನಾಬಾದ್ ಎಂಬ ಹೆಸರು ಜಾರಿಗೆ ಬಂದಿದೆ. ಹೀಗಾಗಿ ಪಟ್ಟಣಕ್ಕೆ ‘ಜಯಸಿಂಹನಗರ’ ಎಂದು ಮರುನಾಮಕರಣ ಮಾಡಬೇಕು ಎಂಬುದು ಹಿಂದೂ ಜಾಗರಣ ವೇದಿಕೆ ಮುಖಂಡರು ಮನವಿ ಮಾಡಿದ್ದಾರೆ.

ಪಟ್ಟಣದಲ್ಲಿ ಸೋಮವಾರ ನಡೆದ ಜನಸಂಕಲ್ಪ ಯಾತ್ರೆಯ ಸಂದರ್ಭದಲ್ಲಿ ಹಿಂದೂ ಜಾಗರಣ ವೇದಿಕೆ ಮುಖಂಡರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿ ಜಯಸಿಂಹನಗರ ಎಂದು ಮರು ನಾಮಕರಣ ಮಾಡಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿದ ಮುಖ್ಯಮಂತ್ರಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ವೇದಿಕೆ ಮುಖಂಡರು ತಿಳಿಸಿದ್ದಾರೆ.

‘ಪೇಸಿಎಂ’ ಬಳಿಕ ‘ಸೇಸಿಎಂ’

ಬೆಂಗಳೂರು: ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿ ‘ಪೇಸಿಎಂ’ ಅಭಿಯಾನ ಆರಂಭಿಸಿದ್ದ ಕಾಂಗ್ರೆಸ್ ಈಗ, ಪ್ರಶ್ನೆಗಳನ್ನು ಮುಂದಿಟ್ಟು ‘ಸೇಸಿಎಂ’ ಅಭಿಯಾನ ಶುರು ಮಾಡಿದೆ. ಅಲ್ಲದೆ, ಈ ಪ್ರಶ್ನೆಗಳಿಗೆ ಉತ್ತರಿಸಲು ಕೂಡಾ ‘ಪೇಸಿಎಂ’ ಬೇಕೆ ಎಂದೂ ಪ್ರಶ್ನಿಸಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಕಾಂಗ್ರೆಸ್, ‘ಬಿಜೆಪಿ ನಿಮ್ಮ ಹತ್ತಿರ ಇದೆಯಾ ಉತ್ತರ?’ ಎಂಬ ಅಭಿಯಾನದ ಮೂಲಕ ರಾಜ್ಯ ಬಿಜೆಪಿ ಸರ್ಕಾರಕ್ಕೆ 50 ಪ್ರಶ್ನೆಗಳನ್ನು ಕೇಳಲಾಗಿದೆ. ಆದರೆ, ಈವರೆಗೂ ಒಂದು ಪ್ರಶ್ನೆಗೂ ಉತ್ತರಿಸಿಲ್ಲ’ ಎಂದಿದೆ.

‘ಬಿಜೆಪಿ ತನ್ನ ಚುನಾವಣಾ ಪ್ರಣಾ-ಳಿಕೆಯಲ್ಲಿ 550 ಭರವಸೆಗಳನ್ನು ನೀಡಿತ್ತು. ಈ ಭರವಸೆಗಳ ಬಗ್ಗೆ ಇದುವರೆಗೂ ನಾವು 50 ಪ್ರಶ್ನೆಗಳನ್ನು ಕೇಳಿದ್ದೇವೆ. 50 ಪ್ರಶ್ನೆಗಳಿಗೆ ಉತ್ತರಿ-ಸಲಾಗದ ನಿಮಗೆ, 550 ಪ್ರಶ್ನೆಗಳಿಗೆ ಉತ್ತರಿಸುವ ತಾಕತ್ತಿದೆಯಾ’ ಎಂದು ಪ್ರಶ್ನಿಸಿರುವ ಕಾಂಗ್ರೆಸ್, ‘ಜನರ ಪರವಾಗಿ ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರಿಸದಿದ್ದರೆ ಪೇಸಿಎಂ ಜೊತೆಗೆ ಸೇಸಿಎಂ ಅಭಿಯಾನ ಮಾಡಬೇಕಾ-ಗುತ್ತದೆ’ ಎಂದಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ, ‘ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವ-ಸೆಗಳಲ್ಲಿ ಶೇ 10ರಷ್ಟನ್ನೂ ಬಿಜೆಪಿ ಈಡೇರಿಸಿಲ್ಲ. ಹೀಗಾಗಿ, ನಾವು ಪೇಸಿಎಂ ಅಭಿಯಾನದ ಜತೆಗೆ ‘ಸೇಸಿಎಂ’ ಆಂದೋಲನದ ಮೂಲಕ 50 ಪ್ರಶ್ನೆ ಕೇಳಿದ್ದೇವೆ. ಸರ್ಕಾರ ಮೂಕ ಬಸವನ ರೀತಿ ಕುಳಿತರೆ ಆಗುವುದಿಲ್ಲ. ಪ್ರಣಾಳಿಕೆ ತೋರಿಸಿ ಜನರಿಂದ ಮತ ಹಾಕಿಸಿಕೊಂಡಿರುವ ಬಿಜೆಪಿ ಉತ್ತರಿಸಬೇಕು’ ಎಂದು ಆಗ್ರಹಿಸಿದರು.



ಕಾಂಗ್ರೆಸ್‌ನಿಂದ ‘ಸೇಸಿಎಂ’ ಅಭಿಯಾನ

ಸುದ್ದಿ 2 ನಿಮಿಷ

660 ಎಇ ಹುದ್ದೆ: ಸಂದರ್ಶನಕ್ಕೆ 1,974 ಅಭ್ಯರ್ಥಿಗಳು ಆಯ್ಕೆ

ಬೆಂಗಳೂರು: ಲೋಕೋಪಯೋಗಿ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಎಂಜಿನಿಯರ್ (ಗ್ರೇಡ್ 1) 660 (ಹೈದರಾಬಾದ್–ಕರ್ನಾಟಕ 60) ಹುದ್ದೆಗಳ ನೇಮಕಾತಿಗೆ ನಡೆಸಿದ್ದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, 1:3 ಅನುಪಾತದಲ್ಲಿ ಸಂದರ್ಶನಕ್ಕೆ ಆಯ್ಕೆಯಾದ 1,974 ಅಭ್ಯರ್ಥಿಗಳ ಪಟ್ಟಿಯನ್ನು ಕೆಪಿಎಸ್‌ಸಿ ಮಂಗಳವಾರ ಪ್ರಕಟಿಸಿದೆ.

ಈ ಹುದ್ದೆಗಳ ನೇಮಕಾತಿಗೆ 2020 ಜುಲೈ 30ರಂದು ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿತ್ತು. 2021ರ ಡಿ. 14 ಮತ್ತು 15ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆದಿತ್ತು. ಅಂದು ರೈಲು ವಿಳಂಬದ ಕಾರಣಕ್ಕೆ ಸಮಯಕ್ಕೆ ಸರಿಯಾಗಿ ಪರೀಕ್ಷಾ ಕೇಂದ್ರಕ್ಕೆ ತಲುಪಲು ಸಾಧ್ಯವಾಗದ ಅಭ್ಯರ್ಥಿಗಳಿಗೆ ಡಿ. 29ರಂದು ಮರು ಪರೀಕ್ಷೆ ನಡೆಸಲಾಗಿತ್ತು.

ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ (2019) ಈ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ಪರೀಕ್ಷೆ ನಡೆಸಲಾಗಿತ್ತು. ಆದರೆ, ನಂತರ ಬಂದ ಬಿಜೆಪಿ ಸರ್ಕಾರ, ಆ ನೇಮಕಾತಿ ಪ್ರಕ್ರಿಯೆಯನ್ನು ರದ್ದುಪಡಿಸಿ, ಹೊಸದಾಗಿ 60 ಹುದ್ದೆಗಳನ್ನು (ಹೈದರಾಬಾದ್–ಕರ್ನಾಟಕ) ಸೇರಿಸಿ ಕೆಪಿಎಸ್‌ಸಿ ಮೂಲಕ ಅಧಿಸೂಚನೆ ಹೊರಡಿಸಿತ್ತು.

‘ಮೀಸಲಾತಿ ಘೋಷಿಸದಿದ್ದರೆ ಕಪ್ಪುಪಟ್ಟಿ ಧರಿಸಿ ಚನ್ನಮ್ಮ ಜಯಂತಿಯಲ್ಲಿ ಭಾಗಿ’

ಬಾಗಲಕೋಟೆ: ಪಂಚಮಸಾಲಿ ಸಮಾಜಕ್ಕೆ ಅ.23 ರೊಳಗೆ 2ಎ ಮೀಸಲಾತಿ ಘೋಷಿಸದಿದ್ದರೆ, ಅಂದು ನಡೆಯುವ ವೀರರಾಣಿ ಕಿತ್ತೂರು ಚನ್ನಮ್ಮ ಜಯಂತಿಯಲ್ಲಿ ಸಮಾಜದವರು ಕೈಗೆ ಕಪ್ಪುಪಟ್ಟಿ ಪಾಲ್ಗೊಳ್ಳುವ ಮೂಲಕ ಹಕ್ಕೊತ್ತಾಯ ಮಂಡಿಸಬೇಕು ಎಂದು ಅಖಿಲ ಭಾರತ ಪಂಚಮಸಾಲಿ ಲಿಂಗಾಯತ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಹಿರಿಯರ ಸಲಹೆ ಮೇರೆಗೆ ಚನ್ನಮ್ಮನ ಜಯಂತಿ ಬಹಿಷ್ಕರಿಸದೆ, ಕಪ್ಪು ಪಟ್ಟಿ ಧರಿಸಿ ಭಾಗವಹಿಸಲು ನಿರ್ಧರಿಸಲಾಗಿದೆ’ ಎಂದರು.

‘ಬೇರೆ ಸಮುದಾಯಗಳಿಗೆ ಮೀಸಲಾತಿ ನೀಡುವುದಕ್ಕೆ ನಮ್ಮ ವಿರೋಧವಿಲ್ಲ, ನಮ್ಮ ಬೇಡಿಕೆಗೂ ಅವರು ವಿರೋಧಿಸುವುದು ಸರಿಯಲ್ಲ. ಮೀಸಲಾತಿ ಘೋಷಿಸದಿದ್ದರೆ, ನವೆಂಬರ್‌ನಲ್ಲಿ ವಿಧಾನಸೌಧಕ್ಕೆ 25 ಲಕ್ಷ ಜನರೊಂದಿಗೆ ಮುತ್ತಿಗೆ ಹಾಕಲಿದ್ದೇವೆ’ ಎಂದರು.

ಅ. 21ರಿಂದ ಗಣಿ ನಾಡಿನಲ್ಲಿ ವಿಶ್ವ ಕವಿ ಸಮ್ಮೇಳನ

ಬಳ್ಳಾರಿ: ಇಲ್ಲಿನ ‘ಅರಿವು’ ಸಂಸ್ಥೆ ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪ್ರವಾಸೋದ್ಯಮ ಇಲಾಖೆ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ನಗರದಲ್ಲಿ ಅ.21ರಿಂದ 3ದಿನ ‘ಸಂಗಂ’ ಎಂಬ ವಿಶ್ವ ಕವಿ ಸಮ್ಮೇಳನ ನಡೆಯಲಿದೆ.

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಹಾಗೂ ನ್ಯೂಸ್ 18 ಮಾಧ್ಯಮ ಸಹಭಾಗಿತ್ವದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಚಂದ್ರಶೇಖರ ಕಂಬಾರ 21ರಂದು ಬೆಳಿಗ್ಗೆ 11 ಗಂಟೆಗೆ ಇಲ್ಲಿನ ಬಿಐಟಿಎಂ ಕಾಲೇಜು ಸಭಾಂಗಣದಲ್ಲಿ ಕವಿ ಸಮ್ಮೇಳನ ಉದ್ಘಾಟಿಸುವರು ಎಂದು ಸಂಗಂ ಸಂಘಟನಾ ಅಧ್ಯಕ್ಷ ಡಾ. ಅರವಿಂದ್ ಪಟೇಲ್, ಪ್ರಧಾನ ಪ್ರಾಯೋಜಕ ಸಿರಿಗೇರಿ ಪನ್ನಾರಾಜ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬಳ್ಳಾರಿ ನಗರದ ಶಾಸಕ ಜಿ. ಸೋಮಶೇಖರರೆಡ್ಡಿ ಅಧ್ಯಕ್ಷತೆ ವಹಿಸುವರು, ಜಿಲ್ಲಾ ಉಸ್ತುವಾರಿ ಸಚಿವ ಬಿ. ಶ್ರೀರಾಮುಲು, ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

22ರಂದು ಸಂಜೆ 6 ಗಂಟೆಗೆ ನಡೆಯುವ ಸಂಗಂ ಸಾಹಿತ್ಯ ಪುರಸ್ಕಾರ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗವಹಿಸ-ಲಿದ್ದಾರೆ. ಸಾಹಿತ್ಯ ಪುರಸ್ಕಾರ ₹ 25 ಸಾವಿರ ನಗದು ಒಳಗೊಂಡಿದೆ ಎಂದು ಅರವಿಂದ ಪಟೇಲ್ ಮತ್ತು ಪನ್ನಾರಾಜ್ ವಿವರಿಸಿದರು.

ಕವಿ, ನಾಟಕಕಾರ ಎಚ್.ಎಸ್. ಶಿವಪ್ರಕಾಶ್ ಸೇರಿದಂತೆ ಅನೇಕರು ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳಲಿದ್ದಾರೆ. 23ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ಎಲ್. ಹನುಮಂತಯ್ಯ ಸಮಾರೋಪ ಭಾಷಣ ಮಾಡುವರು. ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸುವರು ಎಂದರು.

ಗಾಣಗಾಪುರ: ವೃದ್ಧೆಯ ಶವ ತಿಂದ ನಾಯಿಗಳು

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಯಾತ್ರಾ ಸ್ಥಳ ದೇವಲ ಗಾಣಗಾಪುರದಲ್ಲಿ ವೃದ್ಧೆಯ ಶವವನ್ನು ನಾಯಿಗಳು ಎಳೆದಾಡಿ, ತಿಂದ ಘಟನೆ ನಡೆದಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ದೇವಲ ಗಾಣಗಾಪುರದಲ್ಲಿದ್ದ 20 ವೃದ್ಧರನ್ನು ನಗರದ ವೃದ್ಧಾಶ್ರಮಕ್ಕೆ ಮಂಗಳವಾರ ಸ್ಥಳಾಂತರಿಸಿದೆ.

ಜಿಲ್ಲಾಧಿಕಾರಿ ಯಶವಂತ ವಿ. ಗುರುಕರ್ ಅವರ ಸೂಚನೆ ಮೇರೆಗೆ ಮಂಗಳವಾರ ದೇವಲ ಗಾಣಗಾಪುರಕ್ಕೆ ದೌಡಾಯಿಸಿದ ಜಿಲ್ಲಾ ಪಂಚಾಯಿತಿ ಸಿಇಒ ಡಾ. ಗಿರೀಶ್ ಡಿ. ಬದೋಲೆ, ದತ್ತ ಮಂದಿರದ ಆಡಳಿತ ಮಂಡಳಿ ಸದಸ್ಯರಿಂದ ವಿವರಣೆ ಪಡೆದರು. ಇದಾದ ಕೆಲ ಹೊತ್ತಿನಲ್ಲಿ ಅಫಜಲಪುರ ತಹಶೀಲ್ದಾರ್ ಸಂಜುಕುಮಾರ ದಾಸರ ಅಲ್ಲಿದ್ದ ವೃದ್ಧರನ್ನು ಸ್ಥಳಾಂತರಿಸಿದರು.

ಇದಕ್ಕೂ ಮುನ್ನ ಸಿಇಒ ಅವರಿಗೆ ಮಾಹಿತಿ ನೀಡಿದ ದೇವಸ್ಥಾನದ ಟ್ರಸ್ಟ್ ಕಮಿಟಿ ಸದಸ್ಯರು, ‘ಸುಮಾರು 68 ವರ್ಷದ ವೃದ್ದೆಯನ್ನು ಶನಿವಾರ ರಾತ್ರಿ ಯಾರೋ ತಂದು ಬಿಟ್ಟು ಹೋಗಿದ್ದಾರೆ. ಗಾಣಗಾಪುರದ ಸಂಗಮಕ್ಕೆ ಹೋಗುವ ಮಾರ್ಗದ ದ್ಯಾಮವ್ವ ಗುಡಿಯ ಹತ್ತಿರ ವೃದ್ದೆಯನ್ನು ಬಿಟ್ಟು ಹೋದ ಜಾಗದಲ್ಲಿ ಕತ್ತಲೆ ಆವರಿಸಿದ್ದರಿಂದ ಮೃತಪಟ್ಟಿದ್ದು ಗೊತ್ತಾಗಿಲ್ಲ. ಹೀಗಾಗಿ ರಾತ್ರಿ ಬೀದಿ ನಾಯಿಗಳು ಮೃತ ದೇಹ ತಿಂದಿರಬಹುದು’ ಎಂದರು.

> **ಗಾಣಗಾಪುರದಲ್ಲಿ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಸಿಬ್ಬಂದಿಯನ್ನು ನಿಯೋಜಿಸಿ ಸರ್ವೆ ನಡೆಸಲು ನಿರ್ದೇಶನ ನೀಡಿದ್ದೇನೆ**
> **ಯಶವಂತ ವಿ. ಗುರುಕರ್,** ಜಿಲ್ಲಾಧಿಕಾರಿ

ಭೇಟಿ ನಂತರ 'ಪ್ರಜಾವಾಣಿ'ಯೊಂ-ದಿಗೆ ಮಾತನಾಡಿದ ಸಿಇಒ ಡಾ. ಗಿರೀಶ್, 'ಪ್ರತಿ ಹುಣ್ಣಿಮೆ ಸಂದರ್ಭದಲ್ಲಿ ಇಲ್ಲಿ ವೃದ್ದರನ್ನು ಬಿಟ್ಟು ಹೋಗುವ ರೂಢಿ ಇದೆ. ಅಂಥವರ ವಿರುದ್ಧ ಪ್ರಕರಣ ದಾಖಲಿಸುವಂತೆ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಗಾಣಗಾಪುರದಲ್ಲಿ ಕತ್ತಲು ಇರುವ ಬೀದಿಗಳಲ್ಲಿ ಒಂದು ವಾರದಲ್ಲಿ ಸೋಲಾರ್ ಬೀದಿ ದೀಪ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದು. ವೃದ್ದರನ್ನು ಸರ್ಕಾರಿ ವೃದ್ಧಾಶ್ರಮದಲ್ಲಿ ದಾಖಲಿಸಬಹುದಾಗಿದೆ. ವೃದ್ಧಾಶ್ರಮದ ಸಹಾಯವಾಣಿಯ ಫಲಕವನ್ನು ಅಳವ-ಡಿಸಲಾಗುವುದು' ಎಂದರು.

ಭೂ ಪರಿವರ್ತನೆಗೆ ಅರ್ಜಿ ಸಲ್ಲಿಕೆ ಪ್ರಮಾಣ ಶೇ 71ರಷ್ಟು ಹೆಚ್ಚಳ!

ಬೆಂಗಳೂರು: ಕೃಷಿಕರಲ್ಲದವರೂ ಕೃಷಿ ಭೂಮಿ ಖರೀದಿಸಬಹುದೆಂದು ನಿಯಮ ಸಡಿಲಿಸಿದ ಪರಿಣಾಮ, ರಾಜ್ಯದಲ್ಲಿ ಕೃಷಿ ಭೂಮಿಯನ್ನು ಕೃಷಿಯೇತರ ಬಳಕೆಗೆ ಪರಿವರ್ತಿಸಲು ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಶೇ 71ರಷ್ಟು ಹೆಚ್ಚಿದೆ!

ಕಳೆದ ವರ್ಷ ಭೂ ಪರಿವರ್ತನೆಗೆ 57,002 ಅರ್ಜಿಗಳು ಸಲ್ಲಿಕೆಯಾಗಿದ್ದರೆ, ಈ ವರ್ಷ ಸೆಪ್ಟೆಂಬರ್‌ವರೆಗೆ 97,718 ಅರ್ಜಿಗಳು ಸಲ್ಲಿಕೆ ಆಗಿವೆ.

‘ಕೃಷಿಕರಲ್ಲದವರೂ ಕೃಷಿ ಭೂಮಿ ಖರೀದಿಸಬಹುದೆಂದು ಎರಡು ವರ್ಷಗಳ ಹಿಂದೆ ನಿಯಮ ಬದಲಿಸಲಾಗಿದೆ. ಆ ನಂತರ, ಕೃಷಿ ಭೂಮಿ ಪರಿ-ವರ್ತನೆಗಾಗಿ ಸಲ್ಲಿಕೆಯಾಗುವ ಅರ್ಜಿ ಗಣನೀಯವಾಗಿ ಹೆಚ್ಚಳವಾಗಿದೆ’ ಎಂದು ಕಂದಾಯ ಇಲಾಖೆಯ ಎಸಿಎಸ್ ಕಪಿಲ್ ಮೋಹನ್ ತಿಳಿಸಿದರು.

ಬೆಂಗಳೂರು ನಗರ ಜಿಲ್ಲೆಯಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಏರುಗತಿ-ಯಲ್ಲಿದ್ದು, ಕೃಷಿಯೇತರ ಬಳಕೆಗೆ ಭೂಮಿ ಪರಿವರ್ತಿಸಲು ಈ ವರ್ಷ 6,338 ಅರ್ಜಿಗಳು ಸಲ್ಲಿಕೆ ಆಗಿವೆ. ಕಳೆದ ವರ್ಷ ಇಂತಹ ಅರ್ಜಿಗಳ ಸಂಖ್ಯೆ 4,331 ಆಗಿತ್ತು ಎಂದು ಕ್ರೆಡೈ (ಬೆಂಗಳೂರು) ಘಟಕದ ಅಧ್ಯಕ್ಷ ಸುರೇಶ್ ಹರಿ ತಿಳಿಸಿದರು.

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ

ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

‘ಜನರ ದನಿ, ಅಚ್ಚುಮೆಚ್ಚಿನ ಪತ್ರಿಕೆ’

ನನ್ನ ತಂದೆ ಗಮಕಿ ಎಂ.ರಾಘವೇಂದ್ರರಾವ್ ಪ್ರಸಿದ್ಧ ಗಮಕಿಗಳು. ಅವರ ಅಚ್ಚುಮೆಚ್ಚಿನ ಪತ್ರಿಕೆ ಪ್ರಜಾವಾಣಿ. 1999ರವರೆಗೆ ಜೀವಿಸಿದ್ದ ಅವರು ‘ವಾಚಕರ ವಾಣಿ’ ವಿಭಾಗಕ್ಕೆ ಆಗಾಗ್ಗೆ ಬರೆಯುತ್ತಿದ್ದರು. ಅವರ ಯಾವ ಬರಹವು ಪ್ರಜಾವಾಣಿಯಲ್ಲಿ ಪ್ರಕಟವಾಗದೇ ಇರುತ್ತಿರಲಿಲ್ಲ. ‘ಪ್ರಜಾವಾಣಿ’ ನಾನು ತಿಳಿದ ಮಟ್ಟಿಗೆ ಜನರ ದನಿಯಾಗಿ ಸಾಹಿತ್ಯ, ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಯಾವುದೇ ವಿಷಯಗಳಾದರೂ ಇದಮಿತ್ಥಂ ಎಂದು ಹೇಳುವ ಪತ್ರಿಕೆ. ಭಾನುವಾರದ ಪತ್ರಿಕೆ ಅಕಸ್ಮಾತ್ ಸಿಗದಿದ್ದರೆ ಏನನ್ನೊ ಕಳೆದುಕೊಂಡೆವು ಎಂಬ ಭಾವನೆ ನನ್ನದು.

ಕರ್ನಾಟಕ ಕಲಾಶ್ರೀ
ಡಾ.ಎಂ.ಆರ್.ಸತ್ಯನಾರಾಯಣ

‘ಕನ್ನಡದ ಸಾಕ್ಷಿಪ್ರಜ್ಞೆ ಪ್ರಜಾವಾಣಿ’

1956ರ ನನ್ನ ಹೈಸ್ಕೂಲ್ ದಿನಗಳಿಂದಲೂ ನಾನು ಪ್ರಜಾವಾಣಿಯ ಓದುಗ. ಪದವಿ ವಿದ್ಯಾರ್ಥಿಯಾಗಿದ್ದಾಗ 1962ರಲ್ಲಿ ಕಳುಹಿಸಿದ್ದ, ಹಳ್ಳಿಯಲ್ಲಿ ನಡೆದಿದ್ದ ನಮ್ಮ ವಾಲಿಬಾಲ್ ಪಂದ್ಯದ ಸುದ್ದಿ ಪ್ರಕಟವಾದಾಗಿನಿಂದ ನಾನು ಅದರ ತೀವ್ರ ವ್ಯಾಮೋಹಕ್ಕೆ ಒಳಗಾಗಿದ್ದೇನೆ.

ನಾನು ಶಿಕ್ಷಕವೃತ್ತಿಗೆ ಸೇರಿದ ನಂತರ, 1970ರ ದಶಕದಲ್ಲಿ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳ ಅರೆಕಾಲಿಕ ವರದಿಗಾರನಾಗಿ ಕೆಲಸ ಮಾಡಲು ಅವಕಾಶವಾಗಿತ್ತು. ಪ್ರಕಟವಾಗಿರುವ ನನ್ನ ಎರಡು ಅನುವಾದಿತ ಸಂಕಲನಗಳ ಬಹುಪಾಲು ಕಥೆಗಳು ಪ್ರಕಟವಾಗಿರುವುದು ಪ್ರಜಾವಾ-ಣಿಯಲ್ಲೇ. ಪ್ರಜಾವಾಣಿ ಪ್ರಾರಂಭದಿಂದಲೂ ನಿಷ್ಠುರ, ನಿಷ್ಪಕ್ಷಪಾತ ದೃಷ್ಟಿಯಿಂದ ಪತ್ರಿ-ಕಾಧರ್ಮದ ಘನತೆ ಕಾಪಾಡಿಕೊಂಡಿರುವ ಧೀಮಂತ ಪತ್ರಿಕೆ. ಕನ್ನಡದ ಸಾಕ್ಷಿಪ್ರಜ್ಞೆ. ಅಮೃತ ಮಹೋತ್ಸವ ಸಂಭ್ರಮಾಚರಣೆ-ಯಲ್ಲಿರುವ ನೆಚ್ಚಿನ ಪ್ರಜಾವಾಣಿಗೆ ಹಾರ್ದಿಕ ಅಭಿನಂದನೆಗಳು.

ಪ್ರೊ.ಎಸ್.ಬಿ.ರಂಗನಾಥ್, ದಾವಣಗೆರೆ

‘ಪ್ರಜಾವಾಣಿ @75 ಬಾಲ್ಯದ ನಂಟು’

ಪ್ರಜಾವಾಣಿಗೂ ನನಗೂ ಬಾಲ್ಯದ ನಂಟು. ಮೊದಲಿನಿಂದಲೂ ನಮ್ಮ ತಂದೆ ಪತ್ರಿಕೆಯನ್ನು ಮನೆಗೆ (ವಿಜಯಪುರದಲ್ಲಿ) ತರಿಸು-ತ್ತಿದ್ದರು. ಅವರು ತಪ್ಪದೇ ಓದುತ್ತಿದ್ದರು. ಒಳ್ಳೆಯ ಸುದ್ದಿ ಕವರೇಜ್ ಇರುತ್ತಿತ್ತು. ಆಗಿನಿಂದಲೂ ನಮಗೂ ಅದರ ನಂಟು ಬೆಳೆದಿದೆ.

ರಾಜೇಶ್ವರಿ ಗಾಯಕವಾಡ,
ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ

‘ಪ್ರಜಾವಾಣಿಯೇ ಸಾಟಿ’

ನಾನು ಅರವತ್ತು ವರ್ಷಗಳಿಂದ ಪ್ರಜಾವಾಣಿಯನ್ನು ಓದುತ್ತ ಬಂದಿದ್ದೇನೆ. ಅಕಸ್ಮಾತ್ ಎಂದಾದರೂ ಓದಲು ಸಾಧ್ಯವಾಗದೆ ಇದ್ದ ದಿನ ಏನೋ ಚಡಪಡಿಕೆ. ಮರುದಿನವಾದರೂ ಅದನ್ನು ಸಂಪಾದಿಸಿಕೊಂಡು ಓದದ ಹೊರತು ಮನಸ್ಸಿಗೆ ಸಮಾಧಾನವಿರುವುದಿಲ್ಲ. ಬೇರೆ ಪತ್ರಿಕೆಗಳಲ್ಲಿ ಹೆಚ್ಚು ಓದುವಂಥದ್ದು ಏನೂ ಇರುವುದಿಲ್ಲ ಎಂಬುದೇ ನನ್ನ ಅನುಭವ.

ಪ್ರಜಾವಾಣಿ ಜನಾಭಿಪ್ರಾಯವನ್ನು ರೂಪಿಸುವಲ್ಲಷ್ಟೇ ಅಲ್ಲ, ಸಾಪ್ತಾಹಿಕ ಪುರವಣಿಗಳಲ್ಲಿ ಬರುವ ಸಾಹಿತ್ಯ ಸಂಬಂಧೀ ಲೇಖನಗಳು, ಕಥೆ ಕವನ, ದೀಪಾವಳಿ ವಿಶೇಷಾಂಕಗಳಿಂದ ಕನ್ನಡ ಸಾಹಿತ್ಯಕ್ಕೂ ಕೊಡುಗೆ ನೀಡುತ್ತ ಬಂದಿದೆ.

ತನಿಖಾ ವರದಿಗಳು ಸರ್ಕಾರದ ಕಣ್ಣು ತೆರೆಸುವಲ್ಲಿ ಶ್ಲಾಘನೀಯ ಕಾರ್ಯ ಮಾಡುತ್ತ ಬಂದಿವೆ. ಒಮ್ಮೊಮ್ಮೆ ಬೇಸರ ತರಿಸಿದರೂ ಅದನ್ನು ಮರೆಸುವಂತೆ ಇನ್ನೊಂದು ನಿಷ್ಪಕ್ಷಪಾತ ಬರಹ ಇರುತ್ತದೆ. ಸಂಪಾದಕೀಯಗಳು ಸರ್ಕಾರ ಮುಟ್ಟಿನೋಡಿಕೊಳ್ಳುವಂತಿರುತ್ತವೆ.

ನಮ್ಮ ನೆಚ್ಚಿನ ಪ್ರಜಾವಾಣಿ ಶತಮಾನದತ್ತ ದಾಪುಗಾಲು ಹಾಕುತ್ತ ಸಾಗಲೆಂದು ಹಾರೈಸುತ್ತೇನೆ.

– **ಡಾ. ಆರ್. ಲಕ್ಷ್ಮೀನಾರಾಯಣ,** ಮೂಡಲಪಾಳ್ಯ, ಬೆಂಗಳೂರು

ಪ್ರಶಂಸನೀಯ

ಅಮೃತ ಮಹೋತ್ಸವದ ಸಂದರ್ಭದಲ್ಲಿ ಅಭಿನಂದನೆಗಳು. 60 ವರ್ಷಗಳಿಂದ ಪ್ರತಿನಿತ್ಯ ಕಾಫಿ ಮತ್ತು ಪ್ರಜಾವಾಣಿ ಓದು ಒಟ್ಟಿಗೆ ಆಗುತ್ತಾ ಬಂದಿದೆ. ಪ್ರಜಾವಾಣಿ ಇಲ್ಲದಿದ್ದರೆ ಕಾಫಿ ರುಚಿಸುವುದಿಲ್ಲ. ವರ್ಷಕ್ಕೆ ನಾಲ್ಕು ದಿನ ಪತ್ರಿಕೆಗೆ ರಜೆಯಿರುವಾಗ ಏನೊ ಕಳೆದುಕೊಂಡಂತಹ ಭಾವ. ಮುಖ್ಯವಾಗಿ ಈ ಪತ್ರಿಕೆ ಯಾರ ಪರವೂ ಇಲ್ಲ, ಯಾವುದೇ ಪಕ್ಷದ, ಸರ್ಕಾರದ ಪರವಾಗಿ ಇಲ್ಲ. ಕಾಸಿಗಾಗಿ ಸುದ್ದಿಯ ವಾತಾವರಣದಲ್ಲೂ, ಪ್ರಾಮಾಣಿಕವಾಗಿ 75 ವರ್ಷ ಆಚರಿಸುತ್ತಿರುವುದು ಪ್ರಶಂಸನೀಯ.

ಟಿ.ಪ್ರಭಾಕರ್, ಉಪಾಧ್ಯಕ್ಷ, ಚಿತ್ರಕಲಾ ಪರಿಷತ್, ಬೆಂಗಳೂರು.

‘4 ದಶಕಗಳ ಒಡನಾಟ...’

‘ಪ್ರಜಾವಾಣಿ’ಗೆ 75, ನನಗೂ 75 ವರ್ಷ. ಮೂರು ತಿಂಗಳು. ನಾಲ್ಕು ದಶಕಗಳಿಂದ ಈ ಪತ್ರಿಕೆಯೊಡನೆ ನನ್ನ ಒಡನಾಟ, ಓದಿಗೆ ಬೆಳವಣಿಗೆಗೆ. ಪ್ರಮುಖ ಕತೆಗಾರರು ಅಂಕಣಕಾರರು ರೂಪುಗೊಂಡದ್ದು ಇಲ್ಲಿ. ಸಮಕಾಲೀನ ತಲ್ಲಣಗಳು ಇಲ್ಲಿ ವೈಚಾರಿಕ ವಿಶ್ಲೇಷಣೆಗೆ ಒಳಗಾಗುತ್ತವೆ. ಒಂದು ವಾರ ಈ ಪತ್ರಿಕೆ ದೊರಕದ ಊರಿಗೆ ಹೋಗಿ ಬಂದರೂ ಕ್ರಮವಾಗಿ ಜೋಡಿಸಿಟ್ಟಿರುತ್ತಾರೆ ಮನೆಯಲ್ಲಿ. ಎಲ್ಲ ಓದಿದ ಮೇಲೆಯೇ ಊಟ ತಿಂಡಿ. ವಿಶೇಷ ಖುಷಿ ಎಂದರೆ ನಾನು ಐದಾರು ವರ್ಷ ವರದಿಗಾರನಾಗಿ ಸೇವೆ ಸಲ್ಲಿಸಿದ್ದು. ಆ ಅನುಭವ ವರ್ಣಿಸಲಾಗದ್ದು.

ಒಂದು ಪ್ರಸಂಗ ಹೇಳಬೇಕು: ನನ್ನ ಕಾಲೇಜಿನ ಉಪನ್ಯಾಸಕ ಹುದ್ದೆಯ ಜಾಹೀರಾತು ಪತ್ರಿಕೆಗೆ ಕಳಿಸಿದ್ದೆ. ಅದು ಪ್ರಕಟವಾಗಲಿಲ್ಲ. ಒಂದು ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಕಟವಾಗಲೇಬೇಕಂತೆ. ಬೇಜಾರಾಗಿ ಪತ್ರಿಕೆ ಕಾರ್ಯಾಲಯಕ್ಕೆ ನುಗ್ಗಿ ಕೇಳಿದೆ. ಹೇಳಿದರು: ಉಪನ್ಯಾಸಕ ಹುದ್ದೆಗೆ ಅರ್ಜಿಯೊಡನೆ ಸಲ್ಲಿಸಬೇಕಾದ ಡಿಡಿ ಹಣ ಬಹಳ ಇದೆ. ಇದು ನಿರುದ್ಯೋಗಿಗಳ ಶೋಷಣೆ. ಕಾರಣ ಜಾಹೀರಾತು ಪ್ರಕಟಿಸಲು ಆಗದು. ನಂತರ ಡಿಡಿ ಹಣ ಕಡಿತಗೊಳಿಸಿ ಪ್ರಕಟಣೆಗೆ ಕೊಡಬೇಕಾಯಿತು. ಪ್ರಜಾವಾಣಿಗೆ ತಿದ್ದುಪಡಿ ಹಾಕಬೇಕಾಯಿತು. ಇದು ಜನವಾಣಿಯಾದ ಪ್ರಜಾವಾಣಿ.

ಪ್ರೊ.ಕಾಶಿನಾಥ ಅಂಬಲಗೆ, ಕಲಬುರಗಿ

‘ಪ್ರಜಾವಾಣಿ’ ಓದದೆ ಇರಲಾಗಲ್ಲ

1963ರಿಂದ ‘ಪ್ರಜಾವಾಣಿ’ಗೆ ಅವಲಂಬಿತನಾಗಿದ್ದೇನೆ, ಏಕೆ? ನನ್ನಲ್ಲಿ ಸರಳ ಉತ್ತರ ಇಲ್ಲ! ಈ ಪತ್ರಿಕೆ ಓದದೆ ಒಂದು ದಿನವೂ ಇರಲಾಗಲ್ಲ. ಅತ್ಯುತ್ತಮ ಗುಣಮಟ್ಟದ ವಿಷಯ, ವಿಚಾರ, ವಿವರ, ವೈವಿಧ್ಯಮಯ ವ್ಯವಸ್ಥೆ ಎಲ್ಲವೂ ಅಚ್ಚುಕಟ್ಟು.

ಈವರೆಗಿನ ಎಲ್ಲ ಆಡಳಿತ ಮಂಡಳಿ ಸಂಪಾದಕರು, ಲೇಖಕರು, ಓದುಗರು, ವರದಿಗಾರರು ಎಲ್ಲರಿಗೂ ನೂರು ನಮನಗಳು. ನನ್ನ ಪ್ರಿಯ ‘ಪ್ರಜಾವಾಣಿ’ ನೂರು ಕಾಲ ಬಾಳಲಿ, ಎಲ್ಲರ ಜೀವನ ಬೆಳಗಲಿ.

ಡಾ.ಎಂ.ಟಿ.ಸತ್ಯನಾರಾಯಣ, ಮಲ್ಲೇಶ್ವರ, ಕಡೂರು

‘ಓದುವ ಸಂಸ್ಕೃತಿ’

ಸುಮಾರು ಮೂವತ್ತು ವರ್ಷಗಳಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳನ್ನು ಮನೆಗೆ ತರಿಸುತ್ತೇನೆ. ಮೊದಲು ಓದುವುದು ಮಾತ್ರ ಪ್ರಜಾವಾಣಿ. ನನಗಷ್ಟೇ ಅಲ್ಲ ಮನೆ-ಯವರೆಲ್ಲರಿಗೂ ಪ್ರಜಾವಾಣಿಯೇ ಮೊದಲ ಆದ್ಯತೆ.

ಒಮ್ಮೊಮ್ಮೆ ಪ್ರಜಾವಾಣಿ ಬದಲು ಬೇರೆ ಕನ್ನಡ ಪತ್ರಿಕೆ ಹಾಕಿ ಹೋಗುವುದು ಉಂಟು. ಅಂದು ಪ್ರಜಾವಾಣಿ ಓದದೇ ಇರಲು ಮನಸ್ಸು ಒಪ್ಪುವುದಿಲ್ಲ. ಅಂದು ಪತ್ರಿಕೆಯನ್ನು ಕೊಂಡು ತಂದು ಓದುವ ಅಭ್ಯಾಸ. ಹಬ್ಬದ ದಿನಗಳಲ್ಲಿ ಮನೆಗೆ ಪತ್ರಿಕೆ ಬರದೇ ಇದ್ದಾಗ ಮಾತ್ರ ಬೇಜಾರು. ಇನ್ನು ರೈಲು, ಬಸ್ಸಿನಲ್ಲಿ ಸಂಚಾರ ಮಾಡಬೇಕಾದರೆ ಪ್ರಜಾವಾಣಿ ಪತ್ರಿಕೆ ಜೊತೆಯಲ್ಲಿಯೇ ಇರಬೇಕು.

ಅಭಿಮತ, ಪುರವಣಿ, ಸಾಮಾನ್ಯ ಜ್ಞಾನ, ಆರೋಗ್ಯದ ಬಗ್ಗೆ ಲೇಖನಗಳು ಉಪಯುಕ್ತವಾಗಿರುತ್ತವೆ. ಪತ್ರಿಕೆಯ ವಿನ್ಯಾಸ, ಭಾಷಾ ಪ್ರೌಢಿಮೆ ಅತ್ಯುತ್ತಮವಾದದ್ದು. ಸುದ್ದಿ, ಅಭಿಮತ ವಿಭಾಗಗಳು ನಿಷ್ಪಕ್ಷಪಾತ ನಿಲುವಿನಿಂದ ಕೂಡಿರುತ್ತವೆ.

ಡಾ. ಜಿ. ಬೈರೇಗೌಡ, ವಿದ್ಯಾರಣ್ಯಪುರ, ಬೆಂಗಳೂರು

‘ವಿನ್ಯಾಸ ಬದಲಾಗಿದ್ದರೂ ರೂಢಿಸಿಕೊಂಡಿದ್ದೆ’

‘ಪ್ರಜಾವಾಣಿ’ ಮೂಲಕವೇ ನನ್ನ ದಿನಪತ್ರಿಕೆಗಳ ಓದು ಶುರುವಾಯಿತು. ತಿಂಡಿ ತಿನ್ನುವ ವೇಳೆಗೆ ಪತ್ರಿಕೆ ಬಂದಿರದಿದ್ದಲ್ಲಿ, ಪತ್ರಿಕೆ ಬರುವವರೆಗೂ ಕಾಯುತ್ತೇನೆ. ತಿಂಡಿಯ ರುಚಿಯಲ್ಲಿ ಆಗಿರಬಹುದಾದ ಕೊರತೆ ಗಮನಕ್ಕೆ ಬಾರದಷ್ಟರ ಮಟ್ಟಿಗೆ ಓದಿನಲ್ಲಿ ಮಗ್ನನಾಗಿ ಬಿಡುತ್ತಿದ್ದೆ. ‘ಪ್ರಜಾವಾಣಿ’ ಎಂದರೆ ಖಚಿತ ಸುದ್ದಿಯ ಆಗರ ಎಂಬುದೇ ನನ್ನ ನಂಬಿಕೆ. ಈಚಿನ ವರ್ಷಗಳಲ್ಲಿ ಪತ್ರಿಕೆ ವಿನ್ಯಾಸ ಬದಲಾದಾಗ ಮನಸ್ಸು ಸುಲಭಕ್ಕೆ ಒಪ್ಪಿರಲಿಲ್ಲ. ಆದರೆ, ಪತ್ರಿಕೆಯ ಓದಿಗೆ ಒಗ್ಗಿಕೊಂಡಿದ್ದರಿಂದ ರೂಢಿ ಅನಿವಾರ್ಯವಾ-ಯಿತು. ಭಾವನೆ ಕೆರಳಿಸುವ, ಪ್ರಚೋದಿಸುವ, ತೇಜೋವಧೆಯಂತಹ ಸುದ್ದಿಗಳು ‘ಪ್ರಜಾ-ವಾಣಿ’ಯಲ್ಲಿ ವಿರಳ. 75 ವರ್ಷಗಳಿಂದ ಸುದ್ದಿಯ ಗುಣಮಟ್ಟವನ್ನು ಕಾಯ್ದುಕೊಂಡು ಬಂದಿರುವುದು ವಿಶೇಷ. ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಈ ವಾಣಿ ನೂರಾರು ವರ್ಷ ಹೀಗೆ ಮುಂದುವರಿಯಲಿ.

ತೇಜಸ್ವಿ ಪಟೇಲ್, ರೈತ ಮುಖಂಡರು, ದಾವಣಗೆರೆ

ಬುಧವಾರ, ಅಕ್ಟೋಬರ್ 19, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 289 | ಪುಟ 20

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸುರತ್ಕಲ್ ಟೋಲ್‌ಗೇಟ್: ಭುಗಿಲೆದ್ದ ಜನಾಕ್ರೋಶ 4

ವಿದೇಶ-ವಿದ್ಯಮಾನ
ಬ್ರಿಟನ್ ಆರ್ಥಿಕ ಬಿಕ್ಕಟ್ಟು ಎಡವಟ್ಟುಗಳ ಸರಮಾಲೆ

‘ಮುರುಘಾ ಮಠಕ್ಕೆ ಆಡಳಿತಾಧಿಕಾರಿ ನೇಮಿಸಿ’ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,960 ▲	17,486 ▲	₹51,820 (ಬೆಂಗಳೂರು) ▼	₹57,600 (ಬೆಂಗಳೂರು) ▲	82.40 ▼

ಬೆಳಕು ಕೊಟ್ಟವರಿಗೆ ಮತ್ತೆ ಕತ್ತಲು

ಭೂ ಹಂಚಿಕೆಯ 56 ಅಧಿಸೂಚನೆ ರದ್ದು; ಮರು ಪ್ರಸ್ತಾವನೆ ಸಲ್ಲಿಸಲು ಸೂಚನೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಮುಳುಗಡೆ ಸಂತ್ರಸ್ತರ ಪುನರ್ವಸತಿ ಸೇರಿದಂತೆ ವಿವಿಧ ಉದ್ದೇಶಗಳಿಗೆ ಅರಣ್ಯ ಭೂಮಿ ಹಂಚಿಕೆ ಮಾಡಿ ಹೊರಡಿಸಲಾಗಿದ್ದ 56 ಅಧಿಸೂಚನೆಗಳನ್ನು ಸರ್ಕಾರ ರದ್ದುಪಡಿಸಿದ್ದು, ಒಮ್ಮೆ ಊರು ಕಳೆದುಕೊಂಡು ತಬ್ಬಲಿಗಳಾಗಿದ್ದವರು ಮತ್ತೆ ‘ಅನಾಥ’ರಾಗುವ ಪರಿಸ್ಥಿತಿ ಎದುರಾಗಿದೆ.

ಎಲ್ಲೆಲ್ಲಿ ಭೂಮಿ ಹಂಚಿಕೆ ಮಾಡಲಾಗಿತ್ತೋ ಆ ಪ್ರದೇಶಗಳನ್ನು ಮತ್ತೆ ಸಂತ್ರಸ್ತರಿಗೆ ನೀಡುವ ಬಗ್ಗೆ ಹೊಸದಾಗಿ ಪ್ರಸ್ತಾವ ಸಲ್ಲಿಸುವಂತೆ ಆಯಾ ಜಿಲ್ಲಾಧಿಕಾರಿಗಳಿಗೆ ಸರ್ಕಾರ ಸೂಚಿಸಿದೆ. ‘ಹಂಚಿಕೆಯಾದ ಬಳಿಕ ಮತ್ತೆ ಕಳೆದುಕೊಂಡ ಭೂಮಿ, ಮನೆಜಾಗ ಪುನಃ ಸಿಗಬೇಕಾಗದರೆ, ಕನಿಷ್ಠ ಎರಡು ವರ್ಷ ಬೇಕಾಗಲಿದೆ’ ಎಂದೂ ಇಲಾಖೆ ಮೂಲಗಳು ‘ಪ್ರಜಾವಾಣಿ’ಗೆ ಹೇಳಿವೆ.

ಸರ್ಕಾರ ಹೀಗೆ, ಅಧಿಸೂಚನೆಗಳನ್ನು ರದ್ದುಪಡಿಸಿದ ಪರಿಣಾಮ ಶಿವಮೊಗ್ಗ ಜಿಲ್ಲೆಯ ಶರಾವತಿ ಮುಳುಗಡೆ ಸಂತ್ರಸ್ತ 2 ಸಾವಿರ ಕುಟುಂಬಗಳ ಬದುಕು ಮತ್ತೆ ಅತಂತ್ರವಾಗಿದೆ.ಜತೆಗೆ,ಚಿಕ್ಕಮಗಳೂರು, ಬೆಳಗಾವಿ, ಕೊಡುಗು ಜಿಲ್ಲೆಗಳಲ್ಲಿ ಕೂಡುಬೇಸಾಯ ಸೇರಿದಂತೆ ವಿವಿಧ ಸಾರ್ವಜನಿಕ ಉದ್ದೇಶಗಳಿಗೆ ಹಂಚಿಕೆ ಮಾಡಿದ್ದ ಭೂಮಿಯೂ ಮರಳಿ ಅರಣ್ಯ ಭೂಮಿಗೆ ಸೇರ್ಪಡೆಯಾಗಿದೆ.

ಕೇಂದ್ರ ಸರ್ಕಾರದ ಅನುಮತಿ ಪಡೆಯದೇ ಅರಣ್ಯ ಭೂಮಿಯನ್ನು ಸಂರಕ್ಷಿತ ಪ್ರದೇಶದಿಂದ ಕೈಬಿಡಲಾಗಿದೆ (ಡಿ-ನೋಟಿಫಿಕೇಶನ್) ಎಂದು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ಪುಣಜಿ ಬ್ರಹ್ಮೇಶ್ವರದ ಗಿರೀಶ್ ಆಚಾರ್ ಅವರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಪ್ರಜಾವಾಣಿ ವಿಶೇಷ

ಕೇಂದ್ರದ ಅನುಮತಿ; ಮತ್ತಷ್ಟು ವಿಳಂಬ?

ಸರ್ಕಾರದ ಯೋಜನೆಗಳಿಂದ ನಿರಾಶ್ರಿತರಾದವರ ಪುನರ್ವಸತಿಗಾಗಿ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ ಕರ್ನಾಟಕ ಅರಣ್ಯ ಕಾಯ್ದೆ 1963ರ 28ನೇ ನಿಯಮದ ಅನ್ವಯ ದತ್ತವಾದ ಅಧಿಕಾರ ಚಲಾಯಿಸಿ, ರಾಜ್ಯ ಸರ್ಕಾರ ಅರಣ್ಯ ಭೂಮಿಯನ್ನು ಡಿ-ನೋಟಿಫಿಕೇಶನ್ ಮಾಡಿತ್ತು. ಈಗ ಎಲ್ಲ 56 ಅಧಿಸೂಚನೆಗಳು ರದ್ದಾಗಿವೆ.

‘ಈ ಭೂಮಿಯನ್ನು ಮತ್ತೆ ಸಂತ್ರಸ್ತರಿಗೆ ನೀಡಬೇಕಾದರೆ ಕೇಂದ್ರ ಸರ್ಕಾರದ ಅನುಮತಿ ಪಡೆಯಬೇಕಿದೆ. ಅದಕ್ಕಾಗಿ ಜಿಲ್ಲಾಧಿಕಾರಿಗಳು ಹೊಸದಾಗಿ ಪ್ರಸ್ತಾವ ಸಲ್ಲಿಸಬೇಕು. ನಂತರ ಅರಣ್ಯ ಇಲಾಖೆ ಅನುಮೋದನೆ ನೀಡಿ, ಕೇಂದ್ರಕ್ಕೆ ಕಳುಹಿಸುತ್ತದೆ. ಅನುಮತಿ ದೊರೆತ ನಂತರ ಕಂದಾಯ ಇಲಾಖೆಗೆ ಹಸ್ತಾಂತರಿಸಲಾಗುತ್ತದೆ. ಫಲಾನುಭವಿಗಳಿಗೆ ಮರು ಹಂಚಿಕೆ ಮಾಡುವ ಹೊಣೆ ಕಂದಾಯ ಇಲಾಖೆ ಮಾಡುತ್ತದೆ’ ಎಂದು ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಸಂಜಯ್ ಬಿಜ್ಜೂರು ವಿವರ ನೀಡಿದರು.

‘ಕೇಂದ್ರ ಸರ್ಕಾರದ ಅನುಮತಿ ಪಡೆದು ಮತ್ತೆ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಲು ಕನಿಷ್ಠ ಎರಡು ವರ್ಷಗಳು ಬೇಕಾಗಬಹುದು. ಇನ್ನು ಆರು ತಿಂಗಳಿಗೆ ಈ ಸರ್ಕಾರದ ಅವಧಿ ಮುಗಿಯುತ್ತದೆ. ಲಿಂಗನಮಕ್ಕಿಗಾಗಿ ಎಲ್ಲ ಕಳೆದುಕೊಂಡ ನಮಗೆ ಆರು ದಶಕಗಳು ಕಳೆದರೂ ಪುನರ್‌ವಸತಿ ಸಿಗಲಿಲ್ಲ. ಈಗ ಸಿಕ್ಕಿದ್ದನ್ನೂ ಕಿತ್ತುಕೊಂಡಿದ್ದಾರೆ’ ಎಂದು ಶರಾವತಿ ಮುಳುಗಡೆ ಸಂತ್ರಸ್ತ ಹೆಬ್ಬೂರು ನಾಗರಾಜ್ ಸಂಕಟ ತೋಡಿಕೊಂಡರು.

ನಿಜವಾದ ಸಂತ್ರಸ್ತರಿಗೆ ಭೂಮಿ ಹಂಚಿಕೆ ಮಾಡಲು ವಿರೋಧವಿಲ್ಲ. ಅವರ ಹೆಸರಿನಲ್ಲಿ ಹಲವರು ಭೂಮಿ ಕಬಳಿಸಿದ್ದು, ಅವರ ವಿರುದ್ಧ ನಮ್ಮ ಹೋರಾಟ

ಗಿರೀಶ್ ಆಚಾರ್, ಪಿಐಎಲ್ ಸಲ್ಲಿಸಿದ್ದ ಸಾಮಾಜಿಕ ಹೋರಾಟಗಾರ

ಅಂಕಿ ಅಂಶಗಳು

6,458 ಎಕರೆ
ಶರಾವತಿ ಸಂತ್ರಸ್ತರಿಗೆ ನೀಡಿದ್ದ ಭೂಮಿ

1,200 ಎಕರೆ ಭೂಮಿ
ಚಿಕ್ಕಮಗಳೂರು, ಬೆಳಗಾವಿ, ಕೊಡಗು ಜಿಲ್ಲೆಗಳಲ್ಲಿ ಸಾರ್ವಜನಿಕ ಉದ್ದೇಶಕ್ಕೆ

ವರ್ಷ	ಹಂಚಿಕೆಯಾದ ಭೂಮಿ (ಎಕರೆಯಲ್ಲಿ)
2015	2,890
2016	1,801
2017	1,767
ಒಟ್ಟು	6,458

4ನೇ ಪುಟ ನೋಡಿ

ಕೇದಾರನಾಥದಿಂದ ಗುಪ್ತಕಾಶಿ ಮಾರ್ಗದಲ್ಲಿ ದುರಂತ

ಹೆಲಿಕಾಪ್ಟರ್ ಪತನ: 7 ಸಾವು

ಪತನಗೊಂಡಿರುವ ಹೆಲಿಕಾಪ್ಟರ್‌ನ ಅವಶೇಷಗಳು –ಪಿಟಿಐ ಚಿತ್ರ

ರುದ್ರಪ್ರಯಾಗ (ಉತ್ತರಾಖಂಡ) (ಪಿಟಿಐ): ಕೇದಾರನಾಥ ದೇವಾಲಯದಿಂದ ಗುಪ್ತಕಾಶಿಗೆ ಆರು ಭಕ್ತರನ್ನು ಕರೆದೊಯ್ಯುತ್ತಿದ್ದ ಹೆಲಿಕಾಪ್ಟರ್ ದಟ್ಟ ಮಂಜಿನ ಕಾರಣದಿಂದಾಗಿ ಮಂಗಳವಾರ ಪತನಗೊಂಡಿದೆ. ಆರು ಮಂದಿ ಭಕ್ತರು ಮತ್ತು ಪೈಲಟ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಆರ್ಯನ್ ಏವಿಯೇಷನ್ ಸಂಸ್ಥೆಯ ಬೆಲ್-407 ಹೆಲಿಕಾಪ್ಟರ್‌ಗೆ ಬೆಳಿಗ್ಗೆ 11.45ರ ಹೊತ್ತಿಗೆ ಗರುಡಚಟ್ಟಿ ಎಂಬಲ್ಲಿ ಬೆಂಕಿ ಹತ್ತಿಕೊಂಡಿತು ಎಂದು ರುದ್ರಪ್ರಯಾಗ ಜಿಲ್ಲಾ ವಿಪತ್ತು ನಿರ್ವಹಣಾಧಿಕಾರಿ ಹೇಳಿದ್ದಾರೆ.

ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆ, ಉತ್ತರಾಖಂಡ ಮತ್ತು ದೆಹಲಿಯ ವಿಪತ್ತು ಸ್ಪಂದನಾ ಪಡೆ ಮತ್ತು ಪೊಲೀಸರು ಜತೆಯಾಗಿ ಮೃತ ದೇಹಗಳನ್ನು ಕೇದಾರನಾಥದ ಹೆಲಿಪ್ಯಾಡ್‌ಗೆ ತಂದಿದ್ದಾರೆ.

ಗುಜರಾತ್‌ನ ಪೂರ್ವ ರಾಮಾನುಜ (26), ಕೃತಿ ಬ್ರಾರ್ (30), ಉರ್ವಿ ಬ್ರಾರ್ (25), ತಮಿಳುನಾಡಿನ ಸುಜಾತಾ (56), ಪ್ರೇಮ್ ಕುಮಾರ್ ಮತ್ತು ಕಲಾ (60) ಮೃತಪಟ್ಟವರು. ಪೈಲಟ್ ಅನಿಲ್ ಸಿಂಗ್ (57) ಅವರು ಮಹಾರಾಷ್ಟ್ರದವರು.

4ನೇ ಪುಟ ನೋಡಿ

ಜಯಾ ಸಾವಿನಲ್ಲಿ ಶಶಿಕಲಾ ಪಾತ್ರದ ತನಿಖೆಗೆ ಸಲಹೆ

ಚೆನ್ನೈ (ಪಿಟಿಐ): ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಜೆ. ಜಯಲಲಿತಾ ಅವರು 2016ರಲ್ಲಿ ಸಾಯುವುದಕ್ಕೆ ಕಾರಣವಾಗಿದ್ದ ಅಂಶಗಳ ಬಗ್ಗೆ ಪರಿಶೀಲನೆ ನಡೆಸಿದ ಆಯೋಗವು ವಿ.ಕೆ. ಶಶಿಕಲಾ ಅವರ ಪಾತ್ರದ ಕುರಿತು ತನಿಖೆ ನಡೆಸಬೇಕು ಎಂದು ಶಿಫಾರಸು ಮಾಡಿದೆ. ಶಶಿಕಲಾ ಅವರು ಜಯಲಲಿತಾ ಅವರಿಗೆ ಅತ್ಯಂತ ಆಪ್ತವಾಗಿದ್ದರು. ವರದಿಯ ಕುರಿತು ಕಾನೂನು ಅಭಿಪ್ರಾಯ ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದು ತಮಿಳುನಾಡು ಸರ್ಕಾರವು ಮಂಗಳವಾರ ತಿಳಿಸಿದೆ.

ಶಶಿಕಲಾ

ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಗಿದೆ. ಶಶಿಕಲಾ ಅವರಲ್ಲದೆ ಇತರ ಹಲವರ ಪಾತ್ರದ ಬಗ್ಗೆಯೂ ತನಿಖೆ ನಡೆಸಬೇಕು ಎಂದು ಸಮಿತಿಯು ಸಲಹೆ ಕೊಟ್ಟಿದೆ. ಜಯಲಲಿತಾ ಸಾಯುವ ಸಂದರ್ಭದಲ್ಲಿ ಆರೋಗ್ಯ ಸಚಿವರಾಗಿದ್ದ ಸಿ.ವಿಜಯಭಾಸ್ಕರ್, ವೈದ್ಯ ಕೆ.ಎಸ್. ಶಿವಕುಮಾರ್ (ಇವರು ಶಶಿಕಲಾ ಅವರ ಸಂಬಂಧಿ), ಆರೋಗ್ಯ ಕಾರ್ಯದರ್ಶಿಯಾಗಿದ್ದ ಜೆ. ರಾಧಾಕೃಷ್ಣನ್ ಮತ್ತು ಮುಖ್ಯ ಕಾರ್ಯದರ್ಶಿಯಾಗಿದ್ದ ರಾಮ ಮೋಹನ ರಾವ್ ಅವರ ಪಾತ್ರದ ಕುರಿತೂ ತನಿಖೆ ಆಗಬೇಕು ಎಂದು ವರದಿಯು ಹೇಳಿದೆ.

ಜಯಾ–ಶಶಿಕಲಾ ಸಂಬಂಧದಲ್ಲಿ ಬಿರುಕು ಬಿಟ್ಟಿತ್ತು

ಜಯಲಲಿತಾ ಅವರ ವಿರುದ್ಧ ಶಶಿಕಲಾ ಮತ್ತು ಅವರ ಸಂಬಂಧಿಕರು ಷಡ್ಯಂತ್ರ ನಡೆಸಿದ್ದಾರೆ ಎಂಬ ವಿಷಯವನ್ನೂ ಆಯೋಗವು ಪರಿಶೀಲನೆಗೆ ಒಳಪಡಿಸಿದೆ.

‘ಬಲವಾದ ಅನುಮಾನದ ಕಾರಣ’ದಿಂದಲೇ ತಮ್ಮ ಪೋಯೆಸ್ ಗಾರ್ಡನ್ ನಿವಾಸದಿಂದ ಶಶಿಕಲಾ ಅವರನ್ನು ಜಯಲಲಿತಾ ಅವರು ಹೊರಗೆ ಹಾಕಿದ್ದರು (2011ರ ನವೆಂಬರ್‌ನಿಂದ 2012ರ ಮಾರ್ಚ್) ಎಂಬುದು ಬಹಳ ಸ್ಪಷ್ಟ. ರಾಜಕೀಯದಲ್ಲಿ ತಲೆ ಹಾಕುವುದಿಲ್ಲ ಎಂದು ಪತ್ರ ಬರೆದುಕೊಟ್ಟ ಬಳಿಕವಷ್ಟೇ ಶಶಿಕಲಾ ಅವರನ್ನು ಮನೆಗೆ ಸೇರಿಸಿಕೊಳ್ಳುತ್ತಾರೆ. ಆದರೆ, ಅವರನ್ನು ‘ದೂರದಲ್ಲೇ’ ಇರಿಸಿದ್ದರು ಎಂದು ವರದಿಯು ಹೇಳಿದೆ. ಸಂಬಂಧವು ಕೆಟ್ಟು ಹೋದ ಕಾರಣಕ್ಕಾಗಿಯೇ ಶಶಿಕಲಾ ಮತ್ತು ಅವರ ಸಂಬಂಧಿಕರನ್ನು ಜಯಲಲಿತಾ ಅವರು ಪೋಯೆಸ್ ಗಾರ್ಡನ್ ನಿವಾಸದಿಂದ ಹೊರಗೆ ಹಾಕಿದ್ದರು ಎಂಬುದನ್ನು ಸಾಕ್ಷಿಗಳ ಹೇಳಿಕೆಯ ಆಧಾರದಲ್ಲಿ ‘ತೀರ್ಮಾನಿಸಬಹುದಾಗಿದೆ’ ಎಂದು ವರದಿ ತಿಳಿಸಿದೆ.

4ನೇ ಪುಟ ನೋಡಿ

ಒಳ ಪುಟಗಳು

‘ಭಯೋತ್ಪಾದನೆ ನಿಗ್ರಹಕ್ಕೆ ಜಗತ್ತು ಸ್ಪಂದಿಸಲಿ’ 5

ಬೀದಿನಾಯಿ ದಾಳಿ: ಹಸುಳೆ ಸಾವು–ಪ್ರತಿಭಟನೆ 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪ್ರಿಯಕರನ ಜತೆ ಮಗಳ ಕೊಲೆ ಮರ್ಯಾದೆಗೇಡು ಹತ್ಯೆ ಶಂಕೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಅನ್ಯಜಾತಿಯ ಯುವಕನನ್ನು ಪ್ರೀತಿಸಿದ್ದಳೆಂಬ ಕಾರಣಕ್ಕೆ ಮಗಳು ಹಾಗೂ ಆಕೆಯ ಪ್ರಿಯಕರನನ್ನು ತಂದೆ ಹತ್ಯೆ ಮಾಡಿರುವ ಘಟನೆ ತಾಲ್ಲೂಕಿನ ಬೇವಿನಮಟ್ಟಿಯಲ್ಲಿ ನಡೆದಿದೆ. ಹತ್ಯೆ ಬಳಿಕ ಮೃತದೇಹಗಳನ್ನು ಕೃಷ್ಣಾ ನದಿಗೆ ಎಸೆಯಲಾಗಿದ್ದು, ಮೃತದೇಹಗಳಿಗಾಗಿ ಪೊಲೀಸರು ಹುಡುಕಾಟ ಆರಂಭಿಸಿದ್ದಾರೆ.

ಹತ್ಯೆಗೆ ಸಂಬಂಧಪಟ್ಟಂತೆ ಬಾಗಲಕೋಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳು ಎನ್ನಲಾದ ರವಿ ಹುಲ್ಲನ್ನವರ, ಹನಮಂತ ಮಲ್ಲಾಡದ ಹಾಗೂ ಬೀರಪ್ಪ ದಳವಾಯಿ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಮುಖ ಆರೋಪಿ ಎನ್ನಲಾದ ಬಾಲಕಿಯ ತಂದೆ ಪರಸಪ್ಪ ಕರಡಿ ಸೇರಿದಂತೆ ನಾಲ್ವರು ತಲೆಮರೆಸಿಕೊಂಡಿದ್ದಾರೆ. ಕುರುಬ ಸಮಾಜದ 17 ವರ್ಷದ ಬಾಲಕಿ ರಾಜೇಶ್ವರಿ (ಹೆಸರು ಬದಲಾಯಿಸಲಾಗಿದೆ) ಹಾಗೂ ವಾಲ್ಮೀಕಿ ಸಮಾಜದ ವಿಶ್ವನಾಥ ನೆಲಗಿ ಇಬ್ಬರೂ ಪ್ರೀತಿಸುತ್ತಿದ್ದರು.

4ನೇ ಪುಟ ನೋಡಿ

ವಿಶ್ವಸಂಸ್ಥೆಯ ಮಾನವ ಹಕ್ಕು ಮಂಡಳಿಗೆ ಕೋಲಾರದ ಅಶ್ವಿನಿ

ಕೋಲಾರ: ವಿಶ್ವಸಂಸ್ಥೆಯ ಮಾನವ ಹಕ್ಕು ಮಂಡಳಿಗೆ (ಯುಎನ್‌ಎಚ್ ಆರ್‌ಸಿ) ಸ್ವತಂತ್ರ ತಜ್ಞೆಯಾಗಿ (Special Rapporteur–SR) ಜಿಲ್ಲೆಯ ಕಸಬಾ ಕುರುಬರಹಳ್ಳಿ ಗ್ರಾಮದ ದಲಿತ ಯುವತಿ ಡಾ.ಕೆ.ಪಿ.ಅಶ್ವಿನಿ ನೇಮಕವಾಗಿದ್ದಾರೆ.

4

ಲುಲು ಗ್ಲೋಬಲ್ ಮಾಲ್ ಎದುರು ಸಂಭವಿಸಿದ್ದ ಅಪಘಾತ: ಸ್ಥಳೀಯರ ಆಕ್ರೋಶ

ರಸ್ತೆ ಗುಂಡಿಯಿಂದ ಅಪಘಾತ: ಗಾಯಗೊಂಡಿದ್ದ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರದ ಲುಲು ಗ್ಲೋಬಲ್ ಮಾಲ್ ಎದುರು ರಸ್ತೆ ಗುಂಡಿ ತಪ್ಪಿಸಲು ಹೋಗಿ ಸಂಭವಿಸಿದ್ದ ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ಉಮಾದೇವಿ (42) ಅವರು ಚಿಕಿತ್ಸೆಗೆ ಸ್ಪಂದಿಸದೆ ಮಂಗಳವಾರ ರಾತ್ರಿ ಮೃತಪಟ್ಟಿದ್ದಾರೆ.

‘ವಸಂತನಗರದ ಮನೆಯೊಂದರಲ್ಲಿ ಕೇರ್ ಟೇಕರ್ ಕೆಲಸ ಮಾಡುತ್ತಿದ್ದ ಉಮಾದೇವಿ, ಮಗಳು ವನಿತಾ (22) ಜೊತೆ ದ್ವಿಚಕ್ರ ವಾಹನದಲ್ಲಿ ಸೋಮವಾರ ಬೆಳಿಗ್ಗೆ ಹೊರಟಿದ್ದರು. ವಾಹನ ಚಲಾಯಿಸುತ್ತಿದ್ದ ವನಿತಾ, ರಸ್ತೆಯಲ್ಲಿದ್ದ ಗುಂಡಿ ತಪ್ಪಿಸಲು ಮುಂದಾಗಿದ್ದರು. ಅದೇ ವೇಳೆ ಹಿಂದೆಯೇ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು’ ಎಂದು ಮಲ್ಲೇಶ್ವರ ಸಂಚಾರ ಪೊಲೀಸರು ಹೇಳಿದರು.

‘ಕೆಳಗೆ ಬಿದ್ದ ಉಮಾದೇವಿ, ಬಸ್ಸಿನಡಿ ಸಿಲುಕಿಕೊಂಡಿದ್ದರು. ತೀವ್ರ ಗಾಯಗೊಂಡಿದ್ದ ಅವರನ್ನು ರಾಜಾಜಿನಗರದ ಇಎಸ್‌ಐ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟಿದ್ದಾರೆ. ಗಾಯಗೊಂಡಿರುವ ಮಗಳು ವನಿತಾ ಆಸ್ಪತ್ರೆಯಲ್ಲಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ’ ಎಂದು ತಿಳಿಸಿದರು.

ಮೃತದೇಹ ಹಸ್ತಾಂತರ: ‘ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಉಮಾದೇವಿ ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ವನಿತಾ ಹಾಗೂ ಉಮಾದೇವಿ ಇಬ್ಬರೂ ಹೆಲ್ಮೆಟ್ ಧರಿಸಿದ್ದರು. ರಸ್ತೆ ಗುಂಡಿಯಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಸ್ಥಳ ಪರಿಶೀಲಿಸಿ, ತನಿಖೆ ಮುಂದುವರಿಸಲಾಗಿದ್ದು, ರಸ್ತೆ ಗುಂಡಿಯಿಂದ ಅಪಘಾತವಾಗಿರುವುದು ಖಾತ್ರಿ ಯಾದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಎರಡನೇ ಸಾವು, ಸ್ಥಳೀಯರ ಆಕ್ರೋಶ: ‘ಓಕಳಿಪುರ– ರಾಜಾಜಿನಗರ ಮಾರ್ಗದಲ್ಲಿರುವ ಲುಲು ಗ್ಲೋಬಲ್ ಮಾಲ್ ಎದುರಿನ ಕೆಳ ಸೇತುವೆಯಲ್ಲಿ 2021ರ ಡಿ.5ರಂದು ಬಿಎಂಟಿಸಿ ಬಸ್, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಸವಾರ ಕೋಲಾರ ಜಿಲ್ಲೆಯ ಮುಳಬಾಗಿಲಿನ ವಿಶ್ವನಾಥ್ (23) ಮೃತಪಟ್ಟಿದ್ದರು. ಇದೀಗ ಇದೇ ಸ್ಥಳದ ಸಮೀಪದಲ್ಲೇ ಅಪಘಾತ ಸಂಭವಿಸಿದ್ದು, ಭಯದಲ್ಲಿ ವಾಹನ ಚಲಾಯಿಸುವಂತಾಗಿದೆ’ ಎಂದು ಓಕಳಿಪುರ ನಿವಾಸಿ ರಾಮಚಂದ್ರ ಹೇಳಿದರು.

‘ಬಿ.ಕಾಂ ವಿದ್ಯಾರ್ಥಿ ವಿಶ್ವನಾಥ್ ಸಾವು ಖಂಡಿಸಿ ರಸ್ತೆ ಸಂಚಾರ ತಡೆದು ಸ್ಥಳೀಯರೆಲ್ಲರೂ ಪ್ರತಿಭಟನೆ ಮಾಡಿದ್ದೆವು. ಹದಗೆಟ್ಟಿರುವ ರಸ್ತೆ ದುರಸ್ತಿ ಮಾಡುವಂತೆ ಆಗ್ರಹಿಸಿದ್ದೆವು. ಆದರೆ, ಬಿಬಿಎಂಪಿ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಅವರ ನಿರ್ಲಕ್ಷ್ಯದಿಂದಲೇ ಇದೀಗ ಮತ್ತೊಂದು ಅಪಘಾತ ಸಂಭವಿಸಿ, ಮಹಿಳೆ ಮೃತಪಟ್ಟಿದ್ದಾರೆ’ ಎಂದು ದೂರಿದರು.

‘ತಾಯಿ ಸ್ಥಿತಿ ಯಾರಿಗೂ ಬರಬಾರದು’

‘ಕುಟುಂಬದ ಆಧಾರ ಸ್ತಂಭವಾಗಿದ್ದ ತಾಯಿಯನ್ನು ರಸ್ತೆಗುಂಡಿಯಿಂದಾಗಿ ಕಳೆದುಕೊಂಡಿದ್ದೇವೆ. ನಮ್ಮ ತಾಯಿಗೆ ಆದ ಸ್ಥಿತಿ ಬೇರೆ ಯಾರಿಗೂ ಆಗಬಾರದು. ಕೂಡಲೇ ಬೆಂಗಳೂರಿನಲ್ಲಿರುವ ರಸ್ತೆಗಳನ್ನು ದುರಸ್ತಿ ಮಾಡಿಸಬೇಕು. ಗುಂಡಿಗಳನ್ನು ಮುಚ್ಚಬೇಕು’ ಎಂದು ಉಮಾದೇವಿಯವರ ಮಗಳು ಸುನಿತಾ ಹೇಳಿದರು.

ಆಸ್ಪತ್ರೆ ಬಳಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನಾವು ಬಡವರು. ದುಡಿಮೆಯೇ ನಮಗೆ ಆಧಾರ. ನಮ್ಮಂತಹ ಬಡವರ ಜೀವದ ಜೊತೆ ಆಟ ಆಡಬೇಡಿ’ ಎಂದು ಕಣ್ಣೀರಿಟ್ಟರು.

ಉಮಾದೇವಿ ಅಳಿಯ ರವಿ, ‘ರಸ್ತೆ ಗುಂಡಿಯಿಂದ ಅತ್ತೆ ಅವರ ಸಾವಾಗಿದೆ. ಸೂಕ್ತ ಪರಿಹಾರ ಒದಗಿಸಬೇಕು. ಕುಟುಂಬದ ಒಬ್ಬರಿಗೆ ಸರ್ಕಾರಿ ಕೆಲಸ ನೀಡಬೇಕು’ ಎಂದು ಆಗ್ರಹಿಸಿದರು.

ನಗರದ ಮೆಗ್ರಾತ್ ರಸ್ತೆಯಲ್ಲಿ ಗುಂಡಿ ಬಿದ್ದಿದ್ದು, ವಾಹನಗಳ ಸಂಚಾರಕ್ಕೆ ತೊಂದರೆಯಾಗಿದೆ – ಪ್ರಜಾವಾಣಿ ಚಿತ್ರ/ರಂಜು ಪಿ.

ಅಶೋಕನಗರದ ಗರುಡಾ ಮಾಲ್ ಬಳಿಯ ರಸ್ತೆಯಲ್ಲಿ ದೊಡ್ಡ ಗಾತ್ರದ ಗುಂಡಿಗಳು ಬಿದ್ದು, ಅಪಾಯಕ್ಕೆ ಆಹ್ವಾನ ನೀಡುತ್ತಿವೆ – ಪ್ರಜಾವಾಣಿ ಚಿತ್ರ

ರಸ್ತೆ ಗುಂಡಿ ಪ್ರಕರಣಗಳು

- **2021ರ ನ. 27:** ಥಣಿಸಂದ್ರ ಮುಖ್ಯರಸ್ತೆಯಲ್ಲಿ ರಸ್ತೆ ಗುಂಡಿಯಲ್ಲಿ ಆಯತಪ್ಪಿ ಬಿದ್ದ ಸ್ಕೂಟರ್ ಸವಾರ ಅಜೀಂ ಅಹ್ಮದ್ (21) ಎಂಬುವರಿಗೆ ಗೂಡ್ಸ್ ವಾಹನವೊಂದು ಡಿಕ್ಕಿ ಹೊಡೆದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅಜೀಂ, ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದರು
- **2021ರ ಸೆಪ್ಟೆಂಬರ್ 7:** ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯ ಮಂಗನಹಳ್ಳಿ ಮುಖ್ಯರಸ್ತೆಯಲ್ಲಿ ಗುಂಡಿಯಿಂದಾಗಿ ದ್ವಿಚಕ್ರ ವಾಹನ ಉರುಳಿ ಬಿದ್ದಿದ್ದು, ಮೈಕೊ ಲೇಔಟ್‌ನ ಬಿಸ್ಮಿಲ್ಲಾ ನಗರದ ಸವಾರ ಖುರ್ಷಿದ್ ಅಹ್ಮದ್ (65) ಎಂಬುವರು ಮೃತಪಟ್ಟಿದ್ದರು
- **2022ರ ಜನವರಿ 29:** ಬ್ಯಾಡರಹಳ್ಳಿ ಮುಖ್ಯರಸ್ತೆಯ ಅಂಜನಾನಗರ ವೃತ್ತದಲ್ಲಿ ರಸ್ತೆ ಗುಂಡಿಯಿಂದಾಗಿ ಅಪಘಾತ ಸಂಭವಿಸಿ ಶಿಕ್ಷಕಿ ಶರ್ಮಿಳಾ (38) ಎಂಬುವರು ಮೃತಪಟ್ಟಿದ್ದರು
- **2022ರ ಮಾರ್ಚ್ 13:** ಎಂ.ಎಸ್. ಪಾಳ್ಯದ ಮುನೇಶ್ವರ ಬಡಾವಣೆಯಲ್ಲಿ ರಸ್ತೆ ಗುಂಡಿಯಿಂದಾಗಿ ಬೈಕ್ ಉರುಳಿಬಿದ್ದಿದ್ದು, ಸವಾರ ಅಶ್ವಿನ್ ಜುಗ್ಡೆ (27) ಮೃತಪಟ್ಟಿದ್ದರು

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಗುಂಡಿ ಮುಚ್ಚಿದ ಪೊಲೀಸರು

‘ನಗರದ ಹಲವೆಡೆ ರಸ್ತೆಗುಂಡಿಗಳು ಬಿದ್ದು, ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ’ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರೂ ಬಿಬಿಎಂಪಿ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ.

ಗುಂಡಿ ಚಿತ್ರಗಳ ಸಮೇತ ಮಾಹಿತಿ ನೀಡಿದರೂ ಮುಚ್ಚಲು ಕ್ರಮ ಕೈಗೊಳ್ಳದ ಅಧಿಕಾರಿಗಳ ವರ್ತನೆಯಿಂದ ಬೇಸತ್ತ ಪೊಲೀಸರು, ಮಂಗಳವಾರ ತಾವೇ ಗುಂಡಿಗಳನ್ನು ಮುಚ್ಚಿದರು. ಆರ್‌.ಟಿ. ನಗರ, ಯಶವಂತಪುರ, ಜಾಲಹಳ್ಳಿ ಹಾಗೂ ಮಲ್ಲೇಶ್ವರ ಸಂಚಾರ ಪೊಲೀಸರು, ತಮ್ಮ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಿದರು.

ನಗರದ ಸಂಚಾರ ಪೊಲೀಸರು ರಸ್ತೆ ಗುಂಡಿಗಳನ್ನು ಮುಚ್ಚಿದರು

ನಗರದ ಆನಂದರಾವ್ ವೃತ್ತಕ್ಕೆ ಹೊಂದಿಕೊಂಡಿರುವ ಶೇಷಾದ್ರಿ ರಸ್ತೆಯ ಬಹುತೇಕ ಕಡೆ ಗುಂಡಿಗಳು ಬಿದ್ದಿವೆ – ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ರಸ್ತೆ ಗುಂಡಿಗೆ ಬಿದ್ದ ಬೈಕ್: ಗರ್ಭಿಣಿ ಸಾವು

ಶ್ರೀರಂಗಪಟ್ಟಣ: ತಾಲ್ಲೂಕಿನ ತರೀಪುರ ಬಳಿ ಸೋಮವಾರ ರಸ್ತೆ ಗುಂಡಿಗೆ ಬೈಕ್ ಬಿದ್ದು ಗಂಭೀರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಗರ್ಭಿಣಿ, ಮಹದೇವಪುರದ ಕಾರ್ತಿಕ್ ಅವರ ಪತ್ನಿ ಛಾಯಾದೇವಿ (22) ಮಂಗಳವಾರ ಸಂಜೆ ಮೃತಪಟ್ಟರು.

ಬೈಕ್ ಚಲಾಯಿಸುತ್ತಿದ್ದ ಕಾರ್ತಿಕ್ ಕೂಡ ಗಾಯಗೊಂಡಿದ್ದು, ಚಿಕಿತ್ಸೆ ಪಡೆದಿದ್ದಾರೆ. ದಂಪತಿ ಮೈಸೂರಿನಿಂದ ಸ್ವಗ್ರಾಮಕ್ಕೆ ಬರುವ ವೇಳೆ ಅಪಘಾತ ನಡೆದಿತ್ತು.

ಅರಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಕ್ರೋಶ: ‘ತರೀಪುರ, ಮಹದೇವಪುರ ಮಾರ್ಗದಲ್ಲಿ ರಸ್ತೆ ತೀರಾ ಹದಗೆಟ್ಟಿದ್ದು, ಉದ್ದಕ್ಕೂ ಗುಂಡಿಗಳು ನಿರ್ಮಾಣವಾಗಿವೆ. ಅದರಿಂದಲೇ ಗರ್ಭಿಣಿ ಛಾಯಾದೇವಿ ಪ್ರಾಣ ಕಳೆದುಕೊಂಡಿದ್ದಾರೆ. ರಸ್ತೆ ದುರಸ್ತಿ ಮಾಡಿಸುವಂತೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಹಲವು ಬಾರಿ ಮನವಿ ಮಾಡಿದ್ದರೂ ಗಮನ ಹರಿಸುತ್ತಿಲ್ಲ’ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಾಗರಬಾವಿಯ 4ನೇ ಹಂತದ ವಿನಾಯಕ ಬಡಾವಣೆಯ ಮುಖ್ಯರಸ್ತೆಯಲ್ಲಿ ಗುಂಡಿಗಳು ಹೆಚ್ಚಾಗಿದ್ದು, ರಸ್ತೆ ಸಂಚಾರವೇ ಅಪಾಯಕಾರಿಯಾಗಿದೆ

ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ

ರಸ್ತೆಗುಂಡಿ ಮುಚ್ಚಲು ₹20 ಕೋಟಿ ವೆಚ್ಚ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಬಿಬಿಎಂಪಿ ಈ ವರ್ಷ ಸುಮಾರು ₹20 ಕೋಟಿ ವೆಚ್ಚ ಮಾಡಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ರಸ್ತೆ ಗುಂಡಿಗಳನ್ನು ಮುಚ್ಚಲು ಸುಮಾರು ₹30 ಕೋಟಿ ವೆಚ್ಚ ಮಾಡಲಾಗುತ್ತಿತ್ತು. ಈ ಬಾರಿ ಹೊಸ ಸಾಫ್ಟ್‌ವೇರ್ ಅಳವಡಿಕೆಯಿಂದ ವೆಚ್ಚ ಕಡಿಮೆಯಾಗಿದೆ. ಸುಮಾರು 22 ಸಾವಿರ ಗುಂಡಿಗಳನ್ನು ಮುಚ್ಚಲು ಈವರೆಗೆ ₹20 ಕೋಟಿ ವೆಚ್ಚ ಮಾಡಲಾಗಿದೆ ಎಂದು ಅವರು ಸುದ್ದಿಗಾರರಿಗೆ ಮಂಗಳವಾರ ವಿವರ ನೀಡಿದರು.

ನಗರದಲ್ಲಿ ಗುಂಡಿಗಳನ್ನು ಮುಚ್ಚಲು ಸಾಕಷ್ಟು ಕ್ರಮ ವಹಿಸಲಾಗಿದೆ. ಕೆಲವು ಬಾರಿ ತುರ್ತಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಆದರೆ ಮಳೆ ಬಿಡುವು ಕೊಡದೆ ಎಲ್ಲ ರೀತಿಯ ಗುಂಡಿಗಳನ್ನು ಮುಚ್ಚಲು ಸಾಧ್ಯವಾಗುತ್ತಿಲ್ಲ. ಇರುವ ಸೌಲಭ್ಯ ಬಳಸಿಕೊಂಡು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಈ ಹಿಂದೆ ಸಂಚಾರ ಪೊಲೀಸರು ನೀಡಿದ್ದ ರಸ್ತೆಗಳ ಪೈಕಿ ಇನ್ನೂ ಒಂದೂವರೆ ಸಾವಿರ ಗುಂಡಿಗಳನ್ನು ಮುಚ್ಚಬೇಕಿದೆ. ಸತತ ಮಳೆಯಿಂದ ಇದೀಗ ಗುಂಡಿಗಳ ಸಂಖ್ಯೆ ಮತ್ತಷ್ಟು ಹೆಚ್ಚಾಗಿದೆ. ರಸ್ತೆ ಗುಂಡಿಗಳನ್ನು ತುರ್ತಾಗಿ ಮುಚ್ಚಲು ಕ್ರಮ ಕೈಗೊಳ್ಳಲಾಗಿದೆ. ಕಲ್ಲು ಹಾಗೂ ಮರಳಿನ ಮಿಶ್ರಣವನ್ನು ಹಾಕಲಾಗುತ್ತಿದೆ ಎಂದು ಬಿಬಿಎಂಪಿ ಯೋಜನೆ ವಿಭಾಗ ವಿಶೇಷ ಆಯುಕ್ತ ರವೀಂದ್ರ ತಿಳಿಸಿದರು.

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,
ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ,ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ದೂರವಾಣಿ: 23300497–41159606 ಫ್ಯಾಕ್ಸ್: 23359600,
Email: jscbinfo@jscbl.com ಶಾಖೆ: ಮಹಾಲಕ್ಷ್ಮಿಪುರಂ

ಸ್ವಾಧೀನ ಸೂಚನೆ (ಸ್ಥಿರಾಸ್ತಿಗಳಿಗಾಗಿ) ನಿಯಮ 8(1)

ದಿ|| ಶ್ರೀಮತಿ ಪಾರ್ವತಮ್ಮ W/o. ಶ್ರೀ.ಜಿ.ನಂಜುಂಡಪ್ಪ

ಶ್ರೀ. ಜಿ.ನಂಜುಂಡಪ್ಪ H/o. ದಿ|| ಶ್ರೀಮತಿ ಪಾರ್ವತಮ್ಮ

ಈ ಕೆಳಗೆ ಸಹಿ ಮಾಡಿರುವವರು ಜನತಾ ಸೇವಾ ಕೋ–ಆಪ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಸ್ವತ್ತುಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿಯ ಜಾರಿ ಕಾಯಿದೆ, 2002 ರ ಅಡಿಯಲ್ಲಿ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರ ಅಡಿಯಲ್ಲಿ ನಿಯಮ **3 ರೊಂದಿಗೆ ಓದಲಾದ ಸೆಕ್ಷನ್ 13 (12) ರ ಅಡಿಯಲ್ಲಿ ಪ್ರದಾನ ಮಾಡಲಾದ ಅಧಿಕಾರದ ಅನುಷ್ಠಾನದಲ್ಲಿ 08/08/2022** ರಂದು ಸಾಲಗಾರರಾದ **ದಿವಂಗತ ಶ್ರೀಮತಿ ಪಾರ್ವತಮ್ಮ W/o ಶ್ರೀ.ಜಿ. ನಂಜುಂಡಪ್ಪ ಅವರ ಕಾನೂನು ಉತ್ತರಾಧಿಕಾರಿಗಳಾಗಿ ಪ್ರತಿನಿಧಿಸಿಲ್ಪಟ್ಟ ಹೆಸರಿಸಿರುವ, ನಂ.3, 4ನೇ ಕ್ರಾಸ್, ಬೈರಲಿಂಗಪ್ಪ ರಸ್ತೆ, ಹನುಮಂತಯ್ಯ ಲೇಔಟ್, ದಾಸರಹಳ್ಳಿ, ಚಿಕ್ಕಸಂದ್ರ, ಬೆಂಗಳೂರು–560057 ವಿಳಾಸದಲ್ಲಿ ವಾಸವಾಗಿರುವ , 1) ಶ್ರೀ.ನಂಜುಂಡಪ್ಪ.ಜಿ. H/o ಲೇಟ್ ಶ್ರೀಮತಿ. ಪಾರ್ವತಮ್ಮ, 2). ಶ್ರೀಮತಿ ಜಿ.ಎನ್.ಶಕುಂತಲಾ D/o ಶ್ರೀ. ಜಿ. ನಂಜುಂಡಪ್ಪ ಮತ್ತು ದಿವಂಗತ ಶ್ರೀಮತಿ. ಪಾರ್ವತಮ್ಮ 3). ಶ್ರೀ.ಗಣೇಶ್.ಎನ್. S/o ಶ್ರೀ.ಜಿ.ನಂಜುಂಡಪ್ಪ ಮತ್ತು ದಿವಂಗತ. ಶ್ರೀಮತಿ.ಪಾರ್ವತಮ್ಮ, 4). ಶ್ರೀ ಮಣಿಕಂಠ.ಎನ್. S/o ಶ್ರೀ.ಜಿ.ನಂಜುಂಡಪ್ಪ ಮತ್ತು ಲೇಟ್.ಶ್ರೀಮತಿ. ಪಾರ್ವತಮ್ಮ** ಇವರಿಗೆ ನೋಟಿಸ್‌ನಲ್ಲಿ ನಮೂದಿಸಿರುವ 08/08/2022 ರವರೆಗಿನ ಮೊತ್ತ 25,12,066/–(ಇಪ್ಪತ್ತೈದು ಲಕ್ಷದ ಹನ್ನೆರಡು ಸಾವಿರದ ಅರವತ್ತಾರು ರೂಪಾಯಿಗಳು ಮಾತ್ರ) ರೂ.ಗಳನ್ನು ಈ ನೋಟೀಸ್ ಅನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳಲ್ಲಿ ಪಾವತಿಸುವಂತೆ ಡಿಮ್ಯಾಂಡ್ ನೋಟೀಸ್ ಅನ್ನು ನೀಡಿದ್ದಾರೆ.

ಸಾಲಗಾರನು ಮೊತ್ತವನ್ನು ಮರುಪಾವತಿಸಲು ವಿಫಲವಾಗಿದ್ದು, ಈ ಕೆಳಗೆ ಸಹಿ ಮಾಡಿದವರು 2002 ರ ಭದ್ರತಾ ಆಸಕ್ತಿ (ಜಾರಿ) ನಿಯಮಗಳ ಕಾಯಿದೆಯ ನಿಯಮ 8 ರ ಅಡಿಯಲ್ಲಿ ಓದಲಾದ ಸೆಕ್ಷನ್ 13 ರ ಸೆಕ್ಷನ್ (4) ರ ಅಡಿಯಲ್ಲಿ ತನಗೆ ನೀಡಲಾದ ಅಧಿಕಾರವನ್ನು ಚಲಾಯಿಸುವ ಮೂಲಕ ಇಲ್ಲಿ ವಿವರಿಸಿದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು 2022 ರ ಅಕ್ಟೋಬರ್‌ನ 18 ನೇ ದಿನದಂದು ಈ ಮೂಲಕ ಸಾಲಗಾರನಿಗೆ ಮತ್ತು ಸಾರ್ವಜನಿಕರಿಗೆ ನೋಟಿಸ್ ನೀಡಿದ್ದಾರೆ.

ನಿರ್ದಿಷ್ಟವಾಗಿ ಸಾಲಗಾರನಿಗೆ ಮತ್ತು ಸಾರ್ವಜನಿಕರಿಗೆ ಈ ಸ್ವತ್ತಿನೊಂದಿಗೆ ವ್ಯವಹರಿಸದಂತೆ ಎಚ್ಚರಿಕೆ ನೀಡಲಾಗಿದೆ ಮತ್ತು ಈ ಸ್ವತ್ತಿನೊಂದಿಗಿನ ಯಾವುದೇ ವ್ಯವಹಾರಗಳು 17/10/2022 ರಂತೆ ಸಾಲ ಸಂಖ್ಯೆ.MTL/55 ರ ರೂ.25,88,155/– (ಇಪ್ಪತ್ತೈದು ಲಕ್ಷದ ಎಂಭತ್ತೆಂಟು ಸಾವಿರದ ನೂರ ಐವತ್ತೈದು ರೂಪಾಯಿಗಳು ಮಾತ್ರ) ಮೊತ್ತ ಮತ್ತು ಅದರ ಬಡ್ಡಿಗಾಗಿ ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಹಾಲಕ್ಷ್ಮಿಪುರಂ ಶಾಖೆ, ಬೆಂಗಳೂರು, ಇವರ ಉಸ್ತುವಾರಿಗೆ ಒಳಪಟ್ಟಿರುತ್ತದೆ.

ಸುರಕ್ಷಿತ ಸ್ವತ್ತುಗಳನ್ನು ಪಡೆದುಕೊಳ್ಳಲು ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ ಕಾಯಿದೆಯ ಸೆಕ್ಷನ್ 13 (8) ರ ನಿಬಂಧನೆಗಳ ಕಡೆಗೆ ಸಾಲಗಾರನ ಗಮನವನ್ನು ಕೋರಲಾಗಿದೆ.

ಸ್ಥಿರಾಸ್ತಿಯ ವಿವರ :

ಪೂರ್ವದಿಂದ ಪಶ್ಚಿಮಕ್ಕೆ: 25+27/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 36+39/2 ಅಡಿ ಅಳತೆಯ ಒಟ್ಟು 975 ಚದರ ಅಡಿಗಳ ಅಳತೆ ಮಾಡಿರುವ ಸ್ಥಿರಾಸ್ತಿ ನಂ.3, ಸರ್ವೇ ನಂ.2/2, PID ನಂ.12–96–3, 4ನೇ ಕ್ರಾಸ್, ಬೈರಲಿಂಗಪ್ಪ ರಸ್ತೆ, ಹನುಮಂತಯ್ಯ ಲೇಔಟ್, ಚಿಕ್ಕಸಂದ್ರ, ಬೆಂಗಳೂರು–560057 ರಲ್ಲಿರುವ ಮನೆಯ ಸ್ಥಿರಾಸ್ತಿಯು ಪೂರ್ವಕ್ಕೆ : ಸೈಟ್ ನಂ.4, ಪಶ್ಚಿಮಕ್ಕೆ: ಖಾಸಗಿ ಆಸ್ತಿ. ಉತ್ತರಕ್ಕೆ: ರಸ್ತೆ ಮತ್ತು ದಕ್ಷಿಣಕ್ಕೆ: ಶ್ರೀ.ದೊರೆಸ್ವಾಮಿ ಯವರ ಸ್ವತ್ತು.

ಸ್ಥಳ : ಬೆಂಗಳೂರು
ದಿನಾಂಕ : 18/10/2022

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

ರಾಜಧಾನಿಯಲ್ಲಿ ಇನ್ನೂ 4 ದಿನ ಮಳೆ ಮುಂದುವರಿಯಲಿದೆ–ಹವಾಮಾನ ಇಲಾಖೆ ಮುನ್ಸೂಚನೆ

ಬಿಡದ ಮಳೆ, ರಸ್ತೆಯಾಯ್ತು ಹೊಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯಲ್ಲಿ ಮಂಗಳವಾರವೂ ಮಳೆಯ ಅಬ್ಬರ ಮುಂದುವರಿದಿದ್ದು, ರಸ್ತೆಗಳು ಹೊಳೆಯಂತೆ ಭಾಸವಾದವು. ಕೆಲವು ಭಾಗಗಳಲ್ಲಿ ಗುಡುಗು–ಸಿಡಿಲಿನ ಅಬ್ಬರ ಜೋರಾಗಿತ್ತು. ಅಂಡರ್‌ಪಾಸ್‌ಗಳಲ್ಲಿ ನೀರು ನಿಂತು ಸಂಚಾರ ಅಸ್ತವ್ಯಸ್ತಗೊಂಡಿತು. ಪ್ರತಿನಿತ್ಯ ಮಧ್ಯಾಹ್ನದ ಬಳಿಕ ಧಾರಾಕಾರ ಮಳೆಯಾಗುತ್ತಿದೆ.

ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣ ಇತ್ತು. 11 ಗಂಟೆ ಸುಮಾರಿಗೆ ಮತ್ತೆ ಬಿಸಿಲು ಕಾಣಿಸಿದರೂ ಮಧ್ಯಾಹ್ನದ ನಂತರ ವಿವಿಧೆಡೆ ಭಾರಿ ಮಳೆ ಸುರಿಯಿತು. ಸಂಜೆ ಕಚೇರಿಯಿಂದ ದ್ವಿಚಕ್ರ ವಾಹನಗಳಲ್ಲಿ ಮನೆಗೆ ತೆರಳುತ್ತಿದ್ದವರು ಹಾಗೂ ಶಾಲಾ ಮಕ್ಕಳು ತೊಂದರೆ ಅನುಭವಿಸಿದರು. ಬೈಕ್ ಸವಾರರು ಬಸ್ ಟರ್ಮಿನಲ್‌ಗಳಲ್ಲಿ ರಕ್ಷಣೆ ಪಡೆದು ಮುಂದೆ ಸಾಗಿದರು.

ಜಾಲಹಳ್ಳಿ, ಯಲಹಂಕ, ಟಿ.ದಾಸರಹಳ್ಳಿ, ಸುಂಕದಕಟ್ಟೆ, ಕೆಂಗೇರಿ, ರಾಜರಾಜೇಶ್ವರಿನಗರ, ನಾಯಂಡಹಳ್ಳಿ, ಹೊಸಹಳ್ಳಿ, ದೀಪಾಂಜಲಿನಗರ, ಗಿರಿನಗರ, ಹನುಮಂತನಗರ, ಬಸವನಗುಡಿ, ಬನಶಂಕರಿ, ಜಯನಗರ, ಕುಮಾರಸ್ವಾಮಿ ಲೇಔಟ್, ಜೆ.ಪಿ. ನಗರ, ಮಡಿವಾಳ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಜೋರಾಗಿತ್ತು.

ಚಿಕ್ಕಪೇಟೆ, ಗಾಂಧಿನಗರ, ಮೆಜೆಸ್ಟಿಕ್, ಶೇಷಾದ್ರಿಪುರ, ಮಲ್ಲೇಶ್ವರ, ರಾಜಾಜಿನಗರ, ವಿಜಯನಗರ, ಬಸವೇಶ್ವರನಗರ, ಯಶವಂತಪುರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಎಂ.ಜಿ. ರಸ್ತೆ, ಅಶೋಕನಗರ, ಎಚ್‌ಎಎಲ್, ವಿವೇಕನಗರ, ಕೋರಮಂಗಲ, ಈಜಿಪುರ ಭಾಗದಲ್ಲೂ ಧಾರಾಕಾರ ಮಳೆಯಾಗಿದೆ.

‘ಮೆಟ್ರೊ’ ಕಾಮಗಾರಿ ನಡೆಯುತ್ತಿದ್ದ ಸ್ಥಳಗಳಲ್ಲಿ ಮಳೆ ನೀರು ಸಂಗ್ರಹಗೊಂಡಿತ್ತು. ಯಶವಂತಪುರದಿಂದ ಮಲ್ಲೇಶ್ವರಕ್ಕೆ ಬರುವ ಮಾರ್ಗದಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದ್ದು ಅಲ್ಲಿಯೂ ನೀರು ಸಂಗ್ರಹಗೊಂಡು ಸಮಸ್ಯೆ ಉಂಟಾಯಿತು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಕಳೆದ 24 ಗಂಟೆಯ ಅವಧಿಯಲ್ಲಿ 1.5 ಸೆಂ.ಮೀ ಮಳೆ ಸುರಿದಿದೆ. ನಗರದಲ್ಲಿ ಇನ್ನೂ ನಾಲ್ಕು ದಿನಗಳ ಕಾಲ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಸೂಚಿಸಿದೆ.

ಗಾಂಧಿನಗರದ ಎಸ್‌ಸಿ ರಸ್ತೆಯಲ್ಲಿ ಮಳೆಯ ನೀರು ಧುಮ್ಮಿಕ್ಕಿತು

ಶಾಂತಿನಗರ ಬಸ್ ಟರ್ಮಿನಲ್ ಬಳಿಯ ರಸ್ತೆಯಲ್ಲಿ ಮಳೆ ನೀರಿನ ನಡುವೆ ವಾಹನಗಳು ಸಾಗಿದವು

ಗಾಂಧಿನಗರದ ಅಂಡರ್‌ಪಾಸ್‌ನಲ್ಲಿ ಸಂಗ್ರಹಗೊಂಡಿದ್ದ ಮಳೆಯ ನೀರಿನ ನಡುವೆ ವಾಹನಗಳು ಸಾಗಿದವು

ಎಂಟು ಜಿಲ್ಲೆಗಳಲ್ಲಿ ಸಮೀಕ್ಷೆ • ಬೆಸ್ಕಾಂ ವ್ಯಾಪ್ತಿಯಲ್ಲಿ ಟೆಂಡರ್ ಪ್ರಕ್ರಿಯೆ ವಿಳಂಬ: ತಪ್ಪದ ಅಲೆದಾಟ

ಕೃಷಿ ಪಂಪ್‌ಸೆಟ್ ಸಕ್ರಮ: ರೈತರಿಗೆ ಸಿಗದ ಭಾಗ್ಯ!

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಅಕ್ರಮ–ಸಕ್ರಮ ಯೋಜನೆ ಜಾರಿಯಾಗಿದ್ದರೂ ಅನುಷ್ಠಾನ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವುದರಿಂದ ಪರದಾಡುವಂತಾಗಿದೆ ಎಂದು ರೈತರು ದೂರಿದ್ದಾರೆ.

ಗುಣಮಟ್ಟದ ವಿದ್ಯುತ್ ಸಂಪರ್ಕ ಕಲ್ಪಿಸಲು 2005ರಿಂದಲೇ ಜಾರಿಯಾದ ಈ ಯೋಜನೆಯನ್ನು ಸಕಾಲಕ್ಕೆ ಅನುಷ್ಠಾನಗೊಳಿಸುತ್ತಿಲ್ಲ. ವಿದ್ಯುತ್ ಕಂಬಗಳು, ಪರಿವರ್ತಕ ಸೇರಿ ವಿವಿಧ ಸೌಕರ್ಯಗಳನ್ನು ಕಲ್ಪಿಸಲು ಗುತ್ತಿಗೆ ನೀಡುವ ಟೆಂಡರ್ ಪ್ರಕ್ರಿಯೆ ನಿಧಾನವಾಗಿದ್ದರಿಂದ ಅಕ್ರಮ–ಸಕ್ರಮ ಯೋಜನೆ ವಿಳಂಬವಾಗಿದೆ.

ತನ್ನ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ ಸಮೀಕ್ಷೆ ಕೈಗೊಂಡಿದ್ದ ಬೆಸ್ಕಾಂ ಇನ್ನೂ 44,134 ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಬೇಕಾಗಿದೆ ಎಂದು ವರದಿ ಸಿದ್ಧಪಡಿಸಿತ್ತು. ಅತಿ ಹೆಚ್ಚಿನ ಪಂಪ್‌ಸೆಟ್‌ಗಳು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿ ಪತ್ತೆಯಾಗಿದ್ದವು. ಈ ತಾಲ್ಲೂಕುವೊಂದರಲ್ಲೇ 5,501 ಸಕ್ರಮಗೊಳಿಸಬೇಕಾದ ಪಂಪ್‌ಸೆಟ್‌ಗಳಿವೆ.

ಸಾಂದರ್ಭಿಕ ಚಿತ್ರ

ಅನಧಿಕೃತ ಪಂಪ್‌ಸೆಟ್‌ಗಳನ್ನು ಹೊಂದಿರುವವರು ಒಂದು ಎಚ್‌ಪಿಗೆ ₹1350 ಮತ್ತು ಇತರ ಶುಲ್ಕ ಪಾವತಿಸಿ ನೋಂದಣಿ ಮಾಡಿಕೊಳ್ಳಬೇಕು. ಅರ್ಜಿಗಳ ಹಿರಿತನದ ಆಧಾರದ ಮೇಲೆ ಅಗತ್ಯ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ. 2005ರ ಮಾರ್ಚ್‌ನಿಂದ 2021ರ ಜುಲೈ 31ರವರೆಗೆ 3.99 ಲಕ್ಷ ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವಂತೆ ರೈತರು ಅರ್ಜಿ ಸಲ್ಲಿಸಿ ನೋಂದಣಿ ಮಾಡಿದ್ದರು. ಇವುಗಳಲ್ಲಿ 2.48 ಲಕ್ಷ ಪಂಪ್‌ಸೆಟ್‌ಗಳಿಗೆ ಅಗತ್ಯ ಇರುವ ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದೆ ಎನ್ನುತ್ತಾರೆ ಬೆಸ್ಕಾಂ ಅಧಿಕಾರಿಗಳು .

2022ರ ಮಾರ್ಚ್ ಅಂತ್ಯಕ್ಕೆ ಸಂಪರ್ಕ ಶುಲ್ಕ ಸೇರಿದಂತೆ ಠೇವಣಿ ಮೊತ್ತ ಪಾವತಿಸಿದ 44,134 ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವ ಸಂಬಂಧ ವಿದ್ಯುತ್ ಮೂಲಸೌಕರ್ಯಗಳನ್ನು ಕಲ್ಪಿಸುವ ಗುತ್ತಿಗೆ ನೀಡಲು 2022ರ ಮೇ ತಿಂಗಳಲ್ಲಿ ಟೆಂಡರ್ ಕರೆಯಲಾಗಿತ್ತು. ಈ ಕಾಮಗಾರಿಗಳಿಗೆ ₹886.27 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ.

ಉಪವಿಭಾಗವಾರು ಗುತ್ತಿಗೆ ನೀಡಲು ಟೆಂಡರ್ ಕರೆಯಲಾಗಿದೆ. ಇನ್ನೆರಡು ತಿಂಗಳಲ್ಲಿ ಪ್ರಕ್ರಿಯೆಗಳು ಆರಂಭವಾಗಲಿವೆ ಎಂದು ಬೆಸ್ಕಾಂ ಅಧಿಕಾರಿಗಳು ಹೇಳುತ್ತಾರೆ.

ಅರ್ಜಿದಾರರು ₹ 10 ಸಾವಿರ ಸಕ್ರಮ ಶುಲ್ಕ ಮತ್ತು ಠೇವಣಿ ಹಣ ಪಾವತಿಸಿದ್ದರೆ ಜ್ಯೇಷ್ಠತೆ ಆಧಾರದ ಮೇಲೆ ಹಂತ ಹಂತವಾಗಿ ಸಕ್ರಮಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.

‘ಕೆಲವು ರೈತರು ₹1 ಲಕ್ಷದಿಂದ ₹2 ಲಕ್ಷ ರೂಪಾಯಿ ಸ್ವತಃ ವೆಚ್ಚ ಮಾಡಿ ಕಂಬಗಳನ್ನು ಹಾಕಿಸಿಕೊಳ್ಳುತ್ತಿದ್ದಾರೆ. ಆದರೆ, ಇಷ್ಟು ಹಣ ಭರಿಸುವ ಶಕ್ತಿ ಎಲ್ಲ ರೈತರಿಗೂ ಇರುವುದಿಲ್ಲ. ಅಧಿಕಾರಿಗಳ ಉದಾಸೀನತೆಯಿಂದ ಈ ಯೋಜನೆ ನಿಧಾನವಾಗಿ ಸಾಗುತ್ತಿದೆ’ ಎನ್ನುವುದು ರೈತರು ಅಳಲು.

‘ಅರ್ಜಿ ಸಲ್ಲಿಸಿ 6 ತಿಂಗಳಾಗಿದೆ’

ನಾವು ಪಂಪ್‌ಸೆಟ್ ಅಕ್ರಮ–ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿ ಆರು ತಿಂಗಳಾಗಿದೆ. ₹26 ಸಾವಿರ ಪಾವತಿಸಿದ್ದೇವೆ. ಆದರೂ, ಬೆಸ್ಕಾಂ ಯಾವುದೇ ಕ್ರಮಗೊಂಡಿಲ್ಲ. ಇನ್ನೂ ಕೆಲವು ತಿಂಗಳು ಕಾಯಬೇಕು. ನಿಮ್ಮ ಪಾಳಿ ಬಂದಾಗ ಸಂಪರ್ಕ ಕಲ್ಪಿಸುತ್ತೇವೆ. ಹಿರಿತನದ ಆಧಾರದ ಮೇಲೆ ಕೊಡುತ್ತೇವೆ ಎಂದು ಅಧಿಕಾರಿಗಳು ಹೇಳುತ್ತಾರೆ.

ರಾಜಣ್ಣ, ಏಕಾಶಿಪುರ, ದೊಡ್ಡಬಳ್ಳಾಪುರ

‘ಸಂಪರ್ಕ ನೀಡುವುದು ವಿಳಂಬವಾಗುತ್ತಿದೆ’

ಮಾರ್ಚ್ ತಿಂಗಳಿಂದ ಪ್ರಯತ್ನಿಸುತ್ತಿದ್ದೇವೆ. ತತ್ಕಾಲ್ ನಲ್ಲಿಯೂ ನಮಗೆ ಸಂಪರ್ಕ ದೊರೆಯಲಿಲ್ಲ. ನಾವು ಈಗಾಗಲೇ ಹಣ ಪಾವತಿಸಿದ್ದೇವೆ. ಆದರೆ, ಇದುವರೆಗೆ ಸಂಪರ್ಕ ದೊರೆತಿಲ್ಲ.

ಮುನಿರಾಜು, ಗೊಲ್ಲಹಳ್ಳಿ.

ವೃತ್ತಿಪರ ತರಬೇತಿಗೆ ‘ಉನ್ನತಿ’ಯ ಸಹಭಾಗಿತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉನ್ನತಿ’ಯು 5 ಸಾವಿರ ಸೌಲಭ್ಯ ವಂಚಿತ ಯುವಕರಿಗೆ ವೃತ್ತಿಪರ ತರಬೇತಿ ನೀಡುವ ನಿಟ್ಟಿನಲ್ಲಿ ಸಾಮಾಜಿಕ ಪರಿವರ್ತನೆ ಫೌಂಡೇಶನ್, ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮ ಮತ್ತು ಎಕ್ಸಾನ್ ಮೊಬಿಲ್‌ನೊಂದಿಗೆ ಸಹಭಾಗಿತ್ವ ಹೊಂದಿದೆ.

‘ಪದವಿ, ಐಟಿಐ, ಡಿಪ್ಲೊಮಾ ಮತ್ತು ವೃತ್ತಿಪರ ಪದವಿ ಕಾಲೇಜುಗಳ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಯುಎನ್‌ಎಕ್ಸ್‌ಟಿ ಕಾರ್ಯಕ್ರಮದ ಅಡಿಯಲ್ಲಿ ಉಚಿತ ತರಬೇತಿ ನೀಡಲಾಗುತ್ತದೆ’ ಎಂದು ‘ಉನ್ನತಿ’ಯ ನಿರ್ದೇಶಕ ರಮೇಶ್ ಸ್ವಾಮಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಉನ್ನತಿಯು ದೇಶದಾದ್ಯಂತ 30 ಮತ್ತು ರಾಜ್ಯದಲ್ಲಿ 16 ಕೇಂದ್ರಗಳನ್ನು ಹೊಂದಿದೆ. 18–25 ವರ್ಷದೊಳಗಿನ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಯುವಕರಿಗೆ ವಿವಿಧ ಕೌಶಲಗಳ ಕುರಿತು ತರಬೇತಿ ನೀಡಲಾಗುವುದು. ಇಂಗ್ಲಿಷ್ ಸಂವಹನ, ಮೌಲ್ಯಾಧಾರಿತ ಜೀವನ, ಕಂಪ್ಯೂಟರ್ ಪ್ರಾಥಮಿಕ ತರಬೇತಿ ಮತ್ತು ಅವರ ಶೈಕ್ಷಣಿಕ ಹಿನ್ನೆಲೆಯ ಆಧಾರದ ಮೇಲೆ ರೂಪಗೊಂಡಿದೆ. ಒಟ್ಟಾರೆ 300 ಗಂಟೆಗಳ ತರಬೇತಿ ನೀಡಲಾಗುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಸಬಲೀಕರಣಗೊಳಿಸಿ ಆಂತರಿಕ ಬೆಳವಣಿಗೆಯನ್ನು ಸಕ್ರಿಯಗೊಳಿಸಲಾಗುತ್ತದೆ’ ಎಂದು ಮಾಹಿತಿ ನೀಡಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

Required Experienced Lady Accountant
with good accounting knowledge in managing Accounts & well versed in Tally 9.0 & good in managing all Accounting Procedures to manage Accounts in a reputed company in Vasanthnagar.
Email Biodata : resume@multeeproe.com

WANTED LADY Accountant for a unit in Machohalli Magadi Road.Residing in nearby areas only need apply. WhatsApp your resume to:9845057606

Engg/ Production Technical

LIFT/ ELEVATOR COMPANY Required Service Persons/ Engineer Any ITI Passed,also MARKETING EXECUTIVES Required at Jayanagar Call/WhatsApp Resume: 9916135320.

EXPERIENCED CIVIL ENGINEERS and MECHANICAL ENGINEERS for a Construction Company. 'CANARA PROJECTS' Peenya 9900240446 uajithnayak@rediffmail.com

Factory

AN ISO 9001- 2015 engineering company in Jigani Industrial area looking for following personnel Marketing manager experience in engineering company, Marketing engineers, Store assistant, Quality incharge, Quality engineers and Purchase engineer, Freshers can also apply. Send your resume to excelwirecut@yahoo.co.in contact :9686198500.

HRD & Admin

DEEVIGE CLASSES, Malleshwaram requires Administrator for maintaining coaching classes: Remuneration plus Incentives upto six lakhs per annum 8762424646 (whatsapp only No phone calls please)

WANTED ADMINISTRATOR
Applications are invited for the post of Administrator in Jubilee Institutions managed by Kerala Samajam, Dooravaninagar. Candidate must be a graduate and capable of managing departments of Finance, Facility Management, Security, Housekeeping and Transport. Salary will be fixed based on qualification and experience. Interested and eligible candidates may forward their application through an email to secretarydkses@jubileeinstitutions.in or send by post or drop at the H O: D 69, North Avenue, ITI Township, Dooravaninagar, Bangalore 560016 on or before 30th October, 2022.

Manager

WANTED SALES Manager and area Sales Manager with minimum 5 Years of Experience in Home appliance and Salary- 18000 to 25000Pm. Contact:- 9353400244/ cmd@garudamartindia.com

General

WANTED
Admin, HR Manager, Computer operator and Accountant's to work in
Poojyaya Security Services
@ R T Nagar, Bangalore
contact @ raghu_sgr2@yahoo.co.in
poojyaya2005@gmail.com
9844006744

ST.BENEDICT'S ACADEMY, Asirvanam, Anchepalya, Kengeri,Mysore Road, Bangalore. Required Male/ Female ASSISTANT WARDENS for College Hostels. Call:9740245828 Mail to: jeromeosb@gmail.com

EXCLUSIVELY FOR Retired, Sr.Citizens, VRS, Pensioner's, Homemaker's & Entrepreneurs. Opportunity to Earn Income upto 1.5 Lac p.m. Contact:- 9972488230/ 9972580339

DEEVIGE CLASSES, Malleshwaram requires Data entry Operator (Mathematics study material preparation), Best Remuneration 8762424646 (whatsapp only No phone calls please)

Graphic Designers

WANTED GRAPHIC DESIGNER Computer Typist Male & Female & Supervisor Jayanagar 9th Block, Call: 9845934508

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Teachers/ Professors

Sri Rakum High School
421/I, Sri Krishna Temple Road, Indiranagar 1st stage, Bengaluru-560038
Tel: 080 - 25215705
Email: rakumrakum@yahoo.com
Wanted
Science, Maths, English and Social science Teacher, for Primary & High School Students
Female Teacher - Rs.15000- 20000

SHANTHINIKETHAN A ENGLISH SCHOOL Girinagar Requires: STAFF trained/ experienced Fresher's can also apply Age <35 years 1) PRINCIPAL/ VICE-PRINCIPAL, ACADEMIC HEAD, CO-ODINATOR: Female Candidates with minimum 4 Years of Leadership Experience Post Graduate with B.Ed. 2) CENTRE HEAD: ECCE qualified with Min 4 years of teaching experience 2 years worked as Academic Co-ordinator 3) SUPERVISOR: Graduate with good English communication skill & 2 Wheeler Must Age <35 years 4) RECEPTIONIST: Pleasing personality Graduate with good English communication & computer skills Age <35 years 5) REGIONAL SALES MANAGER/ EXECUTIVE: Franchisee Acquisition-Pre-School Space Pan India Any Graduate/ MBA Marketing, good communication skills in English and must 2 years experience in Education Industry in Franchisee Acquisition in pre-School space is must WALK-IN-INTERVIEW: 19.10.2022 to 22.10.2022 (10:00 am to 1:30 pm) Submit resume with recent photograph. Shanthinikethana School, 1341/A 8th C Cross 8th Main Girinagar 2nd Phase Bengaluru-85. Phone 7760202693 080-26721334, 26420794. Email: hrdsgps@gmail.com www.shanthinikethana.in

REQUIRED SOCIAL and PE TEACHER for High School. Contact: ROYAL PUBLIC SCHOOL. Jnanabharathi. Phone: 8867569333

"ENDEAVOUR'S INTERNATIONAL-SCHOOL", Mugalur. Sarjapur. Trained Teachers Required.PGT: English,Physics Primary: science Attractive Salary & Accomodation can-be provided. Contact: 8722140020/ 9945058552, email: endeavoursintlschool@gmail.com

RBANMs Educational Charities
Since 1873
24, Gangadhara Chetty Road, Bengaluru-560 042, Ph: 080-4131 1570
Career Opportunities- Applications invited for the Post of Principal at RBANM's First Grade College
Principal : Job Code: FGCPR-01
Qualification: Master Degree in any discipline with Ph.D., with minimum of 15 years' Experience as a Principal or any Senior Position in Reputed Educational Institutions with Proven Leadership Capabilities and Administrative Work. Knowledge of Kannada is preferred. Should be capable of handling work related to the Educational Department.
Skills: Excellent Communication Skills, Interpersonal Development Skills and Computer knowledge is a must.
Salary: Gross Monthly Remuneration will be best in the Industry.
Interested candidates may send their latest and detailed profile to jobs@rbanmscharities.in OR post your resume to Secretary, RBANM's Educational Charities, # 24, Gangadhara Chetty Road, S C Garden, Bengaluru - 560 042, Within 10 days from the date of publication.

BHARATHI GROUP OF INSTITUTIONS
R.T. Nagar / Yelahanka-Bagalur Road
Recruitment of Faculty : Teaching/Non-Teaching
WALK IN INTERVIEW
Kindergarten, Primary, Higher Primary (in English, Maths), High School (in Social Studies, Kannada, Computer) & P T Masters.
Office Assistants and Accountants with knowledge of Computer, English, Kannada & Hindi.
Whatsapp your Resume & Educational certificates to : 9900046660 / 7847037927

DEEVIGE CLASSES, Malleshwaram Requires Physics, Chemistry, Mathematics, Biology Lecturers: Remuneration upto 12 lakhs 8217611257, (whatsapp only No phone calls please)

WANTED TEACHERS with BA/MA (Eng)B.Sc,/M.Sc, (Biology) with BEd, Salary 14000 to 25000. Contact Sidhartha International School, Peenya, Dasarahalli. Phone: 9620100046, 9964670328

SHRIKRISHNA POLYTECHNIC, Chikkabanavara Bengaluru-560090 Requires LECTURERS/ OFFICE STAFF. Accommodation provided. Contact immediately PRINCIPAL- 6362422750.

HINDI, COMMERCE FACULTY required for UG PROGRAM for IMMEDIATE APPOINTMENT. Apply or Walk-in: "MONTFORT COLLEGE", #184, Old Madras Road, Indiranagar, Bangalore-38, E-mail: mail@montfortcollege.edu.in Mobile:7411624688

Marketing & Sales

WANTED SALES Executives (M/F) Good Communication Skills, PU/Degree for Retail Showroom Koramangala. 9945083900, 9731028676.

A LEADING Bakery equipment manufacturing company in Jigani industrial area looking for marketing manager having 5-6 year experience and marketing executives 2-3 years of experience in marketing of bakery and kitchen equipments, freshers can also apply. send your resume to arkamachineries@gmail.com contact: 9686198499

DEEVIGE CLASSES, Malleshwaram Requires marketing, Digital marketing experts for admission process Excellent remuneration, 8217611257, (whatsapp only No phone calls please)

Multiple Vacancy

HIRING!- COMPANY: JVB HYDRAULIC CYLINDERS Private Limited, Location: Bangalore, Open Position: MANAGERS/ PURCHASE/ QUALITY/ ACCOUNTS/ DESIGN/ PRODUCTION/HR. Qualification: ITI/DIPLOMA/BE in MECH/B.COM/M,COM, <<EXPERIENCE REQUIRED>> 1. 1 to 3 Years (PURCHASE). 2. 0 to 2 Years (QUALITY)... 3. 1 to 5 Years (ACCOUNTS). 4. 1 to 3 Years (PRODUCTION SUPERVISOR). 5. 0 to 1 Years (HR & ADMIN). 6. 0 to 2 Years (DESIGN). 7. 8-Years and above (MANAGERS). Preferably from CYLINDERS Background get in touch with: hr@omfbindia.com

OPPORTUNITY OF Bright Career & Substantial Income for Retired officials, Bankers, Teachers, Professionals, Homemakers. 8095301555

IMMEDIATE APPOINTMENT HRD,Administration, Accounts,Manager, Supervisor, Software,Hardware,Electronics,Mechanical,Electrical Engineers 7676760299/7676760399

Receptionist/ Secretary

DEEVIGE CLASSES, Malleshwaram requires Telecallers: Remuneration plus Incentives upto six lakhs per annum 8762424646 (whatsapp only No phone calls please)

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

REAL ESTATE SELLING

House

Vidyaranyapura

INDEPENDENT DUPLEX. 4 BHK- Semi Furnished (60x40) Garage,Well- South facing- Vidyaranyapura Prime Location :9844264852.

Industrial & Factory

Tumkur Road

SALE FARM, Industrial, Warehouse, Commercial Land 1 to 100 acres- Nelamangala, Dabespet, Kunigal Road. 9141326819

RENTAL PROPERTIES

Accommodation Available

Commercial

BHAVASARA BHAVAN (CHOULTRY), Gandhi Bazaar, Bangalore 560004 Available on Rental/ Lease Basis for MARRIAGE Or any other purpose. Site Area: 5401.25 Sft, Builtup Area: 12,834.5 Sft. For Details Contact: 99805-57180/ 99001-13956/ 93428-18210

House

RENT: HOUSE Near Katriguppa Big Bazar East facing 2 Bedroom BDA Layout, First floor, one attached bath, utility. Veg only. Rs. 15000. Contact- 93437-09846

EDUCATIONAL

Language Classes

SPOKEN ENGLISH. Easy Conversation Method. Ielts Coaching. Upsc Exams Training. Teaching Methods For Teachers. Ncert N Icse Patterns. Contact: 9113883321

BUSINESS

Business to Business

Finance

LOANS- BANK/PVT. All type of Loans Any property. Cibil/ Defaulter Also Low Interest 10L- 20Cr. Contact-8904047577.

Business Offers

Finance

BUSINESS LOAN Unsecured Business loan available from NBFC/ Private lending companies for monthly turnover above 20 lakhs to 100 crores companies with profitable IT returns. Funds to export companies against B/L copy. Big size property loan available for big companies No advance payment. Contact: Mother land Hospitality Pvt ltd.. Bangalore. Mobile: 9945123211 /what's app 9590123451

FUTURE IS Green energy and electric vehicles in public transportation. We are into Electric Vehicles, charging stations and solar rooftops for buildings. Investors are invited. Regular monthly returns assured. Contact 9980883950

WE ARRANGE Finance from Financial institutions such as Term, Project loan Working capital Housing and Mortgage loan. Contact S Narayan Retd Banker. 8971377299/ 8971132289.

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

General

LOOKING FOR a 'Business Strategist' with minimum Experience of 2 years Good Communication Skills are must, Field of Business: Food Delivery Startup, Send resume to hirewantzz@gmail.com Location: Rajajinagar Bangalore NOTE: SERIOUS CANDIDATES ONLY SHOULD BE FLEXIBLE IN WORK HOURS

PERSONAL

Change of Name

I, MAHAMADA Mayaja.M, S/o Mustafa Resident No. 27, Islampura village, Kasaba Hobil, Nelamangala Taluk, Bangalore Rural District, have changed my name to NAYAZ PASHA affidavit Dated: 30/09/2022 Notary R.Lakshminarayana

JC671410X SUB/HONY LT Trilok Nath 2ATC my son name record's JEETENDRA NATH instead of JITENDRA NATH notary KV Mani.

CHANGE OF NAME
I, **Padma N,** residing at B-202, Ozone Urbana Irene, Kannamangala Post, Devanahalli Taluk, Bangalore Rural, Bangalore - 562 110, have changed my name to **Padma Moorthy,** vide affidavit dated: 18.10.2022, before Notary Uday Kumar K., Bangalore. Henceforth, I shall be known as **Padma Moorthy** only.

14826117N, HAV/MT Rout Ramdas Vaijinath 2ATC son name record's ROUT HIMANSHU RAMDAS to RAUT HIMANSHU RAMDAS notary KV Mani.

CHANGE OF NAME
I, **MANJULA S,** D/o Srinivas N., aged about 31 years, R/of #446, Vishveshwariah Layout, Near, NGEF Layout, 9th Block, Mallathalli, Bangalore District, Karnataka, have changed my name to **ANISHA SMARAN** as per court order in O.S. No.7090/2015,dated 23-07-2016 by city Civil & Sessions Judge (CCH,32) Bangalore.

NOTICE OF NAME CHANGE
I, Muddappa Poovaiah, Son of Muddappa, holder of Indian Passport No. T0675386, issued at Dubai, on 23-11-2000, permanent resident of No. 813, 10th Cross, 10th Main, Indiranagar II Stage, Bengaluru, Karnataka and presently working at Fire Link General Maintenance LLC, P.O Box 32469, Dubai, UAE, do hereby change my name from Muddappa Poovaiah to Kallichanda Muddappa Poovaiah, with immediate effect.

CHAUDHARY NENUBEN, Wife/o, 6505092P, SEP/ASH, CHAUDHARY BHUTABHAI GOKALABHAI, Vill- Limbau, Chalva, Lakhani, Banaskantha, Gujarat changed name CHAUDHARY NENUBEN to CHAUDHARY NENUBEN BHUTABHAI, 18/10/2022, Notary K.V. Mani Bangalore

WE, SRINIVASA ANGARAKODY and NAGARATNA SRINIVASA, residing at Bengaluru-62 have changed my Daughter name from DHRITI to DHRITI ANGARAKODY vide affidavit dated 18/10/2022 before Notary P.C.Ramaiah, Bengaluru

WE, SRINIVASA ANGARAKODY and NAGARATNA SRINIVASA, residing at Bengaluru-62 have changed my son name from PRITHVIK to PRITHVIK ANGARAKODY, vide affidavit dated 18/10/2022 before Notary P.C.Ramaiah, Bengaluru

DH DECCAN HERALD ಪ್ರಜಾವಾಣಿ

BOOK YOUR CLASSIFIEDS ADVERTISEMENT

DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

conditions apply*

For More Details Contact:
Ph: 080- 45557160 | 163 | 164 |
9845114560 | 9731810277 | 9901641752 | 9886213331
dhclassifieds@deccanherald.co.in www.dhclassifieds.com

ಕ್ಲಾಸಿಫೈಡ್ಸ್
ADMISSION CORNER

UJJVAL WORLD SCHOOL
Affiliated to CBSE, Delhi

The *Future* is in our *Classrooms*
Admissions Open
Forms are available between 8:30 am - 2:30 pm at the School office

For more information call : 080 - 28454466 | Email: contactus@ujjvalworldschool.org | www.ujjvalworldschool.org
Ujjval World School, Near Kadugodi Bus Stand, Whitefield Post, Bangalore - 560066

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ
ಅಧ್ಯಕ್ಷರ ನೇಮಕಕ್ಕೆ ಆಗ್ರಹಿಸಿ ಪೋಷಕರ ಪ್ರತಿಭಟನೆ

ಬೆಂಗಳೂರು: 'ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಬೇಕು' ಎಂದು ಒತ್ತಾಯಿಸಿ ಪೋಷಕರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ನೃಪತುಂಗ ರಸ್ತೆಯಲ್ಲಿರುವ ಆಯೋಗದ ಕಚೇರಿ ಎದುರು ಸೇರಿದ್ದ ಪೋಷಕರು, ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ಖಾಸಗಿ ಶಾಲಾ–ಕಾಲೇಜು ಪೋಷಕ ಸಂಘಟನೆಗಳ ಸಮನ್ವಯ ಸಮಿತಿ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

'ಆಯೋಗದ ಅಧ್ಯಕ್ಷ ಹುದ್ದೆ ಒಂದು ವರ್ಷದಿಂದ ಖಾಲಿ ಇದೆ. ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಸಂಬಂಧಪಟ್ಟಂತೆ ಇದುವರೆಗೂ 500ಕ್ಕೂ ಹೆಚ್ಚು ದೂರುಗಳು ಸಲ್ಲಿಕೆಯಾಗಿದ್ದು, ಅವುಗಳ ವಿಚಾರಣೆಯೇ ಆರಂಭವಾಗಿಲ್ಲ' ಎಂದು ಪೋಷಕರು ದೂರಿದರು.

'ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಚಿತ್ರದುರ್ಗ ಮುರುಘಾಮಠದ ಸ್ವಾಮೀಜಿ ವಿರುದ್ಧ ಈಗಾಗಲೇ ಪೋಕ್ಸೊ ಪ್ರಕರಣ ದಾಖಲಾಗಿದೆ. ಮಳವಳ್ಳಿಯಲ್ಲೂ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಕೊಲೆ ಮಾಡಲಾಗಿದೆ. ಈ ಪ್ರಕರಣಗಳ ಬಗ್ಗೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಬೇಕಿತ್ತು. ಅಧ್ಯಕ್ಷ ಹಾಗೂ ಇತರೆ ಹುದ್ದೆಗಳು ಖಾಲಿ ಆಗಿರುವುದರಿಂದ ಬಾಲಕಿಯರಿಗೂ ಅನ್ಯಾಯ ವಾಗುತ್ತಿದೆ' ಎಂದು ಆರೋಪಿಸಿದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಇದೇ 20ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ಎಚ್ಆರ್ಎಸ್ ಸ್ಟೇಷನ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಎಚ್ಎಸ್ಆರ್ ಲೇಔಟ್ 1ರಿಂದ 7ನೇ ಸೆಕ್ಟರ್, ಜಕ್ಕಸಂದ್ರ, ಸಿಪಿಡಬ್ಲ್ಯುಡಿ ಕ್ವಾರ್ಟರ್ಸ್, ಟೀಚರ್ಸ್ ಕಾಲೊನಿ, ವೆಂಕಟಾಪುರ, ಕೆಎಸ್ಆರ್‌ಪಿ ಕ್ವಾರ್ಟರ್ಸ್, ಎಂಎಲ್ಎ ಲೇಔಟ್, ಸೋಮಸುಂದರಪಾಳ್ಯ, ಹರಳೂರು ರಸ್ತೆ, ಲೇಕ್ ಡ್ಯೂ ರೆಸಿಡೆನ್ಸಿ, ಸತೀಶ್ ಕುಮಾರ್ ಲೇಔಟ್, ಎಂ.ಎಂ.ಪಾಳ್ಯ (ಬಲಭಾಗ) ಎಳ್ಳುಕುಂಟೆ, ಹೊಸೂರು ಮುಖ್ಯರಸ್ತೆಯ ಭಾಗ, ಅಂಬೇಡ್ಕರ್ ನಗರ, ಹಳೆ ಎಂಎಂ ಪಾಳ್ಯ ರಸ್ತೆ, ಎಳು ಕುಂಟೆಭಾಗ, ಐಟಿಐಲೇಔಟ್, ಬೇಗೂರು ರಸ್ತೆ, ವೈಶ್ಯ ಬ್ಯಾಂಕ್ ರಸ್ತೆ, ಕುಡ್ಲು, ಕೆಎಸ್ಆರ್‌ಪಿ 9ನೇ ಬೆಟಾಲಿಯನ್, ಮಾರುತಿ ಲೇಔಟ್, 1 ನೇ ಬ್ಲಾಕ್ ಮತ್ತು 2 ನೇ ಬ್ಲಾಕ್ ಭಾಗ ಕೋರಮಂಗಲ ಸುತ್ತಮುತ್ತ ಪ್ರದೇಶಗಳು.

ಟೀಮ್ ಇಂಡಿಯಾ 2022 ರ ಮಹಿಳಾ ಏಷ್ಯಾ ಕಪ್ ಗೆದ್ದಿದೆ!

ವಾಣಿಜ್ಯ ವಿಚಾರಣೆಗಳಿಗಾಗಿ ಸಂಪರ್ಕಿಸಿ + 91 63640 01223

ಪೋಷಕರಿಗೂ ಗೌರವ: ತರಬೇತಿ ಪಡೆದ 153 ಅಭ್ಯರ್ಥಿಗಳು
ಎಎಸ್‌ಸಿ ಕೇಂದ್ರದಲ್ಲಿ ಯೋಧರ ಪಥಸಂಚಲನ

ಪ್ರಜಾವಾಣಿ ವಾರ್ತೆ

ನಗರದಲ್ಲಿ ಮಂಗಳವಾರ 'ಆರ್ಮಿ ಸರ್ವಿಸ್ ಕಾರ್ಪ್ಸ್' (ಉತ್ತರ) ಕೇಂದ್ರದಲ್ಲಿ ತರಬೇತಿ ಪಡೆದ ಯೋಧರು ಪ್ರತಿಜ್ಞಾ ವಿಧಿ ಸ್ವೀಕರಿಸಿದರು
–ಪ್ರಜಾವಾಣಿ ಚಿತ್ರ/ ರಂಜು ಪಿ

ಬೆಂಗಳೂರು: 'ಆರ್ಮಿ ಸರ್ವಿಸ್ ಕಾರ್ಪ್ಸ್' (ಎಎಸ್‌ಸಿ– ಉತ್ತರ)–1 ಕೇಂದ್ರದಲ್ಲಿ ತರಬೇತಿ ಪಡೆದ ಯೋಧರಿಂದ ಮಂಗಳವಾರ ಆಕರ್ಷಕ ನಿರ್ಗಮನ ಪಥಸಂಚಲನ ನಡೆಯಿತು.

ಬ್ರಿಗೇಡಿಯರ್ ತೇಜಪಾಲ್ ಸಿಂಗ್ ಮನ್ ಅವರು 153 ಅಭ್ಯರ್ಥಿಗಳ ಪಥಸಂಚಲನವನ್ನು ವೀಕ್ಷಿಸಿ, ಗೌರವ ಸ್ವೀಕರಿಸಿದರು.

'ಯೋಧರಿಗೆ ಪ್ರಾಮಾಣಿಕತೆ, ನಿಷ್ಠೆ, ಶೌರ್ಯ ಮುಖ್ಯ. ಈ ಅಂಶಗಳನ್ನು ಯೋಧರು ಅಳವಡಿಸಿಕೊಳ್ಳಬೇಕು. ದೇಶಸೇವೆಗೆ ಸದಾ ಬದ್ಧರಾಗಿರಬೇಕು. ಯಾವುದೇ ಸಂದರ್ಭದಲ್ಲಿ ಎದೆ ಗುಂದಬಾರದು' ಎಂದು ತೇಜಪಾಲ್ ಸಿಂಗ್ ಮನ್ ಅವರು ಸಲಹೆ ನೀಡಿದರು.

ಈ ಬ್ಯಾಚ್‌ನ ಅತ್ಯುತ್ತಮ ಅಭ್ಯರ್ಥಿಯಾಗಿ ಆಯ್ಕೆಯಾದ ಎಸ್. ಕೃಷ್ಣ ಪ್ರಸಾದ್ ಅವರು ಪಥಸಂಚಲನದ ಕಮಾಂಡರ್ ಆಗಿ ಕಾರ್ಯನಿರ್ವಹಿಸಿ ಗಮನ ಸೆಳೆದರು.

ಆಕರ್ಷಕ ಪಥಸಂಚಲನಕ್ಕೆ ಅಭ್ಯರ್ಥಿಗಳ ಪೋಷಕರೂ ಸಾಕ್ಷಿಯಾದರು. ಎಲ್ಲ ಪೋಷಕರಿಗೂ 'ಗೌರವ ಪದಕ' ನೀಡಿ ಗೌರವಿಸಲಾಯಿತು. ಮಕ್ಕಳನ್ನು ಸೇನೆಗೆ ಸೇರಲು ಪೋಷಕರು ಪ್ರೋತ್ಸಾಹಿಸಿ ಕಳುಹಿಸುತ್ತಿರುವುದರಿಂದ ಈ ಪದಕ ನೀಡಿ ಗೌರವಿಸಲಾಗುತ್ತಿದೆ.

ಇಡೀ ಭಾರತೀಯ ಸೇನೆಯಲ್ಲಿನ ಪ್ರಾಣಿಗಳ ಮತ್ತು ಸ್ಟೋರ್ ನಿರ್ವಹಣೆ ಹಾಗೂ ವಾಹನ ಚಾಲಕರಿಗಾಗಿ ಎಎಸ್‌ಸಿ ಕೇಂದ್ರವು (ಉತ್ತರ) ತರಬೇತಿ ನೀಡುತ್ತಿದೆ.

ಅಡಿಕೆ ಬೆಳೆಗೆ ರೋಗ: ಕೇಂದ್ರಕ್ಕೆ ನಿಯೋಗ

ಬೆಂಗಳೂರು: ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಕರಾವಳಿ ಭಾಗದಲ್ಲಿ ಅಡಿಕೆ ಬೆಳೆಗೆ ಎಲೆ ಚುಕ್ಕೆ ರೋಗದಿಂದಾಗಿ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದು, ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಮತ್ತು ಇತರರನ್ನು ಭೇಟಿ ಮಾಡಿ ರೋಗದ ನಿಯಂತ್ರಣದ ಬಗ್ಗೆ ಚರ್ಚಿಸಲು ದೆಹಲಿಗೆ ಬುಧವಾರ ನಿಯೋಗವೊಂದನ್ನು ಕರೆದೊಯ್ಯಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ತಿಳಿಸಿದರು.

ಅವಧಿ ವಿಸ್ತರಣೆ

ಬೆಂಗಳೂರು: ಕಲ್ಯಾಣ ಕಾರ್ಯಕ್ರಮಗಳಡಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಅವಧಿಯನ್ನು ಬಿಬಿಎಂಪಿ ವಿಸ್ತರಿಸಿದೆ.

ನಿವೇಶನ ಹೊಂದಿರುವವರಿಗೆ ಒಂಟಿಮನೆ ನಿರ್ಮಾಣ ಮಾಡಿಕೊಳ್ಳಲು ₹5 ಲಕ್ಷ ಸಹಾಯಧನ, ಪದವಿ ಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್, ಅಂಧರಿಗೆ ಸ್ಮಾರ್ಟ್ ಸ್ಟಿಕ್, ಅಂಧ ವಿದ್ಯಾರ್ಥಿಗಳಿಗೆ ಎಜುಕೇಷನಲ್ ಲ್ಯಾಪ್‌ಟಾಪ್, ಹಿರಿಯ ನಾಗರಿಕರಿಗೆ ಮಡಚಬಹುದಾದ ವೀಲ್ ಚೇರ್ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಅ.19ರವರೆಗೆ ಇದ್ದ ಕೊನೆ ದಿನವನ್ನು ಅ.31ರವರೆಗೆ ವಿಸ್ತರಿಸಲಾಗಿದೆ ಎಂದು ಬಿಬಿಎಂಪಿ ಕಲ್ಯಾಣ ವಿಭಾಗದ ಸಹಾಯಕ ಆಯುಕ್ತೆ ಶೈಲಜಾ ತಿಳಿಸಿದ್ದಾರೆ.



ಮಾಜಿ ಸಚಿವೆ ರಾಣಿ ಸತೀಶ್ ಹಾಗೂ ಮಹಡಿ ಶಿವಮೂರ್ತಿ ಸಂಭಾಷಣೆಯ ಆಡಿಯೊ ವೈರಲ್

‘ಮುರುಘಾ ಮಠಕ್ಕೆ ಆಡಳಿತಾಧಿಕಾರಿ ನೇಮಿಸಿ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದಲ್ಲಿ ಮುರುಘಾ ಮಠದ ಶಿವಮೂರ್ತಿ ಮುರುಘಾಶ್ರೀ ಬಂಧನಕ್ಕೆ ಒಳಗಾಗಿರುವುದಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವೆ ರಾಣಿ ಸತೀಶ್ ಹಾಗೂ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಮಹಡಿ ಶಿವಮೂರ್ತಿ ನಡುವೆ ನಡೆದ ಫೋನ್ ಸಂಭಾಷಣೆಯ ಆಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಸುಮಾರು 12 ನಿಮಿಷದ ಮಾತುಕತೆಯಲ್ಲಿ ಹಲವು ವಿಚಾರಗಳು ಚರ್ಚೆಗೆ ಬಂದಿವೆ. ಶಿವಮೂರ್ತಿ ಮುರುಘಾ ಶರಣರ ವಿರುದ್ಧದ ಆಕ್ರೋಶ, ಯಡಿಯೂರಪ್ಪ ಸೇರಿದಂತೆ ಇತರ ರಾಜಕಾರಣಿಗಳು ಮಠದಲ್ಲಿಟ್ಟ ಹಣದ ಬಗ್ಗೆಯೂ ಪ್ರಸ್ತಾಪವಾಗಿದೆ.

‘ಮುರುಘಾಶ್ರೀ ಪ್ರಕರಣ ಅಸಹ್ಯ ಮೂಡಿಸಿದೆ. ಜೈಲಿನಲ್ಲಿದ್ದರೂ ಮಠ ಇನ್ನೂ ಅವರ ಹಿಡಿತದಲ್ಲಿದೆ. ಭಯ, ಲಜ್ಜೆ ಇಲ್ಲದ ವರ್ತನೆ ಇದು. ವೀರಶೈವರಿಂದ ಮಠ ಕೈತಪ್ಪುವ ಆತಂಕ ಎದುರಾಗಿದೆ. ವೀರಶೈವ ಲಿಂಗಾಯತ ಮಹಾಸಭಾ ಈ ಸಂಬಂಧ ಧ್ವನಿ ಎತ್ತಬೇಕು. ಮಠಕ್ಕೆ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಬೇಕಿದೆ’ ಎಂದು ರಾಣಿ ಸತೀಶ್ ಅಭಿಪ್ರಾಯಪಟ್ಟಿದ್ದಾರೆ.

ಈ ಆಡಿಯೊ ಸಂಭಾಷಣೆಯು ರಾಣಿ ಸತೀಶ್ ಹಾಗೂ ತಮ್ಮ ನಡುವೆ ನಡೆದಿರುವುದೇ ಆಗಿದೆ ಎಂದು ಮಹಡಿ ಶಿವಮೂರ್ತಿ ಖಚಿತಪಡಿಸಿದ್ದಾರೆ.

ದಾಖಲೆ ಒದಗಿಸುವಂತೆ ಪತ್ರ

ಮುರುಘಾ ಮಠದ ಉಸ್ತುವಾರಿ ನೇಮಕ ಹಾಗೂ ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿಗೆ ಅಧಿಕಾರ ಪತ್ರ (ಪವರ್ ಆಫ್ ಅಟಾರ್ನಿ) ನೀಡಿದ ಪ್ರಕ್ರಿಯೆಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕ ಕಾರಾಗೃಹದ ಅಧೀಕ್ಷಕರಿಗೆ ಮನವಿ ಮಾಡಿದೆ.

ಮಾಜಿ ಸಚಿವ ಎಚ್.ಏಕಾಂತಯ್ಯ ಅವರು ಸೋಮವಾರ ಕಾರಾಗೃಹಕ್ಕೆ ಭೇಟಿ ನೀಡಿ ದಾಖಲೆ ಪತ್ರಗಳನ್ನು ಕೇಳಿದ್ದರು. ಲಿಖಿತ ಅರ್ಜಿ ಸಲ್ಲಿಸುವಂತೆ ನೀಡಿದ ಸೂಚನೆಯ ಮೇರೆಗೆ ಮಹಾಸಭಾದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಮಹೇಶ್ ಮನವಿ ನೀಡಿದರು.

ಭಾವಚಿತ್ರ ತೆರವಿಗೆ ಆಗ್ರಹ

ಚಿತ್ರದುರ್ಗ ನಗರದ ನೀಲಕಂಠೇಶ್ವರ ದೇಗುಲದ ಆವರಣದಲ್ಲಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ಭಾವಚಿತ್ರಗಳನ್ನು ತೆರವುಗೊಳಿಸಬೇಕು ಎಂದು ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧಿಕಾರಿ ಕಚೇರಿ ಹಾಗೂ ದೇಗುಲ ಸಮಿತಿಗೆ ಮನವಿ ಸಲ್ಲಿಸಿದೆ.

‘ಶಿವಮೂರ್ತಿ ಮುರುಘಾ ಶರಣರು ವಿದ್ಯಾರ್ಥಿನಿಯಿಗೆ ಲೈಂಗಿಕ ಕಿರುಕುಳ ನೀಡಿರುವ ಗಂಭೀರ ಸ್ವರೂಪದ ಆರೋಪ ಎದುರಿಸುತ್ತಿದ್ದಾರೆ. ಈ ಮೂಲಕ ಇಡೀ ಸಮುದಾಯಕ್ಕೆ ಕಳಂಕ ತಂದಿದ್ದಾರೆ. ಅವರ ಭಾವಚಿತ್ರ ದೇಗುಲದ ಆವರಣದಲ್ಲಿದ್ದು, ದೇವರ ದರ್ಶನಕ್ಕೆ ಬರುವ ಮಹಿಳಾ ಭಕ್ತರಿಗೆ ಮುಜುಗುರ ಉಂಟಾಗುತ್ತಿದೆ’ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಮತ್ತೊಂದು ಎಫ್‌ಐಆರ್ ದಾಖಲು



ಚಿತ್ರದುರ್ಗ: ಇಬ್ಬರು ಹೆಣ್ಣು ಮಕ್ಕಳನ್ನು ಅನಧಿಕೃತವಾಗಿ ಮುರುಘಾ ಮಠದಲ್ಲಿ ಇಟ್ಟುಕೊಂಡು, ಬಾಲನ್ಯಾಯ ಕಾಯ್ದೆ ಉಲ್ಲಂಘಿಸಿರುವ ಆರೋಪದಡಿ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕ ನೀಡಿದ ದೂರಿನ ಆಧಾರದಲ್ಲಿ ಮುರುಘಾ ಮಠದ ಟ್ರಸ್ಟ್ ಅಧ್ಯಕ್ಷರಾಗಿರುವ ಶಿವಮೂರ್ತಿ ಮುರುಘಾ ಶರಣರು, ಕಾರ್ಯದರ್ಶಿಯಾಗಿದ್ದ ಪರಮಶಿವಯ್ಯ, ಹಾಸ್ಟೆಲ್ ಮಹಿಳಾ ವಾರ್ಡನ್ ಹಾಗೂ ಮಡಿಲು ದತ್ತು ಕೇಂದ್ರದ ವ್ಯವಸ್ಥಾಪಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದಡಿ ಬಂಧಿತರಾಗಿರುವ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದಾಖಲಾದ ಮೂರನೇ ಪ್ರಕರಣ ಇದಾಗಿದೆ.

ಮಠದ ಆವರಣದಲ್ಲಿ ಪತ್ತೆಯಾದ ನಾಲ್ಕೂವರೆ ವರ್ಷದ ಹೆಣ್ಣು ಮಗು ಹಾಗೂ ಹಾಸ್ಟೆಲ್‌ನಲ್ಲಿದ್ದ 17 ವರ್ಷದ ಅನಾಥ ಬಾಲಕಿಗೆ ಸಂಬಂಧಿಸಿದ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಬಚ್ಚಿಟ್ಟ ಆರೋಪ ಇದಾಗಿದೆ. ಇದು ಬಾಲನ್ಯಾಯ ಕಾಯ್ದೆಯ ಸೆಕ್ಷನ್–32ರ ಉಲ್ಲಂಘನೆಯಾಗಿದೆ ಎಂದು ಮಕ್ಕಳ ರಕ್ಷಣಾ ಘಟಕ ಠಾಣೆಗೆ ದೂರು ನೀಡಿತ್ತು. ಕಾನೂನು ಸಲಹೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಮೂಲಗಳು ಖಚಿತಪಡಿಸಿವೆ.

ಏನಿದು ಪ್ರಕರಣ?

ಲೈಂಗಿಕ ಕಿರುಕುಳ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆಯೇ ಮಠದ ಹಾಸ್ಟೆಲ್‌ನಲ್ಲಿದ್ದ ಮಕ್ಕಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಆಪ್ತ ಸಮಾಲೋಚನೆಗೆ ಒಳಪಡಿಸಿತ್ತು. 17 ವರ್ಷದ ಬಾಲಕಿಗೆ ಪಾಲಕರು ಇಲ್ಲದ ಸಂಗತಿ ಬೆಳಕಿಗೆ ಬಂದಿತ್ತು. ಅನಾಥ ಬಾಲಕಿಗೆ ಆಶ್ರಯ ಕಲ್ಪಿಸಿರುವುದಕ್ಕೆ ಸಂಬಂಧಿಸಿದಂತೆ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ನೀಡಿರಲಿಲ್ಲ. ಇದು ಬಾಲನ್ಯಾಯ ಕಾಯ್ದೆಯ ಉಲ್ಲಂಘನೆ ಎಂದು ಮೂಲಗಳು ವಿವರಿಸಿವೆ.

ಮತ್ತೊಂದೆಡೆ ಮುರುಘಾ ಮಠದಲ್ಲಿ ಅ. 12ರಂದು ನಾಲ್ಕೂವರೆ ವರ್ಷದ ಹೆಣ್ಣು ಮಗುವೊಂದನ್ನು ಮಕ್ಕಳ ರಕ್ಷಣಾ ಘಟಕ ಪತ್ತೆ ಮಾಡಿತ್ತು. ಪಾಲಕರಿಲ್ಲದ ಈ ಮಗುವನ್ನು ಮಠದಲ್ಲಿ ಇಟ್ಟುಕೊಂಡಿರುವುದು ಬೆಳಕಿಗೆ ಬಂದಿತ್ತು. ಮಠದ ಆವರಣದಲ್ಲೇ ಇರುವ ‘ಮಡಿಲು’ ಮಕ್ಕಳ ದತ್ತು ಕೇಂದ್ರದ ದಾಖಲೆಯಲ್ಲಿ ಈ ಮಗುವಿನ ಕುರಿತು ಉಲ್ಲೇಖಿಸದೇ ಲೋಪ ಎಸಗಿರುವುದು ಪರಿಶೀಲನೆಯಿಂದ ಖಚಿತವಾಗಿತ್ತು. ಇದನ್ನು ಮಕ್ಕಳ ರಕ್ಷಣಾ ಘಟಕ ಗಂಭೀರವಾಗಿ ಪರಿಗಣಿಸಿದೆ.

ಸುದ್ದಿ 2 ನಿಮಿಷ

ವಿಶ್ವಸಂಸ್ಥೆಯ ಮಾನವ ಹಕ್ಕು ಮಂಡಳಿಗೆ ಕೋಲಾರದ ಯುವತಿ ಅಶ್ವಿನಿ ನೇಮಕ

ಕೋಲಾರ: ವಿಶ್ವಸಂಸ್ಥೆಯ ಮಾನವ ಹಕ್ಕು ಮಂಡಳಿಗೆ (ಯುಎನ್‌ಎಚ್‌ಆರ್‌ಸಿ) ಸ್ವತಂತ್ರ ತಜ್ಞೆಯಾಗಿ (Special Rapporteur–SR) ಜಿಲ್ಲೆಯ ಕಸಬಾ ಕುರುಬರಹಳ್ಳಿ ಗ್ರಾಮದ ದಲಿತ ಯುವತಿ ಡಾ.ಕೆ.ಪಿ.ಅಶ್ವಿನಿ ನೇಮಕವಾಗಿದ್ದಾರೆ.

ಜಿನೀವಾದಲ್ಲಿ ಇದೇ 7ರಂದು ಮುಕ್ತಾಯವಾದ ವಿಶ್ವಸಂಸ್ಥೆಯ ಮಾನವ ಹಕ್ಕು ಮಂಡಳಿಯ ಅಧಿವೇಶನದಲ್ಲಿ ಅಶ್ವಿನಿ ಅವರ ನೇಮಕವನ್ನು ಅಧಿಕೃತವಾಗಿ ಘೋಷಿಸಲಾಗಿದೆ. ಈ ಹುದ್ದೆಗೆ ಅಶ್ವಿನಿ ಸೇರಿದಂತೆ ಮೂವರ ಹೆಸರು ಕೇಳಿ ಬಂದಿದ್ದವು.

ಜಿನೀವಾದಲ್ಲಿ ನವೆಂಬರ್ 1ರಂದು ಅವರು ಅಧಿಕಾರ ಸ್ವೀಕರಿಸಲಿದ್ದಾರೆ. ಅವರ ಅಧಿಕಾರ ಅವಧಿ ಆರು ವರ್ಷ. ಈ ಹುದ್ದೆಗೆ ನೇಮಕವಾದ ಏಷ್ಯಾ ಮತ್ತು ಭಾರತದ ಮೊದಲ ವ್ಯಕ್ತಿಯಾಗಿದ್ದಾರೆ.

ಜಾಗತಿಕ ಮಟ್ಟದಲ್ಲಿಯ ವರ್ಣಭೇದ ನೀತಿ, ಜನಾಂಗೀಯ ತಾರತಮ್ಯ, ಕ್ಸೆನೋಫೋಬಿಯಾ(ವಿದೇಶಿಯರ ಬಗ್ಗೆ ಭಯ), ಅಸಹಿಷ್ಣುತೆಗೆ ಸಂಬಂಧಿಸಿದ ವಿಷಯಗಳನ್ನು ಇವರು ಸ್ವತಂತ್ರವಾಗಿ ನಿರ್ವಹಿಸಲಿದ್ದಾರೆ. ಈ ಬಗ್ಗೆ ಮಂಡಳಿಗೆ ಕಾಲಕಾಲಕ್ಕೆ ವರದಿ ಹಾಗೂ ಸಲಹೆ ನೀಡಲಿದ್ದಾರೆ.

ಕುರುಬರಹಳ್ಳಿ ಗ್ರಾಮದ ವಿ.ಪ್ರಸನ್ನಕುಮಾರ್ ಹಾಗೂ ಜಯಮ್ಮ ದಂಪತಿ ಪುತ್ರಿಯಾಗಿರುವ ಅಶ್ವಿನಿ ಅವರು ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಿಂದ ಎಂ.ಫಿಲ್., ಪಿಎಚ್‌.ಡಿ ಪದವಿ ಪಡೆದಿದ್ದಾರೆ. ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಕೆಲ ಕಾಲ ಉಪನ್ಯಾಸಕಿಯಾಗಿ, ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಕಾರ್ಯನಿರ್ವಹಿಸಿದ್ದರು.

ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಾ ಒಡಿಶಾ ಮತ್ತು ಛತ್ತೀಸಗಡ ರಾಜ್ಯಗಳ ಆದಿವಾಸಿಗಳ ಮೇಲೆ ಅಲ್ಲಿಯ ಗಣಿಗಾರಿಕೆಯಿಂದ ಆದ ಪರಿಣಾಮಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದ್ದರು.

ಜಮೀನಿಗೆ ಕಾಲು ದಾರಿ: ಅಧಿಕೃತಗೊಳಿಸಲು ಸಿಎಂ ಸೂಚನೆ

ಬೆಂಗಳೂರು: ರೈತರು ತಮ್ಮ ಕೃಷಿ ಜಮೀನಿಗೆ ಹೋಗಲು ಕಾಲು ಹಾದಿಯನ್ನು ಬಳಸುತ್ತಿದ್ದರೆ ಅದನ್ನೇ ಅಧಿಕೃತ ದಾರಿ ಎಂದು ಪರಿಗಣಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ರೈತರು ಸುಮಾರು 30 ವರ್ಷಗಳಿಂದ ಒಂದೇ ಹಾದಿ ಬಳಸುತ್ತಿದ್ದ ಸಂದರ್ಭದಲ್ಲಿ ಮಾತ್ರ ಈ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಜಿಲ್ಲಾಧಿಕಾರಿಗಳ ಸಭೆಯಲ್ಲಿ ಅವರು ಈ ನಿರ್ದೇಶನ ನೀಡಿದ್ದಾರೆ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ಬಗರ್‌ಹುಕುಂನಲ್ಲಿ ಜಮೀನು ಮಂಜೂರು ಮಾಡುವಾಗಲೇ ರಸ್ತೆ ಸಂಪರ್ಕವನ್ನು ಕಡ್ಡಾಯವಾಗಿ ನಮೂದಿಸಬೇಕು. ಒಂದು ವೇಳೆ ದಾರಿಯನ್ನು ಒತ್ತುವರಿ ಮಾಡಿದ್ದರೆ, ಅದನ್ನು ಬಿಡಿಸಿಕೊಡಬೇಕೆಂದು ಸಭೆಯಲ್ಲಿ ಸೂಚಿಸಲಾಯಿತು. ಅಲ್ಲದೆ, ಕಂದಾಯ ಇಲಾಖೆಯು ಪೌತಿ ಖಾತೆಗಳನ್ನು ಮಾಡಿ ಜಮೀನಿನ ಸಮಸ್ಯೆಗಳನ್ನು ಬಗೆಹರಿಸಲು ನಿರ್ದೇಶನ ನೀಡಲಾಗಿದೆ ಎಂದರು.

ಪೊಲೀಸ್ ಕೋಟೆ ಭೇದಿಸಿ ಟೋಲ್ ಬೂತ್‌ಗೆ ಮುತ್ತಿಗೆ: ಪ್ರತಿಭಟನಕಾರರ ಬಂಧನ–ಬಿಡುಗಡೆ

ಸುರತ್ಕಲ್ ಟೋಲ್‌ಗೇಟ್: ಭುಗಿಲೆದ್ದ ಜನಾಕ್ರೋಶ

ಪ್ರಜಾವಾಣಿ ವಾರ್ತೆ

ಮಂಗಳೂರು: ಸುರತ್ಕಲ್ ಎನ್‌ಐಟಿಕೆ ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿರುವ ಟೋಲ್‌ಗೇಟ್ ತೆರವುಗೊಳಿಸಬೇಕು ಎಂದು ಒತ್ತಾಯಿಸಿ ಹೋರಾಟಗಾರರು ಪೊಲೀಸ್ ಸರ್ಪಗಾವಲನ್ನು ಭೇದಿಸಿ ಟೋಲ್ ಬೂತ್‌ಗೆ ಮಂಗಳವಾರ ಮುತ್ತಿಗೆ ಹಾಕಿದರು.

ಸುರತ್ಕಲ್ ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿಯ ಕರೆಯ ಮೇರೆಗೆ ನಡೆದ ಈ ಪ್ರತಿಭಟನೆಯಲ್ಲಿ ಭಾಗವಹಿಸಲು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ವಿವಿಧೆಡೆಗಳಿಂದ ಜನ ಬಂದಿದ್ದರು. ಟೋಲ್‌ಗೇಟ್ ಬಳಿ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿತ್ತು. ಬಂದೋಬಸ್ತ್‌ಗಾಗಿ 600ಕ್ಕೂ ಅಧಿಕ ಪೊಲೀಸರನ್ನು ನಿಯೋಜಿಸಲಾಗಿತ್ತು.

ಶಾಂತಿಯುತವಾಗಿಯೇ ಆರಂಭವಾದ ಪ್ರತಿಭಟನೆ ಬಳಿಕ ತೀವ್ರ ಸ್ವರೂಪವನ್ನು ಪಡೆದುಕೊಂಡಿತು. ಹೆದ್ದಾರಿಯಲ್ಲಿ ಕುಳಿತು ಘೋಷಣೆ ಕೂಗುತ್ತಿದ್ದ ಪ್ರತಿಭಟನಕಾರರು ಏಕಾಏಕಿ ಟೋಲ್‌ಗೇಟ್‌ನತ್ತ ದೌಡಾಯಿಸಿದರು. ಟೋಲ್‌ಗೇಟ್ ಸುತ್ತಲೂ ಬ್ಯಾರಿಕೇಡ್‌ಗಳನ್ನು ಅಳವಡಿಸಿ, ಕೋಟೆ ಕಟ್ಟಿನಿಂತಿದ್ದ ಪೊಲೀಸರನ್ನು ತಳ್ಳಿ ಮುನ್ನುಗ್ಗಿದ್ದ ಪ್ರತಿಭಟನಕಾರರು ಟೋಲ್ ಬೂತ್‌ಗಳನ್ನು ಸುತ್ತುವರಿದರು. ಟೋಲ್ ಬೂತ್ ಮೇಲೇರಿ ಘೋಷಣೆ ಕೂಗಿದರು. ಈ ಸಂದರ್ಭದಲ್ಲಿ ಒಂದು ಬೂತ್‌ನ ಗಾಜು ಪುಡಿಪುಡಿಯಾಯಿತು.

ತಮ್ಮನ್ನು ಬಂಧಿಸಲು ಪೊಲೀಸರು ಮುಂದಾದಾಗ ಕೆಲ ಪ್ರತಿಭಟನಕಾರರು ಪ್ರತಿರೋಧ ಒಡ್ಡಿದರು. ಈ ವೇಳೆ ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ಘರ್ಷಣೆ ನಡೆಯಿತು. ಘರ್ಷಣೆಯಲ್ಲಿ ಇಬ್ಬರು ಗಾಯಗೊಂಡಿದ್ದಾರೆ. ಕೆಲವು ಪ್ರತಿಭಟನಕಾರರನ್ನು ನಾಲ್ಕೈದು ಪೊಲೀಸರು ಸೇರಿ ಹೊತ್ತೊಯ್ದು ವಾಹನದೊಳಕ್ಕೆ ತಳ್ಳಿದರು.

ಸುರತ್ಕಲ್ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿಯ ಮುನೀರ್ ಕಾಟಿಪಳ್ಳ, ಬಿ.ಕೆ.ಇಮ್ತಿಯಾಜ್, ಸುನಿಲ್ ಕುಮಾರ್ ಬಜಾಲ್, ಸಂತೋಷ್ ಬಜಾಲ್, ಕಾಂಗ್ರೆಸ್ ಮುಖಂಡರಾದ ವಿನಯ್ ಕುಮಾರ್ ಸೊರಕೆ, ಮಿಥುನ್‌ರೈ, ಐವನ್ ಡಿಸೋಜಾ, ಶಕುಂತಳಾ ಶೆಟ್ಟಿ, ಮೊಯ್ದಿನ್ ಬಾವ, ಜೆ.ಆರ್.ಲೋಬೊ, ಪಿ.ವಿ.ಮೋಹನ್, ಪ್ರತಿಭಾ ಕುಳಾಯಿ, ಕುಳಾಯಿ, ಶಾಲೆಟ್ ಪಿಂಟೊ, ವಕೀಲರಾದ ದಿನೇಶ್ ಹೆಗ್ಡೆ ಉಳೆಪಾಡಿ, ಪದ್ಮರಾಜ್ ಸೇರಿದಂತೆ ಹಲವರನ್ನು ಬಂಧಿಸಿದರು.

‘182 ಜನ ಪ್ರತಿಭಟನಕಾರರನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಲಾಯಿತು‘ ಎಂದು ಪೊಲೀಸರು ತಿಳಿಸಿದರು. ಪ್ರತಿಭಟನೆ ಮುಗಿಯುತ್ತಿದ್ದಂತೆ ಇಲ್ಲಿ ಮತ್ತೆ ಟೋಲ್ ಸಂಗ್ರಹ ಆರಂಭಗೊಂಡಿತು. ಮುಂದಿನ ಹೋರಾಟದ ಬಗ್ಗೆ ಬುಧವಾರ ನಿರ್ಧರಿಸಲಾಗುವುದು ಎಂದು ಹೋರಾಟ ಸಮಿತಿ ತಿಳಿಸಿದೆ.

ಸುರತ್ಕಲ್ ಬಳಿಯ ಟೋಲ್‌ಗೇಟ್ ಬಳಿ ಪ್ರತಿಭಟನಕಾರರನ್ನು ಪೊಲೀಸರು ಬಂಧಿಸಿದರು

> ಬಿಜೆಪಿ ಸರ್ಕಾರದ ಬೆದರಿಕೆ, ಪೊಲೀಸ್ ಸರ್ಪಗಾವಲು ಹಿಮ್ಮೆಟ್ಟಿಸಿ ಕೆಲಕಾಲ ಟೋಲ್ ಸಂಗ್ರಹ ಸ್ಥಗಿತಗೊಳಿಸಿ ಸರ್ವಾಧಿಕಾರಕ್ಕೆ ಸವಾಲು ಒಡ್ಡಿದ್ದೇವೆ. ಇದು ತುಳುನಾಡಿನ ಜನರ ಒಗ್ಗಟ್ಟಿನ ಫಲ
>
> **ಮುನೀರ್ ಕಾಟಿಪಳ್ಳ**, ಸುರತ್ಕಲ್ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿ ಸಂಚಾಲಕ

> ಟೋಲ್‌ಗೇಟ್‌ಗೆ ದಾಳಿ ನಡೆಸಿದ ಪ್ರತಿಭಟನಕಾರರನ್ನು ಮುಂಜಾಗ್ರತಾ ಕ್ರಮವಾಗಿ ಬಂಧಿಸಿದ್ದೇವೆ. ಟೋಲ್ ಸಂಗ್ರಹಕ್ಕೆ ಅಡ್ಡಿಪಡಿಸಿದ ಬಗ್ಗೆ ದೂರು ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ
>
> **ಎನ್.ಶಶಿಕುಮಾರ್**, ನಗರ ಪೊಲೀಸ್ ಕಮಿಷನರ್

ಪ್ರತಿಭಟನೆ ಏಕೆ?

ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಹೆಜಮಾಡಿ ಹಾಗೂ ಸುರತ್ಕಲ್ ಟೋಲ್‌ಗೇಟ್‌ಗಳ ನಡುವೆ 20 ಕಿ.ಮೀ ಅಂತರವೂ ಇಲ್ಲ. ಈ ಎರಡರಲ್ಲಿ ಒಂದು ಟೋಲ್‌ಗೇಟ್ ರದ್ದುಪಡಿಸಬೇಕು ಎಂದು ಆರು ವರ್ಷಗಳಿಂದ ಹೋರಾಟ ನಡೆಯುತ್ತಲೇ ಇದೆ.

ಸುರತ್ಕಲ್ ಟೋಲ್ ಗೇಟ್ ರದ್ದುಪಡಿಸುವ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಸಂಸದ ನಳಿನ್ ಕುಮಾರ್ ಕಟೀಲ್ ಮೂರು ವರ್ಷಗಳಿಂದ ಪದೇ ಪದೇ ಭರವಸೆ ನೀಡುತ್ತಲೇ ಬಂದಿದ್ದಾರೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರತಿ 60 ಕಿ.ಮೀ ವ್ಯಾಪ್ತಿಯಲ್ಲಿ ಒಂದಕ್ಕಿಂತ ಹೆಚ್ಚು ಟೋಲ್ ಪ್ಲಾಜಾಗಳಿದ್ದರೆ, ಅವುಗಳಲ್ಲಿ ಒಂದನ್ನು ರದ್ದುಪಡಿಸುವುದಾಗಿ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು 2022ರ ಮಾರ್ಚ್‌ನಲ್ಲಿ ಸಂಸತ್ತಿನಲ್ಲಿ ಭರವಸೆ ನೀಡಿದ್ದರು. ಆ ಬಳಿಕವೂ ಟೋಲ್ ಗೇಟ್ ತೆರವಾಗಿಲ್ಲ.

ಸುರತ್ಕಲ್ ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿಯು ಟೋಲ್ ಗೇಟ್ ತೆರವಿಗೆ ಅ.18ರ ಗಡುವು ನೀಡಿತ್ತು. ಗಡುವು ಮುಗಿದಿದ್ದರಿಂದ ಹೋರಾಟಗಾರರೇ ಅದನ್ನು ತೆರವು ಗೊಳಿಸಲು ಮುಂದಾಗಿದ್ದರು.

> ಈ ಟೋಲ್‌ಗೇಟ್ ಸ್ಥಾಪನೆ ಆದಾಗ ಮೊದಲು ವಿರೋಧಿಸಿದ್ದು ನಮ್ಮ ಪಕ್ಷ. ತಾಂತ್ರಿಕ ಅಡಚಣೆಯ ಕಾರಣ ತೆರವು ವಿಳಂಬವಾಗಿದ್ದು, 20 ದಿನಗಳ ಕಾಲಾವಕಾಶ ಕೇಳಲಾಗಿದೆ.
>
> **ನಳಿನ್‌ಕುಮಾರ್ ಕಟೀಲ್**, ಸಂಸದ

ಹೆಲಿಕಾಪ್ಟರ್ ಪತನ: 7 ಸಾವು

ಒಂದನೇ ಪುಟದಿಂದ

ಹಾರಾಟ ಆರಂಭಿಸಿದ ಐದಾರು ಸೆಕೆಂಡ್‌ಗಳಲ್ಲಿಯೇ ಹೆಲಿಕಾಪ್ಟರ್ ಪತನಗೊಂಡಿತು ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ.

ಹೆಲಿಕಾಪ್ಟರ್ ಛಿದ್ರಗೊಂಡಿದ್ದು ಅದರ ಭಾಗಗಳು ಬೆಂಕಿಯಲ್ಲಿ ಸುಟ್ಟುಹೋಗಿವೆ. ಪತನಗೊಂಡ ಸಂದರ್ಭದಲ್ಲಿ ದಟ್ಟ ಮಂಜು ಇದ್ದ ಕಾರಣ ಏನೂ ಕಾಣಿಸುತ್ತಿರಲಿಲ್ಲ. ಏನೂ ಕಾಣದೇ ಇದ್ದರೂ ದೊಡ್ಡ ಶಬ್ದ ಕೇಳಿದ ಜಾಗಕ್ಕೆ ಎಲ್ಲರೂ ಓಡಿ ಹೋದರು ಎಂದು ಅಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿರುವ ಮನೋಹರ್ ಸಿಂಗ್ ಹೇಳಿದ್ದಾರೆ.

ದಟ್ಟ ಮಂಜಿನಿಂದಾಗಿ ಪೈಲಟ್‌ಗೆ ಏನೂ ಕಾಣಿಸದಿದ್ದುದೇ ಪತನಕ್ಕೆ ಕಾರಣವಾಗಿರಬಹುದು ಎಂದು ಅಂದಾಜಿಸಲಾಗಿದೆ. ವಿಮಾನ ಅಪಘಾತ ತನಿಖಾ ಬ್ಯೂರೊ ಮತ್ತು ನಾಗರಿಕ ವಿಮಾನ ಯಾನ ಮಹಾನಿರ್ದೇಶನಾಲಯದ ತಂಡಗಳು ಪ್ರಕರಣದ ತನಿಖೆ ನಡೆಸಲಿವೆ.

ಹೆಲಿಕಾಪ್ಟರ್ ಸೇವೆಯು ಇತ್ತೀಚಿನ ದಿನಗಳಲ್ಲಿ ಇಲ್ಲಿ ಹಲವು ಪಟ್ಟು ಹೆಚ್ಚಾಗಿದೆ. ಆದರೆ, ಅದಕ್ಕೆ ತಕ್ಕಂತಹ ಸುರಕ್ಷತೆ ಮತ್ತು ನಿಯಂತ್ರಣ ವ್ಯವಸ್ಥೆಗಳು ಇಲ್ಲ. ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದ ಕಚೇರಿ ಕೂಡ ಇಲ್ಲಿ ಇಲ್ಲ.

2019ರ ಆಗಸ್ಟ್‌ನಲ್ಲಿ ಕೂಡ ಇಲ್ಲಿ ಹೆಲಿಕಾಪ್ಟರ್ ಒಂದು ಪತನಗೊಂಡು ಮೂವರು ಮೃತಪಟ್ಟಿದ್ದರು.

ಪ್ರಿಯಕರನ ಜತೆ ಮಗಳ ಕೊಲೆ: ಮರ್ಯಾದೆಗೇಡು ಹತ್ಯೆ ಶಂಕೆ

ಒಂದನೇ ಪುಟದಿಂದ

ಮದುವೆ ಆಗುವುದಾಗಿಯೂ ಪಟ್ಟು ಹಿಡಿದಿದ್ದರು. ಇದೇ ವಿಚಾರವಾಗಿ ಎರಡೂ ಕುಟುಂಬಗಳ ನಡುವೆ ಜಗಳ ವಾಗಿತ್ತು. ಪಂಚಾಯಿತಿಯೂ ನಡೆದಿತ್ತು. ಗಲಾಟೆಯಾಗುವುದು ಬೇಡವೆಂದು ವಿಶ್ವನಾಥ ಅವರನ್ನು ಕಾಸರಗೋಡಿಗೆ ಕಳುಹಿಸಿಕೊಡಲಾಗಿತ್ತು. ಇದಾದ ನಂತರವೂ ವಿಶ್ವನಾಥ, ಬಾಲಕಿ ಜೊತೆ ಸಂಪರ್ಕವಿಟ್ಟುಕೊಂಡಿದ್ದರು.

‘ಮಗಳ ಪ್ರೀತಿಯಿಂದ ಬೇಸತ್ತ ಪರಸಪ್ಪ ಅವರು ಸಂಬಂಧಿಕರ ಜೊತೆ ಸೇರಿಕೊಂಡು ಹತ್ಯೆ ಮಾಡಲು ಸಂಚು ರೂಪಿಸಿದ್ದರು. ಮದುವೆ ಮಾಡಿಕೊಡುವುದಾಗಿ ಹೇಳಿ ಮಗಳ ಮೂಲಕ ವಿಶ್ವನಾಥ ಅವರನ್ನು ಕರೆಯಿಸಿಕೊಂಡರು. ಸೆಪ್ಟೆಂಬರ್ 30ರಂದು ನರಗುಂದಕ್ಕೆ ಬಂದ ವಿಶ್ವನಾಥ ಅವರನ್ನು ಬೊಲೆರೊ ವಾಹನದಲ್ಲಿ ಹಾಗೂ ಮಗಳನ್ನು ಟಾಟಾ ಏಸ್‌ನಲ್ಲಿ ಕರೆದುಕೊಂಡು ಆಲಮಟ್ಟಿ ಕಡೆಗೆ ಹೋಗಿದ್ದರು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಯಪ್ರಕಾಶ ಸುದ್ದಿಗಾರರಿಗೆ ತಿಳಿಸಿದರು.

‘ದಾರಿ ಮಧ್ಯದಲ್ಲಿ ಬಾಲಕಿಯ ಕತ್ತು ಹಿಸುಕಿ ಕೊಂದ ಆರೋಪಿಗಳು, ಅದಾದ ನಂತರ ವಿಶ್ವನಾಥ ಅವರನ್ನು ಕಲ್ಲಿನಿಂದ ಜಜ್ಜಿ ಹತ್ಯೆ ಮಾಡಿದ್ದರು. ಪೊಲೀಸರಿಗೆ ಸುಳಿವು ಸಿಗಬಾರದೆಂದು ಇಬ್ಬರ ಮೃತದೇಹಗಳನ್ನು ವಿವಸ್ತ್ರಗೊಳಿಸಿ, ಆಲಮಟ್ಟಿ– ಹುನಗುಂದ ಮಧ್ಯೆ ಕೃಷ್ಣಾ ನದಿಗೆ ಎಸೆದಿದ್ದಾರೆ. ಬಳಿಕ, ಮೃತರ ಬಟ್ಟೆಗಳನ್ನು ಸಂಗಮ ಕ್ರಾಸ್ ಬಳಿ ಸುಟ್ಟು ಹಾಕಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಅವರು ಮಾಹಿತಿ ನೀಡಿದರು.

ನಾಪತ್ತೆ ದೂರು ನೀಡಿದ್ದ ತಂದೆ: ‘ಪ್ರಿಯಕರನ ಸಮೇತ ಮಗಳನ್ನು ಕೊಂದಿದ್ದ ಆರೋಪಿ ಪರಸಪ್ಪ, ಯಾರಿಗೂ ಅನುಮಾನ ಬಾರದಂತೆ ಓಡಾಡುತ್ತಿದ್ದ. ‘ಮಗಳು ಕಾಣೆಯಾಗಿದ್ದಾಳೆ’ ಎಂದು ಆರೋಪಿಸಿ ಅ. 7ರಂದು ಪೊಲೀಸರಿಗೆ ದೂರು ನೀಡಿದ್ದರು. ಪೊಲೀಸರು ತನಿಖೆ ಕೈಗೊಂಡಾಗಲೇ ಹತ್ಯೆ ಮಾಡಿರುವುದು ಗೊತ್ತಾಗಿದೆ’ ಎಂದು ಹೇಳಿದರು.

ಬೆಳಕು ಕೊಟ್ಟವರಿಗೆ ಮತ್ತೆ ಕತ್ತಲು

ಒಂದನೇ ಪುಟದಿಂದ

ವಿಚಾರಣೆ ನಡೆಸಿದ್ದ ಕೋರ್ಟ್, ಕಂದಾಯ ಇಲಾಖೆಗೆ ಅರಣ್ಯ ಭೂಮಿ ಹಸ್ತಾಂತರಿಸುವ ಪ್ರಕ್ರಿಯೆಯಲ್ಲಿ ಸರ್ಕಾರ 1963 ಹಾಗೂ 1980ರ ಅರಣ್ಯ ಕಾಯ್ದೆಯ ನಿಯಮಗಳನ್ನು ಪಾಲಿಸಿಲ್ಲ. ಕೇಂದ್ರದ ಅನುಮತಿ ಪಡೆಯದೇ ಡಿ–ನೋಟಿಫಿಕೇಶನ್ ಮಾಡಲಾಗಿದೆ. ಇದು ಕಾನೂನು ಬಾಹಿರ, ಮಾರ್ಚ್ 2009ರಲ್ಲಿ ಸುಪ್ರೀಂಕೋರ್ಟ್ ನೀಡಿದ್ದ ತೀರ್ಪಿಗೂ ವಿರುದ್ಧದ ನಿರ್ಧಾರ ಎಂದು ತೀರ್ಪು ನೀಡಿತ್ತು. ತೀರ್ಪಿನ ಒಂದೂವರೆ ವರ್ಷದ ನಂತರ ಸರ್ಕಾರ 1994ರಿಂದ 2019ರವರೆಗೆ ಹೊರಡಿಸಿದ್ದ 56 ಅಧಿಸೂಚನೆಗಳನ್ನು ರದ್ದುಪಡಿಸಿದೆ.

ಮುಗಿಯದ ಶರಾವತಿ ಸಂತ್ರಸ್ತರ ಬವಣೆ: 1958–64ರ ಅವಧಿಯಲ್ಲಿ ಜಲವಿದ್ಯುತ್ ಯೋಜನೆ ಮೂಲಕ ರಾಜ್ಯಕ್ಕೆ ಬೆಳಕು ನೀಡುವ ಉದ್ದೇಶಕ್ಕೆ ನಿರ್ಮಾಣವಾದ ಲಿಂಗನಮಕ್ಕಿ ಜಲಾಶಯಕ್ಕಾಗಿ 152 ಹಳ್ಳಿಗಳ 12 ಸಾವಿರ ಕುಟುಂಬಗಳನ್ನು ಸ್ಥಳಾಂತರ ಮಾಡಲಾಗಿತ್ತು. ಹೊಸನಗರ, ತೀರ್ಥಹಳ್ಳಿ, ಸಾಗರ, ಸೊರಬ, ಶಿವಮೊಗ್ಗ, ಶಿಕಾರಿಪುರ ತಾಲ್ಲೂಕಿನ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಪುನರ್‌ನೆಲೆ ಕಂಡುಕೊಂಡಿದ್ದರು. ಅವರ ಪುನರ್ವಸತಿಗಾಗಿಯೇ ಅಂದು ಕೇಂದ್ರ ಸರ್ಕಾರ 8 ಸಾವಿರ ಎಕರೆಗೂ ಹೆಚ್ಚು ಅರಣ್ಯಭೂಮಿ ಮೀಸಲಿಟ್ಟಿತ್ತು. ಆ ಸ್ಥಳದಲ್ಲಿ ಸಂತ್ರಸ್ತರು ನೆಲೆ ನಿಂತು, ಉಳುಮೆ ಮಾಡಿಕೊಂಡು ಜೀವನ ಸಾಗಿಸುತ್ತಾ ಬಂದರೂ, ಅವರ ಅನುಭೋಗದಲ್ಲಿದ್ದ ಆ ಭೂಮಿಯ ಹಕ್ಕು ಸಿಕ್ಕಿರಲಿಲ್ಲ. 2015ರಲ್ಲಿ ಸರ್ಕಾರ 9,934 ಎಕರೆ 2 ಗುಂಟೆ ಅರಣ್ಯಭೂಮಿಯನ್ನು ಡಿ–ನೋಟಿಫಿಕೇಶನ್ ಮಾಡಿ, ಕಂದಾಯ ಇಲಾಖೆಗೆ ಹಸ್ತಾಂತರಿಸಿತ್ತು. ಕಂದಾಯ ಇಲಾಖೆ ಮೂರು ಹಂತಗಳಲ್ಲಿ 2 ಸಾವಿರ ಕುಟುಂಬಗಳಿಗೆ 6,458 ಎಕರೆ ಭೂಮಿ ಹಂಚಿಕೆ ಮಾಡಿ, ಆರ್‌ಟಿಸಿಯನ್ನೂ (ಪಹಣಿ) ನೀಡಿತ್ತು. ಉಳಿದ ಭೂಮಿಗೂ ಸಂತ್ರಸ್ತರ ನೆಲೆಗೂ ತಾಳೆಯಾಗದ ಕಾರಣ ಹಂಚಿಕೆಯಾಗಿರಲಿಲ್ಲ.

ಕೇಂದ್ರಕ್ಕೆ ಸಿಎಂ ನೇತೃತ್ವದಲ್ಲಿ ನಿಯೋಗ

ಶರಾವತಿ ಸಂತ್ರಸ್ತರಿಗೆ ಭೂಮಿ ನೀಡಲು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಲು ಮುಖ್ಯಮಂತ್ರಿ ನೇತೃತ್ವದಲ್ಲಿ ನಿಯೋಗ ತೆಗೆದುಕೊಂಡು ಹೋಗುವುದಾಗಿ ಗೃಹ ಸಚಿವ ಆರಗ ಜ್ಞಾನೇಂದ್ರ, ಸಾಗರ ಶಾಸಕ ಹರತಾಳು ಹಾಲಪ್ಪ ಅವರ ನೇತೃತ್ವದಲ್ಲಿ ಮಂಗಳವಾರ ನಡೆದ ಸಭೆ ನಿರ್ಧರಿಸಿದೆ.

‘ಜಿಲ್ಲಾಧಿಕಾರಿ, ಸಾಂಖ್ಯಿಕ ಮತ್ತು ಯೋಜನಾ ಅಧಿಕಾರಿಗಳಿಂದ ಮಾಹಿತಿ ಪಡೆದು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು. ಈಗಾಗಲೇ ಡಿ–ರಿಸರ್ವೇಷನ್ ಆಗಿರುವ ಜಮೀನಿಗೆ ಇನ್ನೂ ಮೂರು ಸಾವಿರ ಎಕರೆ ಅರಣ್ಯ ಭೂಮಿ ಸೇರ್ಪಡೆಗೊಳಿಸಲು ಮನವಿ ಮಾಡಲಾಗುವುದು’ ಎಂದು ಜ್ಞಾನೇಂದ್ರ ಹೇಳಿದರು.

ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ಜಾವೇದ್ ಅಖ್ತರ್, ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಸಂಜಯ್ ಬಿಜ್ಜೂರ್, ಶರಾವತಿ ಮುಳುಗಡೆ ಪ್ರದೇಶದ ರೈತರಾದ ಕಾಳನಾಯ್ಕ, ತಿಮ್ಮಪ್ಪ ಕುಂಬ್ರಿ, ಕೃಷ್ಣಮೂರ್ತಿ, ಜಾನಪದ ಅಕಾಡೆಮಿ ಮಾಜಿ ಸದಸ್ಯ ಬೂದ್ಯಪ್ಪ ಇದ್ದರು.

ಇದೇ ವಾರ ದೆಹಲಿಗೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಬೆಂಗಳೂರು: ಸಚಿವ ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ವರಿಷ್ಠರ ಭೇಟಿಗೆ ಈ ವಾರ ಸಮಯ ಕೇಳಿದ್ದು, ಸಮಯ ನಿಗದಿಯಾದ ಕೂಡಲೇ ದೆಹಲಿಗೆ ಭೇಟಿ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ದೆಹಲಿ ಭೇಟಿಯಲ್ಲಿ ಸಂಪುಟ ವಿಸ್ತರಣೆಗೆ ಅನುಮತಿ ಕೋರಲಿದ್ದಾರೆ ಎಂದು ಮೂಲಗಳು ಹೇಳಿವೆ.

ಜಯಾ ಸಾವಿನಲ್ಲಿ ಶಶಿಕಲಾ ಪಾತ್ರದ ತನಿಖೆಗೆ ಸಲಹೆ

ಒಂದನೇ ಪುಟದಿಂದ

ಮುಖ್ಯಾಂಶಗಳು

- ಸರ್ಕಾರಕ್ಕೆ ಆಗಸ್ಟ್ 27ರಂದು ವರದಿ ಸಲ್ಲಿಕೆಯಾಗಿದೆ
- ವರದಿಯು 475 ಪುಟಗಳಷ್ಟು ಸುದೀರ್ಘವಾಗಿದೆ

ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ. ಆರ್ಮುಗಸ್ವಾಮಿ ನೇತೃತ್ವದ ಏಕ ಸದಸ್ಯ ಆಯೋಗವು ಈ ವರದಿಯನ್ನು ಸಿದ್ಧಪಡಿಸಿದೆ.

ಏಮ್ಸ್ ವೈದ್ಯರ ಸಮಿತಿಯು ಕೊಟ್ಟ ವರದಿಯ ಹಲವು ವಿಚಾರಗಳ ಬಗ್ಗೆ ನ್ಯಾಯಾಂಗ ಆಯೋಗವು ಅಸಮ್ಮತಿ ಸೂಚಿಸಿದೆ. ಶಶಿಕಲಾ ಅವರ ಪಾತ್ರವಿರುವ ವಿವಿಧ ವಿಚಾರಗಳ ಕುರಿತಂತೆ ತನಿಖೆ ನಡೆಸಬೇಕಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ ಎಂದು ತಮಿಳುನಾಡು ಸರ್ಕಾರವು ತಿಳಿಸಿದೆ. ಇಬ್ಬರು ವೈದ್ಯರನ್ನೂ ತನಿಖೆಗೆ ಒಳಪಡಿಸಬೇಕು ಎಂದು ಸಮಿತಿ ಹೇಳಿದೆ. ಆದರೆ, ಜಯಲಲಿತಾ ಅವರಿಗೆ ಚಿಕಿತ್ಸೆ ನೀಡಿದ್ದ ಚೆನ್ನೈನ ಆಸ್ಪತ್ರೆಯ ಅಧ್ಯಕ್ಷರನ್ನು ತನಿಖೆಗೆ ಒಳಪಡಿಸಬೇಕೇ, ಬೇಡವೇ ಎಂಬುದನ್ನು ಸರ್ಕಾರವೇ ನಿರ್ಧರಿಸಬಹುದು ಎಂದು ಆಯೋಗವು ಹೇಳಿದೆ.

ಜಯಲಲಿತಾ ಅವರನ್ನು 2016ರ ಸೆಪ್ಟೆಂಬರ್ 22ರಂದು ಆಸ್ಪತ್ರೆಗೆ ದಾಖಲಿಸಲು ಕಾರಣವಾದ ಸನ್ನಿವೇಶ ಮತ್ತು ಆಸ್ಪತ್ರೆಯಲ್ಲಿ ಅವರಿಗೆ ನೀಡಲಾದ ಚಿಕಿತ್ಸೆಯ ಕುರಿತಂತೆ ಪರಿಶೀಲನೆ ನಡೆಸಿ ವರದಿ ನೀಡಲು ನ್ಯಾಯಾಂಗ ಆಯೋಗಕ್ಕೆ ಸೂಚಿಸಲಾಗಿತ್ತು. ಆಸ್ಪತ್ರೆಗೆ ಸೇರಿಸಿದ ವಿಚಾರದಲ್ಲಿ ಶಶಿಕಲಾ ಮತ್ತು ಇತರರ ವರ್ತನೆಯಲ್ಲಿ ಅಸಾಧಾರಣ ಅಥವಾ ಅಸಹಜವಾದುದು ಏನೂ ಕಂಡಿಲ್ಲ ಎಂದು ವರದಿಯು ವಿವರಿಸಿದೆ.

ಜಯಲಲಿತಾ ಅವರನ್ನು ಅಪೊಲೊ ಆಸ್ಪತ್ರೆಗೆ ಸೇರಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರಲ್ಲಿ ಯಾವುದೇ ವಿಳಂಬ ಆಗಿಲ್ಲ ಎಂದು ವರದಿ ಹೇಳಿದೆ. ಆದರೆ, ಚಿಕಿತ್ಸೆಗೆ ಸಂಬಂಧಿಸಿದ ವಿಚಾರಗಳಲ್ಲಿ ಶಶಿಕಲಾ ಮತ್ತು ಇತರರನ್ನು ತನಿಖೆಗೆ ಒಳಪಡಿಸಬೇಕು ಎಂದಿದೆ.

ಅಮೆರಿಕದ ಹೃದಯ ತಜ್ಞ ಡಾ. ಸಮಿನ್ ಶರ್ಮಾ ಅವರು ಜಯಲಲಿತಾ ಅವರನ್ನು ಪರಿಶೀಲಿಸಿ ಹೃದಯ ಶಸ್ತ್ರಕ್ರಿಯೆ ನಡೆಸಬೇಕು ಎಂದು ಸಲಹೆ ಕೊಟ್ಟಿದ್ದರು. ಆಗ ಪ್ರಜ್ಞೆ ಹೊಂದಿದ್ದ ಜಯಲಲಿತಾ ಅವರು ಶಸ್ತ್ರಕ್ರಿಯೆಗೆ ಸಮ್ಮತಿಯನ್ನೂ ಕೊಟ್ಟಿದ್ದರು. ಆದರೆ, ಬ್ರಿಟನ್‌ನ ವೈದ್ಯರೊಬ್ಬರು (ಫಿಜಿಷಿಯನ್) ಶಸ್ತ್ರಕ್ರಿಯೆ ಬೇಡ ಎಂದ ಕಾರಣಕ್ಕೆ ಶಸ್ತ್ರಕ್ರಿಯೆ ನಡೆಸುವ ಯೋಚನೆಯನ್ನು ಕೈಬಿಡಲಾಯಿತು. ಶಸ್ತ್ರಕ್ರಿಯೆ ನಡೆಸುವುದರಿಂದ ಪ್ರಯೋಜನ ಇದೆ ಎಂದು ಹೃದಯ ತಜ್ಞರೇ ವಿಶ್ವಾಸ ವ್ಯಕ್ತಪಡಿಸಿದ್ದರು. ಹಾಗಿದ್ದರೂ ಫಿಜಿಷಿಯನ್ ಒಬ್ಬರನ್ನು ಕರೆತಂದು ಅವರ ಅಭಿಪ್ರಾಯ ಪಡೆಯುವ ಅಗತ್ಯ ಏನಿತ್ತು ಎಂದು ವರದಿಯಲ್ಲಿ ಪ್ರಶ್ನಿಸಲಾಗಿದೆ. ಆ್ಯಂಜಿಯೊಗ್ರಫಿ ನಡೆಸುವುದನ್ನು ತಪ್ಪಿಸುವುದಕ್ಕಾಗಿಯೇ ಆಸ್ಪತ್ರೆಯ ವೈದ್ಯ ಒಬ್ಬರು ‘ಕುತಂತ್ರ’ ಮಾಡಿದ್ದಾರೆ. ಯಾರನ್ನೋ ಮೆಚ್ಚಿಸುವುದಕ್ಕಾಗಿ ಇದನ್ನು ಮಾಡಲಾಗಿದೆ ಎಂದು ವರದಿ ತಿಳಿಸಿದೆ.

ಚಿಕಿತ್ಸೆಯ ಸಂದರ್ಭದಲ್ಲಿ ವೈದ್ಯರ ಜತೆಗೆ (ವಿಶೇಷವಾಗಿ ಅಪೊಲೊ ಆಸ್ಪತ್ರೆಯ ವೈದ್ಯರು) ಶಶಿಕಲಾ ಅವರು ಮಾತ್ರ ಮಾತನಾಡುತ್ತಿದ್ದರು. ಶಶಿಕಲಾ ಅವರ ಸಮ್ಮತಿ ಪಡೆದೇ ವೈದ್ಯರು ಮುಂದುವರಿಯುತ್ತಿದ್ದರು ಎಂದು ವರದಿಯಲ್ಲಿ ಹೇಳಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	36,733	34,410
ಹಾರಂಗಿ	2,859	2,858.26	1,360	1,249
ಕಬಿನಿ	2284	2,283.94	3,690	3,000
ಹೇಮಾವತಿ	2,922	2,921.75	2,767	4,942
ಲಿಂಗನಮಕ್ಕಿ	1,819	1,814	6,630	6,478
ಸೂಪಾ (ಮೀ)	564	553.75	2,570	2,570
ಮಾಣಿ	595	589	375	750
ತುಂಗಭದ್ರಾ	1,633	1,632.88	35,048	28,007
ಮಲಪ್ರಭಾ	2079.5	2,079.50	3,394	3,394
ಘಟಪ್ರಭಾ	2175	2,175	984	984
ಭದ್ರಾ	186	185	5,301	5,301
ಆಲಮಟ್ಟಿ (ಮೀ)	519.6	519.49	74,951	74,951
ನಾರಾಯಣಪುರ (ಮೀ)	492.25	491.80	75,000	62,660

* ನೆಲಮಟ್ಟದಿಂದ

ಸರ್ವೋದಯ ವಿದ್ಯಾವರ್ಧಕ ಟ್ರಸ್ಟ್ (ರಿ,)
ಕೊಪ್ಪ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ –571425
ಸಂಖ್ಯೆ: ಸಿ8(2) ಶಾಶಿಅ.ಖಾ.ಹು.ಭ:.ಅನು/54/2022–23/ಇ–872195
ದಿನಾಂಕ: 13–09–2022

ಪ್ರಕಟಣೆ

ಈ ಮೇಲ್ಕಂಡ ಆದೇಶದಂತೆ ಸರ್ವೋದಯ ಸಂಯುಕ್ತ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಕೊಪ್ಪ ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ , ಸದರಿ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–1 ಹುದ್ದೆ ಕಾಲಿ ಇದ್ದು ಇಲಾಖೆ ಈ ಹುದ್ದೆಯನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿರುತ್ತದೆ.

ಕ್ರ.ಸಂ	ಮೀಸಲಾತಿ	ವಿದ್ಯಾರ್ಹತೆ	ಮೀಸಲಾತಿ
01	ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್ – 1	ಬಿ.ಎ. ಬಿ.ಪಿ.ಇಡಿ (ಶೇ 55% ಅಧಿಕ)	ಏಕ ವೃಂದ ಹುದ್ದೆ ಮೀಸಲಾತಿ ಅನ್ವಯಿಸುವುದಿಲ್ಲ

ಅರ್ಹ ಅಭ್ಯರ್ಥಿಗಳು ಸಂಬಂಧ ಪಟ್ಟ ದಾಖಲೆಗಳೊಂದಿಗೆ 500 ರೂ ಪೋಸ್ಟಲ್ ಆರ್ಡರ್ ನೊಡನೆ ಒಂದು ಪ್ರತಿಯನ್ನು ಅಧ್ಯಕ್ಷರು ಸರ್ವೋದಯ ವಿದ್ಯಾವರ್ಧಕ ಟ್ರಸ್ಟ್ (ರಿ,) ಕೊಪ್ಪ ಮತ್ತೊಂದು ಪ್ರತಿಯನ್ನು ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ ಇವರಿಗೆ ಪ್ರಕಟಣೆಯ ದಿನಾಂಕ ದಿಂದ 21 ದಿನದೊಳಗೆ ತಲುಪುವಂತೆ ಸಲ್ಲಿಸಬೇಕು.

ಮೊ: 94483–74574
91411–51516

ಸಹಿ/– ಅಧ್ಯಕ್ಷರು
ಸರ್ವೋದಯ ವಿದ್ಯಾವರ್ಧಕ ಟ್ರಸ್ಟ್ (ರಿ,)
ಕೊಪ್ಪ ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ

20 ಆರೋಪಿಗಳಿಗೆ ಜಾಮೀನು: ಮತ್ತಿಬ್ಬರ ಬಂಧನ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆ ಅಕ್ರಮಕ್ಕೆ ಸಂಬಂಧಿಸಿದಂತೆ ಮಂಗಳವಾರ ಮತ್ತೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ.

ನಾಗಪ್ಪ

ಯಲ್ಲಪ್ಪ



ಸಂಜೀವ

ಚಿಕ್ಕೋಡಿ ತಾಲ್ಲೂಕಿನ ಜಾಗನೂರ ಗ್ರಾಮದ ನಾಗಪ್ಪ ಶಿವಪ್ಪ ದೊಡಮನಿ (27) ಹಾಗೂ ಗೋಕಾಕ ತಾಲ್ಲೂಕಿನ ಲೋಳಸೂರ ನಿವಾಸಿ ಯಲ್ಲಪ್ಪ ಮಹದೇವ ರಕ್ಷಿ (26) ಬಂಧಿತರು.

20 ಮಂದಿಗೆ ಜಾಮೀನು: ಸೋಮವಾರ ಪ್ರಕರಣದ ವಿಚಾರಣೆ ನಡೆಸಿದ ಗೋಕಾಕದ ಎರಡನೇ ಜೆಎಂಎಫ್‌ಸಿ ನ್ಯಾಯಾಧೀಶ ಜಿ.ರಾಜೀವ್ ಅವರು ಪ್ರಮುಖ ಆರೋಪಿ ಸಂಜೀವ ಲಕ್ಷ್ಮಣ ಭಂಡಾರಿ ಸೇರಿ 20 ಮಂದಿಗೆ ಷರತ್ತುಬದ್ಧ ಜಾಮೀನು ನೀಡಿದರು.

ಸಿಐಡಿ ವಶಕ್ಕೆ: ಜಾಮೀನು ದೊರೆತ ನಂತರ ಸಂಜೀವ ಭಂಡಾರಿ ಇಲ್ಲಿನ ಹಿಂಡಲಗಾ ಜೈಲಿನಿಂದ ಹೊರಬಂದರು. ಮುಂಚೆಯೇ ಕಾಯುತ್ತ ನಿಂತಿದ್ದ ಸಿಐಡಿ ಅಧಿಕಾರಿಗಳು ಅವರನ್ನು ಮತ್ತೆ ಬಂಧಿಸಿದರು.

ಮೈಸೂರು ಅರಮನೆ ಕೋಟೆ ಗೋಡೆ ಕುಸಿತ

ರಾಜ್ಯದ ಹಲವೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಕೆಲವೆಡೆ ಮಂಗಳವಾರವೂ ಮಳೆಯಾಗಿದೆ. ಬೆಂಗಳೂರು ನಗರ ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲ ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಮಂಗಳವಾರ ಧಾರಾಕಾರ ಮಳೆ ಸುರಿಯಿತು.

ಮೈಸೂರಿನ ಅಂಬಾವಿಲಾಸ ಅರಮನೆಯ ಕೋಟೆ ಗೋಡೆಯು ಮಂಗಳವಾರ ಮುಂಜಾನೆ ಕುಸಿದಿದೆ. ಮೂರು ದಿನಗಳಿಂದ ನಗರದಲ್ಲಿ ಸತತ ಮಳೆ ಸುರಿದಿತ್ತು. ಕಲ್ಲು ಹಾಗೂ ಸುರ್ಕಿ ಗಾರೆಯಿಂದ ನಿರ್ಮಿಸಲಾದ ಕೋಟೆಗೆ 220 ವರ್ಷಗಳ ಇತಿಹಾಸವಿದ್ದು, ಅಲ್ಲಲ್ಲಿ ಬಿರುಕುಗಳು ಮೂಡಿವೆ.

‘ಶಿಥಿಲಗೊಂಡಿರುವ ಕೋಟೆಯ 50 ಮೀಟರ್ ಉದ್ದದ ದುರಸ್ತಿಗೆ ₹ 39 ಲಕ್ಷ ಮೊತ್ತದ ಟೆಂಡರ್ ಕರೆಯಲಾಗಿತ್ತು. ಅದರಲ್ಲಿ ಕುಸಿದ ಭಾಗವೂ ಸೇರಿತ್ತು. ಬುಧವಾರದಿಂದ ಕಾಮಗಾರಿ ಆರಂಭಗೊಳ್ಳಲಿದೆ. ಈಗಾಗಲೇ ದುರಸ್ತಿ ಕಾರ್ಯ ನಡೆದಿದೆ’ ಎಂದು ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ‘ಪ್ರಜಾವಾಣಿ’ಗೆ ತಿಳಿಸಿದರು.

ಮತ್ತಿಬ್ಬರ ಶವ ಪತ್ತೆ: ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಪಳವಳ್ಳಿ ಬಳಿ ಭಾನುವಾರ ಸಂಜೆ ಹಳ್ಳದಲ್ಲಿ ಕೊಚ್ಚಿ ಹೋಗಿದ್ದ ಕೆಂಚಗಾನಹಳ್ಳಿಯ ಗಂಗಾಧರ(40), ಗುಬ್ಬಿ ತಾಲ್ಲೂಕಿನ ಕಡಬ ಹೋಬಳಿ ಕಲ್ಲೂರು ಕೆರೆ ಕೋಡಿ ನೀರಿನಲ್ಲಿ ಶನಿವಾರ ರಾತ್ರಿ ಕೊಚ್ಚಿ ಹೋಗಿದ್ದ ಹನುಮಂತಯ್ಯ(47) ಎಂಬುವರ ಶವ ಮಂಗಳವಾರ ಪತ್ತೆಯಾಗಿವೆ.

ನಾಳೆ ಆರು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದಲ್ಲಿ ಇನ್ನೂ ಎರಡು ದಿನ ಭಾರಿ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ. ಅ.19ರಂದು ಸಾಧಾರಣ ಮಳೆಯಾದರೆ ಬಳಿಕ ಜೋರಾಗಲಿದೆ.

ಅ.20ರಂದು ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಚಾಮರಾಜನಗರ ಹಾಗೂ 21ರಂದು ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಕರಾವಳಿ ಭಾಗದಲ್ಲಿ ಮಳೆ ಪ್ರಮಾಣ ತಗ್ಗಲಿದೆ ಎಂದು ತಿಳಿಸಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

ನವೆಂಬರ್‌ನಲ್ಲಿ 2ನೇ ಟರ್ಮಿನಲ್ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡುವ ಉದ್ದೇಶ
- ಮಳೆನೀರು ಸಂಗ್ರಹಿಸಿ ಮರು ಬಳಕೆಯ ವ್ಯವಸ್ಥೆ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿರ್ಮಿಸಲಾಗಿರುವ ಎರಡನೇ ಟರ್ಮಿನಲ್ ಪ್ರಯಾಣಿಕರ ಬಳಕೆಗೆ ಸಿದ್ಧವಾಗುತ್ತಿದ್ದು, ನವೆಂಬರ್‌ನಲ್ಲಿ ಉದ್ಘಾಟನೆ ಆಗುವ ಸಾಧ್ಯತೆ ಇದೆ.

ಭಾರತ ಹಾಗೂ ಕೇಂದ್ರ ಏಷ್ಯಾ ಪ್ರದೇಶದಲ್ಲಿನ ಅತ್ಯುತ್ತಮ ಪ್ರಾದೇಶಿಕ ವಿಮಾನ ನಿಲ್ದಾಣ ಎನಿಸಿಕೊಂಡಿರುವ ನಿಲ್ದಾಣದಲ್ಲಿ ಸದ್ಯ ಒಂದೇ ಟರ್ಮಿನಲ್ ಇದೆ. ಆದರೆ, ನಿಲ್ದಾಣ ಬಳಸುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ದುಪ್ಪಟ್ಟಾಗುತ್ತಿದೆ. ಹೀಗಾಗಿ, ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಎರಡನೇ ಟರ್ಮಿನಲ್ ನಿರ್ಮಿಸಲಾಗಿದೆ.

'ಎರಡನೇ ಟರ್ಮಿನಲ್ ಹಾಗೂ ಅದಕ್ಕೆ ಅಗತ್ಯವಿರುವ ರಸ್ತೆ ನಿರ್ಮಾಣ ಕಾಮಗಾರಿಯನ್ನು 2018ರಿಂದ ಆರಂಭಿಸಲಾಗಿತ್ತು. ಮೊದಲ ಹಂತದಲ್ಲಿ 2.54 ಲಕ್ಷ ಚದರ ಮೀಟರ್ ಹಾಗೂ ಎರಡನೇ ಹಂತದಲ್ಲಿ 4.41 ಲಕ್ಷ ಚದರ ಮೀಟರ್ ಟರ್ಮಿನಲ್ ಕಟ್ಟಡ ನಿರ್ಮಿಸಲಾಗಿದೆ. ಸುಂದರ ಹಾಗೂ ಅರ್ಥಪೂರ್ಣವಾದ ವಾಸ್ತುಶಿಲ್ಪದ ವಿನ್ಯಾಸವನ್ನು ಕಟ್ಟಡಕ್ಕೆ ನೀಡಲಾಗಿದೆ' ಎಂದು ವಿಮಾನ ನಿಲ್ದಾಣದ ಅಧಿಕಾರಿಯೊಬ್ಬರು ಹೇಳಿದರು.



ಎರಡನೇ ಟರ್ಮಿನಲ್ ಒಳಗಿನ ದೃಶ್ಯ

'ಒಂದನೇ ಟರ್ಮಿನಲ್‌ಗೆ ಹೋಲಿಸಿದರೆ ಎರಡನೇ ಟರ್ಮಿನಲ್ ಸಾಕಷ್ಟು ವಿಶೇಷತೆಗಳನ್ನು ಒಳಗೊಂಡಿದೆ. ಪ್ರವೇಶ (ಚೆಕ್–ಇನ್) ಕೌಂಟರ್‌ಗಳು ಹಾಗೂ ನಿರ್ಗಮನ ಪ್ರದೇಶಗಳು ದೊಡ್ಡದಾಗಿವೆ. ಮಳೆ ನೀರು ಸಂಗ್ರಹಿಸಿ ಮರುಬಳಕೆ ಮಾಡುವ ವ್ಯವಸ್ಥೆ ಇದೆ. ಜೊತೆಗೆ, ಸೋಲಾರ್ ವ್ಯವಸ್ಥೆ ಮೂಲಕ ವಿದ್ಯುತ್ ಬಳಕೆ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ಪ್ರಧಾನ ಮಂತ್ರಿ ಅವರಿಂದ ಉದ್ಘಾಟನೆ: 'ಎರಡನೇ ಟರ್ಮಿನಲ್ ಬಳಕೆಗೆ ಮುಕ್ತವಾದರೆ, ಇಡೀ ವಿಶ್ವದಲ್ಲೇ ಸುಸಜ್ಜಿತ ಟರ್ಮಿನಲ್ ಎನಿಸಿಕೊಳ್ಳಲಿದೆ. ಈ ಟರ್ಮಿನಲ್ ಉದ್ಘಾಟಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಕೋರಲಾಗಿದ್ದು, ನವೆಂಬರ್ 10 ಅಥವಾ 11ರಂದು ಸಮಯ ನೀಡುವ ನಿರೀಕ್ಷೆ ಇದೆ' ಎಂದು ಅಧಿಕಾರಿ ಹೇಳಿದರು.

ಯುವತಿ ಸಾವು, ತುಂಡಾದ ಯುವಕನ ಕೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಬೈಕ್ ಉರುಳಿಬಿದ್ದು ಅಪಘಾತ ಸಂಭವಿಸಿದ್ದು, ಸನಾ ಸಾಹೇಬ್ (18) ಎಂಬುವರು ಮೃತಪಟ್ಟಿದ್ದಾರೆ. ಬೈಕ್ ಸವಾರ ಜಿಶ್ಯಾನ್ (18) ಎಂಬುವರ ಬಲಗೈ ತುಂಡಾಗಿದೆ.

'ನಗರದ ಮಳಿಗೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಜಿಶ್ಯಾನ್ ಅವರದ್ದು ಮಂಗಳವಾರ ಹುಟ್ಟುಹಬ್ಬವಿತ್ತು. ಅದರ ಆಚರಣೆಗೆಂದು ಸ್ನೇಹಿತೆ ಸನಾ ಜೊತೆ ಬೈಕ್‌ನಲ್ಲಿ ಹೆಬ್ಬಾಳ ಕಡೆಯಿಂದ ದೇವನಹಳ್ಳಿಯತ್ತ ಹೊರಟಿದ್ದರು. ಯಲಹಂಕ ಜಂಕ್ಷನ್ ಬಳಿ ಮಧ್ಯಾಹ್ನ 1.30ರ ಸುಮಾರಿಗೆ ಬೈಕ್ ಉರುಳಿಬಿದ್ದು, ಈ ಅವಘಡ ಸಂಭವಿಸಿದೆ' ಎಂದು ಯಲಹಂಕ ಸಂಚಾರ ಪೊಲೀಸರು ಹೇಳಿದರು.

ಅತಿ ವೇಗದ ಚಾಲನೆ: 'ಜಿಶ್ಯಾನ್ ಅವರು ಕೆಟಿಎಂ ಡ್ಯೂಕ್ ಬೈಕ್ (ಕೆಎ 04 ಜೆಬಿ 0146) ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ಸನಾ ಕುಳಿತಿದ್ದರು. ಜಿಶ್ಯಾನ್ ಅವರು ಅತಿ ವೇಗವಾಗಿ ನಿರ್ಲಕ್ಷ್ಯದಿಂದ ಬೈಕ್ ಚಲಾಯಿಸಿದ್ದರು. ನಿಯಂತ್ರಣ ತಪ್ಪಿದ್ದ ಬೈಕ್, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ರಸ್ತೆಯಲ್ಲಿ ಉರುಳಿ ಬಿದ್ದಿತ್ತು.'

'ಬೈಕ್‌ನಿಂದ ಹಾರಿಬಿದ್ದಿದ್ದ ಸನಾ ಅವರ ತಲೆಗೆ ತೀವ್ರ ಪೆಟ್ಟುಬಿದ್ದಿತ್ತು. ಅವರು ಸ್ಥಳದಲ್ಲೇ ಮೃತಪಟ್ಟರು. ರಸ್ತೆ ವಿಭಜಕದಲ್ಲಿದ್ದ ಕಬ್ಬಿಣದ ಕಂಬಕ್ಕೆ ತಾಗಿದ್ದರಿಂದ ಜಿಶ್ಯಾನ್ ಅವರ ಬಲಗೈ ತುಂಡರಿಸಿ ಬಿದ್ದಿತ್ತು. ಈ ಬಗ್ಗೆ ಪ್ರತ್ಯಕ್ಷದರ್ಶಿಗಳು ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಪ್ರಜ್ಞೆ ತಪ್ಪಿ ಬಿದ್ದಿದ್ದ ಜಿಶ್ಯಾನ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ. ಸನಾ ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೆದ್ದಾರಿ ಪ್ರಾಧಿಕಾರದ ವಿರುದ್ಧ ಎಫ್‌ಐಆರ್'

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ವಿಭಜಕ ಅಳವಡಿಕೆಗಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಕಾಮಗಾರಿ ನಡೆಯುತ್ತಿದೆ. ನಿಗದಿತ ಸಮಯದಂದು ಕಾಮಗಾರಿ ಮುಗಿಸದಿರುವುದೂ ಈ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಹೀಗಾಗಿ, ಪ್ರಾಧಿಕಾರದ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಸ್ತೆ ವಿಭಜಕದಲ್ಲಿ ಚೂಪಾದ ಕಬ್ಬಿಣದ ಕಂಬಗಳನ್ನು ನಿಲ್ಲಿಸಿ, ಹಾಗೆಯೇ ಬಿಡಲಾಗಿದೆ. ಇದರಿಂದಲೇ ಜಿಶ್ಯಾನ್ ಕೈ ಕತ್ತರಿಸಿದೆ. ಇದಕ್ಕೆ ಪ್ರಾಧಿಕಾರವೂ ಹೊಣೆ ಎಂಬುದಾಗಿ ಪರಿಗಣಿಸಲಾಗಿದೆ' ಎಂದು ತಿಳಿಸಿವೆ.

ಠಾಣೆಯಲ್ಲಿ ಬೆಂಕಿ ಅವಘಡ

ಬೆಂಗಳೂರು: ವಿಲ್ಸನ್ ಗಾರ್ಡನ್ ಠಾಣೆ ಕಟ್ಟಡದಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ದಾಸ್ತಾನು ಕೊಠಡಿಯಲ್ಲಿ ಇರಿಸಿದ್ದ ವಸ್ತುಗಳು ಹಾಗೂ ಕೆಲ ದಾಖಲೆಗಳು ಸುಟ್ಟು ಕರಕಲಾಗಿವೆ.

'ದಾಸ್ತಾನು ಕೊಠಡಿಯಲ್ಲಿ ಮಂಗಳವಾರ ಬೆಳಿಗ್ಗೆ ಸಣ್ಣದಾಗಿ ಬೆಂಕಿ ಕಾಣಿಸಿಕೊಂಡು, ಕೆಲ ಕ್ಷಣಗಳಲ್ಲಿ ಇಡೀ ಕೊಠಡಿ ಆವರಿಸಿತ್ತು. ಬೆಂಕಿ ನಂದಿಸಲು ಠಾಣೆ ಸಿಬ್ಬಂದಿ ಯತ್ನಿಸಿ ವಿಫಲರಾಗಿದ್ದರು. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಎರಡೂವರೆ ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು' ಎಂದು ಪೊಲೀಸರು ಹೇಳಿದರು.

'ಸಿಬ್ಬಂದಿ ಬಳಸಿದ್ದ ಬೂಟು, ಕ್ಯಾಪ್, ಬಟ್ಟೆ, ಟ್ರಂಕ್‌ಗಳು, ಹಳೇ ಕಂಪ್ಯೂಟರ್ ಸೇರಿ ಹಲವು ವಸ್ತುಗಳು ಕೊಠಡಿಯಲ್ಲಿದ್ದವು. ಕೆಲ ಪ್ರಕರಣಗಳಲ್ಲಿ ಜಪ್ತಿ ಮಾಡಲಾದ ವಸ್ತುಗಳು ಹಾಗೂ ಪ್ರಕರಣಗಳ ಕಡತಗಳೂ ಕೊಠಡಿಯಲ್ಲಿದ್ದವು. ಬೆಂಕಿ ಹೊತ್ತಿಕೊಂಡಿದ್ದರಿಂದ ಎಲ್ಲ ವಸ್ತುಗಳು ಹಾಗೂ ಕಡತ ಸಂಪೂರ್ಣ ಸುಟ್ಟಿವೆ' ಎಂದು ತಿಳಿಸಿದರು.

'ದಾಸ್ತಾನು ಕೊಠಡಿಗೆ ಹೊಂದಿಕೊಂಡೇ ಸಿಬ್ಬಂದಿ ಕೆಲಸ ಮಾಡುತ್ತಿದ್ದರು. ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ಅವರೆಲ್ಲ ಹೊರಗೆ ಬಂದಿದ್ದರು' ಎಂದು ಹೇಳಿದರು.

ತಂತಿ ತುಂಡರಿಸಿದ್ದರಿಂದ ಶಾರ್ಟ್ ಸರ್ಕೀಟ್: 'ದಾಸ್ತಾನು ಕೊಠಡಿಯಲ್ಲಿ ಇಲಿಗಳು ಹೆಚ್ಚಿವೆ. ವಿದ್ಯುತ್ ತಂತಿಯನ್ನು ಇಲಿ ಕಡಿದಿರುವ ಅನುಮಾನವಿದೆ. ತುಂಡರಿಸಿದ್ದ ತಂತಿಯಿಂದಾಗಿ ವಿದ್ಯುತ್ ಶಾರ್ಟ್ ಸರ್ಕೀಟ್ ಉಂಟಾಗಿ ಬೆಂಕಿ ಹೊತ್ತಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಬೆಂಕಿ ಅವಘಡದಲ್ಲಿ ಯಾವೆಲ್ಲ ವಸ್ತುಗಳು ಸುಟ್ಟಿವೆ ಎಂಬುದರ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಸುಟ್ಟಿರುವ ಕಡತಗಳ ಪ್ರತಿಗಳೂ ಬೇರೆ ಕಡೆ ಇವೆ. ಅವಘಡ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಈಗಾಗಲೇ ಮಾಹಿತಿ ನೀಡಲಾಗಿದೆ' ಎಂದು ತಿಳಿಸಿದರು.

'ಅನುಮಾನ: ಎಸಿಪಿ ನೇತೃತ್ವದಲ್ಲಿ ತನಿಖೆ'

ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಗಳ ಹಳೇ ಕಡತಗಳು ಹಾಗೂ ಜಪ್ತಿ ಮಾಡಲಾದ ವಸ್ತುಗಳು ದಾಸ್ತಾನು ಕೊಠಡಿಯಲ್ಲಿದ್ದವು. ಬೆಂಕಿ ಅವಘಡ ಸಂಭವಿಸಿರುವುದು ಹಲವು ಅನುಮಾನಕ್ಕೆ ಕಾರಣವಾಗಿದ್ದು, ಈ ಬಗ್ಗೆ ಹಲಸೂರು ಗೇಟ್ ಠಾಣೆ ಎಸಿಪಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಲಾಗಿದೆ.

'ಠಾಣೆಯಲ್ಲಿ ಬೆಂಕಿ ಅವಘಡ ಸಂಭವಿಸಿದ್ದು ಹೇಗೆ? ಯಾವೆಲ್ಲ ವಸ್ತುಗಳು ಸುಟ್ಟಿವೆ? ಎಂಬುದರ ಬಗ್ಗೆ ತನಿಖೆ ನಡೆಸಲು ಹಲಸೂರು ಗೇಟ್ ಉಪವಿಭಾಗದ ಎಸಿಪಿ ಅವರಿಗೆ ಸೂಚಿಸಲಾಗಿದೆ. ಎಸಿಪಿ ಅವರು ವರದಿ ನೀಡಿದ ಬಳಿಕವೇ ನಿಖರ ಮಾಹಿತಿ ತಿಳಿಯಲಿದೆ' ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ್ ಗೌಡ ತಿಳಿಸಿದರು.

ಅಂತರರಾಷ್ಟ್ರೀಯ ಬುಕ್ಕಿ ಬಂಧನ

ಬೆಂಗಳೂರು: ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪದಡಿ ಅಭಿಷೇಕ್ ಜೈನ್ ಅಲಿಯಾಸ್ ನರಹರಿ ಎಂಬುವವರನ್ನು ಅಶೋಕನಗರ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಅಭಿಷೇಕ್, ಬೆಂಗಳೂರಿನಲ್ಲಿ ಕುಳಿತು ವಿವಿಧ ದೇಶಗಳ ಬುಕ್ಕಿಗಳ ಜೊತೆ ಸಂಪರ್ಕವಿಟ್ಟುಕೊಂಡು ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ. ಈತನನ್ನು ಬಂಧಿಸಿ ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಹಲವು ಮೊಬೈಲ್ ಆ್ಯಪ್ ಬಳಸುತ್ತಿದ್ದ ಆರೋಪಿ, ಏಕದಿನ ಹಾಗೂ ಟಿ–20 ಕ್ರಿಕೆಟ್ ಪಂದ್ಯಗಳ ಸೋಲು–ಗೆಲುವು ಲೆಕ್ಕಾಚಾರದಲ್ಲಿ ಬೆಟ್ಟಿಂಗ್ ನಡೆಸುತ್ತಿದ್ದ' ಎಂದು ತಿಳಿಸಿದರು.

ಕಳವು: ಮೂವರ ಸೆರೆ

ಬೆಂಗಳೂರು: 150ಕ್ಕೂ ಹೆಚ್ಚು ಸರಗಳವು ಪ್ರಕರಣದಲ್ಲಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದು ಕೃತ್ಯ ಮುಂದುವರಿಸಿದ್ದ ಆರೋಪಿ ಅಚ್ಯುತ್ ಕುಮಾರ್ ಅಲಿಯಾಸ್ ವಿಶ್ವನಾಥ್ ಸೇರಿ ಮೂವರನ್ನು ಜಗಜೀವನ್‌ರಾಮ್ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಹಿಳೆಯರ ಸರಗಳವು, ಮನೆಗಳಲ್ಲಿ ಹಾಗೂ ಅಂಗಡಿಗಳನ್ನು ಕಳ್ಳತನ ಮಾಡಿದ ಬಗ್ಗೆ ಪ್ರಕರಣಗಳು ದಾಖಲಾಗಿದ್ದವು. ಇದರ ತನಿಖೆ ಕೈಗೊಂಡು ಆರೋಪಿ ಅಚ್ಯುತ್‌ಕುಮಾರ್ (35), ರಕ್ಷಿತ್ (21) ಹಾಗೂ ಸಿದ್ಧರಾಜು (20) ಬಂಧಿಸಲಾಗಿದೆ. ಇವರಿಂದ ₹1.80 ಲಕ್ಷ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427 ಇಮೇಲ್: eemidcbpura@gmail.com

4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿನ ಟೆಂಡರ್ ಪ್ರಕಟಣೆ ಸಂಖ್ಯೆ : 11/2022–23 ದಿನಾಂಕ : 17/10/2022

ಭಾಗ–1: ಅಲ್ಪಾವಧಿ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನ – ಕೆ.ಡಬ್ಲ್ಯು 4

1. ಇ–ಪ್ರೊಕ್ಯೂರ್‌ಮೆಂಟ್ ಅನ್ವಯ ಕಾಮಗಾರಿಗೆ ಟೆಂಡರ್ ಅನ್ನು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಚಿಕ್ಕಬಳ್ಳಾಪುರ ರವರು ಟೆಂಡರ್ ಕರೆಯಲಾಗಿದ್ದು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz.,http://eproc.karnataka.gov.in) ರಲ್ಲಿ ಟೆಂಡರ್‌ಗಳನ್ನು ಎರಡು ಕವರ್ ಪದ್ಧತಿಯಲ್ಲಿ ಮೊದಲನೇ ಕವರ್‌ನಲ್ಲಿ (1) ಲೋಕೋಪಯೋಗಿ ಕಛೇರಿಯಲ್ಲಿ ನೋಂದಣಿ ಮಾಡಿದ ವಿವರದ ಪ್ರತಿ (2) ಇ.ಎಂ.ಡಿ. ಬಗ್ಗೆ (3) ಆದಾಯ ತೆರಿಗೆ ತೀರುವಳಿ ಬಗ್ಗೆ, ಮಾರಾಟ ತೆರಿಗೆ ತೀರುವಳಿ ಬಗ್ಗೆ ವಿವರ (4) ಲೈನ್ ಆಫ್ ಕ್ರೆಡಿಟ್, (5) ಯಂತ್ರೋಪಕರಣಗಳು (ಡಾಕ್ಯೂಮೆಂಟ್ ಬಿಡ್‌ನಲ್ಲಿ ತೋರಿಸಿರುವಂತೆ. 6) ಟೆಂಡರ್‌ನಲ್ಲಿ ಕರೆದಿರುವ ಅದೇ ಮಾದರಿಯ ಒಂದು ಕಾಮಗಾರಿ ನಿರ್ವಹಿಸಿದ ಮತ್ತು ಕಡ್ಡಾಯವಾಗಿ ಒಂದು ವರ್ಷದಲ್ಲಿ ಎಷ್ಟೆಷ್ಟು ಪರಿಮಾಣಗಳನ್ನು ನಿರ್ವಹಿಸಲಾಗಿರುತ್ತದೆ ಎಂದು ತೋರಿಸುವ ಕಾಮಗಾರಿ ನಿರ್ವಹಣಾ ಪ್ರಮಾಣ ಪತ್ರವನ್ನು ಸಲ್ಲಿಸುವುದು (ಅಂತಿಮ ಬಿಲ್ಲಿನ ಪ್ರತಿಯೊಂದಿಗೆ). (Qualification of the Tenderer 3.2ಬಿ) 7) ಗುತ್ತಿದಾರರು ಜಿ.ಎಸ್.ಟಿ ದರವನ್ನು ಹೊರತು ಪಡಿಸಿ ದರವನ್ನು ನಮೂದಿಸುವುದು. ಎರಡನೇ ಕವರ್‌ನಲ್ಲಿ ಹಣಕಾಸಿನ ದರಪಟ್ಟಿ (ಷೆಡ್ಯೂಲ್–ಬಿ) ಸಲ್ಲಿಸಬಹುದಾಗಿರುತ್ತದೆ. ಗುತ್ತಿಗೆದಾರರು ಸದರಿ ಕಾಮಗಾರಿಗೆ ಬೇಕಾಗಿರುವ ಪೂರ್ವಾರ್ಹತೆಗಳ ಬಗ್ಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ 4 ರಂತೆ (Instructions to Tenders to award of the contract) ಪರಿಶೀಲಿಸಿ ಅದರಂತೆ ಭಾಗವಹಿಸಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಫಾರಂನ ಮಾದರಿ	ಅಂದಾಜು ಮೊತ್ತ (ರೂ. ಲಕ್ಷ ಗಳಲ್ಲಿ)	ಇ.ಎಂ.ಡಿ ಮೊತ್ತ	ಟೆಂಡರ್ ಫಾರಂ ಬೆಲೆ	ಕಾಲಾವಧಿ (ಮಳೆಗಾಲವು ಸೇರಿ)	ಗುತ್ತಿಗೆದಾರರ ದರ್ಜೆ
1	ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಕಲ್ಲೂಡಿ ಕೆರೆಯ ಒಡೆದು ಹೋಗಿರುವ ಏರಿ ಮತ್ತು ಕೋಡಿ ಶಾಶ್ವತ ದುರಸ್ಥಿ ಕಾಮಗಾರಿ.	ಕೆಡಬ್ಲ್ಯೂ 4	345.00	435600.00	ಇ–ಪ್ರೊಕ್ಯೂರ್‌ಮೆಂಟ್ ದರದಂತೆ	06 ತಿಂಗಳು	1 ನೇ ದರ್ಜೆ ಮೇಲ್ಪಟ್ಟು
2	ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಮೇಳ್ಯ ಕೆರೆಯ ಒಡೆದು ಹೋಗಿರುವ ಕೆರೆ ಮರು ನಿರ್ಮಾಣ ಹಾಗೂ ಶಾಶ್ವತ ದುರಸ್ಥಿ ಕಾಮಗಾರಿ.	ಕೆಡಬ್ಲ್ಯೂ 4	410.00	517500.00	ಇ–ಪ್ರೊಕ್ಯೂರ್‌ಮೆಂಟ್ ದರದಂತೆ	06 ತಿಂಗಳು	1 ನೇ ದರ್ಜೆ ಮೇಲ್ಪಟ್ಟು

1) ಸದರಿ ಟೆಂಡರ್‌ನಲ್ಲಿ ಕರೆದಿರುವ ಕಾಮಗಾರಿಗೆ ಸಂಬಂಧಿಸಿದ ಇಎಂಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವ ಯಾವುದಾದರೊಂದು ರೂಪದಲ್ಲಿ ಟೆಂಡರ್ ಊರ್ಜಿತ ಅವಧಿಯನ್ನು ಬಿಟ್ಟು ಹೆಚ್ಚುವರಿಯಾಗಿ 45 ದಿನಗಳನ್ನು ಒಳಗೊಂಡಂತೆ ಸಲ್ಲಿಸಬೇಕಾಗಿರುತ್ತದೆ.
2) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (viz., http://eproc.karnataka.gov.in) ಗೆ ದಿನಾಂಕ: 05/11/2022 ರಂದು ಸಂಜೆ 16.00 ಗಂಟೆವರೆಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಕೆಲಸ ನಿರ್ವಹಿಸಿದ ಬಗ್ಗೆ ಅನುಭವ ಕೆಲಸ ಅರ್ಹತೆ ಬಗ್ಗೆ ಇತ್ಯಾದಿ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಟೆಂಡರ್ ಮೌಲ್ಯಮಾಪನ ಸಮಯದಲ್ಲಿ ಪರಿಶೀಲನೆಗೆ ಸಲ್ಲಿಸತಕ್ಕದ್ದು.
3) ಭರ್ತಿ ಮಾಡಿದ ತಾಂತ್ರಿಕ ಬಿಡ್‌ನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 09/11/2022 ರಂದು ತೆರೆಯಲಾಗುವುದು.
4) ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ್ದ ಹಣಕಾಸಿನ ಬಿಡ್‌ನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ : 10/11/2022 ರಂದು ತೆರೆಯಲಾಗುವುದು.
5) ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

TDR REQUIRED

Require TDR (FSI) for a Large Corporate with clear and marketable title for immediate purchase.

Interested parties may contact
Mr. M G Sandeep: 9611268269
Email ID: vijayadeep@gmail.com

Mr. D S Patil: 9880035001

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/69/2022-23 **ಪ್ರಕಟಣೆ** ದಿನಾಂಕ: 18.10.2022.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1)	ಮೆ:ಹೆಬ್ಬಾಳ್ ಪ್ರೋಜೆಕ್ಟ್ ಪ್ರೈ.ಲಿ., ಪರವಾಗಿ ಡೈರೆಕ್ಟರ್ ಆದ ಕೆ. ಪ್ರಕಾಶ್ ಶೆಟ್ಟಿ	ದೇವನಹಳ್ಳಿ	ಕಸಬಾ	ಶೆಟ್ಟೇರಹಳ್ಳಿ	12/1	4–14	ವ್ಯವಸಾಯ	ವಾಣಿಜ್ಯ

ಷರಾ: ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಾಣಿಜ್ಯ ಬೆಳವಣಿಗೆಗಳು ಬರುತ್ತಿರುತ್ತದೆ. ಸದರಿ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗೆ ಬೇಡಿಕೆ ಇದ್ದು, ವಾಣಿಜ್ಯ ಬೆಳವಣಿಗೆಯಿಂದ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **ವ್ಯವಸಾಯ** ವಲಯದಿಂದ **ವಾಣಿಜ್ಯ** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/2654/ಆಕಾರ್/22–23

भारतीय ताराभौतिकी संस्थान
INDIAN INSTITUTE OF ASTROPHYSICS
II ब्लॉक, कोरमंगला 2nd Block,
Koramangala, बेंगलूरु Bengaluru - 560034

निविदा आमंत्रण सूचना Notice Inviting Tender

मुहरबंद निविदाएं निम्नवत कार्य के लिए आमंत्रित की जाती हैं
Sealed Tenders are invited for the following works:

1. आईआईए, II ब्लॉक, कोरमंगला, बेंगलुरु के कैंटीन का नवीनीकरण-कार्य।
   निविदा सूचना संख्या 60/आईआईए/सिविल/बेंगलूर/कैंटीन/2022-23 दिनांक 19 अक्तूबर 2022
   Renovation of Canteen at IIA, 2nd Block, Koramangala, Bengaluru – 560034.
   Tender Notice No.60/IIA/CIVIL/BNG/CANTEEN/2022-23 dated 19th October 2022

विस्तृत निविदा दस्तावेज को संस्थान की वेबसाइट www.iiap.res.in/tenders.htm. से डाउनलोड किया जा सकता है। उपरोक्त बोलियां प्राप्त करने की अंतिम तारीख नवंबर 21, 2022 को या उससे पहले 15:00 बजे तक है।

Detailed Tender Documents can be downloaded from Institute's Website **www.iiap.res.in/tenders.htm.** Last date for receipt of the above bids are on or before **21st November 2022 at 15:00 hours.**

प्रशासनिक अधिकारी
Administrative Officer

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/86/2022 ದಿನಾಂಕ : 07–10–2022

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ದಂಡು ರೈಲ್ವೆ ನಿಲ್ದಾಣದ ಬೃಹತ್ ಉನ್ನತೀಕರಣದ ಅಭಿವೃದ್ಧಿ / ಮನರಾಭಿವೃದ್ಧಿಯ ಇಂಜಿನಿಯರಿಂಗ್ ಸಂಗ್ರಹಣೆ ಮತ್ತು ನಿರ್ಮಾಣ ವಿಧಾನಕ್ಕಾಗಿ ಪ್ರಸ್ತಾವನೆಗಾಗಿ ಕೋರಿಕೆ. (ಟೆಂಡರ್ ಉಲ್ಲೇಖ ಸಂ. ಬಿಎನ್‌ಸಿ–ಎಸ್‌ಟಿಎನ್–ರೀಡೆವೆಲಪ್‌ಮೆಂಟ್–ಇಪಿಸಿ–ಆರ್)	ರೂ. 455,00,00,000/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 18–11–2022 ರಂದು 11:00 ಗಂಟೆವರೆಗೆ

ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/87/2022 ದಿನಾಂಕ : 07–10–2022

ಕೆಲಸದ ಹೆಸರು	ಅಂದಾಜು ಮೌಲ್ಯ
ಲೋಂಡಾ – ಮೀರಜ್ ಡಬ್ಲಿಂಗ್ : ಚಿಂಚ್ಲಿ – ಕುಡಚಿ ನಿಲ್ದಾಣಗಳ ನಡುವೆ ಕಿ.ಮೀ.714/100–200 ನಲ್ಲಿ ಹಾಲಿ ಇರುವ ರೈಲು ಮೇಲ್ಸೇತುವೆ ಸಂ.181ಬಿ ಬದಲಿಗೆ ಹಾಲಿ ಇರುವ ರೈಲು ಮೇಲ್ಸೇತುವೆ ಬದಲಿಗೆ 1x48ಮೀ ಕ್ಲಿಯರ್ ಸ್ಪ್ಯಾನ್ ಬೋ ಸ್ಟ್ರಿಂಗ್ ಸ್ಟೀಲ್ ಗರ್ಡರ್ ಇರುವಂತೆ ರೈಲು ಮೇಲ್ಸೇತುವೆಯ ನಿರ್ಮಾಣದೊಂದಿಗೆ ಸಂಪರ್ಕಗಳಲ್ಲಿ ಆರ್‌ಸಿಸಿ ರೀಟೇನಿಂಗ್ ಗೋಡೆ ಮತ್ತು ಸಂಬಂಧಿಸಿದ ಕಾಮಗಾರಿಗಳು. (ಟೆಂಡರ್ ಉಲ್ಲೇಖ ಸಂ. ಎಲ್‌ಡಿ–ಎಂಆರ್‌ಜೆ–70)	ರೂ. 24,28,32,844/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28–10–2022 ರಂದು 11:00 ಗಂಟೆವರೆಗೆ

ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/89/2022 ದಿನಾಂಕ : 10–10–2022

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಬಳ್ಳಾರಿ – ಚಿಕ್ಕಜಾಜೂರು ನಿಲ್ದಾಣ ನಡುವೆ ಸ್ಥಳದ ಅಂತಿಮ ಸರ್ವೆ (185.0 ಕಿ.ಮೀ). (ಟೆಂಡರ್ ಉಲ್ಲೇಖ ಸಂ. ಬಿಎವೈ–ಜೆಆರ್‌ಯು–ಎಫ್‌ಎಲ್‌ಎಸ್–01)	ರೂ. 4,48,95,787/–
2	ಯಲಹಂಕ – ಪೆನುಕೊಂಡ ಡಬ್ಲಿಂಗ್ : ಗೌರಿಬಿದನೂರು ಯಾರ್ಡ್‌ನಲ್ಲಿ ಎಲ್‌ಸಿ ಸಂ.44ರ ಬದಲಿಗೆ ಸಂಪರ್ಕಗಳನ್ನು ಒಳಗೊಂಡು ರೈಲು ಮೇಲ್ಸೇತುವೆಯ ನಿರ್ಮಾಣ ಮತ್ತು ಕಾರ್ಯಾರಂಭಕ್ಕಾಗಿ ಉಳಿದ ಕಾಮಗಾರಿಗಳನ್ನು ನಡೆಸುವುದು. (ಟೆಂಡರ್ ಉಲ್ಲೇಖ ಸಂ. ವೈಎನ್‌ಕೆ–ಪಿಕೆಡಿ–47)	ರೂ. 4,55,75,081/–
3	ಹುಬ್ಬಳ್ಳಿ – ಬಳ್ಳಾರಿ ಸೆಕ್ಷನ್ : ಹೊಸಪೇಟೆ ಮತ್ತು ಕಾರಿಗನೂರು ನಿಲ್ದಾಣದ ನಡುವೆ ಕಿ.ಮೀ.145/400–500 ನಲ್ಲಿ ಎಲ್‌ಸಿ ಸಂ.85ರ ಬದಲಿಗೆ 1x60ಮೀ ಕ್ಲಿಯರ್ ಸ್ಪ್ಯಾನ್ ಬೋಸ್ಟ್ರಿಂಗ್ ಸ್ಟೀಲ್ ಗರ್ಡರ್‌ನಂತೆ (ರೈಲ್ವೆ ಸ್ಪ್ಯಾನ್) ರಸ್ತೆ ಮೇಲ್ಸೇತುವೆಯ ಮತ್ತು ರಸ್ತೆ ಮೇಲ್ಸೇತುವೆಯ ಎರಡೂ ಕಡೆಗಳಲ್ಲಿ ಜಿಯೋಗರ್ಡರ್‌ನೊಂದಿಗೆ 8x24.0ಮೀ ಪಿಎಸ್‌ಸಿ ಗರ್ಡರ್ ಮತ್ತು ಸಿಸಿ ಬ್ಲಾಕ್‌ಗಳ ಸಂಪರ್ಕಗಳು ಮತ್ತು ಸರ್ವಿಸ್ ರಸ್ತೆಯ ಉದ್ದೇಶಿತ ನಿರ್ಮಾಣ. (ಟೆಂಡರ್ ಉಲ್ಲೇಖ ಸಂ. ಯುಬಿಎಲ್–ಬಿಎವೈ–ಎಲ್‌ಸಿ–85)	ರೂ. 32,72,01,453/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29–10–2022ರಂದು ಕ್ರಸಂ. 1ಕ್ಕೆ 11:30 ಗಂಟೆಗಳವರೆಗೆ ಮತ್ತು ಕ್ರಸಂ.2 ಮತ್ತು 3ಕ್ಕೆ 11:00 ಗಂಟೆಗಳವರೆಗೆ.

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು / ನಿರ್ಮಾಣ ಬೆಂಗಳೂರು ದಂಡು

ಪಿಯುಬಿ/420/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways SWRRLY SWRRLY

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರ, ('**ಕಕ್ಷಿದಾರ**') ಈ ಕೆಳಕಂಡ **"ಷೆಡ್ಯೂಲ್"** ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನುಮುಂದೆ **"ಷೆಡ್ಯೂಲ್ ಸ್ವತ್ತು"** ಎಂದು ಕರೆಯಲ್ಪಡುವ, ಸದರಿ ಮಾಲೀಕರಾದ **(1) ಮೆ॥ ಅಂಬಾರಿ ಹೋಲ್ಡಿಂಗ್ಸ್**, ಪಾಲುದಾರಿಕೆ ಸಂಸ್ಥೆ, ಇದರ ಕಛೇರಿ ನಂ.11, 1ನೇ ಮಹಡಿ, 1ನೇ ಕ್ರಾಸ್, ಕಿರ್ಲೋಸ್ಕರ್ ಕಾಲೋನಿ, ಬಸವೇಶ್ವರನಗರ, ಬೆಂಗಳೂರು–560079, ಇದರ ಪಾಲುದಾರರಾಗಿ ಕಾರ್ಯನಿರ್ವಹಿಸುತ್ತಿರುವ **(ಎ)** ಶ್ರೀ. ಎಸ್.ಎಸ್. ಸತ್ಯಮೂರ್ತಿ, ಬಿನ್ ಎಸ್.ಎನ್. ಶಿವಶಂಕರ್; **(ಬಿ)** ಶ್ರೀ. ಎಸ್.ಎಸ್. ಮಧುಸೂಧನ್, ಬಿನ್ ಎಸ್.ಎನ್. ಶಿವಶಂಕರ್; ಮತ್ತು **(ಸಿ)** ಶ್ರೀ. ಎಸ್.ಎಸ್. ವಿನಾಯಕ, ಬಿನ್ ಎಸ್.ಎನ್. ಶಿವಶಂಕರ್; ಮತ್ತು **(2) ಸಲಾರ್‌ಪುರಿಯ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್**, ಕಂಪನಿಗಳ ಕಾಯ್ದೆ, 1956 ರ ಅನ್ವಯ ಸ್ಥಾಪನೆಯಾಗಿರುವ ಕಂಪನಿ, ಇದರ ನೋಂದಾಯಿತ ಕಛೇರಿ ನಂ.7, ಚಿತ್ತರಂಜನ್ ಅವೆನ್ಯೂ, ಕೊಲ್ಕತ್ತ–700 072, ಮತ್ತು ಇದರ ಬೆಂಗಳೂರುನಲ್ಲಿರುವ ಕಛೇರಿ ವಿಳಾಸ 'ಸಲಾರ್‌ಪುರಿಯ ವಿಂಡ್ಸರ್' 4ನೇ ಮಹಡಿ, ನಂ.3, ಅಲ್ಸೂರು ರಸ್ತೆ, ಬೆಂಗಳೂರು–560 042 (**'ಮಾಲೀಕರು'**) ಇವರೊಡನೆ ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸಲು ಅಪೇಕ್ಷಿಸಿರುತ್ತಾರೆ. ತಾವು ಷೆಡ್ಯೂಲ್ ಸ್ವತ್ತಿಗೆ ನಾವುಗಳೇ ಏಕಮೇವ ಮಾಲೀಕರೆಂದು ಹಾಗೂ ಷೆಡ್ಯೂಲ್ ಸ್ವತ್ತನ್ನು ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರುಗಳು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಹೊಣೆಗಾರಿಕೆ, ಕ್ಲೇಮ್‌ಗಳು ಅಥವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಕ್ಲೇಮುಗಳನ್ನು ಅಥವಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಕ್ಲೇಮುಗಳನ್ನು ಅಥವಾ ಆಕ್ಷೇಪಣೆಗಳನ್ನು, ಸೂಕ್ತ ಸಾಕ್ಷ್ಯಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **10 (ಹತ್ತು)** ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ. ತಿಳಿಸಿದ ಅವಧಿಯೊಳಗೆ ಯಾವುದೇ ಕ್ಲೇಮುಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು, ಋಣಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮುಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತಿನ ವಿವರ)

ಬೆಂಗಳೂರು, ಸಂಪಂಗಿರಾಮನಗರ, ವಾರ್ಡ್ ನಂ.77, ಕ್ರೆಸೆಂಟ್ ರಸ್ತೆಯಲ್ಲಿ ಬರುವ ಸ್ಥಿರಾಸ್ತಿ ಸ್ವತ್ತಿನ ಬಿಬಿಎಂಪಿ ಮುನಿಸಿಪಲ್ ನಂ.26 (ಹಿಂದೆ ಮುನಿಸಿಪಲ್ ಪ್ಲಾಟ್ಸ್ ನಂ.26, 26/1 ಮತ್ತು 26/2 ರಲ್ಲಿ ಒಳಗೊಂಡಿರುವ) ಮತ್ತು ಪಿಐಡಿ ನಂ.77–107–26, ಇದರ ವಿಸ್ತೀರ್ಣ 2,600 ಚದರ ಯಾರ್ಡ್ಸ್ ಅಥವಾ 23,400 ಚದರ ಅಡಿಗಳ ಜೊತೆಗೆ ವಾಣಿಜ್ಯ ಕಟ್ಟಡವನ್ನು ನಿರ್ಮಾಣ ಹೊಂದಿರುವ ಸ್ವತ್ತಿಗೆ ಚೆಕ್ಕುಬಂದಿ :

ಪೂರ್ವಕ್ಕೆ : ರಸ್ತೆ;
ಪಶ್ಚಿಮಕ್ಕೆ : ರಸ್ತೆ;
ಉತ್ತರಕ್ಕೆ : ಖಾಸಗಿ ಸ್ವತ್ತು; ಮತ್ತು
ದಕ್ಷಿಣಕ್ಕೆ : ರಸ್ತೆ.

ದಿನಾಂಕ: 19.10.2022
ಸ್ಥಳ : ಬೆಂಗಳೂರು

ಸಹಿ/–
ಶ್ರೀನಿವಾಸ್ ಬಿ.ಆರ್ ಮತ್ತು ಬ್ರಿಜಿತ ಪ್ರಕಾಶ್, ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ.7/1 & 7/7, ಬ್ರೈಂಟನ್ ರಸ್ತೆ,
ಬೆಂಗಳೂರು – 560025, ದೂ. ಸಂ. +91–80–69548770

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
CIN No.U85110KA1947SGC001321
ಅಧಿಕೃತ ಕಛೇರಿ: 3ನೇ ಮಹಡಿ, ಕೆ.ಹೆಚ್.ಬಿ.ಶಾಪಿಂಗ್ ಕಾಂಪ್ಲೆಕ್ಸ್, ನ್ಯಾಷನಲ್ ಗೇಮ್ಸ್ ವಿಲೇಜ್, ಕೋರಮಂಗಲ, ಬೆಂಗಳೂರು-560 047. ದೂರವಾಣಿ:25705723/24/26 ಫ್ಯಾಕ್ಸ್:25707380
ಇ-ಮೇಲ್: regdoffice-hgml@ka.gov.in ವೆಬ್‌ಸೈಟ್: www.huttigold.co.in

ಚಿನ್ನ ಮತ್ತು ಬೆಳ್ಳಿಯ ಬುಲಿಯನ್ ಮಾರಾಟಕ್ಕಾಗಿ ಜಾಗತಿಕ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.35/22–23, ದಿ: 19.10.2022
HGML/2022-23/SALE OF BULLION/01/CALL-2 (ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಮೂಲಕ ಮಾತ್ರ)

ಹಟ್ಟಿ ಚಿನ್ನದ ಗಣಿ ಕಂಪನಿಯು ಬುಲಿಯನ್/ಡೋರ್ ಬಾರ್ಸ (ಚಿನ್ನ ಮತ್ತು ಬೆಳ್ಳಿ)ಯನ್ನು ಗಣಿಗಾರಿಕೆಯ ಮುಖಾಂತರ ಹೊರತೆಗೆಯುವ ಕಾರ್ಯಚಟುವಟಿಕೆಯನ್ನು ಮಾಡುತ್ತದೆ. ಕಂಪನಿಯು ತನ್ನ ಉತ್ಪನ್ನವನ್ನು ಮಾರಾಟ ಮಾಡಲು ವ್ಯಕ್ತಿಗಳು/ಸಂಸ್ಥೆಗಳು/ಕಂಪನಿಗಳು/ಇತರರನ್ನು ಆಯ್ಕೆ ಮಾಡಿ ಟೆಂಡರ್ ಡಾಕ್ಯುಮೆಂಟ್‌ನ ನಿಯಮಗಳ ಮತ್ತು ಷರತ್ತುಗಳ ಪ್ರಕಾರ ಚಿನ್ನದ ಬೆಲೆಗೆ ಕಡಿಮೆ ಸ್ಪರ್ಧಾತ್ಮಕ ರಿಯಾಯಿತಿ ದರವನ್ನು ಆಧರಿಸಿ ಒಂದು ವರ್ಷದ ಅವಧಿಗೆ ಬುಲಿಯನ್ ಮಾರಾಟ ಮಾಡಲು ಅಪೇಕ್ಷಿಸುತ್ತದೆ.

ಆಸಕ್ತ ಬಿಡ್‌ದಾರರು ಇ–ಪೋರ್ಟಲ್ ಮೂಲಕ ಭಾಗವಹಿಸಬಹುದು. ಟೆಂಡರ್ ಪ್ರಕ್ರಿಯೆಯು ಎರಡು ರೀತಿಯ ಕವರ್ ಸಿಸ್ಟಮ್ ಹೊಂದಿದೆ, ಅವುಗಳೆಂದರೆ, (ಬಿಡ್ "ಎ" & ಬಿಡ್ "ಬಿ") ಭಾಗ–1 ತಾಂತ್ರಿಕ ಬಿಡ್ ಮತ್ತು ಭಾಗ–2 ಹಣಕಾಸು (% ರಿಯಾಯಿತಿ ದರ) ಎಂಬ ಎರಡು ಕವರ್ ಸಿಸ್ಟಮ್ ಒಳಗೊಂಡಿರುತ್ತದೆ. ಭಾಗ–2 ಬಿಡ್ ಹಣಕಾಸು (% ರಿಯಾಯಿತಿ ದರ) ಬಿಡ್ ಅನ್ನು ಇ–ಪೋರ್ಟಲ್‌ನಲ್ಲಿ ಡ್ಯಾಶ್ ಬೋರ್ಡ್‌ನಲ್ಲಿ ಅಪಲೋಡ್ ಮಾಡಬೇಕು. ಟೆಂಡರ್ ಫಾರ್ಮ್‌ಗಳನ್ನು ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಸೈಟ್ **www.eproc.karnataka.gov.in.** ಮೂಲಕ ಸಲ್ಲಿಸಬೇಕು.

ಟೆಂಡರ್ ಪ್ರಕ್ರಿಯೆ ದಿನಾಂಕಗಳು ಹಾಗೂ ಸಮಯದ ವಿವರಗಳು:
ಪ್ರಿ–ಬಿಡ್ ವರ್ಚುವಲ್ ಸಭೆ (ಝೂಮ್): **24.10.2022 (12.00 ಗಂಟೆಗೆ)**. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **03.11.2022 ಸಮಯ: 17.00 ಗಂಟೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **05.11.2022 ಸಮಯ: 12.00 ಗಂಟೆಗೆ.** ಹಣಕಾಸಿನ ಬಿಡ್ ತೆರೆಯುವ ದಿನಾಂಕ: **21.11.2022 ಸಮಯ: 11.00 ಗಂಟೆಗೆ.**

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು (ಸರಕು)

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 080–22263479

ಸಂಖ್ಯೆ : STRRPA/TP/CLU/77/2022-23 **"ಪ್ರಕಟಣೆ"** ದಿನಾಂಕ: 15.10.2022

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಸತಿ ಮತ್ತು ವಾಣಿಜ್ಯ"** ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	2	3	4	5	6	7	8	9
1	ಶ್ರೀಮತಿ ರಾಜಿತ ಬಿನ್ ಗುಮ್ಮಡಿ ನರೇಂದ್ರಶೇಖರ್	ದೇವನಹಳ್ಳಿ	ಚನ್ನರಾಯಪಟ್ಟಣ	ಅಗಲಕೋಟೆ	58/1	0–15 ಗುಂಟೆ ಪೈಕಿ 0–07½	ವ್ಯವಸಾಯ	ವಾಣಿಜ್ಯ
2	ಶ್ರೀಮತಿ ಸುನೀತ ಕೋಂ ಶಿವರಾಮಕೃಷ್ಣ ಪರುಚೂರಿ	ದೇವನಹಳ್ಳಿ	ಚನ್ನರಾಯಪಟ್ಟಣ	ಅಗಲಕೋಟೆ	58/4	0–25 ಗುಂಟೆ ಪೈಕಿ 0–12½		
3	ಶ್ರೀಮತಿ ರಾಜಿತ ಬಿನ್ ಗುಮ್ಮಡಿ ನರೇಂದ್ರಶೇಖರ್	ದೇವನಹಳ್ಳಿ	ಚನ್ನರಾಯಪಟ್ಟಣ	ಅಗಲಕೋಟೆ	58/1	0–15 ಗುಂಟೆ ಪೈಕಿ 0–07½	ವ್ಯವಸಾಯ	ವಸತಿ
4	ಶ್ರೀಮತಿ ರಾಜಿತ ಬಿನ್ ಗುಮ್ಮಡಿ ನರೇಂದ್ರಶೇಖರ್	ದೇವನಹಳ್ಳಿ	ಚನ್ನರಾಯಪಟ್ಟಣ	ಅಗಲಕೋಟೆ	44/3	0–10		
5	ಶ್ರೀಮತಿ ಸುನೀತ ಕೋಂ ಶಿವರಾಮಕೃಷ್ಣ ಪರುಚೂರಿ	ದೇವನಹಳ್ಳಿ	ಚನ್ನರಾಯಪಟ್ಟಣ	ಅಗಲಕೋಟೆ	58/4	0–25 ಗುಂಟೆ ಪೈಕಿ 0–12½		
6	ಶ್ರೀಮತಿ ಸುನೀತ ಕೋಂ ಶಿವರಾಮಕೃಷ್ಣ ಪರುಚೂರಿ	ದೇವನಹಳ್ಳಿ	ಚನ್ನರಾಯಪಟ್ಟಣ	ಅಗಲಕೋಟೆ	44/4	0–10		

ಷರಾ: ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ, ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ನಿವೇಶನಗಳನ್ನು ನೀಡುವ ಸಲುವಾಗಿ ಸದರಿ ಪ್ರದೇಶವನ್ನು **ವ್ಯವಸಾಯ** ವಲಯದಿಂದ **ವಸತಿ** ವಲಯಕ್ಕೆ ಮತ್ತು ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಾಣಿಜ್ಯ ಬೆಳವಣಿಗೆಗಳು ಬರುತ್ತಿರುತ್ತದೆ. ಸದರಿ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗೆ ಬೇಡಿಕೆ ಇದ್ದು, ವಾಣಿಜ್ಯ ಬೆಳವಣಿಗೆಯಿಂದ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **ವ್ಯವಸಾಯ** ವಲಯದಿಂದ **ವಾಣಿಜ್ಯ** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾಪ್ರ/ಅಡ್ವಿಟ್/2663/2022–23

ಪಯೋನೀರ್ ಡಿಸ್ಟಿಲರೀಸ್ ಲಿಮಿಟೆಡ್ DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', ಲೆವೆಲ್ 10, # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001, ಭಾರತ. ಫೋನ್: 080 - 4544 8000, ಫ್ಯಾಕ್ಸ್: 080 - 3985 6862
ಇಮೇಲ್: pdlinvestor.india@diageo.com, ವೆಬ್‌ಸೈಟ್: www.pioneerdistilleries.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L24116KA1992PLC125992

ಸೆಪ್ಟೆಂಬರ್ 30, 2022ಕ್ಕೆ ಅಂತ್ಯವಾದ ತ್ರೈಮಾಸಿಕ ಪ್ರತ್ಯೇಕಿತ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶಗಳ ವಿವರಣೆ

ರೂ. ಲಕ್ಷಗಳಲ್ಲಿ

ಕ್ರ. ಸಂಖ್ಯೆ	ವಿವರಗಳು	30ನೇ ಸೆಪ್ಟೆಂಬರ್ 2022 ಕೊನೆಗೊಂಡ ತ್ರೈಮಾಸಿಕಕ್ಕೆ	30ನೇ ಜೂನ್ 2022 ಕೊನೆಗೊಂಡ ತ್ರೈಮಾಸಿಕಕ್ಕೆ	30ನೇ ಸೆಪ್ಟೆಂಬರ್ 2021 ಕೊನೆಗೊಂಡ ತ್ರೈಮಾಸಿಕಕ್ಕೆ	31ನೇ ಮಾರ್ಚ್ 2022 ಕೊನೆಗೊಂಡ ವರ್ಷಕ್ಕೆ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	5,709	5,987	6,464	21,471
2.	ಅವಧಿಯ (ತೆರಿಗೆಯ ಮೊದಲು ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ #) ನಿವ್ವಳ ಲಾಭ/(ನಷ್ಟ)	(2,135)	(2,051)	(2,179)	(7,196)
3.	ಅವಧಿಯ ತೆರಿಗೆಯ ಮೊದಲು (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ #) ನಿವ್ವಳ ಲಾಭ/(ನಷ್ಟ)	(2,135)	(2,051)	(2,179)	(7,196)
4.	ಅವಧಿಯ ತೆರಿಗೆಯ ನಂತರ (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ #) ನಿವ್ವಳ ಲಾಭ/(ನಷ್ಟ)	(2,135)	(2,051)	(2,179)	(7,196)
5.	ಅವಧಿಯ ಒಟ್ಟಾರೆ ವ್ಯಾಪಕ ಆದಾಯ [ಅವಧಿಯ ಲಾಭ/(ನಷ್ಟ) (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	(2,135)	(2,051)	(2,179)	(7,190)
6.	ಪಾವತಿಸಿದ ಈಕ್ವಿಟಿ ಷೇರು ಬಂಡವಾಳ ಪ್ರತಿ ಈಕ್ವಿಟಿ ಷೇರಿಗೆ ರೂ.10/-	1,339	1,339	1,339	1,339
7.	ಮೀಸಲುಗಳು (ಮೌಲ್ಯಮಾಪಿತ ಮೀಸಲುಗಳನ್ನು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಆಯವ್ಯಯ ಪಟ್ಟಿಯಲ್ಲಿ ತೋರಿಸಲಾಗಿದೆ				
8.	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ.10/-) (ಕಾರ್ಯಾಚರಣೆಗಳನ್ನು ಮುಂದುವರಿಸಲು ಮತ್ತು ನಿಲ್ಲಿಸಲು)				
	1. ಮೂಲ :	(15.95)	(15.32)	(16.28)	(53.75)
	2. ದುರ್ಬಲೀಕೃತ :	(15.95)	(15.32)	(16.28)	(53.75)

ಸೂಚನೆಗಳು:
ಎ) ಮೇಲಿನವು 2015 ರ ಸೆಬಿ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) 33ನೇ ನಿಯಂತ್ರಣದಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಲ್ಲಿಸಲಾದ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ವಿವರವಾದ ನಮೂನೆಯ ಸಾರಾಂಶವಾಗಿದೆ. ವಾರ್ಷಿಕ ಹಣಕಾಸು ಫಲಿತಾಂಶಗಳ ಸಂಪೂರ್ಣ ಸ್ವರೂಪವು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.pioneerdistilleries.com ನಲ್ಲಿ ಲಭ್ಯವಿರುತ್ತದೆ.
ಬಿ) # – ಐಎನ್‌ಡಿ–ಎಎಸ್ ನಿಯಮಗಳು / ಎಎಸ್ ನಿಯಮಗಳಿಗೆ ಅನುಗುಣವಾಗಿ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಅಸಾಧಾರಣ ಮತ್ತು ಅಥವಾ ಅಸಾಧಾರಣ ವಸ್ತುಗಳು ಯಾವುದು ಅನ್ವಯವಾಗುತ್ತದೆಯೋ ಅದಕ್ಕೆ ಸರಿಹೊಂದಿಸಲಾಗಿದೆ.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಸಹಿ/–
ಅಲೋಕೇಶ್ ಬಿಸ್ವಾಸ್
ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ : ಅಕ್ಟೋಬರ್ 17, 2022

ಸಂಕ್ಷಿಪ್ತ ಸುದ್ದಿ

'ವಾಸ್ತವ ಸ್ಥಿತಿ ಬದಲಿಸುವ ಯತ್ನ ಬೇಡ'

ನವದೆಹಲಿ: ಅಂತರರಾಷ್ಟ್ರೀಯ ಗಡಿರೇಖೆಯುದ್ದಕ್ಕೂ ವಿವಾದಿತ ಸ್ಥಳದಲ್ಲಿ ವಾಸ್ತವ ಸ್ಥಿತಿಯನ್ನು ಬದಲಿಸುವ ಯಾವುದೇ ಯತ್ನಕ್ಕೆ ಕೈಹಾಕಬಾರದು ಎಂದು ಭಾರತವು ಮಂಗಳವಾರ ಚೀನಾಗೆ ಸ್ಪಷ್ಟಮಾತುಗಳಲ್ಲಿ ಎಚ್ಚರಿಸಿದೆ.

ಗಡಿಯಲ್ಲಿ ಈಗ ಉದ್ಭವಿಸಿರುವ ಅಸ್ಥಿರ ಸ್ಥಿತಿಯಿಂದ ಭಾರತ ಅಥವಾ ಚೀನಾಗೆ ಅನುಕೂಲವಾಗುವುದಿಲ್ಲ. ವಾಸ್ತವ ಸ್ಥಿತಿಯನ್ನು ಬದಲಿಸುವ ಯತ್ನದಿಂದ ಇನ್ನಷ್ಟು ಗೊಂದಲ ಉಂಟಾಗಬಹುದು ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಇಲ್ಲಿ ಅಭಿಪ್ರಾಯಪಟ್ಟರು.

ಸಮಕಾಲೀನ ಚೀನಾ ಅಧ್ಯಯನ ಕೇಂದ್ರವು ಇಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಲೋಕಾಯುಕ್ತಕ್ಕೆ ನೋಟಿಸ್

ಬೆಂಗಳೂರು: ಎಫ್‌ಐಆರ್ ದಾಖಲಾದ 24 ಗಂಟೆಗಳಲ್ಲಿ ಅದನ್ನು ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲು ಲೋಕಾಯುಕ್ತ ಪೊಲೀಸರಿಗೆ ನಿರ್ದೇಶಿಸಬೇಕು' ಎಂದು ಕೋರಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಲೋಕಾಯುಕ್ತಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ವಕೀಲ ಎಸ್. ಉಮಾಪತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ, ಪ್ರತಿವಾದಿಗಳಾದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಲೋಕಾಯುಕ್ತ ಎಡಿಜಿಪಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

'ಎಫ್‌ಐಆರ್ ದಾಖಲಾದ 24 ಗಂಟೆಗಳಲ್ಲಿ ಅದನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂಬ ಸುಪ್ರೀಂಕೋರ್ಟ್ ಆದೇಶವನ್ನು ಸಿಬಿಐ ಸೇರಿದಂತೆ ಉಳಿದ ತನಿಖಾ ಸಂಸ್ಥೆಗಳು ಪಾಲಿಸುತ್ತಿವೆ. ಆದರೆ, ಲೋಕಾಯುಕ್ತ ಪೊಲೀಸರು ಇದನ್ನು ಪಾಲಿಸುತ್ತಿಲ್ಲ' ಎಂಬುದು ಅರ್ಜಿದಾರರ ಅಕ್ಷೇಪ.

ಉದ್ಯಮಿಗಳೊಂದಿಗೆ ವಿಚಾರ ವಿನಿಮಯ: ಸಚಿವ ಅಶ್ವತ್ಥನಾರಾಯಣ ಆಹ್ವಾನ

ನ.16ರಿಂದ ಬೆಂಗಳೂರು ತಾಂತ್ರಿಕ ಶೃಂಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ತಂತ್ರಜ್ಞಾನ ಶೃಂಗದ (ಬಿಟಿಎಸ್) 25ನೇ ವರ್ಷದ ರಜತ ಮಹೋತ್ಸವವು ನ.16ರಿಂದ 18ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ.

'ಈ ಬಾರಿ 5ಜಿ ತಂತ್ರಜ್ಞಾನ ಸೇರಿದಂತೆ ಹೈಬ್ರಿಡ್ ಕ್ಲೌಡ್, ಎಡ್ಜ್ ಕಂಪ್ಯೂಟಿಂಗ್, ಫಿನ್‌ಟೆಕ್, ಜಿನೋಮಿಕ್ಸ್ 2.0 ಮುಂತಾದ ಅತ್ಯಾಧುನಿಕ ತಂತ್ರಜ್ಞಾನದ ಕುರಿತು ಮತ್ತು ಈ ಕ್ಷೇತ್ರದಲ್ಲಿ ಆಗಬೇಕಾದ ಹೂಡಿಕೆಗಳ ಬಗ್ಗೆ ಪ್ರಧಾನವಾಗಿ ಗಮನ ಹರಿಸಲಾಗುವುದು' ಎಂದು ಕರ್ನಾಟಕದ ಮಾಹಿತಿ ತಂತ್ರಜ್ಞಾನ ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ತಿಳಿಸಿದರು.

ಬಿಟಿಎಸ್-25ಕ್ಕೆ ಪೂರ್ವಭಾವಿಯಾಗಿ ಮಂಗಳವಾರ ಇಲ್ಲಿ ಏರ್ಪಡಿಸಿದ್ದ ರೋಡ್‌ಶೋ ಮತ್ತು ಉದ್ಯಮಿಗಳೊಂದಿಗಿನ ವಿಚಾರ ವಿನಿಮಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮ್ಮೇಳನವು ಈ ಬಾರಿ ಬೆಂಗಳೂರು ಅರಮನೆ ಆವರಣದಲ್ಲಿ ಭೌತಿಕ ಸ್ವರೂಪದಲ್ಲಿ ನಡೆಯಲಿದೆ. ಇಲ್ಲಿ ಭವಿಷ್ಯದ ಸಂಚಾರ ವ್ಯವಸ್ಥೆ, ಜೀನ್ ಎಡಿಟಿಂಗ್, ಬಯೋಫಾರ್ಮಾ, ಕ್ಲೀನ್ ಟೆಕ್ನಾಲಜಿ, ಏರೋಸ್ಪೇಸ್ ಮತ್ತು ಇಎಸ್‌ಜಿ ವಲಯ ಕುರಿತು ಪರಿಣತರು ಮತ್ತು ಉದ್ಯಮಿಗಳು ಚರ್ಚಿಸಲಿದ್ದಾರೆ ಎಂದು ಅವರು ವಿವರಿಸಿದರು.

ಸಮಕಾಲೀನ ಉದ್ಯಮಗಳಿಗೆ ನಾವು ತೆರೆದುಕೊಂಡಿದ್ದು, ಇದಕ್ಕಾಗಿ ಜಗತ್ತಿನ ಪ್ರಮುಖ ಅವಿಷ್ಕಾರ ತಾಣಗಳೊಂದಿಗೆ ಜಾಗತಿಕ ಅವಿಷ್ಕಾರ ಸಹಭಾಗಿತ್ವ ಉಪಕ್ರಮದಡಿ ಒಪ್ಪಂದಗಳನ್ನು ಮಾಡಿಕೊಳ್ಳಲು ಉತ್ಸುಕವಾಗಿದ್ದೇವೆ ಎಂದು ಅವರು ತಿಳಿಸಿದರು.

ಕರ್ನಾಟಕದ ಆರ್ಥಿಕ ಬೆಳವಣಿಗೆಗೆ ಐಟಿ-ಬಿಟಿ ವಲಯದ ಕೊಡುಗೆ ಮುಂಬರುವ ದಿನಗಳಲ್ಲಿ ಮತ್ತಷ್ಟು ಹೆಚ್ಚಲಿದೆ. ಜತೆಗೆ, ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನದಿಂದ ಸಂಶೋಧನೆಯ ಹೆಬ್ಬಾಗಿಲು ತೆರೆದಿದೆ. ಈಗ ಉದ್ಯಮಗಳು ಶೈಕ್ಷಣಿಕ ವ್ಯವಸ್ಥೆಯ ಅವಿಭಾಜ್ಯ ಅಂಗಗಳಾಗಿವೆ. ಇದು ರಾಜ್ಯದಲ್ಲಿ ಔದ್ಯಮಿಕ ಪ್ರಗತಿಗೆ ನಿರ್ಣಾಯಕ ಶಕ್ತಿಯಾಗಲಿದ್ದು, ಕೌಶಲಪೂರ್ಣ ಮಾನವ ಸಂಪನ್ಮೂಲವನ್ನು ಸಜ್ಜುಗೊಳಿಸಲಿದೆ ಎಂದರು.

ಕಳೆದ ಆರ್ಥಿಕ ವರ್ಷದಲ್ಲಿ ದೇಶಕ್ಕೆ 83 ಶತಕೋಟಿ ಡಾಲರ್‌ಗಿಂತಲೂ ಹೆಚ್ಚು ನೇರ ವಿದೇಶಿ ಹೂಡಿಕೆ ಹರಿದುಬಂದಿದೆ. ಇದರಲ್ಲಿ ಶೇ 38ರಷ್ಟು ಬಂಡವಾಳವನ್ನು ಸೆಳೆಯುವಲ್ಲಿ ಕರ್ನಾಟಕವು ಯಶಸ್ವಿಯಾಗಿದೆ. ಜೊತೆಗೆ ದೇಶದಲ್ಲಿರುವ ಜಾಗತಿಕ ಸಾಮರ್ಥ್ಯ ಕೇಂದ್ರಗಳ (ಜಿಸಿಸಿ) ಪೈಕಿ ಶೇ 40ರಷ್ಟು ಕರ್ನಾಟಕದಲ್ಲೇ ನೆಲೆಯೂರಿವೆ. 2025ರ ಹೊತ್ತಿಗೆ ದೇಶದ ಆರ್ಥಿಕತೆಗೆ ರಾಜ್ಯವು 1 ಟ್ರಿಲಿಯನ್ ಡಾಲರ್ ಕೊಡುಗೆ ನೀಡುವ ಗುರಿ ಇಟ್ಟುಕೊಂಡಿದೆ ಎಂದು ಅಶ್ವತ್ಥನಾರಾಯಣ ಹೇಳಿದರು.

ಐಟಿ-ಬಿಟಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣ ರೆಡ್ಡಿ, ಇಲಾಖೆಯ ನಿರ್ದೇಶಕಿ ಮೀನಾ ನಾಗರಾಜ್, ಎಸ್‌ಟಿಪಿಐ ಮಹಾನಿರ್ದೇಶಕ ಅರವಿಂದ್ ಕುಮಾರ್, ಎಸ್‌ಟಿಪಿಐ ಬೆಂಗಳೂರಿನ ನಿರ್ದೇಶಕ ಶೈಲೇಂದ್ರ ಕುಮಾರ್ ತ್ಯಾಗಿ, ಎಂಎಂ ಆಕ್ಟಿವ್ ಮುಖ್ಯಸ್ಥ ಜಗದೀಶ ಪಟ್ಟಣ್ಕರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ 25ಕ್ಕೂ ಹೆಚ್ಚು ಪ್ರಮುಖ ಕಂಪನಿಗಳ ಉನ್ನತ ಮಟ್ಟದ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಉದ್ಘಾಟನೆಗೆ ಕೇಂದ್ರ ಐಟಿ ಸಚಿವರು

ಸಮಾವೇಶವನ್ನು ಉದ್ಘಾಟಿಸುವಂತೆ ಕೋರಿ ಕೇಂದ್ರ ಐಟಿ-ಬಿಟಿ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಡಾ.ಸಿ ಎನ್. ಅಶ್ವತ್ಥನಾರಾಯಣ ಆಹ್ವಾನಿಸಿದರು.

ಕೇಂದ್ರ ಸಚಿವರನ್ನು ಭೇಟಿ ಮಾಡಿ, ರಾಜ್ಯ ಸರ್ಕಾರದ ಪರವಾಗಿ ಈ ಆಮಂತ್ರಣ ನೀಡಿದರು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನ.11ರಂದು ಪ್ರಧಾನಿ ನರೇಂದ್ರ ಮೋದಿ ಅವರು ನೆರವೇರಿಸಲಿರುವ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಲೋಕಾರ್ಪಣೆ ಸಮಾರಂಭಕ್ಕೆ ಮತ್ತು ಬೆಂಗಳೂರು ತಂತ್ರಜ್ಞಾನ ಸಮಾವೇಶಕ್ಕೆ ಬರುವಂತೆ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಅವರಿಗೂ ಆಹ್ವಾನ ನೀಡಿದರು.

ಕೆಂಪೇಗೌಡರ ಪ್ರತಿಮೆ ಅನಾವರಣದ ಅಂಗವಾಗಿ ಪ್ರಧಾನಿ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಲಿದೆ. ಇದರಲ್ಲಿ ಭಾಗವಹಿಸುವಂತೆ ಸಚಿವರು ಸಿಂಗ್ ಅವರಿಗೆ ಕೋರಿದರು.

ಸುದ್ದಿ 2 ನಿಮಿಷ

ಗೋಮಾಳ ಒತ್ತುವರಿ ತೆರವಿಗೆ ಗಡುವು

ಬೆಂಗಳೂರು: 'ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಜಿಗಣಿಯ ಕಾಚನಾಯಕನಹಳ್ಳಿಯಲ್ಲಿ ಖಾಸಗಿಯವರಿಂದ ಒತ್ತುವರಿಯಾಗಿರುವ 67 ಎಕರೆ ಗೋಮಾಳ ಜಮೀನನ್ನು ತೆರವುಗೊಳಿಸಿ ಮೂರು ತಿಂಗಳಲ್ಲಿ ವರದಿ ಸಲ್ಲಿಸಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

ಈ ಸಂಬಂಧ ಸ್ಥಳೀಯ ನಿವಾಸಿ ಎನ್.ಜಯಪಾಲ್ ರೆಡ್ಡಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಆನೇಕಲ್ ತಹಶೀಲ್ದಾರ್ ಅವರ ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿ, 'ಗೋಮಾಳ ಪ್ರದೇಶದ 67 ಎಕರೆ ಒತ್ತುವರಿ ತೆರವುಗೊಳಿಸಲಾಗಿದೆ. ಈ ಪ್ರದೇಶದಲ್ಲಿ 306 ಮನೆಗಳು ನಿರ್ಮಾಣಗೊಂಡಿವೆ. ಅವುಗಳಲ್ಲಿ 30 ಮನೆಗಳನ್ನು ತೆರವುಗೊಳಿಸಲಾಗಿದೆ. ಉಳಿದ ಮನೆಗಳನ್ನು ತೆರವುಗೊಳಿಸಲು ಇನ್ನಷ್ಟು ಕಾಲಾವಕಾಶ ನೀಡಬೇಕು' ಎಂದು ಕೋರಿದರು.

'ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಮುಂದಿನ 3 ತಿಂಗಳಲ್ಲಿ ಒತ್ತುವರಿಯಾಗಿರುವ ಎಲ್ಲ ಮನೆಗಳನ್ನೂ ತೆರವುಗೊಳಿಸಬೇಕು. ಈ ಆದೇಶದ ಅನುಪಾಲನಾ ವರದಿಯನ್ನು ಕೋರ್ಟ್‌ಗೆ ಸಲ್ಲಿಸಬೇಕು' ಎಂದು ಸೂಚಿಸಿ ವಿಚಾರಣೆಯನ್ನು 2023ರ ಜನವರಿ 25ಕ್ಕೆ ಮುಂದೂಡಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದಿನ ವಿಚಾರಣೆ ವೇಳೆ ನ್ಯಾಯಪೀಠವು, 'ಸರ್ಕಾರಿ ಜಮೀನುಗಳ ಒತ್ತುವರಿ ಸಂಬಂಧ ಸರ್ವೆ ನಡೆಸಿ ತ್ವರಿತ ಕಾರ್ಯ ಕೈಗೊಳ್ಳುವಂತೆ ಸೂಚಿಸಿತ್ತು.

13.5 ಗುಂಟೆ ಒತ್ತುವರಿ ತೆರವು

ಬೆಂಗಳೂರು: ಪೂರ್ವ ತಾಲ್ಲೂಕಿನ ಬಿದರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಡ ಅಗ್ರಹಾರದಲ್ಲಿ 13.5 ಗುಂಟೆ ಗ್ರಾಮಠಾಣಾ ಒತ್ತುವರಿ ಪ್ರದೇಶವನ್ನು ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ತೆರವು ಮಾಡಿದರು.

ಸರ್ಕಾರಿ ಶಾಲೆಯ ಮುಂಭಾಗದಲ್ಲಿನ 14,816 ಚದರ ಅಡಿ ವಿಸ್ತೀರ್ಣದ ಸುಮಾರು ₹4.5 ಕೋಟಿ ಮೌಲ್ಯದ ಭೂಮಿಯನ್ನು ಹಲವು ವರ್ಷಗಳಿಂದ ಒತ್ತುವರಿ ಮಾಡಿಕೊಳ್ಳಲಾಗಿತ್ತು. 'ಟೀಮ್ ಕಾಡ ಅಗ್ರಹಾರ' ಹೆಸರಿನಲ್ಲಿ ಸ್ಥಳೀಯ ಯುವಕರು ಒತ್ತುವರಿ ತೆರವಿಗೆ ಹೋರಾಟ ನಡೆಸಿದ್ದರು. ಕಾರ್ಯನಿರ್ವಾಹಕ ಅಧಿಕಾರಿ ಮಂಜುನಾಥ್ ಮತ್ತು ಪಂಚಾಯಿತಿ ಅಧಿಕಾರಿಗಳಾದ ಲೋಹಿತ್ ಮತ್ತು ಮುನಿರಾಜು ಗ್ರಾಮಸ್ಥರ ಸಮ್ಮುಖದಲ್ಲಿ ಒತ್ತುವರಿ ತೆರವುಗೊಳಿಸಿದರು.

'ಮುಖಂಡರಾದ ಮುನಿಕಾಟಪ್ಪ, ಎನ್.ಐ.ಬಿ. ಕಾಂತರಾಜ್, ಸುಧೀಶ್ ಮತ್ತು ಯುವ ಮುಖಂಡರು ಹಾಗೂ ಅರ್ಜಿದಾರರಾದ ಎನ್.ಐ.ಬಿ. ಶಿವರಾಜ್, ಮನೋಜ್ ಕುಮಾರ್, ಮಾರೇಗೌಡ, ಬಾಲಕೃಷ್ಣ, ಶ್ರೀಕಾಂತ್, ಯಲ್ಲಪ್ಪ, ಸತೀಶ್, ಮುನಿರಾಜ್, ಕಾಂತರಾಜ್, ರಘು, ದೀಪಕ್, ರವಿಚಂದ್ರ ಮುಂತಾದವರ ಹೋರಾಟದ ಪ್ರತಿಫಲವಾಗಿ ಪ್ರಭಾವಿಗಳು ಒತ್ತುವರಿ ಮಾಡಿಕೊಂಡಿದ್ದ ಗ್ರಾಮ ಠಾಣಾ ಜಾಗವು ಪುನಃ ಗ್ರಾಮಸ್ಥರಿಗೆ ಲಭಿಸಿದೆ' ಎಂದು ಟೀಮ್ ಕಾಡ ಅಗ್ರಹಾರ ಯುವಕರು ಹಾಗೂ ಗ್ರಾಮಸ್ಥರು ಹೇಳಿದರು.

ರಸ್ತೆ ವಿಸ್ತರಣೆ: ಹೈಕೋರ್ಟ್‌ಗೆ ಪ್ರಮಾಣಪತ್ರ

ಬಳ್ಳಾರಿ ರಸ್ತೆಯಲ್ಲಿ ಸಂಚಾರ ದಟ್ಟಣೆ: ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಳ್ಳಾರಿ ರಸ್ತೆಯಲ್ಲಿನ ವಿಪರೀತ ಸಂಚಾರ ದಟ್ಟಣೆ ತಪ್ಪಿಸಲು ಮುಖ್ಯಮಂತ್ರಿ ನೇತೃತ್ವದಲ್ಲಿ ಕಳೆದ ತಿಂಗಳ 16ರಂದು ನಡೆದ ಉನ್ನತ ಮಟ್ಟದ ಸಮಿತಿಯಲ್ಲಿ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ಬಳ್ಳಾರಿ ರಸ್ತೆ ವಿಸ್ತರಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ 'ಸಮರ್ಪಣಾ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘಟನೆ' ಪ್ರಧಾನ ಕಾರ್ಯದರ್ಶಿ ಶಿವಕುಮಾರ ಹೊಸಮನಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ, ಹೈಕೋರ್ಟ್ ನಿರ್ದೇಶನದನ್ವಯ ಎಲ್ಲೆಲ್ಲಿ ಹಾಗೂ ಎಷ್ಟು ವಿಸ್ತೀರ್ಣದಷ್ಟು ರಸ್ತೆ ವಿಸ್ತರಣೆ ಮಾಡಲು ಉದ್ದೇಶಿಲಾಗಿದೆ ಎಂಬುದರ ವಿವರಣೆ ನೀಡಿ, ರಾಜ್ಯ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ಪ್ರಮಾಣಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಪ್ರಮಾಣ ಪತ್ರದಲ್ಲೇನಿದೆ?: 'ಕಾವೇರಿ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ಲಭ್ಯವಿರುವ ಭೂಮಿಯನ್ನು ಬಳಸಿಕೊಂಡು ರಸ್ತೆ ವಿಸ್ತರಿಸಲು ಉದ್ದೇಶಿಸಲಾಗಿದೆ. ಸದ್ಯ ಮೇಖ್ರಿ ವೃತ್ತದಿಂದ ಗಾಯತ್ರಿ ವಿಹಾರದವರೆಗೆ (ಅರಮನೆ ಮೈದಾನ ಗೇಟ್-4) 6 ಲೇನ್‌ಗಳ ರಸ್ತೆಯಿದೆ. ಗಾಯತ್ರಿ ವಿಹಾರದಿಂದ ಕಾವೇರಿ ಚಿತ್ರಮಂದಿರದವರೆಗೂ ಮೂರು ಲೇನ್‌ನಿಂದ ಎರಡು ಲೇನ್‌ಗಳ ರಸ್ತೆಯಾಗಲಿದೆ. ಅರಮನೆ ರಸ್ತೆಯ ನಾಲ್ಕನೇ ದ್ವಾರದಿಂದ ಕಾವೇರಿ ಚಿತ್ರಮಂದಿರದವರೆಗೆ ಎರಡು ಲೇನ್ ರಸ್ತೆಯನ್ನು ಮೂರು ಲೇನ್‌ಗಳ ರಸ್ತೆಯನ್ನಾಗಿ ವಿಸ್ತರಿಸಬೇಕಿದೆ' ಎಂದು ಪ್ರಮಾಣಪತ್ರದಲ್ಲಿ ತಿಳಿಸಲಾಗಿದೆ.

'ಮೇಖ್ರಿ ವೃತ್ತದಿಂದ ಅರಮನೆ ರಸ್ತೆಯ ಗಾಯತ್ರಿ ವಿಹಾರ್‌ವರೆಗಿನ ಬಲಭಾಗದ ಪ್ರದೇಶದಲ್ಲಿ 11.50 ಮೀಟರ್ ಮತ್ತು ಎಡಭಾಗದಲ್ಲಿ 11.20 ವಿಸ್ತೀರ್ಣದ ರಸ್ತೆಯಿದೆ. ಗಾಯತ್ರಿ ವಿಹಾರ್ ಪ್ರವೇಶದಿಂದ ಕಾವೇರಿ ಜಂಕ್ಷನ್‌ವರೆಗೆ 630 ಮೀಟರ್ ಇದೆ. ಇಲ್ಲಿನ ಬಲಗಡೆ ಪ್ರದೇಶದಲ್ಲಿ 7.0 ಮೀಟರ್ ಮತ್ತು ಎಡಗಡೆ 7.50 ಮೀಟರ್ ರಸ್ತೆಯಿದೆ. ಮುಂದಿನ ದಿನಗಳಲ್ಲಿ ಎಡಗಡೆಯ 7 ಮೀಟರ್‌ನಿಂದ 9.50 ಮೀಟರ್ ಮತ್ತು ಬಲಗಡೆಯ 7.50 ಮೀಟರ್‌ನಿಂದ 9.5 ಮೀಟರ್‌ವರೆಗೆ ರಸ್ತೆ ವಿಸ್ತರಿಸಲು ಉದ್ದೇಶಿಸಲಾಗಿದೆ' ಎಂದು ವಿವರಿಸಲಾಗಿದೆ.

'ಮೇಖ್ರಿ ವೃತ್ತದಿಂದ ಕಂಟೋನ್ಮೆಂಟ್ ಮತ್ತು ಜಯಮಹಲ್ ರಸ್ತೆಯು ಒಟ್ಟು 2,178 ಮೀಟರ್ ಉದ್ದವಿದೆ. ಜಯಮಹಲ್ ರಸ್ತೆಯು ಮೇಖ್ರಿ ವೃತ್ತದಿಂದ ಆರಂಭವಾಗಿ, ಜಯಮಹಲ್ ಹೋಟೆಲ್ ಬಳಿ ಕೊನೆಗೊಳ್ಳುತ್ತದೆ. ಈ ಮಾರ್ಗವು 2.20 ಕಿ.ಮೀ ಉದ್ದವಿದೆ. ಇಲ್ಲಿನ ದಾರಿ ಏಕರೂಪವಾಗಿಲ್ಲ. ಪಾದಚಾರಿ ಮಾರ್ಗದ ಅಗಲಗಳಲ್ಲೂ ವ್ಯತ್ಯಾಸವಿದೆ. ರಸ್ತೆ ವಿಭಜಕವೂ ಸರಿಯಾಗಿ ರಸ್ತೆ ಮಧ್ಯಭಾಗದಲ್ಲಿ ಇಲ್ಲ' ಎಂದು ತಿಳಿಸಲಾಗಿದೆ.

'ಮೇಖ್ರಿ ವೃತ್ತದಿಂದ ಕಂಟೋನ್ಮೆಂಟ್ ರಸ್ತೆಯ ಎಡಭಾಗವನ್ನು 7 ಮೀಟರ್‌ನಿಂದ 7.5ಕ್ಕೆ ಮತ್ತು ಬಲಭಾಗವನ್ನು 5 ಮೀಟರ್‌ನಿಂದ 7.5 ಮೀಟರ್‌ಗೆ ವಿಸ್ತರಿಸಲು ಉದ್ದೇಶಿಸಲಾಗಿದೆ. ಈ ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಮಾರ್ಪಾಡು ಮಾಡುವ ಕಾರ್ಯ ಈಗಾಗಲೇ ಚಾಲ್ತಿಯಲ್ಲಿದೆ' ಎಂದು ಹೇಳಲಾಗಿದೆ.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ವಿಸ್ತರಣೆ ಕಾರ್ಯದಲ್ಲಿ ಬಿಬಿಎಂಪಿ ಯಾವ ರೀತಿಯಲ್ಲಿ ಸಹಕಾರ ನೀಡಲಿದೆ ಎಂಬುದನ್ನು ಪಾಲಿಕೆ ಆಯುಕ್ತರು ಮುಂದಿನ ಎರಡು ವಾರಗಳಲ್ಲಿ ಪ್ರಮಾಣ ಪತ್ರ ಸಲ್ಲಿಸುವ ಮೂಲಕ ವಿವರಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

ಮುಖ್ಯಾಂಶಗಳು

- ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠದಿಂದ ಅರ್ಜಿ ವಿಚಾರಣೆ
- ಕಳೆದ ತಿಂಗಳ 16ರಂದು ಸಿ.ಎಂ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆ
- ಕಾವೇರಿ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ರಸ್ತೆ ವಿಸ್ತರಣೆಗೆ ಉದ್ದೇಶ

ಶ್ರೀ ಶೇಷಾದ್ರಿಪುರಂ ರಾಮಸೇವಾ ಸಮಿತಿ ಆಯೋಜಿಸಿದ ಮುನ್ನುಡಿ ಕಾರ್ಯಕ್ರಮದಲ್ಲಿ ಅಪ್ರಮೇಯ ಶೇಷಾದ್ರಿ, ಸನತ್ ಕುಮಾರ್ ಹಾಗೂ ಪಜ್ವಲ್ ಭಾರದ್ವಾಜ್ ಸಂಗೀತ ಕಛೇರಿ ನಡೆಸಿದರು

ಅಮೃತ ಮಹೋತ್ಸವ: ಸಂಗೀತ ಸಂಭ್ರಮ

ಬೆಂಗಳೂರು: ಶ್ರೀ ಶೇಷಾದ್ರಿಪುರಂ ರಾಮಸೇವಾ ಸಮಿತಿ 2023ರಲ್ಲಿ ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿದೆ. ಪೂರ್ವಭಾವಿಯಾಗಿ ಸಮಿತಿಯು ಸಂಗೀತ ಕಛೇರಿಗಳನ್ನು ಹಮ್ಮಿಕೊಂಡು, ಯುವ ಕಲಾವಿದರನ್ನು ಪ್ರೋತ್ಸಾಹಿಸುತ್ತಿದೆ.

ಸಮಿತಿಯು ಭಾನುವಾರ ಬಿಟ್ಟು ಭಾನುವಾರ ಬೆಳಿಗ್ಗೆ 10 ಗಂಟೆಯಿಂದ ಶೇಷಾದ್ರಿಪುರ ಕಾಲೇಜಿನಲ್ಲಿ ಈ ಕಾರ್ಯಕ್ರಮ ನಡೆಸುತ್ತಿದೆ. 2022ರ ಅ.16ರಂದು ಪ್ರಥಮ ಕಾರ್ಯಕ್ರಮ ನಡೆದಿದೆ. 2023ರ ಫೆಬ್ರವರಿ ತಿಂಗಳವರೆಗೆ ನಿರಂತರ ಈ ಕಾರ್ಯಕ್ರಮ ನಡೆಯಲಿದೆ.

ಇದೇ 30ರಂದು ಸ್ಕಂದ ಶಾಸ್ತ್ರಿ (ಮ್ಯಾಂಡೊಲಿನ್), ನರಸಿಂಹ ಬಾಬು (ಪಿಟೀಲು), ಶ್ರೀಶ ಆರ್. ಶಂಕರ್ (ಮೃದಂಗ), ಶ್ರೀಮಾತಾ ರಮಾನಂದ (ಗಾಯನ), ಜನಾರ್ದನ್ ಶ್ರೀನಾಥ್ (ಪಿಟೀಲು) ಹಾಗೂ ಅದಮ್ಯ ರಮಾನಂದ (ಮೃದಂಗ) ಅವರಿಂದ ಸಂಗೀತ ಕಛೇರಿ ನಡೆಯಲಿದೆ.

'ಅಮೃತ ಮಹೋತ್ಸವದ ಪೂರ್ವಭಾವಿಯಾಗಿ ಸಂಗೀತ ಕಛೇರಿಗಳನ್ನು ನಡೆಸಲಾಗುತ್ತಿದೆ. ಯುವ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವುದು ನಮ್ಮ ಮುಖ್ಯ ಉದ್ದೇಶ' ಎಂದು ಸಮಿತಿಯ ಖಜಾಂಚಿ ರೇವತಿ ತಾರಕರಾಮ್ ತಿಳಿಸಿದ್ದಾರೆ.

ಪಶ್ಚಿಮ ವಲಯದಲ್ಲಿ ಬಿಬಿಎಂಪಿ ಆಯುಕ್ತರ ನಡಿಗೆ

ಕೊಂಬೆ ಕಟಾವು: ಶಿಸ್ತುಕ್ರಮದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಬದಿಯಲ್ಲಿರುವ ಮರದ ಕೊಂಬೆಗಳನ್ನು ಕಟಾವು ಮಾಡಿಲ್ಲವೆಂದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಎಚ್ಚರಿಸಿದರು.

ತುಷಾರ್ ಗಿರಿನಾಥ್ ನಡಿಗೆ ಮೂಲಕ ಪರಿಶೀಲನೆಯನ್ನು ಮಂಗಳವಾರವೂ ಮುಂದುವರಿಸಿದ್ದು, ಪಶ್ಚಿಮ ವಲಯ ಪ್ರದೇಶಗಳಲ್ಲಿ ಸಂಚರಿಸಿ, ರಸ್ತೆ ದುರಸ್ತಿ, ಪಾದಚಾರಿ ಮಾರ್ಗ ಒತ್ತುವರಿ ತೆರವು, ಕಸದ ಬ್ಲ್ಯಾಕ್ ಸ್ಪಾಟ್ ತೆರವಿಗೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ಬೆಳಿಗ್ಗೆ 6.30ರಿಂದ 9.30ರವರೆಗೆ 6 ಕಿ.ಮೀ. ನಡೆದ ತುಷಾರ್ ಗಿರಿನಾಥ್, ವಾಟಾಳ್ ನಾಗರಾಜ್ ರಸ್ತೆ, ಡಾ. ರಾಜ್ ಕುಮಾರ್ ರಸ್ತೆ, ರಾಜಾಜಿನಗರ 6ನೇ ಬ್ಲಾಕ್ ವೃತ್ತ, ಮಾಗಡಿ ಜಂಕ್ಷನ್‌ನಿಂದ ವೆಸ್ಟ್ ಆಫ್ ಕಾರ್ಡ್ ರಸ್ತೆ, ಟೋಲ್ ಗೇಟ್ ಜಂಕ್ಷನ್, ಜೈ ಮುನಿ ರಾವ್ ವೃತ್ತ ಹಾಗೂ ಹೌಸಿಂಗ್ ಬೋರ್ಡ್ ಜಂಕ್ಷನ್‌ವರೆಗೆ ಪರಿಶೀಲನೆ ನಡೆಸಿದರು.

ವಾಟಾಳ್ ನಾಗರಾಜ್ ರಸ್ತೆಯನ್ನು ಮಿಲ್ಲಿಂಗ್ ಮಾಡಿ ರಸ್ತೆ ಮೇಲ್ಮೈ ಸರಿಪಡಿಸಿ, ಪಾದಚಾರಿ ಮಾರ್ಗದ ದುರಸ್ತಿ ಹಾಗೂ ಚರಂಡಿ ಸಮಸ್ಯೆಯನ್ನು ಬಗೆಹರಿಸಿ, ರಸ್ತೆ ವಿಭಜಕದಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಿ, ರಸ್ತೆ ಬದಿ ಸಂಗ್ರಹವಾಗಿರುವ ಮಣ್ಣು, ತ್ಯಾಜ್ಯ ಹಾಗೂ ಕಟ್ಟಡ ಭಗ್ನಾವಶೇಷ ತೆರವು ಮಾಡಿ, ಪಾದಚಾರಿ ಮಾರ್ಗದ ಗ್ರಿಲ್ ಸರಿಪಡಿಸಿ, ರಸ್ತೆ ಬದಿಯ ಮರದ ಕೊಂಬೆಗಳನ್ನು ಕಟಾವು ಮಾಡಿ, ಪೋಸ್ಟರ್, ಫ್ಲೆಕ್ಸ್ ತೆರವುಗೊಳಿಸಿ ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಆಯಾ ವಲಯ ವ್ಯಾಪ್ತಿಯಲ್ಲಿ ಬಿಬಿಎಂಪಿ ಅಧಿಕಾರಿಗಳು ಕಾಲ್ನಡಿಗೆಯ ಮೂಲಕ ವಿವಿಧ ಸ್ಥಳಗಳಿಗೆ ಭೇಟಿ ನೀಡುವ ಸಮಯದಲ್ಲಿ ಜಲ ಮಂಡಳಿ ಹಾಗೂ ಬೆಸ್ಕಾಂ ಅಧಿಕಾರಿಗಳು ಕೂಡ ಹಾಜರಿರಬೇಕು ಎಂದು ಅವರು ಹೇಳಿದರು.

ಶಾಸಕ ಸುರೇಶ್ ಕುಮಾರ್, ವಲಯ ಆಯುಕ್ತ ಡಾ. ಆರ್. ಎಲ್.ದೀಪಕ್, ವಲಯ ಜಂಟಿ ಆಯುಕ್ತ ಯೋಗೇಶ್, ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ವಲಯ ಮುಖ್ಯ ಎಂಜಿನಿಯರ್ ದೊಡ್ಡಯ್ಯ, ವಿದ್ಯುತ್, ಅರಣ್ಯ, ಘನತ್ಯಾಜ್ಯ ವಿಭಾಗದ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಜಾಜಿನಗರ ವ್ಯಾಪ್ತಿಯಲ್ಲಿ ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಮಂಗಳವಾರ ಪರಿಶೀಲನೆ ನಡೆಸಿದರು. ಶಾಸಕ ಸುರೇಶ್ ಕುಮಾರ್, ವಲಯ ಆಯುಕ್ತ ಡಾ. ಆರ್.ಎಲ್.ದೀಪಕ್, ವಲಯ ಜಂಟಿ ಆಯುಕ್ತ ಯೋಗೇಶ್, ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ವಲಯ ಮುಖ್ಯ ಎಂಜಿನಿಯರ್ ದೊಡ್ಡಯ್ಯ ಇದ್ದರು

ಪಾವಗಡ ತಾಲ್ಲೂಕಿನ ಕ್ಯಾತಗಾನ ಚೆರ್ಲು ಗ್ರಾಮದ ಬಳಿಯ ಸೋಲಾರ್ ಪಾರ್ಕ್‌ನ 4ನೇ ಬ್ಲಾಕ್ ನೀರಿನಲ್ಲಿ ಮುಳುಗಿರುವುದು

ಸೋಲಾರ್ ಪಾರ್ಕ್ ಮುಳುಗಡೆ

ಪಾವಗಡ: ತಾಲ್ಲೂಕಿನ ಕ್ಯಾತಗಾನ ಚೆರ್ಲು ಗ್ರಾಮದ ಬಳಿಯ ಸೋಲಾರ್ ಪಾರ್ಕ್‌ನ 4ನೇ ಬ್ಲಾಕ್ ಮಳೆ ನೀರಿನಿಂದ ಮುಳುಗಡೆಯಾಗಿದೆ. ಈ ಪ್ರದೇಶಕ್ಕೆ ಸಾರ್ವಜನಿಕರ ಪ್ರವೇಶವನ್ನು ಮಂಗಳವಾರ ನಿಷೇಧಿಸಲಾಗಿತ್ತು.

ಯುವಕನೊಬ್ಬ ಸೋಲಾರ್ ಪ್ಯಾನಲ್‌ಗಳ ಮೇಲಿನಿಂದ ಜಿಗಿದು ಈಜಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಸೋಲಾರ್ ಪಾರ್ಕ್‌ನ 4ನೇ ಬ್ಲಾಕ್‌ಅನ್ನು ಅವಾಧ ಕಂಪನಿ ನಿರ್ವಹಿಸುತ್ತಿದೆ. ಸತತವಾಗಿ ಮಳೆ ಬೀಳುತ್ತಿದ್ದು, ಕ್ಯಾತಗಾನಚೆರ್ಲು ಕೆರೆ ತುಂಬಿದೆ. ಕೆರೆಗೆ ಹೊಂದಿಕೊಂಡಿರುವ ಬ್ಲಾಕ್ 4ಕ್ಕೆ ಸೇರಿದ ಸುಮಾರು 30 ಎಕರೆ ಪ್ರದೇಶ ಮುಳುಗಡೆಯಾಗಿದೆ. ಇಲ್ಲಿರುವ ಸೋಲಾರ್ ಪ್ಯಾನಲ್‌ಗಳು, ಎಲೆಕ್ಟ್ರಾನಿಕ್ ಉಪಕರಣಗಳು ಸಂಪೂರ್ಣವಾಗಿ ಮುಳುಗಡೆಯಾಗಿವೆ.

ಕೆರೆ ಹಿನ್ನೀರಿನಿಂದ ಸೋಲಾರ್ ಪ್ರದೇಶ ಮುಳುಗಡೆಯಾಗಿದ್ದು, ಇನ್ನು ಒಂದು ಅಡಿ ನೀರು ಹೆಚ್ಚಾದರೂ ತೀವ್ರ ತೊಂದರೆಯಾಗುತ್ತದೆ. ತಕ್ಷಣ ಸಮಸ್ಯೆ ಬಗೆಹರಿಸುವಂತೆ ಅವಾಧ ಕಂಪನಿಯವರು ಜಿಲ್ಲಾಧಿಕಾರಿಗೆ ಮನವಿ ನೀಡಿದ್ದಾರೆ. ಬುಧವಾರ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಯಲಿದೆ.

ಮತ್ತೊಂದೆಡೆ ಸೋಲಾರ್ ಪಾರ್ಕ್‌ಗಾಗಿ ಜಮೀನು ನೀಡಿದ ರೈತರ ಹಿತ ಕಾಯದ ಅಧಿಕಾರಿಗಳು, ಖಾಸಗಿ ಕಂಪನಿಗೆ ಸಮಸ್ಯೆಯಾದಾಗ ತುರ್ತಾಗಿ ಸಭೆ ಕರೆದಿದ್ದಾರೆ. ಕೆರೆ ಕೋಡಿ ಎತ್ತರ ತಗ್ಗಿಸಿ ಕೆರೆಯ ನೀರು ಹೊರ ಬಿಡುವ ಹುನ್ನಾರ ನಡೆಯುತ್ತಿದೆ. ಯಾವುದೇ ಕಾರಣಕ್ಕೂ ಕೆರೆ ನೀರು ಹೊರ ಬಿಡಲು ಅವಕಾಶ ನೀಡುವುದಿಲ್ಲ ಎಂದು ಈ ಭಾಗದ ರೈತರು ಪ್ರತಿಭಟನೆಗೆ ಸಿದ್ಧತೆ ನಡೆಸಿದ್ದಾರೆ.

ತೋಕಲಘಟ್ಟ: ಸಮಾನತೆಗಾಗಿ ಸಹಭೋಜನ

ಪ್ರಜಾವಾಣಿ ವಾರ್ತೆ

ವೇಮಗಲ್ (ಕೋಲಾರ): ಸ್ವಾತಂತ್ರ್ಯ ಅಮೃತ ಮಹೋತ್ಸವದ ನಿಮಿತ್ತ ಹೋಬಳಿಯ ತೋಕಲಘಟ್ಟದಲ್ಲಿ ಉಪನ್ಯಾಸಕ ಡಾ.ಎಂ.ರವೀಂದ್ರ, ಕೆ.ಎಸ್.ನಳಿನಾ ದಂಪತಿ ಮನೆಯಲ್ಲಿ ಮಂಗಳವಾರ ಸಮಾನತೆಗಾಗಿ ಸಹಭೋಜನ ಮತ್ತು ದಲಿತರ ಪ್ರವೇಶ ಕಾರ್ಯಕ್ರಮ ನಡೆಯಿತು.

ಬಲಿಜಿಗ ಸಮುದಾಯದ ದಂಪತಿ ನಿವಾಸಕ್ಕೆ, ದಲಿತ ಸಮುದಾಯದ ಲಕ್ಷ್ಮಮ್ಮ ಹಾಗೂ ನಾಗಮಣಿ ಪ್ರವೇಶಿಸಿದರು. ಇಬ್ಬರನ್ನು ಕುಟುಂಬದವರು ಆರತಿ ಬೆಳಗಿ, ಗುಲಾಬಿ ನೀಡಿ ಬರಮಾಡಿಕೊಂಡರು.

ಅಸ್ಪೃಶ್ಯತೆ ನಿರ್ಮೂಲನೆ ಆಂದೋಲನ ಕೈಗೊಂಡಿರುವ ಬಾಲಕರ ಸರ್ಕಾರಿ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಶಿವಪ್ಪ ಅರಿವು ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು. ಬಳಿಕ ಪೊಲೀಸರು, ಮುಖಂಡರು, ಗ್ರಾಮಸ್ಥರು, ಶಾಲಾ ಮಕ್ಕಳ ಜೊತೆಗೆ ಸಹಭೋಜನ ನಡೆಯಿತು.

ಕೋಲಾರ ತಾಲ್ಲೂಕಿನ ತೋಕಲಘಟ್ಟದಲ್ಲಿ ಮಂಗಳವಾರ ಸವರ್ಣೀಯರ ಮನೆ ಪ್ರವೇಶಿಸಿದ ದಲಿತರ ಜೊತೆ ಸಹಭೋಜನ ಮಾಡಲಾಯಿತು

ಸಾಮಾಜಿಕ ಬದಲಾವಣೆ ಉದ್ದೇಶದಿಂದ ಎಲ್ಲಾ ಜಾತಿಯವರು ಜೊತೆಗೂಡಿ ಊಟ ಮಾಡುವುದು, ಎಲ್ಲರೂ ಮನೆಯೊಳಗೆ ಪ್ರವೇಶಿಸುವ ಕಾರ್ಯ ನಡೆಸಲಾಗುತ್ತಿದೆ

ಡಾ.ಶಿವಪ್ಪ ಅರಿವು, ಸಹ ಪ್ರಾಧ್ಯಾಪಕ, ಬಾಲಕರ ಸರ್ಕಾರಿ ಕಾಲೇಜು, ಕೋಲಾರ

ಡಾ.ಶಿವಪ್ಪ ಅರಿವು ಮಾತನಾಡಿ, '2014ರಲ್ಲಿ ಆರಂಭವಾದ ಈ ಕಾರ್ಯಕ್ರಮ ಬಹಳ ಕಡೆ ನಡೆದಿದ್ದು, ಯಶಸ್ವಿಯಾಗಿದೆ' ಎಂದರು.

ಮುಖಂಡ ಪಂಡಿತ ಮುನಿವೆಂಕಟಪ್ಪ ಮಾತನಾಡಿ, 'ಗ್ರಾಮೀಣ ಭಾಗದಲ್ಲಿ ಜಾತಿ ಹೋಗಲಾಡಿಸುವುದು ಅಷ್ಟು ಸುಲಭವಲ್ಲ. ರವೀಂದ್ರ ಅವರ ಹೆಜ್ಜೆ ಶ್ಲಾಘನೀಯ' ಎಂದು ತಿಳಿಸಿದರು.

ಮುಖಂಡ ಉದಯಶಂಕರ್, 'ಜನರು ಅರಿತು ನಡೆದಿದ್ದರೆ ಇಂಥ ಕಾರ್ಯಕ್ರಮ ಬೇಕಿರಲಿಲ್ಲ' ಎಂದರು.

ಮುಖಂಡ ಟಿ.ವಿಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಡಿವೈಎಸ್‌ಪಿ ಕೆ.ಎಸ್. ರಮೇಶ್, ವೇಮಗಲ್ ಠಾಣೆ ಇನ್‌ಸ್ಪೆಕ್ಟರ್ ಶಿವರಾಜ್ ಸೇರಿ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.

'ಬಿಜೆಪಿ ನಾಯಕರ ವಿರುದ್ಧ ಕ್ರಮಕ್ಕೆ ಗಡುವು'

ಬೆಂಗಳೂರು: 'ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ನಡೆದಿದ್ದ ಪರೇಶ್ ಮೇಸ್ತ ಸಾವಿನ ಪ್ರಕರಣದಲ್ಲಿ ಸುಳ್ಳು ಮಾಹಿತಿ ನೀಡಿ, ಕೋಮು ಗಲಭೆಗೆ ಕಾರಣವಾದ ಬಿಜೆಪಿ ನಾಯಕರ ವಿರುದ್ಧ 15 ದಿನಗಳಲ್ಲಿ ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ಕಾಂಗ್ರೆಸ್ ಪಕ್ಷ ಸಿಬಿಐಗೆ ದೂರು ನೀಡಲಿದೆ' ಎಂದು ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ ಮಂಗಳವಾರ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಅವರು, ಪರೇಶ್ ಮೇಸ್ತ ಸಾವಿನ ಬಗ್ಗೆ ಸಿಬಿಐ ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿರುವ ಅಂಶಗಳನ್ನು ವಿವರಿಸಿದರು.

'ಮೇಸ್ತ ಸಾವು ಕೋಮು ಹತ್ಯೆಯಲ್ಲ ಎಂದು ಸಿಬಿಐ ಹೇಳಿದೆ. ಆದರೆ, ರಾಜಕೀಯ ದುರುದ್ದೇಶಕ್ಕೆ ಬಿಜೆಪಿ ಯುವಕರನ್ನು ದಾಳಗಳಾಗಿ ಬಳಸಿಕೊಳ್ಳುತ್ತಿದೆ' ಎಂದು ದೂರಿದರು.

'ಈ ಪ್ರಕರಣಕ್ಕೆ ಬಿಜೆಪಿಯ ನಾಯಕರು ಕೋಮುಬಣ್ಣ ಹಚ್ಚಿದ್ದರು. ಹೆಣದ ಮೇಲೆ ರಾಜಕೀಯ ಮಾಡಲು ನಾಚಿಕೆ ಆಗುವುದಿಲ್ಲವೇ? ಎಂದು ಬಿಜೆಪಿ ನಾಯಕರನ್ನು ಪ್ರಶ್ನಿಸಿದರು.

'ಈ ಪ್ರಕರಣದಲ್ಲಿ ಸಾಕ್ಷ್ಯ ನಾಶ ಮಾಡಲಾಗಿದೆ ಎಂದು ಬಿಜೆಪಿ ಈಗ ಆರೋಪಿಸುತ್ತಿದೆ. ಅಲ್ಲದೆ, ಪ್ರಕರಣವನ್ನು ಮರು ತನಿಖೆ ನಡೆಸುವಂತೆ ಒತ್ತಾಯಿಸುತ್ತಿದೆ. ಮರು ತನಿಖೆಗೆ ನಮ್ಮ ವಿರೋಧ ಇಲ್ಲ. ಆದರೆ, ಈವರೆಗೂ ನಡೆದಿರುವ ತನಿಖೆಯಲ್ಲಿ ಏನು ಲೋಪವಾಗಿದೆ ಎಂದು ಜನರಿಗೆ ಸಂಪೂರ್ಣ ಮಾಹಿತಿ ನೀಡಬೇಕು' ಎಂದು ಆಗ್ರಹಿಸಿದರು.

'ಬಿಜೆಪಿಯವರಿಗೆ ಮಾನವೀಯತೆ ಇದ್ದರೆ ತಕ್ಷಣವೇ ಪರೇಶ್ ಮೇಸ್ತ ಕುಟುಂಬದ ಬಳಿ ಹೋಗಿ, ಕೈ ಕಾಲು ಹಿಡಿದು ಕ್ಷಮೆ ಕೇಳಬೇಕು. ಜನರನ್ನು ದಾರಿ ತಪ್ಪಿಸಿದ್ದಕ್ಕೆ ಕರಾವಳಿ ಹಾಗೂ ರಾಜ್ಯ ಜನರ ಕ್ಷಮೆಯನ್ನೂ ಕೇಳಬೇಕು' ಎಂದೂ ಆಗ್ರಹಿಸಿದರು.

ಮಾಸ್ಕ್ ಕಡ್ಡಾಯ ಮುಂದುವರಿಕೆ

ನವದೆಹಲಿ (ಪಿಟಿಐ): ಒಮೈಕ್ರಾನ್‌ನ ಕೋವಿಡ್ ಹೊಸ ರೂಪಾಂತರ ತಳಿಯು ದೇಶದ ವಿವಿಧೆಡೆ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವಿಕೆ ಸೇರಿದಂತೆ ಕೋವಿಡ್ ನಿರ್ಬಂಧ ಕ್ರಮಗಳನ್ನು ಮುಂದುವರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ಕೋವಿಡ್ ಪರಿಸ್ಥಿತಿ ಕುರಿತು ಪರಿಶೀಲನೆ ನಡೆಸಿದರು ಎಂದು ಆರೋಗ್ಯ ಸಚಿವಾಲಯದ ಹೇಳಿಕೆಯು ತಿಳಿಸಿದೆ. ಹೊಸ ರೂಪಾಂತರ ತಳಿಯಿಂದಾಗಿ ವಿವಿಧ ದೇಶಗಳಲ್ಲಿ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಏರಿದೆ. ದೇಶಕ್ಕೆ ಜನರ ಪ್ರವೇಶ ಹಂತದಲ್ಲಿ ಪರೀಕ್ಷೆ ನಡೆಸುವುದು, ತಪಾಸಣೆಯನ್ನು ಚುರುಕುಗೊಳಿಸುವುದು ಸೇರಿದಂತೆ ನಿರ್ಬಂಧ ಕ್ರಮಗಳನ್ನು ಮುಂದುವರಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿಕೆ ತಿಳಿಸಿದೆ.

ಹಣ್ಣು, ತರಕಾರಿ ಸರಬರಾಜು ವಾಹನಗಳ ವಿತರಿಸಿದ ಸಚಿವ

ಸಂಕಷ್ಟದ ಸ್ಥಿತಿಯಲ್ಲಿ ಹಾಪ್‌ಕಾಮ್ಸ್: ಸೋಮಶೇಖರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳದಿಂದ (ಕೆಎಚ್‌ಎಫ್) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 15 ಜಿಲ್ಲಾ ಹಾಪ್‌ಕಾಮ್ಸ್‌ಗಳಲ್ಲಿ ಹಣ್ಣು ಮತ್ತು ತರಕಾರಿ ಸರಬರಾಜು ಮಾಡುವ ವಾಹನಗಳನ್ನು ಸಹಕಾರ ಸಚಿವ ಎಸ್. ಟಿ.ಸೋಮಶೇಖರ್ ಮಂಗಳವಾರ ವಿತರಣೆ ಮಾಡಿದರು.

ತೋಟಗಾರಿಕೆ ಇಲಾಖೆ, ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ ಮತ್ತು ಬೆಂಗಳೂರು ಹಾಪ್‌ಕಾಮ್ಸ್ ಸಹಯೋಗದಲ್ಲಿ ಲಾಲ್‌ಬಾಗ್‌ನ ಹಾಪ್‌ಕಾಮ್ಸ್ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ವಾಹನಗಳ ಕೀ ಹಸ್ತಾಂತರ ಮಾಡಿದರು.

ಹಣ್ಣು ಮತ್ತು ತರಕಾರಿ ಸರಬರಾಜು ಮಾಡುವ ವಾಹನಗಳ ಕೀಯನ್ನು ಸಚಿವ ಎಸ್‌.ಟಿ. ಸೋಮಶೇಖರ್ ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಮಿರ್ಜಿ ಉಮೇಶ ಶಂಕರ ಅವರಿಗೆ ಹಸ್ತಾಂತರಿಸಿದರು. ಶಾಸಕ ಉದಯ್ ಗರುಡಾಚಾರ್ ಇದ್ದಾರೆ —ಪ್ರಜಾವಾಣಿ ಚಿತ್ರ

ಕೆಎಚ್‌ಎಫ್ ಅಧ್ಯಕ್ಷ ಬಿ.ಡಿ. ಭೂಕಾಂತ್ ಮಾತನಾಡಿ, 'ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಪ್‌ಕಾಮ್ಸ್ ಸಂಕಷ್ಟದ ಪರಿಸ್ಥಿತಿಯಲ್ಲಿದೆ. ರೈತರು ಬೆಳೆದ ಬೆಳೆಗಳಿಗೆ ಮಾರುಕಟ್ಟೆ ಕಲ್ಪಿಸುವುದು ಇದರ ಉದ್ದೇಶ. ಆದರೆ ಹಾಪ್‌ಕಾಮ್ಸ್‌ನಲ್ಲಿ ಕೋಲ್ಡ್ ಸ್ಟೋರೇಜ್ ಘಟಕಗಳೇ ಇಲ್ಲ. ಇದರಿಂದ ಹಣ್ಣು ಮತ್ತು ತರಕಾರಿ ಬೇಗ ಹಾಳಾಗುತ್ತಿವೆ. ಸರ್ಕಾರ ಕೋಲ್ಡ್ ಸ್ಟೋರೇಜ್‌ಗಳನ್ನು ಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದರು.

'ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಹಾಪ್‌ಕಾಮ್ಸ್ ಮಳಿಗೆಗಳನ್ನು ತೆರೆಯಲು ಕೊಠಡಿಗಳನ್ನು ಮೀಸಲಿಡಬೇಕು. ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಇಲಾಖೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುವ ವಸತಿನಿಲಯಗಳು, ಆರೋಗ್ಯ ಇಲಾಖೆಯ ಆಸ್ಪತ್ರೆಗಳು ಮತ್ತು ಜೈಲುಗಳಿಗೆ ಹಾಪ್‌ಕಾಮ್ಸ್ ಮೂಲಕ ತರಕಾರಿ ಮತ್ತು ಹಣ್ಣುಗಳ ಪೂರೈಕೆಯಾಗುವಂತೆ ಆದೇಶ ಹೊರಡಿಸಬೇಕು. ಶಾಸಕರ ಅನುದಾನದಲ್ಲಿ ಹಾಪ್‌ಕಾಮ್ಸ್ ಮಳಿಗೆ ನಿರ್ಮಿಸಿ ಸ್ಥಳೀಯವಾಗಿ ಮಾರುಕಟ್ಟೆಯನ್ನು ವಿಸ್ತರಿಸಬೇಕು' ಎಂದು ಒತ್ತಾಯಿಸಿದರು.

ಶಾಸಕ ಉದಯ್ ಗುರುಡಾಚಾರ್, ಹಾಪ್‌ಕಾಮ್ಸ್ ಅಧ್ಯಕ್ಷ ಎನ್. ದೇವರಾಜ್, ಕೆಎಚ್‌ಎಫ್ ವ್ಯವಸ್ಥಾಪಕ ನಿರ್ದೇಶಕಿ ಹೇಮಾ ಎಚ್.ಎನ್., ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಮಿರ್ಜಿ ಉಮೇಶ ಶಂಕರ್ ಇದ್ದರು.

ನಗರದಲ್ಲಿ ಇಂದು

ಐಸಿಎಆರ್–ಎನ್‌ಬಿಎಐಆರ್ ಸಂಸ್ಥೆಯ 30ನೇ ಸಂಸ್ಥಾಪನಾ ದಿನಾಚರಣೆ: ಅತಿಥಿಗಳು: ಟಿ.ಆರ್. ಶರ್ಮ, ಎಸ್.ಸಿ. ದುಬೆ, ಸ್ಥಳ: ಐಸಿಎಆರ್–ಎನ್‌ಬಿಎಐಆರ್‌ನ ಆವರಣ, ಯಲಹಂಕ, ಬೆಳಿಗ್ಗೆ 10

ಸಂಗಮ, ಗ್ರಾಮ ಪಂಚಾಯ್ತಿಗಳ ನಡೆ ಶಾಲೆ ಕಡೆ: ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಪಂಚಾಯ್ತಿ, ಮಂತ್ರ ಫಾರ್ ಚೇಂಜ್, ಸಿವಿಕ್ ಬೆಂಗಳೂರು, ಚೈಲ್ಡ್ ರೈಟ್ಸ್ ಟ್ರಸ್ಟ್, ಸ್ಥಳ: ಜಿಲ್ಲಾ ಪಂಚಾಯ್ತಿ ಆಡಿಟೋರಿಯಂ, ಬನಶಂಕರಿ, ಬೆಳಿಗ್ಗೆ 10.30

ಅಂತರರಾಷ್ಟ್ರೀಯ ಭೂವೈವಿಧ್ಯ ದಿನ: ಉದ್ಘಾಟನೆ: ಎಸ್. ರವಿ, ಅತಿಥಿಗಳು: ಆರ್. ಶಂಕರ್, ಎಚ್.ಎಸ್.ಎಂ. ಪ್ರಕಾಶ್, ಮಹೇಶ್ ಬಾಬು, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯದ ಭೂವಿಜ್ಞಾನ ವಿಭಾಗ, ಸಿ.ನಾಗಣ್ಣ ಸಭಾಂಗಣ, ಬೆಳಿಗ್ಗೆ 11

ಅನ್ಯಗ್ರಹಗಳ ಅನ್ವೇಷಣೆಯ ಕುರಿತು ಉಪನ್ಯಾಸ: ಆನಂದ್ ನಾರಾಯಣನ್, ಬಿ.ಎಸ್. ಶೈಲಜಾ, ಆಯೋಜನೆ ಮತ್ತು ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಸಂಜೆ 4

40ನೇ ಬಹುಭಾಷಾ ಸಂಗೀತ ಸ್ಪರ್ಧೆ: ಉದ್ಘಾಟನೆ: ಆರ್.ಪಿ. ಮೋಹನ್, ಅಧ್ಯಕ್ಷತೆ: ನರಸಿಂಹ ನಾಯ್ಕ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

ಬ್ರಿಡ್ಜ್–2022, ಕೈಗಾರಿಕೆ ಮತ್ತು ಸಂಸ್ಥೆಗಳ ಸಂವಾದ ಕಾರ್ಯಕ್ರಮ: ತಿರು ಟಿ. ಮನೊ ಥಂಗರಾಜ್, ಹರಿ ಬಾಲಚಂದ್ರನ್, ಆನಂದಿ ಅಯ್ಯರ್, ಆಯೋಜನೆ: ಐಸಿಟಿಎ ಅಕಾಡೆಮಿ, ಸ್ಥಳ: ದಿ ಲಲಿತ್ ಅಶೋಕ್

ಇಂಟರ್‌ಪೋಲ್‌ನ 90ನೇ ಸಾಮಾನ್ಯ ಸಭೆ ಉದ್ಘಾಟಿಸಿದ ಪ್ರಧಾನಿ

‘ಭಯೋತ್ಪಾದನೆ ನಿಗ್ರಹಕ್ಕೆ ಜಗತ್ತು ಸ್ಪಂದಿಸಲಿ’

ನವದೆಹಲಿ(ಪಿಟಿಐ): ಭ್ರಷ್ಟಾಚಾರ, ಭಯೋತ್ಪಾದನೆ, ಮಾದಕ ವಸ್ತು ಕಳ್ಳಸಾಗಣೆ, ಕಳ್ಳ ಬೇಟೆ ಹಾಗೂ ಸಂಘಟಿತ ಅಪರಾಧಗಳಿಗೆ ಯಾವುದೇ ಸುರಕ್ಷಿತ ನೆಲೆ ಇರಬಾರದು. ಈ ಅಪಾಯಗಳ ನಿಗ್ರಹಕ್ಕೆ ಜಾಗತಿಕ ಸ್ಪಂದನೆ ಅಗತ್ಯ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಕರೆ ನೀಡಿದರು.

ಪ್ರಗತಿ ಮೈದಾನದಲ್ಲಿ ನಡೆದ ಇಂಟರ್‌ಪೋಲ್‌ನ 90ನೇ ಸಾಮಾನ್ಯ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಇಂತಹ ಅಪರಾಧಗಳು ವಿಶ್ವಸಮುದಾಯ ಎದುರಿಸುತ್ತಿರುವ ಜಾಗತಿಕ ಬೆದರಿಕೆಗಳಾಗಿವೆ. ಇದರ ನಿರ್ಮೂಲನೆಗೆ ಜಾಗತಿಕ ಸಮುದಾಯ ಕ್ಷಿಪ್ರಗತಿಯಲ್ಲಿ ಕ್ರಮಕೈಗೊಂಡರೆ, ತನಿಖಾ ಸಂಸ್ಥೆಗಳು ಉತ್ತಮ ಸಹಕಾರ ನೀಡಿದರೆ, ಅಪರಾಧ ಹಿನ್ನೆಲೆಯ ಶಕ್ತಿಗಳು ನಿಷ್ಕ್ರಿಯವಾಗಲಿವೆ ಎಂದರು.

ನವದೆಹಲಿಯ ಪ್ರಗತಿ ಮೈದಾನದಲ್ಲಿ ಮಂಗಳವಾರ ನಡೆದ ಇಂಟರ್‌ಪೋಲ್‌ನ 90ನೇ ಸಾಮಾನ್ಯ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು – ಪಿಟಿಐ ಚಿತ್ರ

‘ಈ ಅಪಾಯಗಳ ವೇಗವು ಮೊದಲಿಗಿಂತ ಈಗ ವೇಗವಾಗಿ ಬದಲಾಗಿದೆ. ಬೆದರಿಕೆಗಳು ಜಾಗತಿಕವಾಗಿದ್ದಾಗ, ಪ್ರತಿಕ್ರಿಯೆ ಕೇವಲ ಸ್ಥಳೀಯವಾಗಿರಲು ಸಾಧ್ಯವಿಲ್ಲ. ಭಯೋತ್ಪಾದನೆ ಸೈಬರ್ ದಾಳಿಗೂ ವಿಸ್ತರಿಸಿದೆ. ಈ ಬೆದರಿಕೆಗಳನ್ನು ಮಣಿಸಲು ಜಗತ್ತು ಒಟ್ಟುಗೂಡುವ ಸಮಯವಿದು. ಜಗತ್ತಿನ ಸುರಕ್ಷತೆ ಮತ್ತು ಭದ್ರತೆ ಜಾಗತಿಕ ಸಮುದಾಯದ ಸಮಾನ ಜವಾಬ್ದಾರಿ’ ಎಂದು ಮೋದಿ ಪ್ರತಿಪಾದಿಸಿದರು.

‘ಭಾರತವು ಹಲವು ದಶಕಗಳಿಂದ ವಿದೇಶಿ ಪ್ರಾಯೋಜಿತ ಭಯೋತ್ಪಾದನೆಯನ್ನು ಎದುರಿಸುತ್ತಿದೆ. ಜಗತ್ತು ಇದರತ್ತ ಎಚ್ಚೆತ್ತುಕೊಳ್ಳುವ ಮೊದಲೇ, ಸುರಕ್ಷತೆ ಮತ್ತು ಭದ್ರತೆಯ ಮಹತ್ವ ನಮಗೆ ತಿಳಿದಿತ್ತು. ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ನಮ್ಮ ಸಾವಿರಾರು ಜನರು ಪ್ರಾಣ ತ್ಯಾಗ ಮಾಡಿದ್ದಾರೆ’ ಎಂದು ಅವರು ಹೇಳಿದರು.

90ನೇ ಸಾಮಾನ್ಯ ಸಭೆಯ ನೆನಪಿನಾರ್ಥ ವಿಶೇಷ ಅಂಚೆ ಚೀಟಿ ಮತ್ತು ₹100 ನಾಣ್ಯವನ್ನು ಮೋದಿ ಬಿಡುಗಡೆ ಮಾಡಿದರು. ಗೃಹ ಸಚಿವ ಅಮಿತ್ ಶಾ, ಇಂಟರ್‌ಪೋಲ್ ಅಧ್ಯಕ್ಷ ಅಹ್ಮದ್ ನಾಸಿರ್ ಅಲ್ ರೈಸಿ, ಪ್ರಧಾನಕಾರ್ಯದರ್ಶಿ ಜರ್ಗೆನ್ ಸ್ಟಾಕ್ ಇದ್ದರು. ಪಾಕಿಸ್ತಾನದ ಫೆಡರಲ್ ಇನ್ವೆಸ್ಟಿಗೇಷನ್ ಏಜೆನ್ಸಿ (ಎಫ್‌ಐಎ) ಮಹಾನಿರ್ದೇಶಕ ಮೊಹ್ಸಿನ್ ಭಟ್ ಸೇರಿ 195 ದೇಶಗಳ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ದಾವೂದ್, ಹಫೀಜ್, ಮಸೂದ್ ಎಲ್ಲಿ?: ಪಾಕ್ ಮೌನ

ನವದೆಹಲಿ(ಪಿಟಿಐ): 1993ರ ಮುಂಬೈ ಸರಣಿ ಸ್ಫೋಟದ ಸಂಚುಕೋರ ದಾವೂದ್ ಇಬ್ರಾಹಿಂ, 26/11ರ ದಾಳಿಯ ಪ್ರಮುಖ ಸಂಚುಕೋರರಾದ ಸಹೀದ್ ಹಫೀಜ್ ಮತ್ತು ಅಜರ್ ಮಸೂದ್ ಅಡಗು ತಾಣಗಳ ಬಗ್ಗೆ ಮಾಹಿತಿ ನೀಡಲು ಪಾಕಿಸ್ತಾನ ನಿರಾಕರಿಸಿದೆ.

ಇಂಟರ್‌ಪೋಲ್ 90ನೇ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡಿದ್ದ ಪಾಕಿಸ್ತಾನದ ತನಿಖಾ ಏಜೆನ್ಸಿಯ (ಎಫ್‌ಐಎ) ಮುಖ್ಯಸ್ಥ ಮೊಹ್ಸಿನ್ ಭಟ್, ಕುಖ್ಯಾತ ಉಗ್ರರ ಕುರಿತ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರಿಸದೇ ಉದ್ದೇಶ ಪೂರ್ವಕವಾಗಿ ನುಣುಚಿಕೊಂಡರು.

ಪ್ರಧಾನಿ ಮೋದಿ ಅವರು ಸಮಾವೇಶದ ಸಭಾಂಗಣ ಪ್ರವೇಶಿಸುವ ಕೊನೆಯ ಕ್ಷಣದವರೆಗೂ ಮೊಹ್ಸಿನ್ ಅವರು ಭೋಜನ ಕೊಠಡಿಯಲ್ಲೇ ಸಮಯ ಕಳೆದರು. ಪ್ರಧಾನಿಯವರ ಭಾಷಣ ಮುಗಿದ ತಕ್ಷಣ ವರದಿಗಾರರು ಮೊಹ್ಸಿನ್ ಅವರನ್ನು ಸುತ್ತುವರಿದು, ಕುಖ್ಯಾತ ಭಯೋತ್ಪಾದಕರ ಆಶ್ರಯ ತಾಣದ ಬಗ್ಗೆ ಪ್ರಶ್ನಿಸಿದಾಗ, ಮೊಹ್ಸಿನ್ ಯಾವುದೇ ಉತ್ತರ ನೀಡದೆ, ಮೌನವಾಗಿ ಸ್ಥಳದಿಂದ ನಿರ್ಗಮಿಸಿದರು.

ಇದಕ್ಕೂ ಮೊದಲು ಮೋದಿ ಅವರು ತಮ್ಮ 14 ನಿಮಿಷಗಳ ಭಾಷಣದಲ್ಲಿ, ಭಾರತವು ಈವರೆಗೆ 780 ರೆಡ್ ಕಾರ್ನರ್ ನೋಟಿಸ್‌ಗಳು ಹೊರಡಿಸಿದೆ. ಇದರಲ್ಲಿ 205 ನೋಟಿಸ್‌ಗಳು ಸಿಬಿಐಗೆ ಬೇಕಾಗಿರುವ ಅಪರಾಧಿಗಳಿಗೆ ಸಂಬಂಧಿಸಿದವು. ದೇಶಭ್ರಷ್ಟ ಅಪರಾಧಿಗಳನ್ನು ಬಂಧಿಸಲು ರೆಡ್ ಕಾರ್ನರ್ ನೋಟಿಸ್‌ಗಳಿಗೆ ಚುರುಕು ನೀಡಲು ಇಂಟರ್‌ಪೋಲ್ ನೆರವಾಗಲಿದೆ. ಪೊಲೀಸ್ ಮತ್ತು ಕಾನೂನು ಜಾರಿ ಸಂಸ್ಥೆಗಳ ನಡುವೆಯೂ ಸಹಕಾರ ಹೆಚ್ಚಿಸಲು ನಿರ್ದಿಷ್ಟ ಕಾರ್ಯವಿಧಾನಗಳು ಮತ್ತು ಶಿಷ್ಟಾಚಾರವನ್ನೂ ರೂಪಿಸಬೇಕಾಗಿದೆ ಎಂದರು.

ಬೀದಿನಾಯಿ ದಾಳಿ:ಹಸುಳೆ ಸಾವು– ಪ್ರತಿಭಟನೆ

ನೊಯಿಡಾ (ಪಿಟಿಐ): ಬೀದಿ ನಾಯಿಯ ದಾಳಿಗೆ ಒಳಗಾಗಿದ್ದ ಏಳು ತಿಂಗಳ ಹಸುಳೆ ಮಂಗಳವಾರ ಮೃತಪಟ್ಟಿದೆ. ಪ್ರತಿಷ್ಠಿತ ಲೋಟಸ್ ಬುಲೇವಡ್ ಅಪಾರ್ಟ್‌ಮೆಂಟ್‌ನಲ್ಲಿ ಈ ಘಟನೆ ಸೋಮವಾರ ಸಂಜೆ 4.30ಕ್ಕೆ ನಡೆದಿತ್ತು. ಘಟನೆ ಕುರಿತು ಆಕ್ರೋಶಗೊಂಡ ಸ್ಥಳೀಯರು ನೊಯಿಡಾ ಪ್ರಾಧಿಕಾರದ ವಿರುದ್ಧ ಮಂಗಳವಾರ ಪ್ರತಿಭಟನೆ ನಡೆಸಿದರು.

‘ಹಸುಳೆಯನ್ನು ತಕ್ಷಣದಲ್ಲಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ದುರಾದೃಷ್ಟವಶಾತ್ ಮಗುವು ಸೋಮವಾರ ತಡರಾತ್ರಿ ತೀರಿಕೊಂಡಿತು. ಪೊಲೀಸರಿಗೆ ಮಾಹಿತಿ ನೀಡಲಾಗಿದೆ’ ಎಂದು ಅಪಾರ್ಟ್‌ಮೆಂಟ್‌ನ ನಿವಾಸಿಗಳ ಗುಂಪಿನ ಸದಸ್ಯ ಧರಂವೀರ್ ಯಾದವ್ ಮಾಹಿತಿ ನೀಡಿದರು.

‘ಹಸುಳೆಯ ಪೋಷಕರು ಕಟ್ಟಡ ಕಾರ್ಮಿಕರಾಗಿದ್ದಾರೆ. ತಾವು ಕೆಲಸ ಮಾಡುತ್ತಿದ್ದ ಸ್ಥಳದಲ್ಲೇ ಮಗುವನ್ನು ಇರಿಸಿಕೊಂಡಿದ್ದರು. ಪೋಷಕರು ಕೆಲಸದಲ್ಲಿ ಮಗ್ನರಾಗಿದ್ದಾಗ ಹಸುಳೆಯ ಮೇಲೆ ನಾಯಿ ದಾಳಿ ನಡೆಸಿದೆ. ಪೋಷಕರಿಗೆ ನಾಲ್ಕು ಮಕ್ಕಳಿದ್ದಾರೆ. ಈ ಮಗು ಕಿರಿಯ ಮಗುವಾಗಿತ್ತು’ ಎಂದು ಸಹಾಯಕ ಪೊಲೀಸ್ ಆಯುಕ್ತ (ನೊಯಿಡಾ 1) ರಜನೀಶ್ ವರ್ಮಾ ಅವರು ತಿಳಿಸಿದರು.

ಬೀದಿ ನಾಯಿಗಳ ಬಗ್ಗೆ ಕ್ರಮ ಕೈಗೊಳ್ಳಲು ವಿಫಲವಾದ ಸ್ಥಳೀಯ ಆಡಳಿತ ವಿರುದ್ಧ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಪೊಲೀಸರನ್ನು ಒತ್ತಾಯಿಸಿದರು. ಅಪಾರ್ಟ್‌ಮೆಂಟ್‌ನ ಹೊರಡೆ ನೊಯಿಡಾ ಪ್ರಾಧಿಕಾರದ ವಿರುದ್ಧ ರಸ್ತೆ ಮೇಲೆ ಕುಳಿತ ಒಬ್ಬ ಮಹಿಳೆ ಘೋಷಣೆಗಳನ್ನು ಕೂಗಿದರು.

ದೀಪಾವಳಿ ಸಂಭ್ರಮ

ಪಂಜಾಬ್‌ನ ಅಮೃತಸರದಲ್ಲಿ ಮಂಗಳವಾರ ಕುಂಬಾರ ಸಮುದಾಯದ ಮಹಿಳೆಯರು ದೀಪಾವಳಿಗೆ ಅಗತ್ಯವಿರುವ ಮಣ್ಣಿನ ದೀಪಗಳನ್ನು ತಯಾರಿಸುವುದರಲ್ಲಿ ತೊಡಗಿದ್ದರು – ಪಿಟಿಐ ಚಿತ್ರ

ತಮಿಳುನಾಡು: ಹಿಂದಿ ವಿರೋಧಿ ಗೊತ್ತುವಳಿ ಅಂಗೀಕಾರ

ಚೆನ್ನೈ: ತಮಿಳುನಾಡು ವಿಧಾನಸಭೆಯಲ್ಲಿ ಮಂಗಳವಾರ ಹಿಂದಿ ಹೇರಿಕೆ ವಿರೋಧಿ ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ ಅಧಿಕೃತ ಭಾಷೆಗಳ ಬಗೆಗಿನ ಸಂಸದೀಯ ಸ್ಥಾಯಿ ಸಮಿತಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸದಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ನಿರ್ಣಯವನ್ನೂ ಕೈಗೊಳ್ಳಲಾಯಿತು.

‘ಅಧಿಕೃತ ಭಾಷೆಗಳ ಬಗೆಗಿನ ಸಂಸದೀಯ ಸ್ಥಾಯಿ ಸಮಿತಿಯ ಶಿಫಾರಸುಗಳು ದ್ವಿಭಾಷಾ ನೀತಿಗೆ ವಿರುದ್ಧವಾಗಿದೆ. ಹಿಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಹಿಂದಿಯೇತರ ರಾಜ್ಯಗಳಿಗೆ ನೀಡಿದ್ದ ಭರವಸೆಗೂ ವಿರುದ್ಧವಾಗಿದೆ’ ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ವಿಧಾನಸಭೆಗೆ ತಿಳಿಸಿದರು.

‘ಬಿಜೆಪಿಯವರ ಮನಸ್ಸು ಹಿಂದಿಗಾಗಿಯೇ ಮಿಡಿಯುತ್ತಿದೆ. ಹಿಂದಿ ಮಾತನಾಡದವರನ್ನು ಅವರು 3ನೇ ದರ್ಜೆಯ ನಾಗರಿಕರಂತೆ ನೋಡುತ್ತಿದ್ದಾರೆ. ಅವರ ಈ ನಡೆಯ ಹಿಂದೆ ಜನರನ್ನು ಇಂಗ್ಲಿಷ್ ಜ್ಞಾನದಿಂದ ವಂಚಿತರನ್ನಾಗಿಸುವ ಹುನ್ನಾರ ಅಡಗಿದೆ. ಇದರ ವಿರುದ್ಧ ನಾವು ಧ್ವನಿ ಎತ್ತುತ್ತೇವೆ’ ಎಂದು ಕಿಡಿಕಾರಿದರು.

‘ಮೊದಲು ಆಡಳಿತದಲ್ಲಿ ಹಿಂದಿ ಹೇರಿದ ಬಿಜೆಪಿ ಈಗ ಅದನ್ನು ಶಿಕ್ಷಣ ಸಂಸ್ಥೆಗಳಿಗೆ ವಿಸ್ತರಿಸುತ್ತಿದೆ ಎಂದೂ ದೂರಿದರು.

ಬಿಲ್ಕಿಸ್ ಬಾನು ಹತ್ಯೆ ಪ್ರಕರಣದ ಆರೋಪಿಗಳ ಖುಲಾಸೆ

‘ಸರ್ಕಾರದ ಪ್ರತಿಕ್ರಿಯೆಯಲ್ಲಿ ವಾಸ್ತವಾಂಶ ಇಲ್ಲ’

ನವದೆಹಲಿ (ಪಿಟಿಐ): ‘ಬಿಲ್ಕಿಸ್ ಬಾನು ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದ ಮತ್ತು ಬಾನು ಕುಟುಂಬದ ಸದಸ್ಯರನ್ನು ಹತ್ಯೆ ಮಾಡಿದ್ದ ಪ್ರಕರಣದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಎಲ್ಲ 11 ಅಪರಾಧಿಗಳಿಗೆ ಕ್ಷಮಾದಾನ ನೀಡಿ, ಬಿಡುಗಡೆ ಮಾಡಿರುವ ತನ್ನ ಕ್ರಮವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಿಗೆ (ಪಿಐಎಲ್) ಸಂಬಂಧಿಸಿದಂತೆ ಗುಜರಾತ್ ಸರ್ಕಾರ ಸಲ್ಲಿಸಿರುವ ಪ್ರತಿಕ್ರಿಯೆಯಲ್ಲಿ ವಾಸ್ತವಾಂಶಗಳೇ ಕಾಣೆಯಾಗಿವೆ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಗುಜರಾತ್ ಸರ್ಕಾರ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಹಲವಾರು ಪ್ರಕರಣಗಳಲ್ಲಿ ಈ ಹಿಂದೆ ನೀಡಲಾಗಿರುವ ತೀರ್ಪುಗಳನ್ನು ಉಲ್ಲೇಖಿಸಲಾಗಿದೆ. ಅಫಿಡವಿಟ್‌ನಲ್ಲಿ ವಾಸ್ತವಾಂಶಗಳೇ ಮರೆಯಾಗಿವೆ’ ಎಂದು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಸಿ.ಟಿ. ರವಿಕುಮಾರ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ ಮಂಗಳವಾರ ತಿಳಿಸಿದೆ.

‘ಗುಜರಾತ್ ಸರ್ಕಾರ ಸಲ್ಲಿಸಿರುವ ಪ್ರತಿಕ್ರಿಯೆಯು ಎಲ್ಲರಿಗೂ ಸಿಗಬೇಕಿರುವುದರಿಂದ ಅದನ್ನು ಬಹಿರಂಗಗೊಳಿಸಿ’ ಎಂದು ನ್ಯಾಯಪೀಠ ನಿರ್ದೇಶಿಸಿತು.

ಅರ್ಜಿದಾರರ ಪರ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಕಪಿಲ್ ಸಿಬಲ್, ಗುಜರಾತ್ ಸರ್ಕಾರದ ಪ್ರಮಾಣ ಪತ್ರದ ಕುರಿತು ಪ್ರತಿಕ್ರಿಯೆ ಸಲ್ಲಿಸುವುದಕ್ಕೆ ಕಾಲಾವಕಾಶ ನೀಡಬೇಕೆಂದು ಕೋರಿದರು. ಅವರ ಮನವಿಯನ್ನು ನ್ಯಾಯಪೀಠ ಪುರಸ್ಕರಿಸಿತು.

‘ಪ್ರಮಾಣ ಪತ್ರವೊಂದರಲ್ಲಿ (ಅಫಿಡವಿಟ್) ಇಷ್ಟೊಂದು ತೀರ್ಪುಗಳನ್ನು ಉಲ್ಲೇಖಿಸಿರುವುದನ್ನು ನಾನು ಹಿಂದೆಂದೂ ನೋಡಿಯೇ ಇಲ್ಲ’ ಎಂದು ನ್ಯಾಯಮೂರ್ತಿ ರಸ್ತೋಗಿ ಅವರು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಉದ್ದೇಶಿಸಿ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೆಹ್ತಾ, ‘ಅಷ್ಟೊಂದು ತೀರ್ಪುಗಳನ್ನು ಉಲ್ಲೇಖಿಸುವ ಅಗತ್ಯವಿರಲಿಲ್ಲ. ಅವುಗಳನ್ನೆಲ್ಲಾ ಕೈಬಿಡಬಹುದಿತ್ತು’ ಎಂದು ಹೇಳಿದರು.

‘ಪ್ರಕರಣದಲ್ಲಿ ಬಾಧಿತರಲ್ಲದ ಮೂರನೇ ವ್ಯಕ್ತಿಗಳಿಗೆ ಅಪರಾಧಿಗಳ ಬಿಡುಗಡೆಯನ್ನು ಪ್ರಶ್ನಿಸುವ ಅಧಿಕಾರವಿಲ್ಲ’ ಎಂದೂ ನ್ಯಾಯಪೀಠಕ್ಕೆ ತಿಳಿಸಿದರು.

ಎಲ್ಲರ ವಾದವನ್ನೂ ಆಲಿಸಿದ ನ್ಯಾಯಪೀಠವು ಪ್ರಕರಣದ ವಿಚಾರಣೆಯನ್ನು ನವೆಂಬರ್ 29ಕ್ಕೆ ಮುಂದೂಡಿತು.

ಮೋದಿ ನೇತೃತ್ವದ ಸರ್ಕಾರಕ್ಕೆ ಅಂಟಿದ ಕಳಂಕ: ಕಾಂಗ್ರೆಸ್

ನವದೆಹಲಿ (ಪಿಟಿಐ): ‘ಬಿಲ್ಕಿಸ್ ಬಾನು ಪ್ರಕರಣದಲ್ಲಿ ಅಪರಾಧಿಗಳ ಅವಧಿಪೂರ್ವ ಬಿಡುಗಡೆಗೆ ಕೇಂದ್ರ ಸರ್ಕಾರ ಸಮ್ಮತಿ ನೀಡಿತ್ತು ಎಂಬುದು ‘ಮೋದಿ ನೇತೃತ್ವದ ಸರ್ಕಾರಕ್ಕಂಟಿದ ಕಳಂಕ. ಎಷ್ಟು ತೊಳೆದರೂ ಇದು ಹೋಗದು’ ಎಂದು ಕಾಂಗ್ರೆಸ್ ಟೀಕಿಸಿದೆ.

ಅಪರಾಧಿಗಳ ಬಿಡುಗಡೆ ನಿರ್ಧಾರಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿತ್ತು ಎಂಬ ಅಂಶವು ಸುಪ್ರೀಂ ಕೋರ್ಟ್‌ಗೆ ಕೇಂದ್ರ ನೀಡಿದ ಪ್ರತಿಕ್ರಿಯೆಯಿಂದ ಬಯಲಾದ ಹಿಂದೆಯೇ ಕಾಂಗ್ರೆಸ್ ವಕ್ತಾರ ಅಭಿಷೇಕ್ ಸಿಂಘ್ವಿ ಈ ಮಾತು ಹೇಳಿದ್ದಾರೆ. ‘ಒಂದು ಚುನಾಯಿತ ಸರ್ಕಾರವೇ ಹೀಗೆ ಅಪರಾಧಿಗಳ ಬಿಡುಗಡೆಗೆ ಮುಂದಾಗಿರುವುದು ಅಸಹ್ಯಕರ ಮತ್ತು ಖಂಡನಾರ್ಹ’ ಎಂದು ಅವರು ವಾಗ್ದಾಳಿ ನಡೆಸಿದರು. ಅಪರಾಧಿಗಳ ಬಿಡುಗಡೆ ಮಾಹಿತಿ ಇದ್ದರೂ ಆ. 15ರಂದು ಬಿಡುಗಡೆಗೆ ಆದೇಶ ಹೊರಬಿದ್ದಾಗ ಮೋದಿ ಸರ್ಕಾರವು ಉದ್ದೇಶಪೂರ್ವಕವಾಗಿ ಮೌನವಹಿಸಿತ್ತು ಎಂಬುದು ಖಂಡನಾರ್ಹವಾದ ಬೆಳವಣಿಗೆ ಎಂದೂ ಟೀಕಿಸಿದರು.

ಮೋದಿ ವಿರುದ್ಧ ರಾಹುಲ್ ವಾಗ್ದಾಳಿ

‘ಕೆಂಪು ಕೋಟೆಯಲ್ಲಿ ನಿಂತು ಮಹಿಳೆಯರಿಗೆ ಗೌರವ ನೀಡುವ ಕುರಿತು ಮಾತನಾಡುವ ಪ್ರಧಾನಿ ನರೇಂದ್ರ ಮೋದಿ ಅವರು ವಾಸ್ತವದಲ್ಲಿ ಅತ್ಯಾಚಾರಿಗಳಿಗೆ ಬೆಂಬಲ ನೀಡುತ್ತಿದ್ದಾರೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದ ಅಪರಾಧಿಗಳನ್ನು ಖುಲಾಸೆ ಮಾಡಿರುವ ತನ್ನ ಕ್ರಮವನ್ನು ಗುಜರಾತ್ ಸರ್ಕಾರ ಸಮರ್ಥಿಸಿಕೊಂಡಿದ್ದು, ಈ ವಿಚಾರವನ್ನು ಮುಂದಿಟ್ಟುಕೊಂಡು ಅವರು ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಗ್ರೆನೇಡ್ ದಾಳಿ: ಕಾಶ್ಮೀರದಲ್ಲಿ ಭಯೋತ್ಪಾದಕ ಕೃತ್ಯ

ಇಬ್ಬರು ವಲಸೆ ಕಾರ್ಮಿಕರ ಸಾವು

ಶ್ರೀನಗರ (ಪಿಟಿಐ): ‘ಉಗ್ರರು ನಡೆಸಿರುವ ಗ್ರೆನೇಡ್ ದಾಳಿಯಲ್ಲಿ ಉತ್ತರಪ್ರದೇಶದಿಂದ ವಲಸೆ ಬಂದಿದ್ದ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ. ಈ ಸಂಬಂಧ ಲಷ್ಕರ್ ಎ ತಯಬಾ (ಎಲ್‌ಇಟಿ) ಉಗ್ರ ಸಂಘಟನೆಗೆ ಸೇರಿದ ಸ್ಥಳೀಯ ಉಗ್ರ ಹಾಗೂ ಶಂಕಿತ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ’ ಎಂದು ಜಮ್ಮು ಮತ್ತು ಕಾಶ್ಮೀರ ಪೊಲೀಸರು ತಿಳಿಸಿದ್ದಾರೆ.

ಜಮ್ಮುವಿನಲ್ಲಿ ಮಂಗಳವಾರ ಶಾಲಾ ವಿದ್ಯಾರ್ಥಿಗಳು ಜಮ್ಮು ಮತ್ತು ಕಾಶ್ಮೀರ ಶಾಲೆಗಳಲ್ಲಿ ‘ಉದ್ದೇಶಿತ ಕೊಲೆಗಳು ಕೊನೆಯಾಗಲಿ’ ಎಂಬ ಸಂದೇಶದ ಬ್ಯಾನರ್ ಪ್ರದರ್ಶಿಸಿದರು– ಪಿಟಿಐ ಚಿತ್ರ

‘ಶೋಪಿಯಾನ್ ಜಿಲ್ಲೆಯಲ್ಲಿ ದಾಳಿ ನಡೆದಿದೆ. ಘಟನೆಯಲ್ಲಿ ಗಾಯಗೊಂಡಿದ್ದ ಕಾರ್ಮಿಕರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಅಸುನೀಗಿದ್ದಾರೆ. ಮೃತರನ್ನು ಮೋನಿಷ್ ಕುಮಾರ್ ಮತ್ತು ರಾಮ್ ಸಾಗರ್ ಎಂದು ಗುರುತಿಸಲಾಗಿದೆ. ಇವರು ಉತ್ತರಪ್ರದೇಶದ ಕನೌಜ್ ಜಿಲ್ಲೆಯವರು ಎಂಬುದು ಗೊತ್ತಾಗಿದೆ’ ಎಂದು ಕಾಶ್ಮೀರ ವಲಯದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಬಂಧಿತ ಉಗ್ರನನ್ನು ಇಮ್ರಾನ್ ಗನಿ ಎಂದು ಗುರುತಿಸಲಾಗಿದೆ. ಆತ ಹರ್ಮನ್ ನಿವಾಸಿ. ಮೃತ ಕಾರ್ಮಿಕರು ಶೆಡ್‌ಗಳಲ್ಲಿ ವಾಸವಿದ್ದರು. ಅವುಗಳ ಮೇಲೆ ಉಗ್ರರು ತಡರಾತ್ರಿ ಗ್ರೆನೇಡ್ ದಾಳಿ ನಡೆಸಿದ್ದರು. ಈ ಕೃತ್ಯದಲ್ಲಿ ಮತ್ತಷ್ಟು ಮಂದಿ ಉಗ್ರರು ಭಾಗಿಯಾಗಿರುವ ಅನುಮಾನವಿದೆ. ಅವರಿಗಾಗಿ ವಿವಿಧ ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಲಾಗುತ್ತಿದೆ’ ಎಂದು ಕಾಶ್ಮೀರ ವಲಯದ ಎಡಿಜಿಪಿ ವಿಜಯ್ ಕುಮಾರ್ ತಿಳಿಸಿದ್ದಾರೆ.

‘ಕಾರ್ಮಿಕರು ಕೆಲಸ ಅರಸಿ 2 ತಿಂಗಳ ಹಿಂದೆ ಕಾಶ್ಮೀರಕ್ಕೆ ಹೋಗಿದ್ದರು. ರಾತ್ರಿ ಶೆಡ್‌ನಲ್ಲಿ ಮಲಗಿದ್ದಾಗ ಗ್ರೆನೇಡ್ ದಾಳಿ ನಡೆಸಲಾಗಿದೆ. ಮೃತರು ದನ್ನ ಪುರ್ವಾ ಗ್ರಾಮದ ನಿವಾಸಿಗಳು’ ಎಂದು ಕನೌಜ್ ಜಿಲ್ಲಾಧಿಕಾರಿ ಶುಭ್ರಾಂತ್ ಕುಮಾರ್ ಶುಕ್ಲಾ ಮಾಹಿತಿ ನೀಡಿದ್ದಾರೆ.

‘ಮರಣೋತ್ತರ ಪರೀಕ್ಷೆಯ ಬಳಿಕ ಮೃತದೇಹಗಳನ್ನು ವಿಮಾನದ ಮೂಲಕ ಲಖನೌಗೆ ತರಲಾಗುತ್ತದೆ. ಅಲ್ಲಿಂದ ರಸ್ತೆ ಮಾರ್ಗವಾಗಿ ಅವರ ಗ್ರಾಮಕ್ಕೆ ತೆಗೆದುಕೊಂಡು ಹೋಗಲಾಗುತ್ತದೆ’ ಎಂದು ಕನೌಜ್ ಎಸ್‌ಪಿ ಹೇಳಿದ್ದಾರೆ.

‘ಕಾಶ್ಮೀರಿ ಪಂಡಿತರ ಹತ್ಯೆ ನಾಚಿಕೆ ಮೂಡಿಸುವ ಸಂಗತಿ’

ಬುಲಂದಶಹರ್, ಉತ್ತರಪ್ರದೇಶ (ಪಿಟಿಐ): ‘ಅಮಾಯಕರ ಕೊಲೆಗಿಂತಲೂ ಕ್ರೂರವಾದ ಅಪರಾಧ ಇರಲಾರದು. ಒಬ್ಬ ಭಾರತೀಯನಾಗಿ ಇದರಿಂದ ನನಗೆ ನಾಚಿಕೆಯಾಗುತ್ತದೆ’ ಎಂದು ಕೇರಳದ ರಾಜ್ಯಪಾಲ ಅರಿಫ್ ಮೊಹಮ್ಮದ್ ಖಾನ್ ಹೇಳಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ ಅವರು, ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದಕರು ಕಾಶ್ಮೀರಿ ಪಂಡಿತ್‌ರನ್ನೇ ಗುರಿಯಾಗಿಸಿ ಹತ್ಯೆ ಮಾಡುತ್ತಿರುವ ಬೆಳವಣಿಗೆ ಕುರಿತಂತೆ ಹೀಗೆ ಪ್ರತಿಕ್ರಿಯಿಸಿದರು.

‘ನನ್ನ ದೇಶದ ಒಬ್ಬ ಪ್ರಜೆ ಮನೆ ಬಿಟ್ಟು ನಿರಾಶ್ರಿತನಾಗಿ ಇರಬೇಕು ಎಂಬುದು ನಾಚಿಕೆಗೇಡಿನ ಸಂಗತಿ ಎಂದೂ ಅರಿಫ್ ಮೊಹಮ್ಮದ್ ಖಾನ್ ಹೇಳಿದರು.

ಹತ್ಯೆ ಖಂಡಿಸಿ ಪ್ರತಿಭಟನೆ

ವಲಸೆ ಕಾರ್ಮಿಕರ ಹತ್ಯೆಯನ್ನು ಖಂಡಿಸಿ ವಿವಿಧ ಪಕ್ಷಗಳು ಹಾಗೂ ಸಂಘಟನೆಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿವೆ.

‘ಶಿವಸೇನಾ, ರಾಷ್ಟ್ರೀಯ ಬಜರಂಗ ದಳ, ಶಿವಸೇನಾ ಡೋಗ್ರಾ ಫ್ರಂಟ್‌ನ ಕಾರ್ಯಕರ್ತರು ಕ್ರಮವಾಗಿ ಬಡಿ ಬ್ರಾಹ್ಮಣ, ಬಸ್ ನಿಲ್ದಾಣ ಮತ್ತು ರಾಣಿ ಪಾರ್ಕ್ ಬಳಿ ಪ್ರತಿಭಟನೆ ಕೈಗೊಂಡಿದ್ದರು’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ತೇಜಸ್ವಿ ಜಾಮೀನು ರದ್ದು ಕೋರಿದ್ದ ಅರ್ಜಿ ತಿರಸ್ಕೃತ

ನವದೆಹಲಿ (ಪಿಟಿಐ): ಬಿಹಾರ ಉಪಮುಖ್ಯಮಂತ್ರಿ ಹಾಗೂ ಆರ್‌ಜೆಡಿ ಮುಖ್ಯಸ್ಥ ತೇಜಸ್ವಿ ಯಾದವ್ ಅವರಿಗೆ ಐಆರ್‌ಸಿಟಿಸಿ ಹಗರಣ ಸಂಬಂಧ ನೀಡಿರುವ ಜಾಮೀನನ್ನು ರದ್ದುಗೊಳಿಸಬೇಕು ಎಂದು ಕೋರಿ ಸಿಬಿಐ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಮಂಗಳವಾರ ತಿರಸ್ಕರಿಸಿದೆ.

‘ತೇಜಸ್ವಿ ಯಾದವ್ ಇತ್ತೀಚೆಗೆ ನಡೆಸಿದ ಪತ್ರಿಕಾಗೋಷ್ಠಿಯೊಂದರಲ್ಲಿ ಮಾತನಾಡುತ್ತಾ, ಕಾನೂನು ಪ್ರಕ್ರಿಯೆಯನ್ನು ಹಾಗೂ ಸಂಪೂರ್ಣ ತನಿಖೆಯನ್ನು ಬುಡಮೇಲು ಮಾಡುವಂಥ ಮಾತುಗಳನ್ನಾಡಿದ್ದಾರೆ. ಯಾದವ್ ಅವರು ತಮಗೆ ನೀಡಿರುವ ಸ್ವಾತಂತ್ರ್ಯವನ್ನು ನಿರ್ಲಜ್ಜವಾಗಿ ಬಳಸಿಕೊಂಡಿದ್ದಾರೆ’ ಎಂದು ಸಿಬಿಐ ತನ್ನ ಅರ್ಜಿಯಲ್ಲಿ ಆರೋಪಿಸಿತ್ತು.

‘ತೇಜಸ್ವಿ ಯಾದವ್ ಅವರು ವಿರೋಧ ಪಕ್ಷದಲ್ಲಿದ್ದಾರೆ. ಸರ್ಕಾರದ ತಪ್ಪುಗಳ ಬಗ್ಗೆ ಪ್ರಶ್ನೆ ಕೇಳುವುದು ಅವರ ಕರ್ತವ್ಯ. ಕೇಂದ್ರ ಸರ್ಕಾರವು ಸಿಬಿಐ ಮತ್ತು ಜಾರಿ ನಿರ್ದೇಶನಾಲಯವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎನ್ನುವುದು ಅವರ ಅಭಿಪ್ರಾಯವಾಗಿದೆ. ಎಲ್ಲಾ ವಿರೋಧ ಪಕ್ಷಗಳಲ್ಲೂ ಇದೇ ಅಭಿಪ್ರಾಯವಿದೆ. ಜಾಮೀನು ಷರತ್ತುಗಳನ್ನು ಅವರು ಉಲ್ಲಂಘಿಸಿಲ್ಲ’ ಎಂದು ಯಾದವ್ ಪರ ವಕೀಲ ನ್ಯಾಯಾಲಯಕ್ಕೆ ಹೇಳಿದರು.

‘ಮಾತನಾಡುವ ವೇಳೆ ಎಚ್ಚರ ವಹಿಸಬೇಕು’ ಎಂದು ವಿಶೇಷ ನ್ಯಾಯಾಧೀಶೆ ಗೀತಾಂಜಲಿ ಜೋಯೆಲ್ ಅವರು ತೇಜಸ್ವಿ ಯಾದವ್ ಅವರಿಗೆ ಹೇಳಿದರು.

ಪ್ರಜಾವಾಣಿ @75

ಫೋನ್-ಇನ್ ಕಾರ್ಯಕ್ರಮ

ಕಾಲ್ ಮಾಡಿ ಸಮಸ್ಯೆ ಹೇಳ್ಕೊಳ್ಳಿ

- ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ಸೌಲಭ್ಯಗಳು ಸಕಾಲದಲ್ಲಿ ಸಿಗುತ್ತಿಲ್ಲವೇ?
- ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಯೋಜನೆಗಳು ತಲುಪುತ್ತಿಲ್ಲವೇ?
- ನಿಗಮದ ಸೌಲಭ್ಯಗಳನ್ನು ಪಡೆಯುವಲ್ಲಿ ಮಧ್ಯವರ್ತಿಗಳ ಕಾಟ ಇದೆಯೇ?
- ಎಸ್‌ಟಿ ಅಲೆಮಾರಿ, ಅರೆಅಲೆಮಾರಿ ಪಂಗಡದವರಿಗೆ ಮನೆ ಸಿಗುವಲ್ಲಿ ತೊಂದರೆಯೇ?
- ಭೂ ಒಡೆತನ ಯೋಜನೆಯಡಿ ಭೂಮಿ ಸಿಗುತ್ತಿಲ್ಲವೇ?
- ಗ್ರಾಮೀಣ ಪ್ರದೇಶಗಳಲ್ಲಿ ಸರಿಯಾದ ಸಮಯಕ್ಕೆ ಬಸ್‌ಗಳು ಬರುತ್ತಿಲ್ಲವೇ?

ನಿಮ್ಮ ಸಮಸ್ಯೆಗಳಿಗೆ ಪರಿಹಾರ ನೀಡಲಿದ್ದಾರೆ

ಬಿ. ಶ್ರೀರಾಮುಲು, ಸಚಿವರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹಾಗೂ ಸಾರಿಗೆ ಇಲಾಖೆ

ದಿನಾಂಕ: 20.10.2022 ಗುರುವಾರ

ಸಮಯ: ಬೆಳಿಗ್ಗೆ 12.30 ರಿಂದ ಮಧ್ಯಾಹ್ನ 01.30ರವರೆಗೆ

ದೂರವಾಣಿ: 080 45557261

LIVE /prajavani.net /prajavani

ಬಿಜೆಪಿ ‘ಮಿಷನ್ ತಮಿಳುನಾಡು’: ಕೇಂದ್ರ ಸಚಿವರ ಸರಣಿ ಭೇಟಿ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ಆಡಳಿತರೂಢ ಡಿಎಂಕೆ ಪಕ್ಷವು ಹಲವು ಅಕ್ರಮಗಳು ಮತ್ತು ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಕೇಂದ್ರ ಸಚಿವರಾದ ಪೀಯೂಷ್ ಗೋಯಲ್ ಮತ್ತು ಸ್ಮೃತಿ ಇರಾನಿ ಗಂಭೀರ ಆರೋಪ ಮಾಡಿದ್ದಾರೆ.

ಇದೇ ತಿಂಗಳ 16ರಂದು ಚೆನ್ನೈನಲ್ಲಿ ಪೀಯೂಷ್ ಮತ್ತು ಕೊಯಮತ್ತೂರಿನಲ್ಲಿ ಸ್ಮೃತಿ ಇರಾನಿ ಅವರು ಕೇಂದ್ರದ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದ ನಂತರ, ಈ ಆರೋಪ ಹೊರಿಸಿದ್ದಾರೆ.

ಕೇಂದ್ರ ಸಚಿವರ ಆರೋಪವನ್ನು ಅಲ್ಲಗಳೆದಿರುವ ಡಿಎಂಕೆ ಸರ್ಕಾರವು, ಇಂತಹ ಆಧಾರ ರಹಿತ ಆರೋಪಗಳನ್ನು ಕೇಂದ್ರ ಸಚಿವರು ಮಾಡಬಾರದೆಂದು ಹೇಳಿದೆ.

ರಾಜಕೀಯ ತಂತ್ರಗಾರಿಕೆ: ಕಳೆದ ಐದು ದಶಕಗಳಿಂದ ದ್ರಾವಿಡ ಪಕ್ಷಗಳ ಆಡಳಿತವಿರುವ ರಾಜ್ಯವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಬಿಜೆಪಿ ಹಮ್ಮಿಕೊಂಡಿರುವ ಬಹುದೊಡ್ಡ ರಾಜಕೀಯ ತಂತ್ರಗಾರಿಕೆಯ ಕಾರ್ಯಯೋಜನೆ ಭಾಗವಾಗಿ ಕೇಂದ್ರ ಸಚಿವರು ಸರಣಿ ಭೇಟಿ ನೀಡುತ್ತಿದ್ದಾರೆ. ಕಳೆದ ಒಂದು ತಿಂಗಳಲ್ಲಿ ತಮಿಳುನಾಡಿಗೆ ಭೇಟಿ ನೀಡಿದ ಕೇಂದ್ರ ಸಚಿವರಲ್ಲಿ ಈ ಇಬ್ಬರು 22 ಮತ್ತು 23ನೇಯವರು.

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಸರ್ಕಾರದ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲಿಸಲು ಸಂಪುಟದ 77 ಸಹೋದ್ಯೋಗಿಗಳಿಗೂ ಸೂಚನೆ ನೀಡಿದ್ದಾರೆ. ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯಮಟ್ಟದಲ್ಲಿ ಅಕ್ರಮಗಳು ಮತ್ತು ಭ್ರಷ್ಟಾಚಾರ ಕಂಡುಬಂದರೆ ವರದಿ ಸಲ್ಲಿಸುವಂತೆಯೂ ಸೂಚಿಸಿದ್ದಾರೆ. ಇದುವರೆಗೆ 23 ಸಚಿವರು ರಾಜ್ಯಕ್ಕೆ ಭೇಟಿ ನೀಡಿದ್ದಾರೆ. ಬಾಕಿ 54 ಸಚಿವರು ಮುಂದಿನ 50 ದಿನಗಳಲ್ಲಿ ಭೇಟಿ ನೀಡಲಿದ್ದಾರೆ. ಇದೇ ವೇಳೆ ಪಕ್ಷದ ಪ್ರಮುಖರು ಮತ್ತು ಕಾರ್ಯಕರ್ತರನ್ನು ಭೇಟಿ ಮಾಡಲಿದ್ದಾರೆ ಎಂದು ಉನ್ನತ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಕೇಂದ್ರ ಸಚಿವರ ಈ ಸರಣಿ ಭೇಟಿಯ ಅಧಿಕೃತ ಕಾರಣ ಕೇಂದ್ರ ಯೋಜನೆಗಳ ಪ್ರಗತಿ ಪರಿಶೀಲನೆ ಆಗಿದ್ದರೂ, ಇದರ ಹಿಂದಿನ ಉದ್ದೇಶ ಮಾತ್ರ ರಾಜಕೀಯ ತಂತ್ರ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ.

‘ಕೇಂದ್ರ ಸಚಿವರ ಭೇಟಿಗಳು ಮಿಷನ್ ತಮಿಳುನಾಡಿನ ಭಾಗವಲ್ಲ. ನಾವು ರಾಜ್ಯದ ಜನರ ಮನಸನ್ನು ಗೆಲ್ಲಲು ಬಯಸುತ್ತೇವೆ. ಅದಕ್ಕಾಗಿಯೇ 2024ರ ಕೆಲಸ ಈಗ ಪ್ರಾರಂಭವಾಗಿದೆ’ ಎಂದು ಮತ್ತೊಂದು ಮೂಲ ಹೇಳಿದೆ.

ತಮಿಳುನಾಡಿನಲ್ಲಿ ಬಿಜೆಪಿಯನ್ನು ಇದುವರೆಗೂ ಹಿಂದಿ– ಹಿಂದುತ್ವದ ಪಕ್ಷವಾಗಿಯೇ ನೋಡಲಾಗುತ್ತಿದ್ದರೂ ಪಕ್ಷದ ಉನ್ನತ ನಾಯಕರು, ಪಕ್ಷದ ಕಾರ್ಯಸೂಚಿ ಜಾರಿಗೆ ಇದು ಸಕಾಲವೆಂದು ನಂಬಿದ್ದಾರೆ. 2016ರಲ್ಲಿ ಜೆ. ಜಯಾಲಲಿತಾ ಅವರ ಸಾವಿನ ನಂತರ ಮಿತ್ರ ಪಕ್ಷ ಎಐಡಿಎಂಕೆಯಲ್ಲಿ ಶುರುವಾದ ಆಂತರಿಕ ಕಲಹವನ್ನೂ ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಲೆಕ್ಕಾಚಾರದಲ್ಲಿದ್ದಾರೆ.

‘ಬಿಜೆಪಿ ಮತ್ತು ಪ್ರಧಾನಿ ಮೋದಿ ಅವರ ಮೇಲೆ ತಮಿಳರಿಗೆ ದ್ವೇಷವಿದೆ ಎನ್ನುವ ಅಭಿಪ್ರಾಯ ಬದಲಿಸಲು ನಾವು ಬಯಸುತ್ತೇವೆ. ಕೇಂದ್ರ ಸಚಿವರು ರಾಜ್ಯದ ಹಲವು ಭಾಗಗಳಿಗೆ ಭೇಟಿ ನೀಡುವಂತೆ ಮಾಡುವ ಮೂಲಕ, ಇತರ ರಾಜ್ಯಗಳಂತೆ ಕೇಂದ್ರದಿಂದ ತಮಿಳುನಾಡು ಕೂಡ ಲಾಭ ಪಡೆಯುತ್ತಿದೆ ಎಂಬ ಸಂದೇಶ ಕಳುಹಿಸಲು ಬಯಸಿದ್ದೇವೆ. ಇಂತಹ ನಡೆ ನಮ್ಮನ್ನು ಜನರಿಗೆ ಹತ್ತಿರವಾಗಿಸಲಿದೆ ಎನ್ನುವುದು ನಮ್ಮ ನಂಬಿಕೆ’ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ.

ಏಕರೂಪ ನಾಗರಿಕ ಸಂಹಿತೆ: ಪಿಐಎಲ್ ವಜಾಗೊಳಿಸಲು ‘ಸುಪ್ರೀಂ’ಗೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಜಾರಿಗೊಳಿಸುವಂತೆ ಕೋರಿ ಸಲ್ಲಿಕೆಯಾಗಿರುವ ಎಲ್ಲ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ವಜಾಗೊಳಿಸುವಂತೆ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ತಿಳಿಸಿದೆ.

ಈ ಕುರಿತು ಸುಪ್ರೀಂಕೋರ್ಟ್‌ಗೆ ಲಿಖಿತ ಉತ್ತರ ನೀಡಿರುವ ಕೇಂದ್ರ ಸರ್ಕಾರ, ‘ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಬೇಕೇ, ಬೇಡವೇ ಎಂಬುದು ನೀತಿ ನಿರೂಪಣೆಗೆ ಸಂಬಂಧಿಸಿದ್ದು. ಈ ವಿಷಯದಲ್ಲಿ ಸಂಸತ್‌ಗೆ ಕೋರ್ಟ್ ಯಾವುದೇ ನಿರ್ದೇಶನ ನೀಡುವಂತಿಲ್ಲ’ ಎಂದು ತಿಳಿಸಿದೆ.

‘ನಾಗರಿಕರು ಬೇರೆ ಬೇರೆ ಕಾನೂನುಗಳನ್ನು ಪಾಲನೆ ಮಾಡುವುದು, ದೇಶದ ಏಕತೆಗೆ ಅಗೌರವ ತೋರಿದಂತೆ’ ಎಂದೂ ಕೇಂದ್ರ ಹೇಳಿದೆ.

‘ಕಾನೂನು ರಚಿಸುವುದು ಸಂಸತ್‌ನ ಪರಮಾಧಿಕಾರ. ಈ ಅಂಶವನ್ನು ಸುಪ್ರೀಂಕೋರ್ಟ್ ನೀಡಿರುವ ಹಲವಾರು ತೀರ್ಪುಗಳಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೇ, ಈ ವಿಷಯ ಕುರಿತು ಕಾನೂನು ಆಯೋಗವು ವರದಿಯೊಂದನ್ನು ಸಲ್ಲಿಸಲಿದೆ. ವರದಿಯನ್ನು ಪರಿಶೀಲಿಸಿದ ನಂತರ, ಸರ್ಕಾರ ಕ್ರಮ ಕೈಗೊಳ್ಳುವುದು’ ಎಂದು ಕೇಂದ್ರ ಸರ್ಕಾರ ಹೇಳಿದೆ.

ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸುವಂತೆ ಕೋರಿ ವಕೀಲ ಹಾಗೂ ಬಿಜೆಪಿ ಮುಖಂಡ ಅಶ್ವಿನಿಕುಮಾರ್ ಅವರು ಪಿಐಎಲ್ ಸಲ್ಲಿಸಿದ್ದಾರೆ.

ಅಂಕಿತಾ ಹತ್ಯೆ ಪ್ರಕರಣ: ಸಿಬಿಐಗೆ ವಹಿಸಲು ತಂದೆ ಆಗ್ರಹ

ಡೆಹ್ರಾಡೂನ್: ರೆಸಾರ್ಟ್‌ವೊಂದರ ಸ್ವಾಗತಕಾರಿಣಿ ಅಂಕಿತಾ ಭಂಡಾರಿ ಅವರ ಹತ್ಯೆಯ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕೆಂದು ಅಂಕಿತಾ ತಂದೆ ವೀರೇಂದ್ರ ಸಿಂಗ್ ಭಂಡಾರಿ ಅವರು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರಿಗೆ ಒತ್ತಾಯಿಸಿದ್ದಾರೆ.

ಡಿಐಜಿ ಪಿ. ರೇಣುಕಾ ದೇವಿ ನೇತೃತ್ವದಲ್ಲಿ ಎಸ್‌ಐಟಿ ತಂಡ ಸೆ. 25ರಿಂದ ಪ್ರಕರಣದ ತನಿಖೆ ಕೈಗೊಂಡಿದೆ. ಪ್ರಕರಣ ಸಂಬಂಧ ಶೀಘ್ರದಲ್ಲೇ ಆರೋಪಪಟ್ಟಿ ಸಲ್ಲಿಸಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆದರೆ, ಎಸ್‌ಐಟಿ ತನಿಖೆ ಬಗ್ಗೆ ವೀರೇಂದ್ರ ಸಿಂಗ್ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಕೋವಿಡ್: ಸಂಶೋಧಕರಿಂದ ಸಂಭಾವ್ಯ ಲಸಿಕೆ ಅಭಿವೃದ್ಧಿ

ನವದೆಹಲಿ (ಪಿಟಿಐ): ‘ಸಾರ್ಸ್–ಕೋವ್–2’ ವೈರಸ್‌ಗಳನ್ನು ಹೋಲುವ ಕಣಗಳನ್ನು (ವಿಎಲ್‌ಪಿ) ಅಭಿವೃದ್ಧಿಪಡಿಸಿರುವ ಐಐಟಿ–ದೆಹಲಿ ಸಂಶೋಧಕರು, ಇವುಗಳು ಕೋವಿಡ್–19 ವಿರುದ್ಧದ ಸಂಭಾವ್ಯ ಲಸಿಕೆಯಂತೆ (ವ್ಯಾಕ್ಸಿನ್ ಕ್ಯಾಂಡಿಡೇಟ್) ಕಾರ್ಯನಿರ್ವಹಿಸಲಿವೆ ಎಂದು ಹೇಳಿದ್ದಾರೆ.

‘ಈ ವಿಎಲ್‌ಪಿಗಳನ್ನು ಬಳಸಿ ಇಲಿಗಳ ಮೇಲೆ ಪ್ರಯೋಗ ನಡೆಸಲಾಗಿದೆ. ಇವುಗಳು ಇಲಿಗಳಲ್ಲಿನ ರೋಗ ನಿರೋಧಕ ಶಕ್ತಿ ವೃದ್ಧಿಸಿ, ಸಾರ್ಸ್–ಕೋವ್–2 ವೈರಸ್‌ಗೆ ಪ್ರತಿರೋಧ ಒಡ್ಡಿದ್ದು ಕಂಡುಬಂತು’ ಎಂದು ಐಐಟಿ–ದೆಹಲಿಯ ಕುಸುಮಾ ಸ್ಕೂಲ್ ಆಫ್ ಬಯೊಲಾಜಿಕಲ್ ಸೈನ್ಸಸ್‌ನ ಪ್ರಾಧ್ಯಾಪಕಿ ಮಣಿದೀಪ ಬ್ಯಾನರ್ಜಿ ಅವರು ಹೇಳಿದ್ದಾರೆ.

‘ವಿಎಲ್‌ಪಿ ಆಧಾರಿತ ಲಸಿಕೆಗಳು ಸುರಕ್ಷಿತ. ಇವುಗಳಲ್ಲಿ ಜೀನೋಮ್‌ಗಳು ಇರುವುದಿಲ್ಲ. ಹಾಗಾಗಿ, ವೈರಸ್‌ನ ಎಲ್ಲ ರೂಪಾಂತರ ತಳಿಗಳ ವಿರುದ್ಧ ವಿಎಲ್‌ಪಿ ಆಧಾರಿತ ಲಸಿಕೆಗಳು ಪ್ರಬಲ ರೋಗನಿರೋಧಕ ಶಕ್ತಿ ಉತ್ಪತ್ತಿಗೆ ಕಾರಣವಾಗುತ್ತವೆ’ ಎಂದು ಅವರು ಹೇಳಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಸುತ್ತೋಲೆ

ಅಪಘಾತಗಳಿಗೆ ಅಧಿಕಾರಿಗಳೇ ಹೊಣೆ

ನವದೆಹಲಿ (ಪಿಟಿಐ): ಕಳಪೆ ರಸ್ತೆ ಕಾಮಗಾರಿಯಿಂದಾಗಿ ಸಂಭವಿಸುವ ಮಾರಣಾಂತಿಕ ಅಪಘಾತಗಳಿಗೆ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ನಿರ್ಧರಿಸಿದೆ. ಈ ಸಂಬಂಧ ಮಂಗಳವಾರ ಸುತ್ತೋಲೆ ಹೊರಡಿಸಿದೆ.

‘ತಾತ್ಕಾಲಿಕ ಪ್ರಮಾಣ ಪತ್ರ ವಿತರಣೆ ಪ್ರಕ್ರಿಯೆಯಲ್ಲಿ ಎನ್‌ಎಚ್‌ಎಐ/ಐಇ/ಎಇ ಪ್ರತಿನಿಧಿಗಳಿಂದ ಕರ್ತವ್ಯ ಲೋಪವಾದರೆ, ಅವರ ನಿರ್ಲಕ್ಷ್ಯದಿಂದ ಬಳಕೆದಾರರ ಸುರಕ್ಷತೆಗೆ ಧಕ್ಕೆಯುಂಟಾದರೆ ಅದನ್ನು ಪ್ರಾಧಿಕಾರವು ಗಂಭೀರವಾಗಿ ಪರಿಗಣಿಸಲಿದೆ’ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

‘ರಸ್ತೆಗಳಲ್ಲಿ ಗುರುತು ಹಾಗೂ ಸಂಕೇತಗಳನ್ನು ಹಾಕಿರುವುದನ್ನೇ ಆಧಾರವಾಗಿಟ್ಟುಕೊಂಡು ಕಾಮಗಾರಿ ಪೂರ್ಣಗೊಳಿಸಿರುವ ಕುರಿತ ತಾತ್ಕಾಲಿಕ ಪ್ರಮಾಣ ಪತ್ರ ವಿತರಿಸುತ್ತಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿದೆ. ಇದು ಬಳಕೆದಾರರ ಸುರಕ್ಷತೆ ಜೊತೆ ರಾಜಿಮಾಡಿಕೊಂಡಂತೆ. ಇದರಿಂದ ಪ್ರಾಧಿಕಾರಕ್ಕೂ ಕೆಟ್ಟ ಹೆಸರು ಬರುತ್ತದೆ’ ಎಂದು ಹೇಳಲಾಗಿದೆ.

‘ಕಾಮಗಾರಿ ಪೂರ್ಣಗೊಂಡಿರುವ ಕುರಿತು ತಾತ್ಕಾಲಿಕ ಪ್ರಮಾಣ ಪತ್ರ ವಿತರಿಸುವ ಮುನ್ನ ‘ಪ್ರಾಜೆಕ್ಟ್ ಹೈವೆ’ಯ ರಸ್ತೆ ಸುರಕ್ಷತೆ ನಿಯಮಾವಳಿಗಳ ಪಾಲನೆಯಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಒಂದೊಮ್ಮೆ ಕಳಪೆ ರಸ್ತೆ ಕಾಮಗಾರಿಯಿಂದಾಗಿ ಮಾರಣಾಂತಿಕ ಅಪಘಾತಗಳು ಸಂಭವಿಸಿದ್ದರೆ ಅದಕ್ಕೆ ಪ್ರಾದೇಶಿಕ ಅಧಿಕಾರಿಗಳು, ಯೋಜನಾ ನಿರ್ದೇಶಕರು ಅಥವಾ ಸಂಬಂಧಪಟ್ಟ ಎಂಜಿನಿಯರ್‌ಗಳನ್ನು ಜವಾಬ್ದಾರರನ್ನಾಗಿ ಮಾಡಲಾಗುತ್ತದೆ’ ಎಂದು ಎಚ್ಚರಿಸಿದೆ.

ಬಹುಪಾಲು ಅಪಘಾತಗಳಿಗೆ ಅಸಮರ್ಪಕ ರಸ್ತೆ ಕಾಮಗಾರಿಯೇ ಕಾರಣ ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಇತ್ತೀಚೆಗೆ ತಿಳಿಸಿದ್ದರು. ಹೆದ್ದಾರಿ ಹಾಗೂ ಇತರೆ ರಸ್ತೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿಗಳನ್ನು ಸಿದ್ಧಪಡಿಸುವ ಕುರಿತು ಕಂಪನಿಗಳಿಗೆ ಸೂಕ್ತ ತರಬೇತಿ ನೀಡುವ ಅಗತ್ಯವಿದೆ ಎಂದೂ ಅಭಿಪ್ರಾಯಪಟ್ಟಿದ್ದರು.

ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೊ ದತ್ತಾಂಶದ ಪ್ರಕಾರ ಭಾರತದಲ್ಲಿ ಹೋದ ವರ್ಷ ರಸ್ತೆ ಅಪಘಾತಗಳಿಂದಾಗಿಯೇ 1.55 ಲಕ್ಷಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಈವರೆಗೆ ವರ್ಷವೊಂದರಲ್ಲಿ ದಾಖಲಾದ ಗರಿಷ್ಠ ಮರಣ ಪ್ರಮಾಣ ಇದಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಎಷ್ಟೋ ಬಾರಿ ಅಳುವೆಂಬುದು ನಗುವಿಗಿಂತಲೂ ಸುಖದ ವಸ್ತು. ಅದು, ಎದೆಯ ಭಾರವನ್ನು ಇಳಿಸಿದಷ್ಟು, ಮನಸ್ಸಿನ ಕಲ್ಮಶವನ್ನು ತೊಳೆದಷ್ಟು, ಪಾಪವನ್ನು ಕಿತ್ತು ಶುಚಿ ಮಾಡಿದಷ್ಟು ತೀರ್ಥ ಪ್ರಸಾದಗಳು ಮಾಡಲಾರವು.

–ಶಿವರಾಮ ಕಾರಂತ

ಪ್ರಯಾಣಿಕರಿಗೂ ಆಟೊ ಚಾಲಕರಿಗೂ ಸಮಾಧಾನ ತಂದ ಹೈಕೋರ್ಟ್ ತೀರ್ಪು

ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆಯನ್ನು ಮುಂದುವರಿಸಲು ಅಗ್ರಿಗೇಟರ್‌ಗಳಿಗೆ ಅನುಮತಿ ನೀಡಿರುವ ಹೈಕೋರ್ಟ್, 15 ದಿನಗಳಲ್ಲಿ ನ್ಯಾಯಯುತ ದರ ನಿಗದಿ ಮಾಡುವಂತೆ ರಾಜ್ಯ ಸರ್ಕಾರಕ್ಕೂ ನಿರ್ದೇಶನ ನೀಡುವ ಮೂಲಕ ಒಳ್ಳೆಯ ಕೆಲಸವನ್ನೇ ಮಾಡಿದೆ. ಸಮಸ್ಯೆಯನ್ನು ಬಗೆಹರಿಸುವ ದಿಸೆಯಲ್ಲಿ ಇದೊಂದು ಸ್ವಾಗತಾರ್ಹ ಹೆಜ್ಜೆ. ಹೈಕೋರ್ಟ್‌ನ ಈ ಕ್ರಮದಿಂದ ಪ್ರಯಾಣಿಕರು, ಆಟೊ ಚಾಲಕರು ಮಾತ್ರವಲ್ಲ ಓಲಾ, ಉಬರ್, ರ‍್ಯಾಪಿಡೊದಂತಹ ಅಗ್ರಿಗೇಟರ್‌ಗಳು ಕೂಡ ನಿರಾಳವಾಗಿ ನಿಟ್ಟುಸಿರು ಬಿಡುವಂತಾಗಿದೆ. ಪ್ರಯಾಣಿಕರಿಂದ ಹೆಚ್ಚಿನ ದರ ವಸೂಲು ಮಾಡಲಾಗುತ್ತಿದೆ ಎಂಬ ದೂರು ಬಂದ ಕಾರಣ ಆ್ಯಪ್ ಆಧಾರಿತ ಆಟೊರಿಕ್ಷಾ ಹಾಗೂ ಬೈಕ್ ಸೇವೆಗಳನ್ನು ಸ್ಥಗಿತಗೊಳಿಸುವಂತೆ ಸೂಚಿಸಿ ಸಾರಿಗೆ ಇಲಾಖೆ ಆಯುಕ್ತರು ಓಲಾ, ಉಬರ್ ಮತ್ತು ರ‍್ಯಾಪಿಡೊ ಕಂಪನಿಗಳಿಗೆ ನೋಟಿಸ್ ನೀಡಿದ್ದರು. 'ಕರ್ನಾಟಕ ಬೇಡಿಕೆ ಆಧಾರಿತ ಸಾರಿಗೆ ತಂತ್ರಜ್ಞಾನ ಅಗ್ರಿಗೇಟರ್‌ಗಳ ನಿಯಮ-2016'ರ ಅಡಿಯಲ್ಲಿ ಅಗ್ರಿಗೇಟ್ ಕಂಪನಿಗಳಿಗೆ ಟ್ಯಾಕ್ಸಿ ಸೇವೆಯನ್ನು ನಡೆಸಲಷ್ಟೇ ಅನುಮತಿ ಇದೆ. ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆಯನ್ನು ನಡೆಸಲು ಈ ಕಂಪನಿಗಳು ಲೈಸನ್ಸ್ ಪಡೆದಿಲ್ಲ. ಆದರೆ, ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್ ಅವರಿದ್ದ ಏಕಸದಸ್ಯ ನ್ಯಾಯಪೀಠವು 'ಕೇಂದ್ರ ಸರ್ಕಾರವು 2020ರಲ್ಲಿ ಹೊರಡಿಸಿದ ಮಾರ್ಗಸೂಚಿ ಪ್ರಕಾರ, ಅಗ್ರಿಗೇಟರ್‌ಗಳು ಆಟೊರಿಕ್ಷಾ, ಇ-ರಿಕ್ಷಾ, ಮೋಟಾರ್ ಕ್ಯಾಬ್, ಮೋಟಾರ್ ಸೈಕಲ್ ಹಾಗೂ ಬಸ್ ಸೇವೆಗಳನ್ನು ಒದಗಿಸಬಹುದಾಗಿದೆ' ಎಂದು ಅಭಿಪ್ರಾಯಪಟ್ಟಿದೆ. 'ಈ ಅಗ್ರಿಗೇಟರ್‌ಗಳು ಆಟೊರಿಕ್ಷಾ ಸೇವೆಯನ್ನು ಒದಗಿಸುವುದು ಕಾನೂನುಬಾಹಿರ ಎನ್ನುವುದು ಸಾರಿಗೆ ಇಲಾಖೆಯ ಅಭಿಪ್ರಾಯವಾಗಿದ್ದರೆ ಇದುವರೆಗೆ ಅವರ ವಿರುದ್ಧ ಕ್ರಮ ಕೈಗೊಳ್ಳದೆ ಸುಮ್ಮನಿದ್ದುದು ಏಕೆ' ಎಂದೂ ಪ್ರಶ್ನಿಸಿದೆ.

ಸಾರ್ವಜನಿಕರಿಗೆ ಸಾರಿಗೆ ಸೇವೆ ಕೈಗೆಟಕುವ ದರದಲ್ಲಿ ಸಿಗುವಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆ

ಆಟೊ ಚಾಲಕರ ಅಹವಾಲುಗಳನ್ನು ಸಾರಿಗೆ ಇಲಾಖೆಯು ಇದುವರೆಗೆ ಕಡೆಗಣಿಸುತ್ತಲೇ ಬಂದಿರುವುದು ಸ್ಪಷ್ಟ. ಅಗ್ರಿಗೇಟರ್‌ಗಳು ಪ್ರಯಾಣಿಕರಿಂದ ಹೆಚ್ಚಿನ ಶುಲ್ಕವನ್ನು ವಸೂಲು ಮಾಡುತ್ತಿದ್ದರೂ ತಮಗೆ ಅದರಲ್ಲಿ ಹೆಚ್ಚಿನ ಲಾಭ ಸಿಗುತ್ತಿಲ್ಲ ಎಂದು ಆಟೊ ಚಾಲಕರು ಹಲವು ಬಾರಿ ದೂರಿದರೂ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ಕೈಕಟ್ಟಿ ಕುಳಿತಿದ್ದರು. ಸಾರಿಗೆ ಇಲಾಖೆಯು ಆಟೊರಿಕ್ಷಾಗಳಿಗೆ ಕನಿಷ್ಠ ಪ್ರಯಾಣ ದರವನ್ನು ₹ 30ಕ್ಕೆ ನಿಗದಿ ಮಾಡಿದೆ. ಆದರೆ, ಅಗ್ರಿಗೇಟರ್‌ಗಳು ಕನಿಷ್ಠ ದರವನ್ನೇ ₹ 100ಕ್ಕೆ ನಿಗದಿಗೊಳಿಸಿದ ದೂರುಗಳಿದ್ದವು. ದಟ್ಟಣೆ ಅವಧಿಯಲ್ಲಿ ಈ ಮೊತ್ತವನ್ನು 'ಸರ್ಜ್ ಪ್ರೈಸಿಂಗ್' ಹೆಸರಿನಲ್ಲಿ ಕಾನೂನುಬಾಹಿರವಾಗಿ ಇನ್ನೂ ಏರಿಕೆ ಮಾಡಲಾಗುತ್ತಿತ್ತು. ಪ್ರತಿಕೂಲ ಹವಾಮಾನದ ಸಂದರ್ಭದಲ್ಲೂ ಪ್ರಯಾಣಿಕರ ಸುಲಿಗೆಯನ್ನು ಮಾಡಲಾಗುತ್ತಿತ್ತು. ಈ ರೀತಿಯ ದರ ಏರಿಕೆಗೆ ಅಂಕುಶವೆಂಬುದೇ ಇರಲಿಲ್ಲ. ತಾವು ಹೇಳಿದ ಸ್ಥಳಗಳಿಗೆ ಆಟೊರಿಕ್ಷಾ ಚಾಲಕರು ಬಾಡಿಗೆಗೆ ಬರುವುದಿಲ್ಲ ಎನ್ನುವುದು ಪ್ರಯಾಣಿಕರ ಸಾಮಾನ್ಯ ದೂರು. ಆದರೆ, ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆಯು ಪ್ರಯಾಣಿಕರ ಈ ದೂರನ್ನು ಬಹುಮಟ್ಟಿಗೆ ತಗ್ಗಿಸಿತ್ತು. ಆಟೊ ಚಾಲಕರು ಅಸಡ್ಡೆ ತೋರಿದರೂ ಪ್ರಯಾಣಿಕರೊಂದಿಗೆ ಅವರು ಚೌಕಾಸಿಗೆ ಇಳಿಯುವ, ವಾಗ್ವಾದ ನಡೆಸುವ ಅವಕಾಶ ಇರಲಿಲ್ಲ.

ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆಯ ಮೇಲೆ ನಿರ್ಬಂಧ ವಿಧಿಸಿದ ಸರ್ಕಾರದ ಕ್ರಮದಿಂದ ಯಾರೊಬ್ಬರಿಗೂ ಪ್ರಯೋಜನ ಇರಲಿಲ್ಲ. ತಾವು ಪಡೆಯುತ್ತಿರುವ ಅನುಕೂಲಕ್ಕಾಗಿ ಪ್ರಯಾಣಿಕರು ಮೀಟರ್ ದರದ ಮೇಲೆ ಅಲ್ಪಮೊತ್ತದ ಸೇವಾ ಶುಲ್ಕವನ್ನು ಕೊಡಲು ಸಿದ್ಧರಿದ್ದಾರೆ. ಮೀಟರ್ ದರದ ಮೇಲೆ ಶೇ 10ಕ್ಕಿಂತ ಹೆಚ್ಚಿನ ಸೇವಾ ಶುಲ್ಕವನ್ನು ವಿಧಿಸುವಂತಿಲ್ಲ ಎಂದು ಕೋರ್ಟ್ ಕೂಡ ತಾಕೀತು ಮಾಡಿದೆ. 'ಕೇರಳ ಸವಾರಿ' ಆ್ಯಪ್‌ನ ಶುಲ್ಕದ ಮಾದರಿಯನ್ನು ಅಧ್ಯಯನ ನಡೆಸಲು ರಾಜ್ಯ ಸರ್ಕಾರ ಕೈಗೊಂಡ ತೀರ್ಮಾನ ಸರಿಯಾದ ದಿಕ್ಕಿನಲ್ಲಿದೆ. ಅಲ್ಲಿ ಚಾಲಕರು ಆ್ಯಪ್ ಬಳಸಿದ್ದಕ್ಕೆ ಶೇ 8ರಷ್ಟು ಕಮಿಷನ್ ನೀಡಬೇಕು ಮತ್ತು ಪ್ರಯಾಣಿಕರಿಗೆ ಪ್ರಯಾಣದ ಶುಲ್ಕದಲ್ಲಿ ಯಾವುದೇ ಹೆಚ್ಚಿನ ಹೊರೆಯೂ ಬೀಳುವುದಿಲ್ಲ. 'ಸರ್ಜ್‌ಪ್ರೈಸಿಂಗ್'ನ ಹಾವಳಿಯಂತೂ ಇಲ್ಲವೇ ಇಲ್ಲ. ಯಾವುದೇ ವಲಯದಲ್ಲಿ ಸರ್ಕಾರದ ಮಿತಿಮೀರಿದ ಹಸ್ತಕ್ಷೇಪ ಅಪೇಕ್ಷಣೀಯವಲ್ಲ, ನಿಜ. ಆದರೆ, ಸಾರ್ವಜನಿಕರ ಓಡಾಟಕ್ಕೆ ಅನುಕೂಲವಾಗುವಂತಹ ಸಾರಿಗೆ ಸೇವೆ ಲಭ್ಯವಾಗುವಂತೆ ಮಾಡುವುದು ಮತ್ತು ಅದು ಎಲ್ಲರಿಗೂ ಕೈಗೆಟಕುವ ದರದಲ್ಲಿ ಸಿಗುವಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆ ಎನ್ನುವುದನ್ನು ಮರೆಯುವಂತಿಲ್ಲ.

ದಿನದ ಟ್ವೀಟ್

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ

ಬಟ್ಟೆಗಳನ್ನು ಒಗೆಯುವುದಕ್ಕೆ ಕೊಡಲು ಲಾಂಡ್ರಿಗೆ ತೆರಳಿದ್ದೆ. ಇಪ್ಪತ್ತೈದರ ಆಸುಪಾಸಿನಲ್ಲಿದ್ದ ಹುಡುಗರು ಮತ್ತು ಹುಡುಗಿಯರು (ಐ.ಟಿ., ಬಿ.ಟಿ. ವೃತ್ತಿಪರರು) ನೆಲಮಾಳಿಗೆಯಲ್ಲಿ ಧೂಮಪಾನ ಮಾಡುತ್ತಿದ್ದುದನ್ನು ಕಂಡೆ. ಸಿಗರೇಟು ಸೇದುವುದಕ್ಕೆ ಅವರನ್ನು ಪ್ರೇರೇಪಿಸುವುದು ಏನು ಎಂಬುದನ್ನು ಅರ್ಥಮಾಡಿಕೊಳ್ಳಲು ಸೋತಿದ್ದೇನೆ. ಒಂದೆಡೆ, ಕಟ್ಟಿಕೊಂಡ ಅಪಧಮನಿಯನ್ನು ಸರಿಪಡಿಸಲು ನಾವು ವೈದ್ಯರು ಹೆಣಗಾಡುತ್ತಿರುತ್ತೇವೆ. ಇಲ್ಲಿ ಇನ್ನೊಂದೆಡೆ, ಇವರು ಸ್ವಇಚ್ಛೆಯಿಂದ ಅದು ಕಟ್ಟಿಕೊಳ್ಳುವಂತೆ ಮಾಡಿಕೊಳ್ಳುತ್ತಾರೆ.

ಡಾ. ಪಿ.ಕಾಮತ್, ಹೃದ್ರೋಗ ತಜ್ಞ

ಕಿಡಿನುಡಿ

ಉತ್ತರಪ್ರದೇಶದಲ್ಲಿನ ಮಗು ಹಿಂದಿ ಮತ್ತು ಇಂಗ್ಲಿಷ್ ಕಲಿಯಬೇಕು. ಕರ್ನಾಟಕದಲ್ಲಿನ ಮಗು ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಕಲಿಯಬೇಕು. ಯಾರಿಗೆ ಹೆಚ್ಚು ಹೊರೆ?

ದೇವದತ್ತ ಪಟ್ಟನಾಯಕ್, ಲೇಖಕ

25 ವರ್ಷಗಳ ಹಿಂದೆ

ಭಾನುವಾರ, 19-10-1997

• **ಪತನದತ್ತ ಬಿಜೆಪಿ–ಬಿಎಸ್‌ಪಿ ಸರ್ಕಾರ**

ಲಖನೌ, ಅಕ್ಟೋಬರ್ 18 (ಪಿಟಿಐ, ಯುಎನ್‌ಐ)– ಬಿಜೆಪಿ ನಾಯಕ ಕಲ್ಯಾಣ್ ಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರದ 10 ಮಂದಿ ಬಹುಜನ ಸಮಾಜ ಪಕ್ಷದ ಸಚಿವರು ಇಂದಿನ ಸಚಿವ ಸಂಪುಟ ಸಭೆಗೆ ಬಹಿಷ್ಕಾರ ಹಾಕಿದರು. ಮೈತ್ರಿ ಪಕ್ಷಗಳ ನಡುವೆ ಭಿನ್ನಾಭಿಪ್ರಾಯ ಉಲ್ಬಣಿಸಿ, ಉತ್ತರ ಪ್ರದೇಶದ ಬಿಜೆಪಿ–ಬಿಎಸ್‌ಪಿ ನೇತೃತ್ವದ ಸರ್ಕಾರ ಪತನದ ಅಂಚಿನಲ್ಲಿದೆ.

ಕಳೆದ ಮಾರ್ಚ್‌ನಲ್ಲಿ ಅಧಿಕಾರ ಸಹಭಾಗಿತ್ವ ಆಧಾರದಲ್ಲಿ ಬಿಜೆಪಿ–ಬಿಎಸ್‌ಪಿ ಸರ್ಕಾರ ರಚಿಸಿದ ನಂತರ ಇದೇ ಮೊದಲ ಬಾರಿಗೆ ಇಂತಹ ಘಟನೆ ನಡೆದಿದ್ದು, ಸರ್ಕಾರದ ಪಾಲುದಾರ ಪಕ್ಷಗಳಲ್ಲಿ ಭಿನ್ನಮತ ತೀವ್ರವಾಗಿರುವುದು ಬಹಿರಂಗವಾಗಿದೆ.

ಅಲ್ಲದೆ ಕಲ್ಯಾಣ್ ಸಿಂಗ್ ನೇತೃತ್ವದ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಬಿಎಸ್‌ಪಿ ವಾಪಸು ಪಡೆದಿದೆ ಎಂಬ ಸುದ್ದಿ ಹರಡಿದ್ದು, ಈ ಸುದ್ದಿಯನ್ನು ಬಿಎಸ್‌ಪಿ ಅಲ್ಲಗಳೆದಿದೆ.

• **ಕಾಂಗ್ರೆಸ್ ಪುನಶ್ಚೇತನಕ್ಕೆ ಕ್ರಿಯಾಯೋಜನೆ**

ಬೆಂಗಳೂರು, ಅಕ್ಟೋಬರ್ 18– ಪಕ್ಷವನ್ನು ಬಲಪಡಿಸಲು ಕ್ರಿಯಾಯೋಜನೆಯೊಂದನ್ನು ರೂಪಿಸಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ತಾರೀಖ್ ಅನ್ವರ್ ಇಂದು ಇಲ್ಲಿ ಹೇಳಿದರು.

ಪಕ್ಷದ ಕಚೇರಿಯಲ್ಲಿ ಕಿಕ್ಕಿರಿದು ನೆರೆದಿದ್ದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಕ್ರಿಯಾಯೋಜನೆಗೆ ಕಾರ್ಯಕಾರಿ ಸಮಿತಿ ಅನುಮತಿ ನೀಡಿದೆ. ಇದನ್ನು ಶೀಘ್ರವಾಗಿ ಜಾರಿಗೊಳಿಸುವ ಪ್ರಕ್ರಿಯೆ ಆರಂಭವಾಗಬೇಕು ಎಂದರು.

50 ವರ್ಷಗಳ ಹಿಂದೆ

ಗುರುವಾರ, 19-10-1972

• **ನಾಟಕರತ್ನ ಗುಬ್ಬಿ ವೀರಣ್ಣ ಅವರ ನಿಧನ**

ಬೆಂಗಳೂರು, ಅಕ್ಟೋಬರ್ 18– ಐವತ್ತು ವರ್ಷಕ್ಕೂ ಹೆಚ್ಚು ಕಾಲ ಕನ್ನಡ ರಂಗಭೂಮಿಯ ಮೇಲೆ ರಾರಾಜಿಸಿದ್ದ ನಾಟಕ ರತ್ನ ಗುಬ್ಬಿ ವೀರಣ್ಣ ಅವರು ಇಂದು ಸಂಜೆ 5.45ರ ಸಮಯದಲ್ಲಿ ಇಲ್ಲಿ ನಿಧನರಾದರು.

83 ವರ್ಷ ವಯಸ್ಸಾಗಿದ್ದ ವೀರಣ್ಣ ಅವರು ಕಳೆದ ಒಂದರಂದು ಸೇಂಟ್ ಮಾರ್ತಾಸ್ ಆಸ್ಪತ್ರೆಗೆ ಸೇರಿದ್ದರು.

• **ರಾಜಕುಮಾರ್ ದುಃಖ**

ಬೆಂಗಳೂರು, ಅಕ್ಟೋಬರ್ 18– ಗುಬ್ಬಿ ವೀರಣ್ಣ ಅವರ ನಿಧನದ ವಾರ್ತೆಯನ್ನು ಕೇಳಿ ಅತೀವ ದುಃಖಕ್ಕೀಡಾಗಿದ್ದ ಕನ್ನಡ ಚಲನಚಿತ್ರದ ಜನಪ್ರಿಯ ನಟ ರಾಜಕುಮಾರ್ ಅವರು, 'ಮಾತನಾಡಲು ಕಷ್ಟ ಆಗುತ್ತೆ. ಏನನ್ನೂ ಹೇಳಲು ಚೈತನ್ಯ ಸಾಲದು' ಎಂದು ತಮ್ಮ ಸಂತಾಪ ವ್ಯಕ್ತಪಡಿಸಿದರು.

ಮದರಾಸಿನಲ್ಲಿರುವ ಶ್ರೀಯುತರೊಡನೆ ಫೋನಿನ ಮೂಲಕ ಸಂಪರ್ಕ ಏರ್ಪಡಿಸಿದಾಗ ರಾಜಕುಮಾರ್ ಅವರು, 'ಅವರ ಅನ್ನ ತಿಂದು ಬೆಳೆದವನು ನಾನು. ಅವರ ಹೆಸರನ್ನು ಹೇಳುತ್ತಲೇ ಬಾಳ್ತಾಯಿರೋದು. ಅವರು ಬಹಳ ದೊಡ್ಡ ವ್ಯಕ್ತಿ' ಎಂದು ದಿವಂಗತರ ಗುಣಗಾನ ಮಾಡಿದರು.

• **ಡಿ.ಎಂ.ಕೆ. ಎರಡು ಹೋಳು: ಎಂ.ಜಿ.ಆರ್ ಅವರಿಂದ ಹೊಸ ಪಕ್ಷ ರಚನೆ**

ಮದ್ರಾಸ್, ಅಕ್ಟೋಬರ್ 18– 'ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ' ಎಂಬ ಹೊಸ ಪಕ್ಷ ರಚಿಸಿರುವುದಾಗಿ ಎಂ.ಜಿ. ರಾಮಚಂದ್ರನ್ ಅವರ ಇಂದಿನ ಪ್ರಕಟಣೆಯೊಡನೆ ದ್ರಾವಿಡ ಮುನ್ನೇತ್ರ ಕಳಗಂ ವಿಧ್ಯುಕ್ತವಾಗಿ ಎರಡು ಹೋಳಾಗಿ ಸೀಳಿದಂತಾಗಿದೆ.

ಗುಜರಾತ್‌ನಲ್ಲಿ ಬಿಜೆಪಿ ಪಾರಮ್ಯಕ್ಕೆ, ಹಿಮಾಚಲದಲ್ಲಿ ಚುನಾವಣಾ ಸಂಪ್ರದಾಯಕ್ಕೆ ಪರೀಕ್ಷೆ

ಇಬ್ಬರ ನಡುವೆ ಎಎಪಿ ಸ್ಥಾನವೇನು?

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

2022ನೇ ಇಸವಿಯು ಎರಡು ಪ್ರಮುಖ ರಾಜ್ಯಗಳ ಚುನಾವಣೆಗಳೊಂದಿಗೆ ಕೊನೆಗೊಳ್ಳಲಿದೆ. ಹಿಮಾಚಲ ಪ್ರದೇಶ ಮತ್ತು ಗುಜರಾತ್ ಮತದಾರರು ತಮ್ಮ ವಿಧಾನ ಸಭೆಗಳಿಗೆ ಪ್ರತಿನಿಧಿಗಳನ್ನು ಚುನಾಯಿಸಲಿದ್ದಾರೆ. ಹಿಮಾಚಲ ಪ್ರದೇಶದಲ್ಲಿ ನವೆಂಬರ್ 12ರಂದು ಮತದಾನ ನಡೆಯಲಿದೆ. ಹಿಮಾಚಲ ಪ್ರದೇಶದಲ್ಲಿ ಮತ ಎಣಿಕೆಯು ಡಿಸೆಂಬರ್ 8ಕ್ಕೆ ನಿಗದಿಯಾಗಿರುವ ಕಾರಣ, ಗುಜರಾತ್‌ನಲ್ಲಿ ಕೂಡ ನವೆಂಬರ್ ಕೊನೆಯಲ್ಲಿ ಅಥವಾ ಡಿಸೆಂಬರ್ ಆರಂಭದಲ್ಲಿ ಮತದಾನ ನಡೆಯುವ ಸೂಚನೆ ಇದೆ.

ಎರಡೂ ರಾಜ್ಯಗಳಲ್ಲಿ ಬಿಜೆಪಿಯು ಇನ್ನೊಂದು ಅವಧಿಗೆ ಅಧಿಕಾರ ನಡೆಸಲು ಅವಕಾಶ ಕೋರಲಿದೆ, ತನ್ನ ಇದುವರೆಗಿನ ಆಡಳಿತವನ್ನು ಸಮರ್ಥಿಸಿಕೊಳ್ಳಲಿದೆ. ಗುಜರಾತ್‌ನಲ್ಲಿ ಬಿಜೆಪಿಯು ಸತತ 24 ವರ್ಷಗಳಿಂದ ಅಧಿಕಾರದಲ್ಲಿದೆ. ವಾಸ್ತವದಲ್ಲಿ, ಇಲ್ಲಿ ಬಿಜೆಪಿಯು 1995ರಿಂದಲೇ ಪ್ರತೀ ಚುನಾವಣೆಯಲ್ಲಿಯೂ ಗೆಲುವು ಸಾಧಿಸುತ್ತಿದೆ, ಅಧಿಕಾರ ಹಿಡಿಯುತ್ತಿದೆ. ಆದರೆ, ಆಂತರಿಕ ಭಿನ್ನಮತದ ಕಾರಣದಿಂದಾಗಿ 1996ರಿಂದ 1998ರ ನಡುವೆ ಕಿರು ಅವಧಿಗೆ ಮಾತ್ರ ಅದು ಅಲ್ಲಿ ಅಧಿಕಾರದಲ್ಲಿ ಇರಲಿಲ್ಲ. ಗುಜರಾತ್ ರಾಜ್ಯದ ಮಟ್ಟದಲ್ಲಿ ಬಿಜೆಪಿಯು ಅಧಿಕಾರದ ಏಕಸ್ವಾಮ್ಯ ಸಾಧಿಸಿದೆ. ಅಲ್ಲಿ ಅದು ಸತತ ಆರು ವಿಧಾನಸಭಾ ಚುನಾವಣೆಗಳಲ್ಲಿ ಗೆಲುವು ಕಂಡಿದೆ. ಹಿಮಾಚಲ ಪ್ರದೇಶದ ಕಥೆ ಬೇರೆಯದೇ ಇದೆ. ಈ ಅರ್ಧ ಶತಮಾನದ ಅವಧಿಯಲ್ಲಿ ಅಲ್ಲಿ ಯಾವ ಆಡಳಿತಾರೂಢ ಪಕ್ಷವೂ ಅಧಿಕಾರಕ್ಕೆ ಮರಳಿಲ್ಲ. 1972ರ ನಂತರದಲ್ಲಿ ಇಲ್ಲಿ 11 ವಿಧಾನಸಭಾ ಚುನಾವಣೆಗಳು ನಡೆದಿವೆ. ಪ್ರತೀ ಬಾರಿಯೂ ಆಡಳಿತಾರೂಢ ಪಕ್ಷ ಸೋಲು ಕಂಡಿದೆ. 1980ರ ನಂತರದಲ್ಲಿ ಒಂದು ಬಾರಿ ಕಾಂಗ್ರೆಸ್, ಇನ್ನೊಂದು ಬಾರಿ ಬಿಜೆಪಿ ಕ್ರಮವಾಗಿ ಅಧಿಕಾರ ಹಿಡಿದಿವೆ.

ಮುಂದಿನ ತಿಂಗಳು ನಡೆಯುವ ಚುನಾವಣೆಯಲ್ಲಿ ಬಿಜೆಪಿಯು ಅರ್ಧ ಶತಮಾನದ ಈ ಸಂಪ್ರದಾಯವನ್ನು ಬದಲಾಯಿಸಲು ಯತ್ನಿಸುತ್ತದೆ, ರಾಜ್ಯದ ಜನ ಸಂಪ್ರದಾಯವನ್ನು ಮುಂದುವರಿಸಲಿ ಎಂದು ವಿರೋಧ ಪಕ್ಷವು ಬಯಸುತ್ತದೆ.

ಪಕ್ಷಗಳ ನಡುವಿನ ಸ್ಪರ್ಧೆಯ ವಿಚಾರದಲ್ಲಿ ಎರಡೂ ರಾಜ್ಯಗಳಲ್ಲಿ ಸಮಾನ ಅಂಶವೊಂದು ಇದೆ. ಎರಡೂ ರಾಜ್ಯಗಳಲ್ಲಿ ಇದುವರೆಗೆ ನೇರ ಸ್ಪರ್ಧೆ ಇದ್ದದ್ದು ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ. ಈ ಬಾರಿ ಎರಡೂ ರಾಜ್ಯಗಳಲ್ಲಿ ಆಮ್ ಆದ್ಮಿ ಪಕ್ಷವು (ಎಎಪಿ) ತನಗಾಗಿ ಒಂದು ರಾಜಕೀಯ ಸ್ಥಾನ ಕಲ್ಪಿಸಿಕೊಳ್ಳಲು ಗಂಭೀರ ಪ್ರಯತ್ನ ನಡೆಸಿದೆ. ದೆಹಲಿಯ ಆಚೆಗೆ, ಪಂಜಾಬ್‌ನಲ್ಲಿ ರಾಜಕೀಯ ಹೆಜ್ಜೆಗುರುತನ್ನು ಸ್ಪಷ್ಟವಾಗಿ ಮೂಡಿಸಿರುವ ಎಎಪಿ, ಗುಜರಾತ್ ಮತ್ತು ಹಿಮಾಚಲ ಪ್ರದೇಶದಲ್ಲಿ ಕೂಡ ಪ್ರಮುಖ ಪಕ್ಷವಾಗಿ ಬೆಳೆದುನಿಲ್ಲುವ ಆಸೆ ಹೊಂದಿದೆ. ಆದರೆ ಈ ಎರಡು ರಾಜ್ಯಗಳಲ್ಲಿ ಪಕ್ಷವು ತಳಮಟ್ಟದಲ್ಲಿ ಎದ್ದು ಕಾಣುವ ರೀತಿಯಲ್ಲಿ ಕೆಲಸ ಮಾಡಿರುವುದು ಸೀಮಿತ ವ್ಯಾಪ್ತಿಯಲ್ಲಿ ಮಾತ್ರ. ಪ್ರಮುಖ ಪ್ರತಿಪಕ್ಷದ ಸ್ಥಾನದಲ್ಲಿ ಇರುವ ಕಾಂಗ್ರೆಸ್ಸನ್ನು ಆ ಸ್ಥಾನದಿಂದ ಕೆಳಕ್ಕೆ ಇಳಿಸಲು ಅಗತ್ಯವಿರುವಷ್ಟು ಮತಗಳನ್ನು ಎಎಪಿ ಪಡೆಯಲಿದೆಯೇ, ಬಿಜೆಪಿಗೆ ಸವಾಲು ಒಡ್ಡಿ ಅಧಿಕಾರದ ಕುರ್ಚಿಗೆ ಹತ್ತಿರವಾಗಲಿದೆಯೇ ಎಂಬುದು ಈಗಿನ ದೊಡ್ಡ ಪ್ರಶ್ನೆ.

ಬಿಜೆಪಿಗೆ ಮತ್ತು ಅದರ ಕೇಂದ್ರ ನಾಯಕತ್ವಕ್ಕೆ ಗುಜರಾತ್ ಚುನಾವಣೆಯು ಮಹತ್ವದ ಪರೀಕ್ಷೆಯಾಗಲಿದೆ. ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವ ಇದೇ ರಾಜ್ಯದವರು. ಹೀಗಾಗಿ ಇಲ್ಲಿನ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಗೆಲ್ಲುವಂತೆ ನೋಡಿಕೊಳ್ಳಬೇಕಿರುವುದು ಮಹತ್ವದ್ದಾಗಲಿದೆ. ಒಂದು ವರ್ಷಕ್ಕೂ ತುಸು ಹಿಂದೆ, ಕೇಂದ್ರ ನಾಯಕತ್ವದ ಮಹತ್ವ ಮತ್ತು ಪರಿಣಾಮವು ಗುಜರಾತ್‌ನಲ್ಲಿ ಎದ್ದು ಕಾಣುವಂತಿತ್ತು. ಅಲ್ಲಿ ಆಗ ಹೊಸ ಮುಖ್ಯಮಂತ್ರಿ ಹಾಗೂ ಹೊಸ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂತು. 2014ರಲ್ಲಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿ ಸ್ಥಾನ ತೊರೆದ ನಂತರದಲ್ಲಿ ಆ ರಾಜ್ಯವು ಮೂವರು ಮುಖ್ಯಮಂತ್ರಿಗಳನ್ನು ಕಂಡಿದೆ. 2021ರ ಸೆಪ್ಟೆಂಬರ್ ತಿಂಗಳಲ್ಲಿ ಆದಂತಹ ಸಂಪುಟ ಪುನರ್ ರಚನೆಯು ಹಿಂದೆಂದೂ ಆಗಿರದಿದ್ದ ಪ್ರಯೋಗ. ಬಿಜೆಪಿಯು ಅಧಿಕಾರದಲ್ಲಿ ಇರುವ ಬೇರೆ ಯಾವ ರಾಜ್ಯಗಳಲ್ಲಿಯೂ ಈ ಬಗೆಯ ಪುನರ್ ರಚನೆ ಆಗಿರಲಿಲ್ಲ. ಚುನಾವಣೆಯ ಯಶಸ್ಸಿನಲ್ಲಿ ಕೇಂದ್ರ ನಾಯಕತ್ವದ ಪಾಲು ಮಹತ್ವದ್ದು ಎಂಬ ನಂಬಿಕೆ ಪಕ್ಷದಲ್ಲಿ ಇರುವುದರ ಸ್ಪಷ್ಟ ಸೂಚನೆ ಇದು.

ಹಿಂದಿನ ಬಾರಿಯ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ (2017ರಲ್ಲಿ) ಬಿಜೆಪಿ ಇಲ್ಲಿ ಕಠಿಣ ಸ್ಪರ್ಧೆ ಎದುರಿಸಿತು. ವಿಧಾನಸಭೆಯಲ್ಲಿ ಪಕ್ಷದ ಬಲವು ಎರಡು ಅಂಕಿಗಳಿಗೆ ಕುಸಿಯಿತು. ಪ್ರಧಾನಿಯವರು ಅಲ್ಲಿ ಚುನಾವಣಾ ಪ್ರಚಾರ ನಡೆಸದೇ ಇದ್ದಿದ್ದರೆ ಬಿಜೆಪಿ ಇನ್ನಷ್ಟು ಸ್ಥಾನಗಳನ್ನು ಕಳೆದುಕೊಳ್ಳುತ್ತಿತ್ತು ಎಂದು ಹಲವರು ನಂಬಿದ್ದಾರೆ. ಈ ವರ್ಷದ ಚುನಾವಣೆಗೆ ಸಿದ್ಧತೆ ನಡೆಸಲು, ಹಿಂದಿನ ವರ್ಷ ರಾಜ್ಯ ಸರ್ಕಾರದ ಹೆಸರಿಗೆ ಒಂದಿಷ್ಟು ಹೊಳಪು ತರುವ ಯತ್ನ ನಡೆಸಲಾಯಿತು.

ಕಾಂಗ್ರೆಸ್‌ನ ಕೆಲವು ಪ್ರಮುಖ ಮುಖಂಡರು ಪಕ್ಷ ತೊರೆದಿದ್ದಾರೆ. ಪಕ್ಷವು ಹೊಸ ಅಧ್ಯಕ್ಷರನ್ನು ಚುನಾಯಿಸುವ ಪ್ರಕ್ರಿಯೆಯಲ್ಲಿ ತೊಡಗಿರುವ ಹೊತ್ತಿನಲ್ಲಿ, ರಾಹುಲ್ ಗಾಂಧಿ ಅವರು 'ಭಾರತ್ ಜೋಡೊ' ಯಾತ್ರೆಯಲ್ಲಿ ತೊಡಗಿರುವ ಹೊತ್ತಿನಲ್ಲಿ, ಗುಜರಾತ್‌ನಲ್ಲಿ ಅಧಿಕಾರ ಹಿಡಿಯಲು ಪಕ್ಷವು ಗಂಭೀರ ಪ್ರಯತ್ನ ನಡೆಸಲಿದೆಯೇ ಎಂಬುದೇ ಸ್ಪಷ್ಟವಾಗಿ ಗೊತ್ತಾಗುತ್ತಿಲ್ಲ. ಈಗ ಗುಜರಾತ್‌ನಲ್ಲಿ ಎಎಪಿ ಹೊಸ ಸ್ಪರ್ಧಿಯಾಗಿ ನಿಂತಿದೆ. ಗುಜರಾತಿನ ಚುನಾವಣಾ ಪ್ರಚಾರಗಳಲ್ಲಿ ಬಿಜೆಪಿ ಮತ್ತು ಅದರ ನಾಯಕತ್ವವು ಎಎಪಿ ವಿರುದ್ಧ ವಾಗ್ದಾಳಿ ನಡೆಸುತ್ತಿದೆ. ಅಂದರೆ, ಎಎಪಿ ತಳಮಟ್ಟದಲ್ಲಿ ಒಂದಿಷ್ಟು ಅಲೆಗಳನ್ನು ಸೃಷ್ಟಿಸಿದೆ ಎಂದಾಯಿತು. ಗುಜರಾತ್‌ನಲ್ಲಿ ಬಿಜೆಪಿ ಮೇಲುಗೈ ಹೊಂದಿದೆ ಎಂದು ಸಮೀಕ್ಷೆಗಳು ಹೇಳುತ್ತಿವೆ. ಆದರೆ ಎರಡು ಕಾರಣಗಳಿಗಾಗಿ ಚುನಾವಣಾ ಪ್ರಚಾರವನ್ನು ಸೂಕ್ಷ್ಮವಾಗಿ ಅವಲೋಕಿಸಲಾಗುತ್ತದೆ. ಮೊದಲನೆಯದು, ಎರಡು ದಶಕಗಳಿಂದ ಅಧಿಕಾರದಲ್ಲಿ ಇರುವ ಬಿಜೆಪಿಯನ್ನು ಸೋಲಿಸಲು ಸಾಧ್ಯವಿದೆಯೇ? ಎರಡನೆಯದು, ಅಲ್ಲಿ ಪ್ರಧಾನ ವಿರೋಧ ಪಕ್ಷದ ಸ್ಥಾನದಲ್ಲಿ ಈ ಬಾರಿ ಬೇರೆಯವರು ಬರಲಿದ್ದಾರೆಯೇ ಅಥವಾ ಗುಜರಾತ್‌ನಲ್ಲಿ ಎರಡು ಪಕ್ಷಗಳ ನಡುವಿನ ಸ್ಪರ್ಧೆ ಬದಲಾಗಲಿದೆಯೇ?

ಹಿಮಾಚಲ ಪ್ರದೇಶದಲ್ಲಿ ಆಡಳಿತಾರೂಢ ಪಕ್ಷ ಅಧಿಕಾರ ಕಳೆದುಕೊಳ್ಳುವ ಸಂಪ್ರದಾಯವು ಈ ಬಾರಿ ಪರೀಕ್ಷೆಗೆ ಒಳಗಾಗಲಿದೆ. ಅಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ತಮ್ಮದೇ ಆದ ಆಂತರಿಕ ಸವಾಲುಗಳು ಇವೆ. 2017ರಲ್ಲಿ ಇಲ್ಲಿ ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿಯೇ ಸೋಲು ಕಂಡಿದ್ದರು. ಹೀಗಾಗಿ ಪಕ್ಷವು ಸರ್ಕಾರದ ನೇತೃತ್ವ ವಹಿಸಲು ಹೊಸ ನಾಯಕನನ್ನು ಆಯ್ಕೆ ಮಾಡಿಕೊಳ್ಳಬೇಕಾಯಿತು. ರಾಜ್ಯದ ಮಟ್ಟದಲ್ಲಿ ತಳಮಟ್ಟದಲ್ಲಿ ರಾಜಕೀಯವಾಗಿ ಬಿಗುವಿನ ವಾತಾವರಣ ಮುಂದುವರಿದಿದೆ. ಕಾಂಗ್ರೆಸ್‌ನ ಪ್ರಮುಖ ನಾಯಕರು ಪಕ್ಷ ತೊರೆದಿದ್ದಾರೆ. ವೀರಭದ್ರ ಸಿಂಗ್ ನಿಧನದ ನಂತರದಲ್ಲಿ ಪಕ್ಷದ ನಾಯಕತ್ವದಲ್ಲಿ ಬದಲಾವಣೆ ಆಗಿದೆ. ಪಕ್ಷದ ಕೇಂದ್ರ ನಾಯಕತ್ವದಲ್ಲಿ ಆಗುವ ಬದಲಾವಣೆಗಳು ಕೂಡ ಒಂದಿಷ್ಟು ಪರಿಣಾಮ ಬೀರಲಿವೆ. ಇದು ಸಣ್ಣ ರಾಜ್ಯ ಆಗಿರುವ ಕಾರಣ ಇಲ್ಲಿ ತನಗೊಂದು ರಾಜಕೀಯ ಸ್ಥಾನ ಕಲ್ಪಿಸಿಕೊಳ್ಳುವ ಆಸೆಯನ್ನು ಎಎಪಿ ಹೊಂದಿದೆ. ಹೀಗಾಗಿ ಇಲ್ಲಿ ತುರುಸಿನ ಸ್ಪರ್ಧೆ ಖಂಡಿತ ಇರಲಿದೆ.

ಬಿಜೆಪಿಯು ಗುಜರಾತ್ ಮತ್ತು ಹಿಮಾಚಲ ಪ್ರದೇಶದಲ್ಲಿ ತನ್ನ ರಾಷ್ಟ್ರೀಯ ನಾಯಕತ್ವದ ಮೇಲೆ ಬಹುವಾಗಿ ಅವಲಂಬಿತ ಆಗಿರಲಿದೆ. ಕಾಂಗ್ರೆಸ್ ಪಕ್ಷವು ಇನ್ನಷ್ಟೇ ಒಗ್ಗೂಡಿ ಕೆಲಸ ಆರಂಭಿಸಬೇಕಿದೆ. ಎಎಪಿಯು ಎರಡೂ ರಾಜ್ಯಗಳಲ್ಲಿ ಅಸ್ತಿತ್ವ ಕಂಡುಕೊಳ್ಳಲು ಕೆಲಸ ಮಾಡುತ್ತಿದೆ. ಕುತೂಹಲಕರ ಚುನಾವಣಾ ಅಭಿಯಾನವನ್ನು ನಾವು ಕಾಣಲಿದ್ದೇವೆ. ಗದ್ದಲಕ್ಕಿಂತ ಹೆಚ್ಚು ವಿವೇಕ, ಅರಚುವಿಕೆಗಿಂತ ಹೆಚ್ಚಿನ ಹೊಣೆಗಾರಿಕೆ, ನಿಜವಾದ ವಿಷಯಗಳಿಗೆ ಆದ್ಯತೆ ಸಿಗಲಿದೆ ಎಂದು ಆಶಿಸಬಹುದು.

ಚುರುಮುರಿ



ಪ್ರತಿಭಾ ಸಿದ್ಧಾಂತ

• ಲಿಂಗರಾಜು ಡಿ.ಎಸ್.

'**ಯಾಕೋ** ಬಲೆ ಕಾಲುನೋವು, ಸೊಂಟನೋವು ಕಲಾ. ಏನು ಮಾಡಿದ್ರೂ ಕಮ್ಮಿಯಾಯ್ತಿಲ್ಲ!' ತುರೇಮಣೆ ಕೊರಗಿದರು.

'ಜನಸಂಕಲ್ಪಕ್ಕೋ ಪಾದಯಾತ್ರೆಗೋ ಹೋಗಿ ಪಸಕೆ ಎತ್ತಿಕ್ಯಂದು ಬನ್ನಿ ಸಾ. ನಡಕಂದೋಗದ್ರಿಂದ ಕೊಬ್ಬೆಲ್ಲಾ ಕರಗಿ ಹುಸಾರಾಯ್ತಿರ!' ಅಂತಂದೆ.

'ಪಾದಯಾತ್ರೆಗಳೂ ನಮ್ಮ ರೂಪಾಯಿ ಇದ್ದಂಗೆ. ಅವುಕ್ಕೆ ಈಗ ಬೆಲೇನೇ ಇಲ್ಲ. ಪಾದ ಯಾತ್ರೆಗಳೆಲ್ಲಾ ನಿಶಾನೆ ಹಿಡಕಂದು ದಿಬ್ಬಣ ಹೋದಂಗೆ ಹೋಯ್ತಿರತವೆ. ಜನಕ್ಕೆ ತೊಂದರೆ ಆದ್ರೂ ಡೋಂಟ್ ಕೇರ್. ನಾವು ಅವುಗಳ ಹಿಂದುಗಟ್ಟಿ ಹೋದ್ರೆ ನಮಗೆ ದೂಳೇ ಗತಿ' ಅಂದ ಚಂದ್ರು.

'ಅಲ್ಲ ಕನ್ರೋ, ದೇಸದೇಲಿ ದಿನಕ್ಕೆ 145 ರೂಪಾಯಿಗಿಂತ ಕಡಮೆ ಆದಾಯ ಇರೋರು ಕಡು ಬಡವರು ನೂರಕ್ಕೆ ಹನ್ನೆರಡು ಜನ ಇನ್ನೂ ಅವ್ರಂತೆ! ಶಾಸಕರೆಲ್ಲಾ ಅವರವರ ಕ್ಷೇತ್ರಕ್ಕೋಗಿ ಬಡವರು, ರೈತರು, ನೆರೆ ಸಂತ್ರಸ್ತರ ಕಷ್ಟ ಪರಿಹಾರ ಮಾಡದು ಬುಟ್ಟು ಎಲ್ಲಾರೂ ಪಾದಯಾತ್ರೆ ಮಾಡಿಕ್ಕೆ ಹೊಂಟ್ರೆ ಅಚ್ಛೆ ದಿನ್ ಬಂದದಾ?' ಯಂಟಪ್ಪಣ್ಣ ಗುರುಗುಟ್ಟಿತು.

'ಪಾದಯಾತ್ರೆಗಳು ರಾಜಕಾರಣಿಗಳ ರಾಜಕೀಯ ಆರೋಗ್ಯ ಇಂಪ್ರೂವ್ ಮಾಡ್ತವೆ ಕನಣ್ಣೆ. ಹುಲಿಯಾ, ಡಿಕೆ ರಂಗಾಯ್ತಿರದು ಕಂಡು 'ನಾವೂ ಸಂಕಲ್ಪಯಾತ್ರೆ ಮಾಡೇಮಾಡ್ತೀವಿ' ಅಂತ ಮದಗುಡ್ತಾದೆ ಕಮಲ ಟೀಂ. 'ಕಾಲುನೋವು, ಸೊಂಟನೋವು ಮಡಿಕಂದು ನಾಕೇನಾಕು ಕಿಲೊಮೀಟರ್ ನಡೆಯಕ್ಕಾದದೇನ್ರೀ ನಿಮಗೆ?' ಅಂತ ಹುಲಿಯಾ ಚಾಲೆಂಜ್ ಮಾಡ್ಯದೆ!' ಅಂತಂದೆ.

'ಅದು ಬುಡಿ ಅತ್ತಗೆ. ಈಗ ಮಧ್ಯಪ್ರದೇಶದ ಹೈಕ್ಳಿಗೆ ಹಿಂದಿ ಭಾಷೇಲಿ ಎಂಬಿಬಿಎಸ್ ಓದಕೆ ಅನುಕೂಲ ಮಾಡ್ಯವುರಂತೆ. ಒಳ್ಳೆ ಪ್ರತಿಭೆ ಇದ್ರೆ ಕನ್ನಡದಲ್ಲೂ ಎಂಬಿಬಿಎಸ್ ಮಾಡಬೌದಂತೆ. ಆಗ ಪ್ರತಿಭಾ ಪಲಾಯನ ತಪ್ಪಿ ಪ್ರತಿಭಾ ಪೋಷಣೆ ಆಯ್ತುದಂತೆ!' ಅಂತಂದ ಚಂದ್ರು.

'ಅಲ್ಲಾ ಈ ಪ್ರತಿಭೆ ಅಂದ್ರೆ ಯಾರ್ಲಾ ಆವಮ್ಮ?' ಅಂತು ಯಂಟಪ್ಪಣ್ಣ.

'ಅಣ್ಣೆ, ಅದು ನಮ್ಮ ರಾಜಕಾರಣಿಗಳ ತಾವು ಇಲ್ದೇ ಇರೋ ಕೌಶಲ' ತುರೇಮಣೆ ಕುರ್ತೇಟಾಗಿ ಹೇಳಿದರು.

ಸಂಗತ

ಜಾತಿ ಎಂಬ ಕಾಯಿಲೆಗೆ ಮದ್ದುಂಟು

ಕೈಬೆರಳ ತುದಿಯಲ್ಲಿ ವಿಶ್ವದ ಸಂಪರ್ಕವೇ ಸಾಧ್ಯವಾಗಿರುವ ಈ ಸಂದರ್ಭದಲ್ಲಿಯೂ ಜಾತಿ ಸಂಘರ್ಷಗಳು ಬೇಕೆ?

• ಚನ್ನು ಅ. ಹಿರೇಮಠ

ಪರಿಶಿಷ್ಟ ಸಮುದಾಯದವರ ಮೇಲಿನ ದೌರ್ಜನ್ಯ ಪ್ರಕರಣಗಳು ರಾಜ್ಯದ ವಿವಿಧ ಭಾಗಗಳಿಂದ ಆಗಾಗ್ಗೆ ವರದಿಯಾಗುತ್ತಲೇ ಇವೆ. ಇತ್ತೀಚೆಗೆ ಸರಣಿಯೋಪಾದಿಯಲ್ಲಿ ಇಂತಹ ಕೆಲವು ಪ್ರಕರಣಗಳು ಮಾಧ್ಯಮಗಳಲ್ಲಿ ಸುದ್ದಿಯಾಗಿವೆ. ಇವುಗಳನ್ನು ಓದಿದಾಗ ಮೊದಲು ಮೂಡುವ ಪ್ರಶ್ನೆ– 'ನಾವು ಯಾವ ಕಾಲದಲ್ಲಿ ಇದ್ದೇವೆ?' ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಿದ್ದೇವೆ. ಕೈಬೆರಳ ತುದಿಯಲ್ಲಿ ವಿಶ್ವದ ಸಂಪರ್ಕವೇ ಸಾಧ್ಯವಾಗಿದೆ. ಈ ಕಾಲಘಟ್ಟದಲ್ಲಿಯೂ ಇಂತಹ ಅವಿವೇಕದ ವರ್ತನೆಗಳು ತರವೇ?

ಹೋಟೆಲ್‌ಗಳಲ್ಲಿ ಯಾರೋ ತಿಂದು, ಕುಡಿದು ಹೋದ ತಟ್ಟೆ, ಲೋಟಗಳನ್ನು ಬಳಸುವಾಗ, ವಾಹನಗಳಲ್ಲಿ ಅಕ್ಕಪಕ್ಕ ಕುಳಿತು ಪ್ರಯಾಣಿಸುವಾಗ, ಚಲನಚಿತ್ರ ಮಂದಿರಗಳಲ್ಲಿ ಒಂದೇ ಸಾಲಿನಲ್ಲಿ ಕುಳಿತು ಸಿನಿಮಾ ನೋಡುವಾಗ, ಮಾರುಕಟ್ಟೆಗಳಲ್ಲಿ ಹಣ್ಣು, ತರಕಾರಿ ಖರೀದಿಸುವಾಗ, ದಲಿತರೇ ಸಿದ್ಧಪಡಿಸಿರಬಹುದಾದ ಹೂಮಾಲೆಗಳನ್ನು ನಾವು ನಂಬಿದ ದೇವರಿಗೆ ಶ್ರದ್ಧೆಯಿಂದ ಅರ್ಪಿಸುವಾಗ ನಮ್ಮನ್ನು ಕಾಡದ ಜಾತಿಪ್ರಜ್ಞೆಯು ಒಬ್ಬ ಮುಗ್ಧ ಬಾಲಕ ದೇವರ ಗುಜ್ಜುಕೋಲನ್ನು ಮುಟ್ಟಿದ ಮಾತ್ರಕ್ಕೆ ಅಸಹನೀಯ ಕೋಪವನ್ನು ಹುಟ್ಟಿಸುತ್ತದೆಂದರೆ, ಇದಕ್ಕೆ ಕಾರಣ ಬಹುಶಃ ಜಾತಿಯೊಂದೇ ಆಗಿರಲಾರದು; ಅದಕ್ಕಿಂತ ಹೆಚ್ಚಿನದು ಏನೋ ಇದ್ದಿರಬಹುದು. ಅದನ್ನು ಪತ್ತೆಹಚ್ಚಿ, ಅದಕ್ಕೆ ಮದ್ದು ಹುಡುಕಬೇಕಿರುವುದು ಇವತ್ತಿನ ತುರ್ತು. ಬಹಳಷ್ಟು ಕಡೆ ದೇಗುಲಗಳು, ದೇವರಿಗೆ ಸಂಬಂಧಪಟ್ಟಂತೆ ಗ್ರಾಮದ ಪ್ರಬಲ ಜಾತಿಯವರು ಮತ್ತು ಪರಿಶಿಷ್ಟರ ನಡುವೆ ಸಂಘರ್ಷಗಳು ಉಂಟಾಗುತ್ತಿವೆ.

ಹಲವು ಮಠಾಧೀಶರು ದಲಿತರ ಕೇರಿಯಲ್ಲಿ ಪಾದಯಾತ್ರೆ ಮಾಡಿ, ಪಾದಪೂಜೆ ಮಾಡಿಸಿಕೊಂಡರು, ಭೋಜನ ಮಾಡಿದರು, ರಾಜಕೀಯ ಪಕ್ಷಗಳ ಮುಖಂಡರು ಜಾತಿಸಾಮರಸ್ಯ ಸಾರಲು ಸ್ಪರ್ಧೆಗೆ ಬಿದ್ದವರಂತೆ ದಲಿತರ ಮನೆಗಳಲ್ಲಿ ಊಟ, ಉಪಾಹಾರ ಸೇವಿಸಿದರು. ಇಂತಹ ಏನೆಲ್ಲ ಪ್ರಯೋಗ ಮಾಡಿದರೂ ಪರಿಶಿಷ್ಟರ ಮೇಲಿನ ದೌರ್ಜನ್ಯಗಳ ಸಂಖ್ಯೆ ಕಡಿಮೆಯಾಗಿಲ್ಲ. ಇದುವರೆಗೂ ಎಲ್ಲ ರಾಜಕೀಯ ಪಕ್ಷಗಳೂ ದಲಿತರನ್ನು ಮತಬ್ಯಾಂಕ್ ಆಗಿ ಬಳಸಿಕೊಂಡಿವೆ. ದಲಿತ ಸಮುದಾಯದಲ್ಲಿ ಪ್ರಭಾವಿಗಳಾಗಿರುವವರು, ವಿದ್ಯೆ- ಬುದ್ಧಿ- ಸಂಪತ್ತನ್ನು ಸಮೃದ್ಧವಾಗಿ ಸಂಪಾದಿಸಿರುವವರು ತುಳಿತಕ್ಕೊಳಗಾದ ದಲಿತರನ್ನು ಮೇಲೆತ್ತಲು ಪ್ರಯತ್ನಿಸದಿರುವುದು ಸಹ ಗಮನಾರ್ಹ ಸಂಗತಿ. ಜಾತಿ ತಾರತಮ್ಯವು ಸಮಾಜದ ವಿವಿಧ ಸಮುದಾಯಗಳ ನಡುವಣ ಸಾಮರಸ್ಯವನ್ನು ಹಾಳುಗೆಡವುತ್ತಿರುವುದು ಕಳವಳದ ವಿದ್ಯಮಾನ.

ದೇಗುಲಗಳ ಹುಂಡಿಗಳಿಗೆ ಹಾಕಿದ, ಗುರುಗಳು ಎಂದು ಭಕ್ತಿಯಿಂದ ಸಮರ್ಪಿಸಿದ ಕಾಣಿಕೆಯ ಹಣಕ್ಕೆ ಜಾತಿ ಇಲ್ಲದಿರುವಾಗ, ದೇವರ ವಿವಿಧ ಸಂಕೇತ-ಸಾಧನ ಸಾಮಗ್ರಿಗಳನ್ನು ಮುಟ್ಟಿದರೆ ಅದು ಹೇಗೆ ದೇವರಿಗೆ ಕೋಪ ತರಿಸುತ್ತದೆ? ಕನಕದಾಸರ ಭಕ್ತಿಗೆ ಉಡುಪಿಯ ಶ್ರೀಕೃಷ್ಣ ಒಲಿಯುತ್ತಾನೆ ಎಂದಾದರೆ ಭಕ್ತಿ ಹೆಚ್ಚೋ ಜಾತಿ ಹೆಚ್ಚೋ? ಆಧುನಿಕತೆ ಮೈಗೂಡಿದಂತೆ ಮಣ್ಣಾಗಬೇಕಿದ್ದ ಜಾತೀಯತೆಯು ಇಂದು ಕೆಲವು ಅವಿವೇಕಿಗಳಿಂದ ಇನ್ನೂ ಗಟ್ಟಿಗೊಳ್ಳುತ್ತಿದೆ. ಜಾತಿಯನ್ನು ಅವಲಂಬಿಸಿರುವ ನಮ್ಮ ರಾಜಕಾರಣವು ಪರೋಕ್ಷವಾಗಿ ಅದನ್ನು ಪೋಷಿಸುತ್ತಿರಬಹುದು ಎಂಬ ಗುಮಾನಿಯೂ ಇದೆ.

ಯಾವ ದೇವರೂ ಒಂದು ಜಾತಿಯ ಭಕ್ತನಿಗೊಂದು, ಇನ್ನೊಂದು ಜಾತಿಯ ಭಕ್ತನಿಗೊಂದು ರೀತಿ ಹರಸಿದ ಉದಾಹರಣೆಗಳು ಪುರಾಣಗಳಲ್ಲಿ ಅಥವಾ ಇತಿಹಾಸದಲ್ಲಿ ಇರುವುದನ್ನು ಕಾಣೆ. ಪ್ರಾಕೃತಿಕವಾಗಿ, ಆಧ್ಯಾತ್ಮಿಕವಾಗಿ ತರತಮಭಾವ ಇರದ ನಮ್ಮ ದೇಶದಲ್ಲಿ ಧಾರ್ಮಿಕವಾಗಿ ಮಾತ್ರ ಏಕೆ ಇದೊಂದು ಕಾಯಿಲೆಯ ರೂಪದಲ್ಲಿ ಕಾಡುತ್ತಿದೆ ಎನ್ನುವುದು ಅರ್ಥವಾಗದ ವಿಷಯ. ಕಟ್ಟಡ ಕಾರ್ಮಿಕರಲ್ಲಿ ಪರಿಶಿಷ್ಟ ಸಮುದಾಯಕ್ಕೆ ಸೇರಿದವರ ಸಂಖ್ಯೆ ಗಣನೀಯವಾಗಿದೆ. ಆ ಕಾರ್ಮಿಕರು ನಮ್ಮ ಮನೆಗಳ ಪೂಜಾ ಕೊಠಡಿಗಳನ್ನು, ಮಠ-ಮಂದಿರಗಳನ್ನು ನಿರ್ಮಿಸಿರುತ್ತಾರೆ. ಅದೇ ಪೂಜಾ ಕೊಠಡಿಗಳಲ್ಲಿ, ಮಠ-ಮಂದಿರಗಳಲ್ಲಿ ನಾವು ನಮ್ಮ ದೇವರನ್ನು ನಿತ್ಯವೂ ಆರಾಧಿಸುತ್ತೇವೆ. ಇಂಥವೆಲ್ಲ ಸಂದರ್ಭಗಳನ್ನು ಸಮರ್ಥಿಸಿಕೊಳ್ಳುವ ನಾವು ದೇಗುಲಗಳಲ್ಲಿ ಮಾತ್ರ ದಲಿತರನ್ನು ದೂರವಿಡಲು ಪ್ರಯತ್ನಿಸುವುದೇಕೆ?

ವಿಪರ್ಯಾಸವೆಂದರೆ, ಪರಿಶಿಷ್ಟರಲ್ಲಿ ಅಧಿಕಾರ ಬಲವುಳ್ಳ ಕೆಲವರು ಹಳ್ಳಿಗಳಲ್ಲಿ ಪ್ರಬಲ ಜಾತಿಯವರ ಮನೆಗಳ ಒಳಗೆ ಹೋಗಲು, ದೇವಸ್ಥಾನ ಪ್ರವೇಶಿಸಲು ಹಿಂದೇಟು ಹಾಕುತ್ತಾರೆ. ಅದು ಅವರವರ ಭಕ್ತಿ, ಭಾವಕ್ಕೆ ಸಂಬಂಧಿಸಿದ್ದು ಎಂದು ಅರ್ಥೈಸಿ, ಅನೇಕರು ಸಮರ್ಥನೆ ನೀಡುವುದುಂಟು. ಆದರೆ, ಸಮಾನತೆ ಸಾಧಿಸಲು ಅಧಿಕಾರವನ್ನು ಒಂದು ಅಸ್ತ್ರವಾಗಿ ಬಳಸಲು ಅವರು ಹಿಂದೇಟು ಹಾಕುವುದು ಎಷ್ಟರಮಟ್ಟಿಗೆ ಸರಿ ಎಂಬುದರ ಕುರಿತು ಚರ್ಚೆ ಆಗಬೇಕು. ದೇವಸ್ಥಾನದ ಧಾರ್ಮಿಕ ಕೈಂಕರ್ಯಗಳಲ್ಲಿ ಸೇವೆ ಸಲ್ಲಿಸಬಯಸುವ ಭಕ್ತರನ್ನು ನಿರ್ದಿಷ್ಟ ಜಾತಿಗೆ ಸೇರಿದವರೆಂಬ ಕಾರಣಕ್ಕೆ ತಡೆಯುವುದು ಅಕ್ಷಮ್ಯ.

ಇಂತಹ ದುಷ್ಟ ಪ್ರವೃತ್ತಿಗಳನ್ನು ತಡೆಯಲು ಗಂಭೀರ ಪ್ರಯತ್ನಗಳು ಆಗಬೇಕು. ಸಾಮಾಜಿಕ ಕಾರ್ಯಕರ್ತರು, ಧಾರ್ಮಿಕ ಮುಖಂಡರು, ರಾಜಕೀಯ ಮುಖಂಡರು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಬೇಕು. ಕಾನೂನಿನ ಅಡಿ ಕ್ರಮ ಜರುಗಿಸುವುದರ ಜೊತೆಗೆ ಜಾಗೃತಿ ಮೂಡಿಸುವ ಕೆಲಸ ನಿರಂತರವಾಗಿ ನಡೆಯಬೇಕು. ಜಾತಿಯನ್ನು ಮೀರಿ ಮನುಷ್ಯ ಸಂಬಂಧಗಳನ್ನು ಬೆಸೆಯುವ ದಿಸೆಯಲ್ಲಿ ಪ್ರಯತ್ನಗಳಾಗಬೇಕು.

ವಾಚಕರ ವಾಣಿ

ಉತ್ತರದ ಮರುಳು ದಕ್ಷಿಣಕ್ಕೂ ಬಂತೆ?

'ಕಾವೇರಿ- ಹೇಮಾವತಿ- ಲಕ್ಷ್ಮಣತೀರ್ಥ ನದಿಗಳು ಕೂಡುವ ತ್ರಿವೇಣಿ ಸಂಗಮದಲ್ಲಿ ಪ್ರತೀ 12 ವರ್ಷಗಳಿಗೊಮ್ಮೆ ಸರ್ಕಾರದಿಂದಲೇ ಕುಂಭಮೇಳ ಆಚರಿಸಲು ಶೀಘ್ರ ಆದೇಶ ಹೊರಡಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಘೋಷಿಸಿರುವುದನ್ನು (ಪ್ರ.ಜಾ., ಅ. 17) ತಿಳಿದು, ನಮ್ಮ ಸಂವಿಧಾನದ ಗುರಿಯೇನು, ನಾವು ಸಾಗುತ್ತಿರುವ ಮಾರ್ಗ ಯಾವುದು ಎಂದೆನಿಸಿ ವಿಷಾದವಾಯಿತು. ನಮ್ಮ ಸಂವಿಧಾನ ಗುರುತಿಸಿರುವ ಮೂಲಭೂತ ಕರ್ತವ್ಯಗಳಲ್ಲಿ ಹೇಳಲಾಗಿರುವ: 'ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಅಭಿವೃದ್ಧಿಗೊಳಿಸುವುದು' ಎಂಬ ಸಂದೇಶಕ್ಕೆ ವಿರುದ್ಧವಾಗಿ ಈಗ ಸಾರ್ವಜನಿಕರ ಕೋಟ್ಯಂತರ ರೂಪಾಯಿ ತೆರಿಗೆಯ ಹಣವನ್ನು ಅನಗತ್ಯವಾಗಿ ವ್ಯಯಿಸಿದ್ದಲ್ಲದೆ ಅದನ್ನು ಆದೇಶದ ಮೂಲಕ ಸ್ಥಿರಗೊಳಿಸುವುದು ಎಷ್ಟರಮಟ್ಟಿಗೆ ಸಮರ್ಥನೀಯ? ಇದು ಉತ್ತರದ ಮರುಳನ್ನು ದಕ್ಷಿಣದಲ್ಲಿ ಜಾರಿಗೊಳಿಸಿ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸುವುದಲ್ಲದೆ ಮತ್ತೇನು?

ಸುಮಾರು 400 ವರ್ಷಗಳ ಹಿಂದೆ ಇದ್ದ ಕನ್ನಡದ ಜನಮಾನಸದ ಕವಿ, 'ಸತ್ಯರಾ ನುಡಿ ತೀರ್ಥ, ನಿತ್ಯರಾ ನಡೆ ತೀರ್ಥ, ಉತ್ತಮರ ಸಂಗವದು ತೀರ್ಥ| ಹರಿವ ನೀರೆತ್ತಣದು ತೀರ್ಥ- ಸರ್ವಜ್ಞ' ಎಂದದ್ದು ಕನ್ನಡದ ಪ್ರಜ್ಞೆ ಅಲ್ಲವೆ? ಬಾಕ್ರಾ ನಂಗಲ್ ಅಣೆಕಟ್ಟಿನ ನಿರ್ಮಾಣದ ಆರಂಭದಲ್ಲಿ ನಮ್ಮ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರು 'ಡ್ಯಾಮ್ಸ್ ಆರ್ ದಿ ಟೆಂಪಲ್ಸ್ ಆಫ್ ಮಾಡರ್ನ್ ಇಂಡಿಯಾ' ಎಂದ ಮಾತಿನಲ್ಲಿ ಅಡಗಿರುವ ಕೃಷಿ ಮತ್ತು ಕೈಗಾರಿಕಾಭಿವೃದ್ಧಿಯ ಮುಂಗಾಣ್ಕೆಯನ್ನು ಮೂಲೆಗುಂಪಾಗಿಸಿ, ಜನರ ಭ್ರಮೆಗಳನ್ನು ಪ್ರೋತ್ಸಾಹಿಸುವುದಲ್ಲದೆ ಅದಕ್ಕೆ ಶಾಸನದ ನೆಲೆಗಟ್ಟನ್ನು ಉಂಟು ಮಾಡುವುದು ಯಾವ ರೀತಿಯ ಮುತ್ಸದ್ದಿತನವಾದೀತು?

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಶಿಕ್ಷೆಯೇ ಅಲ್ಲ!

ಡಿ.ಸಿ.ಗಳಿಗೆ ಬೊಮ್ಮಾಯಿ
'ಬಿಸಿ' (ಪ್ರ.ವಾ., ಅ. 18)
ಸುದ್ದಿ ಓದಿ ನಗು ಬಂತು.
ಕೆಲಸ ಮಾಡದ, ಭ್ರಷ್ಟ,
ಅನರ್ಹ ಅಧಿಕಾರಿಗಳಿಗೆ
'ಎತ್ತಂಗಡಿ' ಆದರೆ
ಅದು ಶಿಕ್ಷೆ ಅಲ್ಲ,
ಮೇಯಲು ಹೊಸ ಹುಲ್ಲುಗಾವಲು.
ಸರ್ಕಾರಿ ನಿಯಮಾವಳಿ ಪ್ರಕಾರ
ವರ್ಗಾವಣೆಯು ಶಿಕ್ಷೆ ಅಲ್ಲ.

ಹದಾಲ್ ಸಿದ್ದಯ್ಯ ಚಂದ್ರಶೇಖರ
ಬೆಂಗಳೂರು

ಸಹಾಯವಾಣಿಗೆ ಬೇಕಾಗಿದೆ ಸಹಾಯ

ಅಗತ್ಯ ಸೇವೆ ಹಾಗೂ ತುರ್ತು ಕರೆಗಳಿಗಾಗಿ ರಾಜ್ಯ ಸರ್ಕಾರವು ವಿವಿಧ ಇಲಾಖೆಗಳಿಗೆ ಸಹಾಯವಾಣಿ ವ್ಯವಸ್ಥೆ ರೂಪಿಸಿದ ನಡೆ ಶ್ಲಾಘನೀಯ. ಆದರೆ ಕೆಲ ಇಲಾಖೆಗಳ ಸಹಾಯವಾಣಿಗಳಿಗೆ ಸಾರ್ವಜನಿಕರು ತಮ್ಮ ಸಂಕಷ್ಟ, ಅಭಿಪ್ರಾಯ, ಅಹವಾಲುಗಳನ್ನು ತಿಳಿಸಲು ಕರೆ ಮಾಡಿದಾಗ, ಅವು ನಿಷ್ಕ್ರಿಯಗೊಂಡಿರುವುದು ಕಂಡುಬರುತ್ತಿದೆ. 'ನೀವು ಪ್ರಯತ್ನಿಸುತ್ತಿರುವ ಲೈನ್ ಅಸ್ತಿತ್ವದಲ್ಲಿಲ್ಲ', 'ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ', 'ನೀವು ಡಯಲ್ ಮಾಡಿದ ಸಂಖ್ಯೆಯನ್ನು ದಯವಿಟ್ಟು ಪರಿಶೀಲಿಸಿ'... ಹೀಗೆ ಸಲ್ಲದ ಧ್ವನಿಮುದ್ರಿತ ಹೇಳಿಕೆಗಳು ಕೇಳಿಬರುತ್ತವೆ. ಕೆಲವೊಮ್ಮೆ ರಿಂಗ್ ಆದರೂ ಫೋನ್ ಎತ್ತುವಲ್ಲಿ ಉದಾಸೀನ ಎದ್ದು ಕಾಣುತ್ತಿದೆ. ಇದರಿಂದ ಜನರು ರೋಸಿ ಹೋಗುವಂತಾಗಿದೆ.

ಈ ಸಹಾಯವಾಣಿಗಳು ಅಬ್ಬರದ ಪ್ರಚಾರಕ್ಕಷ್ಟೇ ಸೀಮಿತವಾಗದೆ ನಾಗರಿಕರ ಕಷ್ಟಕ್ಕೆ, ಸಂದಿಗ್ಧತೆಗೆ ಸ್ಪಂದಿಸಲು ಅನುವಾಗುವಂತೆ ಪ್ರತೀ ಇಲಾಖೆಯ ಮುಖ್ಯಸ್ಥರು ನೋಡಿಕೊಳ್ಳಬೇಕು.

ಮಹಾಂತೇಶ ರಾಜಗೋಳಿ, ಬೈಲಹೊಂಗಲ, ಬೆಳಗಾವಿ

ರಸಗೊಬ್ಬರ: ಒಂದರ ಬದಲು ಇನ್ನೊಂದು?

'ಭಾರತ್ ಬ್ರ್ಯಾಂಡ್ ಯೂರಿಯಾ ಬಿಡುಗಡೆ' ಸುದ್ದಿ (ಪ್ರ.ವಾ., ಅ. 18) ಓದಿ, ಕೃಷಿ ವಿದ್ಯಾರ್ಥಿಯಾಗಿ ಕೆಲವು ಅಂಶಗಳ ಬಗ್ಗೆ ಬರೆಯುತ್ತಿದ್ದೇನೆ. ಕೇಂದ್ರ ಸರ್ಕಾರ ರಸಗೊಬ್ಬರಗಳಿಗೆ ನೀಡುತ್ತಿರುವ ಸಬ್ಸಿಡಿಯ ಸಿಂಹಪಾಲು ಯೂರಿಯಾಕ್ಕೆ ಹೋಗುತ್ತಿದೆ. ಇದು ಉತ್ಪಾದಕ ಕಂಪನಿಗಳಿಗೆ ವೆಚ್ಚ ತುಂಬಿಕೊಳ್ಳುವ ರೂಪದಲ್ಲಿ ಪಾವತಿಯಾಗುತ್ತದೆ. ಆಮದು ದರದಲ್ಲಿ ಹೆಚ್ಚಳವಾದಾಗ ಈ ಮೊತ್ತವೂ ಏರುತ್ತದೆ.

ಯೂರಿಯಾ ಗೊಬ್ಬರಗಳಲ್ಲಿ ಶೇ 46ರಷ್ಟು ಸಾರಜನಕ ಪೋಷಕಾಂಶ ಮಾತ್ರ ಇದ್ದು, ಕೇವಲ ಬೆಳೆಯ ದೇಹವೃದ್ಧಿಗೆ (vegetative growth) ಸಹಾಯಕ. ಸಾರಜನಕದ ಇನ್ನೊಂದು ಸ್ರೋತವಿದೆ- ಡಿಎಪಿ ಗೊಬ್ಬರ. ಇದರಲ್ಲಿ ಸಾರಜನಕ ಪ್ರಮಾಣ ಕಡಿಮೆ (ಶೇ 18) ಇದ್ದರೂ, ಫಾಸ್ಫೇಟ್ ಇರುವುದರಿಂದ (46% ಪಿ) ಧಾನ್ಯ ರೂಪುಗೊಳ್ಳಲು ನೆರವಾಗುತ್ತದೆ. ಡಿಎಪಿಗೂ ಸಬ್ಸಿಡಿ ಇದೆ (ಕಿಲೊ ಲೆಕ್ಕದಲ್ಲಿ, ನೋಂದಾಯಿತ ರೈತನಿಗೆ ನೇರವಾಗಿ). ಹತ್ತು, ಮೂವತ್ತೈದು ಕಿಲೊ ಚೀಲಗಳಲ್ಲಿ ಲಭ್ಯ.

ನಾಮ ಮೌಲ್ಯ (ಬ್ರ್ಯಾಂಡ್ ಈಕ್ವಿಟಿ) ರಸಗೊಬ್ಬರಗಳ ಮಟ್ಟಿಗಾದರೂ ಒಂದು ಗ್ರಹಿಕೆ. ಒಳಗಿರುವ ಪೋಷಕಾಂಶ ಎಷ್ಟು ಎನ್ನುವುದೇ ಮುಖ್ಯ. ಕಲಬೆರಕೆ ಇರಬಾರದು, ತೂಕ ಸರಿಯಾಗಿರಬೇಕು, ಪ್ಯಾಕಿಂಗ್ ಗಟ್ಟಿ ಇರಬೇಕು. ರೈತರಿಗೆ ಇವುಗಳನ್ನು ಮನವರಿಕೆ ಮಾಡಿಕೊಡುವುದರ ಬದಲು, ಒಂದು ಬ್ರ್ಯಾಂಡ್ ಬದಲು ಇನ್ನೊಂದು ಏಕಪ್ರಕಾರದ ಹೆಸರನ್ನು ತಂದರೆ ಏನು ಉಪಯೋಗ? (ಸದ್ಯ ಒಂದೇ ಬಣ್ಣದ ಬ್ಯಾಗ್- ಕೇಸರಿ?- ಎಂದು ನಿಗದಿಪಡಿಸಿಲ್ಲ!) ಯೋಜನೆಯಲ್ಲಿ 'ಪಿಎಂ ಜನ್' ಪದಗಳು ಬೇಕಿರಲಿಲ್ಲ. ಒಂದೆಡೆ ಸಾವಯವ ಕೃಷಿ, ಗೊಬ್ಬರಗಳ ಪ್ರಚಾರ ಮಾಡುವುದು, ಇನ್ನೊಂದೆಡೆ ರಸಗೊಬ್ಬರಗಳ ಬ್ರ್ಯಾಂಡ್ ಬಗೆಗೆ ತಲೆಕೆಡಿಸಿಕೊಳ್ಳುವುದು ವಿಚಿತ್ರ ಅನಿಸುತ್ತದೆ. ರೈತರು ಈ ಕ್ರಮವನ್ನು ಕೇಳಿದ್ದರಾ? ರಾಜ್ಯ ಸರ್ಕಾರಗಳು ಇಂತಹ ಸಲಹೆ ನೀಡಿದ್ದವಾ?

'ಒಂದು ದೇಶ, ಒಂದು ರಸಗೊಬ್ಬರ' ಹೇಗಾದೀತು? ಬೇಕೆ? ಯೂರಿಯಾ ಫಾಸ್ಫೇಟ್ ಅಥವಾ ಬೇರೆ ಕಾಂಪ್ಲೆಕ್ಸ್- ರೈತನಿಗೆ ಆಯ್ಕೆಗಳು, ಮಾಹಿತಿ, ಎಟಕುವ ದರದಲ್ಲಿ ಸಕಾಲಿಕ ಲಭ್ಯತೆ ಬೇಕಷ್ಟೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬ್ರಿಟನ್ ಆರ್ಥಿಕ ಬಿಕ್ಕಟ್ಟು
ಎಡವಟ್ಟುಗಳ ಸರಮಾಲೆ

ಪ್ರಜಾವಾಣಿ ವಾರ್ತೆ

ಬ್ರಿಟನ್ ಪ್ರಧಾನಿಯಾದ ಕೆಲವೇ ದಿನಗಳಲ್ಲಿ ಲಿಜ್ ಟ್ರಸ್ ಅವರ ಸಂಪುಟವು ಜಾರಿಗೆ ತಂದಿದ್ದ ಕಿರುಬಜೆಟ್‌ನ ಬಹುತೇಕ ನಿರ್ಧಾರಗಳನ್ನು, ಬ್ರಿಟನ್‌ನ ನೂತನ ಹಣಕಾಸು ಸಚಿವ ಜೆರೆಮಿ ಹಂಟ್ ಅವರು ವಾಪಸ್ ಪಡೆದಿದ್ದಾರೆ. ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಬ್ರಿಟನ್, ಈಚಿನ ದಿನಗಳಲ್ಲಿ ಇಂತಹ ಹಲವು ಆರ್ಥಿಕ ಕ್ರಮಗಳಿಗೆ ಸಾಕ್ಷಿಯಾಗಿದೆ. ಆರ್ಥಿಕ ಬಿಕ್ಕಟ್ಟನ್ನು ನಿಯಂತ್ರಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳು ಪ್ರತಿಕೂಲ ಪರಿಣಾಮ ಬೀರಿವೆ. ಅಂತಹ ಕ್ರಮಗಳನ್ನು ಸರ್ಕಾರ ರದ್ದುಪಡಿಸುತ್ತಿದೆ.

ದೇಶದಲ್ಲಿನ ಆರ್ಥಿಕ ಹಿಂಜರಿತವನ್ನು ನಿಯಂತ್ರಿಸುವ ತುರ್ತು ಉದ್ದೇಶದಿಂದ ಹಿಂದಿನ ಹಣಕಾಸು ಸಚಿವ ಕ್ವಾಸಿ ಕ್ವಾರ್ಟೆಂಗ್ ಭಾರಿ ಪ್ರಮಾಣದ ತೆರಿಗೆ ಕಡಿತವನ್ನು ಘೋಷಿಸಿದ್ದರು. ಆದಾಯ ಮತ್ತು ಕಾರ್ಪೊರೇಟ್ ತೆರಿಗೆಯನ್ನು ಶೇ 45ರಿಂದ ಶೇ 40ಕ್ಕೆ ಕಡಿತ ಮಾಡಲಾಗಿತ್ತು. ಇತರ ತೆರಿಗೆಗಳನ್ನು ಶೇ 20ರಿಂದ ಶೇ 19ಕ್ಕೆ ಇಳಿಸಲಾಗಿತ್ತು. ತೆರಿಗೆ ಇಳಿಕೆಯಾಗುವುದರಿಂದ, ಆ ಹಣ ಜನರ ಬಳಿ ಉಳಿಯುತ್ತದೆ. ಅದನ್ನು ಅವರು ಹೂಡಿಕೆ ಮಾಡಲಿದ್ದಾರೆ. ಇದರಿಂದ ಆರ್ಥಿಕತೆಗೆ ಚಾಲನೆ ದೊರೆಯಲಿದೆ. ತೆರಿಗೆ ದರ ಕಡಿಮೆ ಇದ್ದರೂ, ಒಟ್ಟಾರೆ ತೆರಿಗೆ ಸಂಗ್ರಹ ಏರಿಕೆಯಾಗಲಿದೆ ಎಂದು ಕ್ವಾರ್ಟೆಂಗ್ ಅವರು ಹೇಳಿದ್ದರು. ಆದರೆ, ತೆರಿಗೆ ದರ ಕಡಿತವು ವ್ಯತಿರಿಕ್ತ ಪರಿಣಾಮ ಬೀರಿತು.

ಅಂದಾಜಿನ ಪ್ರಕಾರ, ತೆರಿಗೆ ದರ ಕಡಿತದಿಂದ ಉಳಿಕೆಯಾಗುವ ಶೇ 50ರಷ್ಟು ಹಣ, ದೇಶದ ಶೇ 5ರಷ್ಟು ಶ್ರೀಮಂತರಿಗಷ್ಟೇ ಸೇರುತ್ತಿತ್ತು. ಆ ಹಣ ಹೂಡಿಕೆ ಮಾರುಕಟ್ಟೆಗೆ ಬರಲಿಲ್ಲ. ಆರ್ಥಿಕತೆಯ ಚಾಲಕ ಶಕ್ತಿಗಳಾದ ಮೇಲ್ಮಧ್ಯಮ ಮತ್ತು ಮಧ್ಯಮ ವರ್ಗದ ಜನರಿಗೆ ಇದರಿಂದ ಯಾವುದೇ ಉಪಯೋಗ ಆಗಲಿಲ್ಲ. ಹೀಗಾಗಿ ಈ ನೀತಿಯನ್ನು ವಾಪಸ್ ಪಡೆಯುವ ಅನಿವಾರ್ಯ ಉಂಟಾಯಿತು ಎಂದು ವಿಶ್ಲೇಷಿಸಲಾಗಿದೆ. ನೂತನ ಹಣಕಾಸು ಸಚಿವ ಜೆರೆಮಿ ಹಂಟ್ ಸಹ ಇದೇ ಮಾತು ಹೇಳಿದ್ದಾರೆ.

ಸರ್ಕಾರ ಈ ರೀತಿ ವಾಪಸ್ ಪಡೆದದ್ದು ಇದೊಂದೇ ಕ್ರಮವನ್ನಲ್ಲ. ತೆರಿಗೆ ಕಡಿತದಿಂದ ಆಗಲಿದ್ದ ಆದಾಯ ಖೋತಾವನ್ನು ಸರಿದೂಗಿಸಲು ಮತ್ತು ಸರ್ಕಾರಕ್ಕೆ ಅಗತ್ಯವಿದ್ದ ಹಣವನ್ನು ಹೊಂದಿಸಿಕೊಳ್ಳಲು ಬ್ಯಾಂಕ್ ಆಫ್ ಇಂಗ್ಲೆಂಡ್ ಒಟ್ಟು 2.1 ಲಕ್ಷ ಕೋಟಿ ಪೌಂಡ್ (ಅಂದಾಜು 195 ಲಕ್ಷ ಕೋಟಿ ರೂಪಾಯಿ) ಮೌಲ್ಯದ ಬಾಂಡ್‌ಗಳನ್ನು ಮಾರಾಟ ಮಾಡಿತು. ಇದರಿಂದ ಬಾಂಡ್ ಮಾರುಕಟ್ಟೆ ನೆಲಕಚ್ಚಿತು. ಜನರಲ್ಲಿ ವಿಶ್ವಾಸ ನೆಲಕಚ್ಚಿದ ಕಾರಣ, ಜನರೂ ಖರೀದಿಸಿದ್ದ ಬಾಂಡ್‌ಗಳನ್ನು ಮಾರಾಟ ಮಾಡಲಾರಂಭಿಸಿದರು. ಬಾಂಡ್ ಮಾರುಕಟ್ಟೆಯನ್ನು ಉಳಿಸುವ ಸಲುವಾಗಿ, ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತೆ ಬಾಂಡ್‌ಗಳನ್ನು ಖರೀದಿಸುವುದಾಗಿ ಘೋಷಿಸಿದೆ.

ಬ್ರಿಟನ್‌ನಲ್ಲಿ ಬೇರೆಲ್ಲಾ ಸ್ವರೂಪದ ಸಾಲಗಳಿಗಿಂತ ಅಡಮಾನ ಸಾಲದ್ದೇ ಸಿಂಹಪಾಲು. ಆರ್ಥಿಕ ಬಿಕ್ಕಟ್ಟು, ತೆರಿಗೆ ಕಡಿತ ಮತ್ತು ಬಾಂಡ್ ಮಾರುಕಟ್ಟೆಯ ಕುಸಿತದಿಂದ ಅಡಮಾನ ಸಾಲದ ನಿಯಮಗಳನ್ನು ಕಠಿಣಗೊಳಿಸಲಾಯಿತು. ಹೀಗಾಗಿ ಅಡಮಾನ ಸಾಲಕ್ಕೆ ಅರ್ಹರಾದ ಜನರಲ್ಲಿ ಶೇ 50ರಷ್ಟು ಕುಸಿತವಾಗಿದೆ. ಇದರಿಂದ ಬ್ರಿಟನ್‌ನ ರಿಯಲ್ ಎಸ್ಟೇಟ್ ಉದ್ಯಮವೂ ಕುಸಿದು ಬಿದ್ದಿದೆ. ಈ ನಿಯಮಗಳನ್ನು ಮತ್ತೆ ಸಡಿಲಗೊಳಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಹೀಗೆ ತನ್ನ ಹಲವು ಕ್ರಮಗಳನ್ನು ಬ್ರಿಟನ್ ವಾಪಸ್ ಪಡೆಯುತ್ತಿದೆ.

ಕನ್ಸರ್ವೇಟಿವ್ ಪಕ್ಷದ ಸರ್ಕಾರದ ನೀತಿಗಳ ವಿರುದ್ಧ ಜನರ ಪ್ರತಿಭಟನೆ

21.7% ಬ್ರಿಟನ್ ಆರ್ಥಿಕತೆಯಲ್ಲಿ ಭಾಗಿಯಾಗದೇ ಇರುವ ಕಾರ್ಮಿಕರ ಪ್ರಮಾಣ

12.46 ಲಕ್ಷ ಬ್ರಿಟನ್‌ನ ಸೇವಾ ಮತ್ತು ಕೈಗಾರಿಕಾ ವಲಯದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ

ಅಸ್ಥಿರವಾದ ಆರ್ಥಿಕತೆ

ಬ್ರಿಟನ್‌ನ ಇಂದಿನ ಆರ್ಥಿಕ ಬಿಕ್ಕಟ್ಟಿಗೆ ಕೋವಿಡ್ ಕಾರಣ ಎಂದು ಹೇಳಲಾಗುತ್ತಿದೆ. ಆದರೆ, ನಿಜಕ್ಕೂ ಕೋವಿಡ್‌ನಿಂದ ಆಗಿರುವ ನಷ್ಟ ದೊಡ್ಡದಲ್ಲ. ಕೋವಿಡ್ ಮಾಡಿದ್ದಕ್ಕಿಂತ ಎರಡುಪಟ್ಟು ಹೆಚ್ಚು ನಷ್ಟವನ್ನು ಬ್ರೆಕ್ಸಿಟ್ ಮಾಡಿದೆ. ಐರೋಪ್ಯ ಒಕ್ಕೂಟದಿಂದ ಬ್ರಿಟನ್ ಹೊರ ಬಂದಿದ್ದು ಮತ್ತು ಆನಂತರ ಮಾಡಿಕೊಂಡ ಹೊಸ ಆರ್ಥಿಕ ಒಪ್ಪಂದಗಳೇ ದೇಶವನ್ನು ಇಂದಿನ ಆರ್ಥಿಕ ಬಿಕ್ಕಟ್ಟಿಗೆ ದೂಡಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಬ್ರೆಕ್ಸಿಟ್‌ಗಿಂತಲೂ ಮೊದಲು ಬ್ರಿಟನ್‌ನ ಒಂದು ಪೌಂಡ್, ಅಮೆರಿಕದ 1.8 ಡಾಲರ್‌ಗೆ ಸಮವಾಗಿತ್ತು. ಬ್ರೆಕ್ಸಿಟ್ ಅನುಷ್ಠಾನಕ್ಕೆ ಬರುತ್ತಲೇ ಪೌಂಡ್‌ನ ಮೌಲ್ಯ 1.5 ಡಾಲರ್‌ಗೆ ಕುಸಿಯಿತು. ನಂತರದ ದಿನಗಳಲ್ಲಿ ಮತ್ತಷ್ಟು ಕುಸಿದು, ಒಂದು ಪೌಂಡ್ 1.3 ಡಾಲರ್‌ಗೆ ವಿನಿಮಯವಾಯಿತು. ಈಗ ಪೌಂಡ್‌ನ ಮೌಲ್ಯ ಮತ್ತಷ್ಟು ನೆಲಕಚ್ಚಿದ್ದು, 1.03 ಡಾಲರ್‌ಗೆ ಇಳಿಕೆಯಾಗಿದೆ. ಇದು ಪೌಂಡ್‌ನ ಈವರೆಗಿನ ಅತ್ಯಂತ ಕನಿಷ್ಠ ಮೌಲ್ಯವಾಗಿದೆ. ಈ ಕುಸಿತವೇ ಬ್ರಿಟನ್ ಅನ್ನು ಆರ್ಥಿಕ ಮುಗ್ಗಟ್ಟಿಗೆ ದೂಡಿದೆ ಎನ್ನಲಾಗಿದೆ.

ಇಂಧನ, ಆಹಾರ, ಔಷಧಗಳು ಮತ್ತು ಅತ್ಯಗತ್ಯ ವಸ್ತುಗಳಿಗಾಗಿ ಬ್ರಿಟನ್ ಆಮದನ್ನೇ ಅವಲಂಬಿಸಿದೆ. ಪೌಂಡ್ ಮೌಲ್ಯದಲ್ಲಿ ಕುಸಿತ ಆಗಿದ್ದರಿಂದ, ಈ ಅತ್ಯಗತ್ಯ ವಸ್ತುಗಳ ಆಮದಿಗೆ ಮೊದಲಿಗಿಂತಲೂ ಹೆಚ್ಚು ಹಣ ತೆರುವ ಅನಿವಾರ್ಯಕ್ಕೆ ಬ್ರಿಟನ್ ಸಿಲುಕಿತು. ಜನರು ಹೆಚ್ಚು ವೆಚ್ಚ ಮಾಡಬೇಕಾಯಿತು ಮತ್ತು ಜತೆಗೆ ಬ್ರಿಟನ್‌ನ ವಿದೇಶಿ ವಿನಿಮಯ ಮೀಸಲು ಸಹ ಕರಗಿತು.

ಬ್ರೆಕ್ಸಿಟ್‌ಗಿಂತಲೂ ಮೊದಲು ಐರೋಪ್ಯ ದೇಶಗಳ ಜತೆಗಿನ ವ್ಯಾಪಾರದಲ್ಲಿ ಯೂರೊ ಬಳಕೆಯಾಗುತ್ತಿತ್ತು. ಬ್ರೆಕ್ಸಿಟ್ ನಂತರ ಆ ವ್ಯಾಪಾರವನ್ನೂ ಡಾಲರ್ ರೂಪದಲ್ಲೇ ನಡೆಸಬೇಕಾದ ಅನಿವಾರ್ಯ ದೇಶದ ಆಮದು ಮೌಲ್ಯವನ್ನು ಹೆಚ್ಚಿಸಿತು. ಅಲ್ಪಾವಧಿಯಲ್ಲೇ ಇದು ದೇಶದ ಸಂಪತ್ತನ್ನು ಕರಗಿಸಿತು.

ಬ್ರೆಕ್ಸಿಟ್‌ನಿಂದ ತಲೆದೋರಿದ್ದು ಇದೊಂದೇ ಬಿಕ್ಕಟ್ಟಲ್ಲ. ಬ್ರಿಟನ್ ಐರೋಪ್ಯ ಒಕ್ಕೂಟದಲ್ಲಿ ಇದ್ದಾಗ, ಒಕ್ಕೂಟದ ಎಲ್ಲಾ ದೇಶಗಳೊಂದಿಗೆ ಕಾರ್ಮಿಕರ ವಲಸೆ ಮತ್ತು ಆರ್ಥಿಕ ಒಪ್ಪಂದಗಳು ಅತ್ಯಂತ ಸರಳ ವ್ಯವಹಾರಗಳಾಗಿದ್ದವು. ಬ್ರೆಕ್ಸಿಟ್ ನಂತರ, ಬ್ರಿಟನ್‌ಗೆ ಅಗತ್ಯವಿರುವ ಕಾರ್ಮಿಕರು ಐರೋಪ್ಯ ಒಕ್ಕೂಟದ ದೇಶಗಳಿಂದ ಪೂರೈಕೆಯಾಗುತ್ತಿಲ್ಲ. ಇದರಿಂದ ದೇಶದ ಕೃಷಿ, ಹೈನುಗಾರಿಕೆ ಮತ್ತು ಹೋಟೆಲ್ ಉದ್ಯಮಗಳು ಕಾರ್ಮಿಕರ ಬಿಕ್ಕಟ್ಟು ಎದುರಿಸುತ್ತಿವೆ. ಈ ಕ್ಷೇತ್ರಗಳಿಗೆ ಅಗತ್ಯವಿರುವ ಕೌಶಲ ಹೊಂದಿರುವ ಕಾರ್ಮಿಕರು ಬ್ರಿಟನ್‌ನಲ್ಲಿ ಇಲ್ಲ. ಹೀಗಾಗಿ ಅಗತ್ಯವಿರುವ ಕಾರ್ಮಿಕರು ದೊರೆಯುತ್ತಿಲ್ಲ. ಇನ್ನೊಂದೆಡೆ ಬ್ರಿಟನ್‌ನಲ್ಲಿರುವ ಕಾರ್ಮಿಕರಿಗೆ ಐರೋಪ್ಯ ಒಕ್ಕೂಟದ ದೇಶಗಳಲ್ಲಿ ಕೆಲಸ ಸಿಕ್ಕಿಲ್ಲ. ಬ್ರಿಟನ್‌ನ 'ನ್ಯಾಷನಲ್ ಸ್ಟಾಟಿಸ್ಟಿಕ್ಸ್ ಆಫೀಸ್'ನ ವರದಿಯ ಪ್ರಕಾರ ದೇಶದ ಶೇ 21ರಷ್ಟು ಕಾರ್ಮಿಕ ಬಲಕ್ಕೆ 12 ತಿಂಗಳಿಂದ ಯಾವುದೇ ಕೆಲಸವಿಲ್ಲ. ದೇಶದ ಸೇವಾ ಮತ್ತು ಕೈಗಾರಿಕಾ ವಲಯದಲ್ಲಿ 12.46 ಲಕ್ಷದಷ್ಟು ಹುದ್ದೆಗಳು ತೆರವಾಗಿವೆ. ಇರುವ ಕಾರ್ಮಿಕರಿಗೆ ಉದ್ಯೋಗವಿಲ್ಲ, ಉದ್ಯಮಕ್ಕೆ ಬೇಕಾದ ಕೌಶಲ ಇರುವ ಕಾರ್ಮಿಕರು ಲಭ್ಯವಿಲ್ಲ. ಇಂತಹ ವಿಚಿತ್ರ ಸಂಕಷ್ಟದಲ್ಲಿ ಬ್ರಿಟನ್ ಸಿಲುಕಿದೆ. ಬ್ರಿಟನ್‌ನ ಆರ್ಥಿಕತೆಯು ಕುಂಟಲು ಈ ಎರಡೂ ಅಂಶಗಳು ಬಹುದೊಡ್ಡ ಕಾರಣಗಳಾಗಿವೆ ಎಂದು ವಿಶ್ಲೇಷಿಸಲಾಗಿದೆ.

ಬ್ರಿಟನ್‌ನ ಆರ್ಥಿಕ ಬಿಕ್ಕಟ್ಟಿಗೆ ಕೋವಿಡ್ ಸಾಂಕ್ರಾಮಿಕದ ಕೊಡುಗೆಯೂ ಇದೆ. ಲಾಕ್‌ಡೌನ್ ಕಾರಣದಿಂದ ದೇಶದ ಆರ್ಥಿಕತೆಯು ಹಲವು ತಿಂಗಳು ಸ್ಥಗಿತವಾಗಿತ್ತು. ಅಲ್ಲದೆ, ರೋಗ ನಿಯಂತ್ರಣ ಮತ್ತು ಚಿಕಿತ್ಸೆಗೆ ದೊಡ್ಡ ಮೊತ್ತವನ್ನು ವೆಚ್ಚ ಮಾಡಬೇಕಾಯಿತು. ಬ್ರೆಕ್ಸಿಟ್‌ನಿಂದ ಉಂಟಾಗಿದ್ದ ಆರ್ಥಿಕ ಬಿಕ್ಕಟ್ಟನ್ನು ಕೋವಿಡ್ ಲಾಕ್‌ಡೌನ್ ಮತ್ತಷ್ಟು ತೀವ್ರಗೊಳಿಸಿತು. ಈ ಎಲ್ಲಾ ಸನ್ನಿವೇಶಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ಇದ್ದ ಕಾರಣ, ಬಿಕ್ಕಟ್ಟು ಮತ್ತಷ್ಟು ಹೆಚ್ಚಾಗಿದೆ ಎಂದು ವಿಶ್ಲೇಷಿಸಲಾಗಿದೆ.

ರಾಜಕೀಯ ಪಲ್ಲಟದ ಹಿಂದೆ ಬ್ರೆಕ್ಸಿಟ್

ಬ್ರಿಟನ್ ಹಾಗೂ ರಾಜಕೀಯ ಬಿಕ್ಕಟ್ಟು ಒಂದೇ ನಾಣ್ಯದ ಎರಡು ಮುಖಗಳು ಎಂಬುದು ಇತ್ತೀಚಿನ ವರ್ಷಗಳ ವಿದ್ಯಮಾನಗಳನ್ನು ಗಮನಿಸಿದರೆ ತಿಳಿಯುತ್ತದೆ. ರಾಜಕೀಯ ನಾಯಕತ್ವದಲ್ಲಿ ಬದಲಾವಣೆ ಹೊಸ ವಿದ್ಯಮಾನ ಎಂದು ಬ್ರಿಟನ್ ಜನರಿಗೆ ಈಗ ಅನ್ನಿಸುತ್ತಿಲ್ಲ. ಬ್ರಿಟನ್ 2015ರಿಂದ ಇಲ್ಲಿಯವರೆಗೆ ನಾಲ್ವರು ಪ್ರಧಾನಿಗಳನ್ನು ಕಂಡಿದೆ. ಈಗಿನ ಪ್ರಧಾನಿ ಲಿಜ್ ಟ್ರಸ್ ಅವರ ಕುರ್ಚಿಯೂ ಅಲುಗಾಡುತ್ತಿದೆ. ಅವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ 40 ದಿನಗಳಲ್ಲೇ ಹುದ್ದೆಯಿಂದ ಕೆಳಗಿಳಿಯುವ ಪರಿಸ್ಥಿತಿ ಬಂದೊದಗಿದೆ.

ಬ್ರಿಟನ್ ಈಗ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟು ಹಾಗೂ ಅದರ ಜೊತೆಜೊತೆಗೆ ಉಂಟಾಗಿರುವ ರಾಜಕೀಯ ಪಲ್ಲಟ ದಿಢೀರ್ ಕಾಣಿಸಿಕೊಂಡಿದ್ದಲ್ಲ. ಐರೋಪ್ಯ ಒಕ್ಕೂಟದಿಂದ ಬ್ರಿಟನ್ ಹೊರಬರುವ ಕೂಗು 2015ರಲ್ಲಿ ಬಲ ಪಡೆಯಿತು. ಇದನ್ನು 'ಬ್ರೆಕ್ಸಿಟ್ ಯೋಜನೆ' ಎಂದು ಕರೆಯಲಾಯಿತು. ಬ್ರೆಕ್ಸಿಟ್ ಬೇಕೇ, ಬೇಡವೇ ಎಂದು ನಿರ್ಧರಿಸಲು ಜನಮತಗಣನೆಯ ಮೊರೆ ಹೋಗಲಾಯಿತು. ನೈಜ ರಾಜಕೀಯ ಬಿಕ್ಕಟ್ಟು ಶುರುವಾಗಿದ್ದು ಇಲ್ಲಿಂದ.

ಲೇಬರ್ ಪಕ್ಷ ಹಾಗೂ ಕನ್ಸರ್ವೇಟಿವ್ ಪಕ್ಷಗಳ ಮುಖಂಡರಲ್ಲೇ ಬ್ರೆಕ್ಸಿಟ್ ಬಗ್ಗೆ ಪರ–ವಿರೋಧ ಅಭಿಪ್ರಾಯಗಳಿದ್ದವು. ಪ್ರಧಾನಿಯಾಗಿದ್ದ ಡೇವಿಡ್ ಕ್ಯಾಮರೂನ್ ಅವರು 2016ರಲ್ಲಿ ಜನಮತಗಣನೆಗೆ ಆದೇಶಿಸಿದ್ದರು. ಬ್ರೆಕ್ಸಿಟ್ ಪರವಾಗಿ ಶೇ 52ರಷ್ಟು ಮತ ಚಲಾವಣೆಯಾಗಿದ್ದರಿಂದ ಕ್ಯಾಮರೂನ್ ಹೋರಾಟಕ್ಕೆ ಸೋಲಾಗಿತ್ತು. ಹೀಗಾಗಿ ಅವರು ಪ್ರಧಾನಿ ಹುದ್ದೆಯಿಂದ ಕೆಳಗೆ ಇಳಿದಿದ್ದರು. ಇದು ಬ್ರೆಕ್ಸಿಟ್ ನೀಡಿದ್ದ ಮೊದಲ ರಾಜಕೀಯ ಹೊಡೆತ ಎಂದು ವಿಶ್ಲೇಷಿಸಲಾಗಿದೆ.

ತೆರೆಸಾ ಮೇ ಅವರು ಪ್ರಧಾನಿ ಹುದ್ದೆ ವಹಿಸಿಕೊಂಡ ಬಳಿಕ ಬ್ರೆಕ್ಸಿಟ್ ಕೆಲಸಗಳು ಶುರುವಾದವು. ಆದರೆ, ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ವಿಳಂಬ ಮಾಡಿದರು ಎಂಬ ಆರೋಪ ಮೇ ಮೇಲಿತ್ತು. ಐರೋಪ್ಯ ಒಕ್ಕೂಟದ ಜೊತೆ ಒಡಂಬಡಿಕೆ ಮಾಡಿಕೊಳ್ಳುವಲ್ಲಿ ಹಾಗೂ ಸೂಕ್ತವಾದ 'ಬ್ರೆಕ್ಸಿಟ್ ನೀತಿ' ರೂಪಿಸುವಲ್ಲಿ ಮೇ ಅವರು ಎಡವಿದ್ದಾರೆ ಎಂಬ ಆರೋಪಗಳೂ ಹೇಳಿಬಂದವು. ಹೀಗಾಗಿ ಅವರು ಪ್ರಧಾನಿ ಹುದ್ದೆ ತ್ಯಜಿಸಿದರು.

ಲಿಜ್ ಟ್ರಸ್

ಬ್ರೆಕ್ಸಿಟ್ ಪರವಾಗಿ ಅತೀವ ಒಲವು ಹೊಂದಿದ್ದ ಬೋರಿಸ್ ಜಾನ್ಸನ್ ಅವರು ಮೇ ಅವರ ಜಾಗಕ್ಕೆ ಬಂದರು. ಬ್ರೆಕ್ಸಿಟ್ ಗೆದ್ದ ಉತ್ಸಾಹದಲ್ಲಿದ್ದ ಅವರಿಗೆ ಬ್ರಿಟನ್‌ಗೆ ಪ್ರತ್ಯೇಕ ಅರ್ಥವ್ಯವಸ್ಥೆಯನ್ನು ರೂಪಿಸುವ ಸವಾಲು ಎದುರಿತ್ತು. ಅವರಿಗೆ ಇನ್ನಷ್ಟು ಹೊಡೆತ ನೀಡಿದ್ದು, 2019ರಲ್ಲಿ ದಾಳಿಯಿಟ್ಟ ಕೋವಿಡ್. ಜಾನ್ಸನ್ ಸಂಪುಟದಲ್ಲಿ ಹಣಕಾಸು ಸಚಿವರಾಗಿದ್ದ, ಭಾರತ ಮೂಲದ ರಿಷಿ ಸುನಕ್ ಅವರ ಮೇಲೆ, ಕೋವಿಡ್‌ನಿಂದ ಉಂಟಾಗಿದ್ದ ಸಾಮೂಹಿಕ ನಿರುದ್ಯೋಗ ತಡೆಯುವ ದೊಡ್ಡ ಸವಾಲು ಇತ್ತು. ಹೀಗಾಗಿ ದುಬಾರಿ ವೆಚ್ಚದ ಕೋವಿಡ್ ಪರಿಹಾರ ಪ್ಯಾಕೇಜ್ ಘೋಷಿಸಿದ್ದರು. ಇದಕ್ಕೆ ಜನರಿಂದ ಅವರು ಪ್ರಶಂಸೆಗೆ ಒಳಗಾಗಿದ್ದರು. ಆದರೆ ಸರ್ಕಾರದ ಬೊಕ್ಕಸಕ್ಕೆ ಇದು ಹೊರೆಯಾಗಿತ್ತು ಎನ್ನಲಾಗಿದೆ.

ರಿಷಿ ಸುನಕ್

ಕೋವಿಡ್ ನಿಯಮಾವಳಿ ಉಲ್ಲಂಘಿಸಿ ಜಾನ್ಸನ್ ಅವರು ಔತಣಕೂಟ ನಡೆಸಿದ್ದರು ಎಂಬ ಆರೋಪವು ಅವರ ಹೆಗಲೇರಿತು. ಈ ಸಭೆಯಲ್ಲಿ ಸುನಕ್ ಕೂಡಾ ಇದ್ದರು. ಈ ವೇಳೆಗಾಗಲೇ ಹಣದುಬ್ಬರವು ಎರಡಂಕಿಯ ಸನಿಹ ಬಂದಿತ್ತು. ಆರ್ಥಿಕ ಹಿಂಜರಿತದ ಮುನ್ಸೂಚನೆಯೂ ಸಿಕ್ಕಿತ್ತು. ಯುರೋ ಕರೆನ್ಸಿ 20 ವರ್ಷಗಳಷ್ಟು ದಾಖಲೆಯ ಕುಸಿತ ದಾಖಲಿಸಿತ್ತು. ಅಮೆರಿಕದ ಡಾಲರ್ ಎದುರು ಬ್ರಿಟನ್‌ನ ಪೌಂಡ್ ಮೌಲ್ಯ ಇಳಿದಿತ್ತು. ಈ ಎಲ್ಲ ವಿದ್ಯಮಾನಗಳು ಬ್ರಿಟನ್ ಆರ್ಥಿಕತೆ ಕುಸಿಯುತ್ತಿರುವ ಸುಳಿವು ನೀಡಿದ್ದವು. ಮತ್ತೊಂದು ಸುತ್ತಿನ ರಾಜಕೀಯ ಪಲ್ಲಟಕ್ಕೆ ಬ್ರಿಟನ್ ಸಾಕ್ಷಿಯಾಯಿತು. ರಿಷಿ ಸುನಕ್ ಜುಲೈ 5ರಂದು ಹಣಕಾಸು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಡೇವಿಡ್ ಕ್ಯಾಮರೂನ್

ತೆರೆಸಾ ಮೇ

ಬೋರಿಸ್ ಜಾನ್ಸನ್

ಅವರ ಬೆನ್ನ ಹಿಂದೆಯೇ ಜಾನ್ಸನ್ ಅವರು ಹುದ್ದೆ ತ್ಯಜಿಸುವ ನಿರ್ಧಾರ ಪ್ರಕಟಿಸಿದರು.

ಹೊಸ ಪ್ರಧಾನಿ ಆಯ್ಕೆ ಕಸರತ್ತು ಆರಂಭವಾಯಿತು. ಪ್ರಧಾನಿ ಹುದ್ದೆಯ ಸ್ಪರ್ಧೆಯ ಅಂತಿಮ ಹಂತಕ್ಕೆ ಸುನಕ್ ಹಾಗೂ ಈಗಿನ ಪ್ರಧಾನಿ ಲಿಜ್ ಟ್ರಸ್ ಬಂದಿದ್ದರು. ಕೊನೆಗೆ ಟ್ರಸ್ ಆಯ್ಕೆಯಾದರು. ಕೋವಿಡ್ ಬಳಿಕ ಕುಸಿದಿದ್ದ ದೇಶದ ಆರ್ಥಿಕತೆಗೆ ಪುನಶ್ಚೇತನ ನೀಡುವ ವಾಗ್ದಾನ ನೀಡಿದ್ದ ಟ್ರಸ್ ಅವರು ಕ್ವಾಸಿ ಕ್ವಾರ್ಟೆಂಗ್ ಅವರಿಗೆ ಹಣಕಾಸು ಖಾತೆ ನೀಡಿದರು. ಟ್ರಸ್ ಸರ್ಕಾರದ ಕಿರು ಬಜೆಟ್‌ನಲ್ಲಿ ತೆರಿಗೆ ಕಡಿತದಂತಹ ಆರ್ಥಿಕ ನೀತಿ ಪ್ರಕಟಿಸಿದರು. ಸರ್ಕಾರದ ಈ ನೀತಿ ವ್ಯಾಪಕ ಟೀಕೆಗೆ ಕಾರಣವಾಯಿತು. ಇದಕ್ಕಾಗಿ ದೇಶದ ಜನರ ಕ್ಷಮೆ ಕೇಳಿದ ಟ್ರಸ್, ಹಣಕಾಸು ಸಚಿವರನ್ನು ವಜಾ ಮಾಡಿ, ಅವರ ಜಾಗಕ್ಕೆ ಜೆರೆಮಿ ಹಂಟ್ ಅವರನ್ನು ನೇಮಿಸಿದರು. ಹಂಟ್ ಅವರು ಕ್ವಾರ್ಟೆಂಗ್ ಪ್ರಕಟಿಸಿದ್ದ ಎಲ್ಲ ಆರ್ಥಿಕ ನೀತಿಗಳನ್ನು ವಾಪಸ್ ಪಡೆಯುವ ನಿರ್ಧಾರ ಪ್ರಕಟಿಸಿದರು. ಟ್ರಸ್ ಅವರ ಸರ್ಕಾರವು ಕಡಿಮೆ ಅವಧಿಯಲ್ಲಿ ಎರಡು ನೀತಿಗಳನ್ನು ಪ್ರಕಟಿಸಿ ಚರ್ಚೆ ಹುಟ್ಟುಹಾಕಿತು. ಇದು ಸರ್ಕಾರದ ಆರ್ಥಿಕ ಅರಾಜಕತೆಯನ್ನು ಬಿಂಬಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ. ತಮ್ಮ ಗೊಂದಲದ ಆರ್ಥಿಕ ನೀತಿಗಳಿಂದಾಗಿ ಟ್ರಸ್ ಅವರ ಮೇಲೆ ತೂಗುಗತ್ತಿ ನೇತಾಡುತ್ತಿದೆ. ಒಂದು ವೇಳೆ ಅವರು ರಾಜೀನಾಮೆ ನೀಡಿದರೆ, ಬ್ರಿಟನ್‌ನಲ್ಲಿ ಮತ್ತೆ ರಾಜಕೀಯ ಅಸ್ಥಿರತೆ ಏರ್ಪಡುವ ಸಾಧ್ಯತೆ ದಟ್ಟವಾಗಿದೆ.

ಆಧಾರ: ಬಿಬಿಸಿ ಮತ್ತು ಗಾರ್ಡಿಯನ್ ವರದಿಗಳು, ಬ್ರಿಟನ್‌ನ 'ನ್ಯಾಷನಲ್ ಸ್ಟಾಟಿಸ್ಟಿಕ್ಸ್ ಆಫೀಸ್'ನ ಮಾಸಿಕ ವರದಿಗಳು

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಸರಿಯಾಗಿ ಕೆಲಸ ಮಾಡದ ಜಿಲ್ಲಾಧಿಕಾರಿಗಳನ್ನು ಎತ್ತಂಗಡಿ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿರುವುದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 253

ಗೌರೀ ಕಲ್ಯಾಣಕ್ಕೆ ಒಪ್ಪಿದ ಹಿಮವಂತ

ವಸಿಷ್ಠ ಹೇಳಿದ ಮಾತನ್ನು ಹಿಮವಂತ ತನ್ನ ಪತ್ನಿ ಮತ್ತು ಪರಿವಾರದೊಡನೆ ಚರ್ಚಿಸುತ್ತಾನೆ. ಸುಮೇರು ಮೊದಲಾದ ಪರ್ವತಗಳು ತಮ್ಮಲ್ಲಿಯೇ ವಿಮರ್ಶೆಮಾಡಿ ಹೇಳಿದವು, 'ಎಲೈ ಹಿಮವಂತನೆ, ಇಲ್ಲಿ ವಿಮರ್ಶೆಯೇ ಬೇಕಾಗಿಲ್ಲ. ವಸಿಷ್ಠನು ಹೇಳಿದಂತೆಯೇ ಮಾಡಬೇಕು. ಪಾರ್ವತಿಯು ದೇವಕಾರ್ಯಕ್ಕಾಗಿಯೇ ನಿಮ್ಮಲ್ಲಿ ಜನಿಸಿರುವಳು. ಗಿರಿಜೆಯು ಶಿವನಿಗಾಗಿಯೇ ಅವತರಿಸಿರುವಳು. ಅವನೇ ಪತಿಯಾಗಬೇಕೆಂದು ಅನನ್ಯಭಕ್ತಿಯಿಂದ ಆರಾಧಿಸಿರುವಳು. ಶಿವನೂ ಅದರಂತೆ ವರವನ್ನು ಕೊಟ್ಟಿರುವನು. ಅಂದಮೇಲೆ ಶಿವನಿಗೇ ಪಾರ್ವತಿಯನ್ನು ಕೊಡಬೇಕು' ಎಂದರು.

ಈ ಮಾತುಗಳನ್ನು ಕೇಳಿ ಹಿಮವಂತ ಸಂತುಷ್ಟನಾದ. ಗಿರಿಜೆ ಹರ್ಷಗೊಂಡಳು. ಇದರ ಮಧ್ಯೆ ವಸಿಷ್ಠನ ಪತ್ನಿ ಅರುಂಧತಿ ಸಹ ಯುಕ್ತಿಯುಕ್ತವಾದ ಮಾತುಗಳನ್ನೂ ಹೇಳಿ ಮೇನಾದೇವಿಯನ್ನೂ ಮನವೊಲಿಸಿದಳು. ಮೇನಾದೇವಿಯೂ ಶಿವಪಾರ್ವತಿಯ ವಿವಾಹಕ್ಕೆ ಸಮ್ಮತಿಸಿದಳು. ನಂತರ ಸಂತೋಷದಿಂದ ಸಪ್ತಮುನಿಗಳಿಗೂ ಮತ್ತು ಅರುಂಧತಿಗೂ ಔತಣ ಮಾಡಿಸಿದಳು. ಹಿಮವಂತ, 'ಓ ಸಪ್ತಮುನಿಗಳೇ, ನನ್ನ ಮಾತನ್ನು ಕೇಳಿರಿ. ಈಗ ನನ್ನ ಭ್ರಾಂತಿಯೆಲ್ಲವೂ ಹೋಯಿತು. ಶಿವಪಾರ್ವತಿಯರ ಪೂರ್ವಚರಿತೆಯು ನಿಮ್ಮಿಂದ ತಿಳಿಯಿತು. ನನ್ನ ಶರೀರ, ನನ್ನ ಹೆಂಡತಿ ಮೇನಾದೇವಿ, ಮಕ್ಕಳಾದ ಪಾರ್ವತಿ, ಋದ್ಧಿ, ಸಿದ್ಧಿ ಎಲ್ಲ ಪರಮೇಶ್ವರನ ಅನುಗ್ರಹದಿಂದಲೇ ಬಂದಿದ್ದಾರೆ. ಹಿಂದೆಯೇ ಪಾರ್ವತಿಯನ್ನು ಪರಮೇಶ್ವರನಿಗೇ ದಾನಮಾಡಬೇಕೆಂದು ಸಂಕಲ್ಪ ಮಾಡಿದ್ದೆ. ಆದರೆ, ವಿಪ್ರನೊಬ್ಬನ ಮಾತು ಕೇಳಿ ಗೊಂದಲಕ್ಕೊಳಗಾಗಿದ್ದೆ' ಎಂದು ಪಾರ್ವತಿಯನ್ನು ಋಷಿಗಳ ಸಮೀಪಕ್ಕೆ ಕರೆತಂದ.

ಆಗ ಋಷಿಗಳು ಹೇಳಿದರು 'ಎಲೈ ಹಿಮವಂತನೆ, ಶಂಕರನು ಭಿಕ್ಷೆಯನ್ನು ಬೇಡುವವನು. ನೀನು ಭಿಕ್ಷೆ ಕೊಡುವವನು. ಪಾರ್ವತಿಯೇ ಭಿಕ್ಷೆಯು. ಇದಕ್ಕಿಂತಲೂ ಉತ್ತಮವಾದುದು ಮತ್ತೊಂದಿಲ್ಲ. ನಿನ್ನ ಶಿಖರಗಳಂತೆ ನೀನೂ ಉನ್ನತಸ್ಥಾನವನ್ನು ಪಡೆಯುವೆ. ಪರ್ವತಗಳಲ್ಲೆಲ್ಲಾ ನೀನು ಶ್ರೇಷ್ಠನಾಗುವೆ' ಎಂದ ಮುನಿಗಳು, ಪಾರ್ವತಿಗೆ ಆಶೀರ್ವಾದ ಮಾಡುತ್ತಾ, 'ಶಿವನಿಗೆ ಸದಾ ಸುಖವನ್ನುಂಟುಮಾಡುವವಳಾಗು' ಎಂದರು. ನಂತರ ಹಿಮವಂತನಿಗೆ ಫಲಪುಷ್ಪಗಳನ್ನು ಕೊಟ್ಟು, ವಿವಾಹ ನಿಶ್ಚಯ ಮಾಡಿದರು.

ಅರುಂಧತಿಯು ಮೇನಾದೇವಿಗೆ ಶಿವನ ಗುಣಗಳನ್ನು ಹೇಳಿ, ಅವನ ವಿಷಯದಲ್ಲಿ ಅವಳಿಗೆ ಪೂಜ್ಯಬುದ್ಧಿ ಉಂಟಾಗುವಂತೆ ಮಾಡಿದಳು. ವಧು ಪಾರ್ವತಿ ಕೆನ್ನೆಗೆ ಅರಶಿನ ಕುಂಕುಮ ಹಚ್ಚಿ, ಲೋಕಾಚಾರದಂತೆ ಮಂಗಳಕಾರ್ಯಗಳನ್ನು ಮಾಡಿದಳು. ಬಳಿಕ ವಸಿಷ್ಠ ಮೊದಲಾದ ಮುನಿಗಳು ನಾಲ್ಕನೆಯ ದಿವಸದಲ್ಲಿ ಶುಭಲಗ್ನವೊಂದನ್ನು ನಿರ್ಣಯಿಸಿ ಶಿವನಿಗೆ ಮದುವೆ ಮುಹೂರ್ತ ತಿಳಿಸಿದರಲ್ಲದೆ, 'ಹಿಮವಂತನ ಮನೆಗೆ ಹೋಗಿ ವಿಧಿವತ್ತಾಗಿ ಪಾರ್ವತಿಯನ್ನು ಮದುವೆಯಾಗು' ಎಂದರು.

ಮುನಿಗಳ ಮಾತನ್ನು ಕೇಳಿ ಪರಮೇಶ್ವರ 'ಮಹಾನುಭಾವರೇ, ವಿವಾಹವನ್ನು ನಾನು ನೋಡಿಯೂ ಇಲ್ಲ. ಕೇಳಿಯೂ ಇಲ್ಲ. ಆದಕಾರಣ ನೀವು ಅದರ ವಿಧಿಯನ್ನು ಶಾಸ್ತ್ರಾನುಸಾರವಾಗಿ ಹೇಳಬೇಕು' ಎಂದ. ಶಿವನ ಮಾತನ್ನು ಕೇಳಿ ಮುನಿಗಳು ನಕ್ಕು, 'ಮಹಾದೇವ, ಹರಿಯನ್ನು ಅವನ ಪರಿವಾರದೊಡನೆ ಕರೆಸು. ಬ್ರಹ್ಮನನ್ನು ಅವನ ಪುತ್ರರೊಡನೆ ಕರೆಸು. ಇಂದ್ರ, ಋಷಿಗಳು, ಯಕ್ಷರು, ಗಂಧರ್ವರು, ಕಿನ್ನರರು, ವಿದ್ಯಾಧರರು, ಸಿದ್ಧರು, ಅಪ್ಸರೆಯರೆಲ್ಲರನ್ನೂ ಕರೆಸು. ಅವರೆಲ್ಲರೂ ನಿನ್ನ ವಿವಾಹಕಾರ್ಯವನ್ನು ಸಾಂಗವಾಗಿ ನೆರವೇರಿಸುವರು' ಎಂದು ಹೇಳಿದರು.

ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಎರಡನೇ ಸಂಹಿತೆಯ ಮೂರನೇ ಖಂಡದ ಪಾರ್ವತೀಖಂಡದಲ್ಲಿ ಮೂವತ್ತಾರನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಆಂಧ್ರಪ್ರದೇಶದ ಗುಂಟೂರಿನಲ್ಲಿ ಜಿಹಾದಿಗಳು ಪುರಾತನ ಹಿಂದೂ ದೇಗುಲ ಧ್ವಂಸ ಮಾಡಿದ್ದಾರೆ. ಹಿಂದೂಗಳೇ ಎಚ್ಚೆತ್ತುಕೊಳ್ಳಿ' ಎಂಬ ಬರಹ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಇದಕ್ಕೆ ಸಂಬಂಧಿಸಿದ ವಿಡಿಯೊ ಹರಿದಾಡುತ್ತಿದೆ. ಮುಸ್ಲಿಂ ಸಮುದಾಯದ ವ್ಯಕ್ತಿಯೊಬ್ಬರು ಕಾಣಿಸಿಕೊಂಡಿರುವ ಈ ವಿಡಿಯೊವನ್ನು ಹಲವರು ಹಂಚಿಕೊಂಡಿದ್ದಾರೆ. ನಾಗ ದೇವಸ್ಥಾನವನ್ನು ಕೆಡವಲಾಗಿದೆ ಎಂದು ಕೆಲವರು ಉಲ್ಲೇಖಿಸಿದ್ದಾರೆ. ಆದರೆ ಇದು ಸುಳ್ಳು ಸುದ್ದಿ.

'ರೆಹಮಾನ್' ಎಂಬುವರು 40 ವರ್ಷಗಳ ಹಿಂದೆ ನಿರ್ಮಿಸಿದ್ದ ಬಾಜಿ ಬಾಬಾ ದರ್ಗಾವನ್ನು ಕೆಡವಿ, ಆ ಸ್ಥಳದಲ್ಲಿ ಮಸೀದಿ ನಿರ್ಮಿಸುವ ಉದ್ದೇಶದಿಂದ ಕಾಂಪೌಂಡ್ ತೆರವು ಮಾಡಲಾಗುತ್ತಿದೆ. ಆದರೆ, ದೇವಸ್ಥಾನ ಧ್ವಂಸ ಮಾಡಲಾಗಿದೆ ಎಂದು ತಪ್ಪಾಗಿ ಬಿಂಬಿಸಲಾಗಿದೆ' ಎಂದು 'ಇಂಡಿಯಾಟುಡೇ' ವರದಿ ಮಾಡಿದೆ. ಮಸೀದಿ ನಿರ್ಮಿಸುವ ಬದಲು ದರ್ಗಾವನ್ನು ಹಾಗೆಯೇ ಉಳಿಸಿಕೊಳ್ಳಬೇಕು ಎಂದು ಸ್ಥಳೀಯರು ತಕರಾರು ತೆಗೆದಿದ್ದರಿಂದ ಕಟ್ಟಡ ತೆರವು ಕೆಲಸವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಲಾಲತ್‌ಪೇಟೆ ಠಾಣೆಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಈ ದರ್ಗಾದ ಕಮಾನಿನಲ್ಲಿ ನಾಗ, ಅರ್ಧಚಂದ್ರ ಹಾಗೂ ನಕ್ಷತ್ರದ ವಿನ್ಯಾಸವಿದೆ. ಇವು ದರ್ಗಾದ ಸಂಕೇತಗಳು ಎಂದು ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು
ಗುರುರಾಜ ಕರಜಗಿ

ಸರ್ವರ ಸಂತೋಷ ಭಾಗಿ

ತನಗೆ ಬಾರದ ಲಾಭ ತನಯಂಗೆ ಬಂದಾಗ |
ಜನಕನ್ ಅದು ತನದೆಂದು ಸಂತಸಿಪ ತೆರದಿ ||
ಜನದೊಳರ್ಗಾವ ಸೊಗವಾದೊಡಂ ತನದೆನ್ನು-
ತನುಭವಿಪನೊ ಜ್ಞಾನಿ - ಮಂಕುತಿಮ್ಮ || 738 ||

ಪದ-ಅರ್ಥ: ತನಯ = ಮಗ, ಜನಕನ್ = ತಂದೆ, ಸಂತಸಿಪ = ಸಂತೋಷಪಡುವ, ಜನದೊಳರ್ಗಾವ = ಜನದೊಳ್ (ಜನರಲ್ಲಿ) + ರ್ಗೆ(ಯಾರಿಗೆ) + ಆವ(ಯಾವ), ಸೊಗವಾದೊಡಂ = ಸೊಗವು(ಸಂತೋಷವು) + ಆದೊಡಂ(ಆದರೆ)

ವಾಚ್ಯಾರ್ಥ: ತನಗೆ ದೊರೆಯದ ಲಾಭ ಮಗನಿಗೆ ಸಿಕ್ಕಿದಾಗ, ತಂದೆ ಅದು ತನಗೇ ದೊರೆತಂತೆ ಸಂತೋಷಪಡುವಂತೆ, ಬೇರೆ ಜನರಿಗೆ ಯಾವುದೇ ಲಾಭ, ಸಂತೋಷ ದೊರೆತಾಗ, ಅದು ತನ್ನದೇ ಎಂದು ಅನುಭವಿಸುವವನೇ ಜ್ಞಾನಿ.

ವಿವರಣೆ: ಇದೊಂದು ನಡೆದ ಘಟನೆ. ನನ್ನ ಸ್ನೇಹಿತರೊಬ್ಬರು ತಹಶೀಲ್ದಾರರಾಗಿ ರಿಟೈರ್ ಆದರು. ಕೆಲದಿನಗಳ ಹಿಂದೆ ನಮ್ಮ ಆಫೀಸಿಗೆ ಬಂದಿದ್ದರು. ಅವರ ಸಂತೋಷ ಅವರ ಮುಖದಲ್ಲಿ, ಮಾತಿನಲ್ಲಿ, ನಡೆಯಲ್ಲಿ ಎದ್ದು ತೋರುತ್ತಿತ್ತು. ಅವರು ನಡೆಯುತ್ತಿರಲಿಲ್ಲ, ಕುಣಿಯುತ್ತಲೇ ಬಂದರು. ಬಂದವರೇ, "ಸರ್, ನಿಮಗೆ ಒಂದು ಭಾರೀ ಸಂತೋಷದ ವಿಷಯ ಹೇಳಬೇಕು" ಎಂದು ಗಟ್ಟಿಯಾಗಿ ಹೇಳಿ, ಚೀಲದಿಂದ ಸಿಹಿ ತಿಂಡಿಯನ್ನು ಹೊರಗೆ ತೆಗೆದಿಟ್ಟರು. "ಸ್ವಾಮಿ, ತಮ್ಮ ಸಂತೋಷದ ಅಬ್ಬರ ನೋಡಿದರೆ ಏನೋ ಭಾರೀ ಒಳ್ಳೆಯ ಘಟನೆಯೇ ಆಗಿದೆ. ಹೇಳಿ ಸ್ವಾಮಿ, ನಿಮ್ಮ ಸಂತೋಷದ ಕಾರಣ" ಎಂದೆ. ಅವರು ನನ್ನ ಕೈಯನ್ನು ಬಲವಾಗಿ ಹಿಡಿದು ಒತ್ತಿ "ಸರ್, ನನ್ನ ಮಗ I.O.S ಪಾಸಾಗಿ ಬಿಟ್ಟ. ಹೋದ ಪರೀಕ್ಷೆಯೊಳಗೆ ಸ್ವಲ್ಪದರಲ್ಲೇ ತಪ್ಪಿಸಿಕೊಂಡಿದ್ದ. ನನಗೆ ಎಲ್ಲಿ ಇವನಿಗೆ ಅದು ಸಿಗದೇ ಹೋಗಿ ಬಿಡುತ್ತೋ ಎಂದು ಹೆದರಿದ್ದೆ. ನಿಮಗೆ ಗೊತ್ತಿಲ್ಲ ಸರ್, ನಾನು ಮೂರಿ ಬಾರಿ I.O.S ಪರೀಕ್ಷೆಯಲ್ಲಿ ಫೇಲಾಗಿದ್ದೆ. ಕೊನೆಗೆ ಸರ್ಕಾರಿ ನೌಕರಿ ಸೇರಿಕೊಂಡೆ. ನನಗೆ ಭಾರೀ ಸಂತೋಷವೆಂದರೆ ನಾನು ಯಾವುದನ್ನು ಸಾಧಿಸಲಾಗಲಿಲ್ಲವೊ ಅದನ್ನು ನನ್ನ ಮಗ ಮಾಡಿ ತೋರಿಸಿದ್ದಾನೆ" ಎಂದಾಗ ಅವರ ಹಿಗ್ಗು ಆಕಾಶವನ್ನು ಮುಟ್ಟಿತ್ತು. ಕಗ್ಗದ ಮೊದಲೆರಡು ಸಾಲುಗಳು ಮೇಲಿನ ಘಟನೆಗೆ ವ್ಯಾಖ್ಯೆಯಂತಿವೆ. ತನಗೆ ದಕ್ಕದ ಭಾಗ್ಯ ಮಗನಿಗೆ ಬಂದಾಗ ಆಗುವ ಸಂತೋಷದಂತೆ, ಜ್ಞಾನಿ ಪ್ರಪಂಚದಲ್ಲಿ ಯಾರಿಗೇ ಸಂತೋಷವಾದರೂ, ಲಾಭವಾದರೂ, ತನಗೇ ಆದಂತೆ ಸಂತೋಷಪಡುತ್ತಾನೆ. ಅಥವಾ ಹಾಗೆ ಸಂತೋಷಪಡುವವನೇ ಜ್ಞಾನಿ. ತನ್ನ ರಾಣಿ ಸಂತೋಷವಾಗಿರಲಿ, ಕಷ್ಟದಿಂದ ಪಾರಾಗಲಿ ಎಂದು ಝಾನ್ಸಿ ಲಕ್ಷ್ಮಿಬಾಯಿ ಸೇವಕಿ ಜಲ್ಕರಿಬಾಯಿ ತನ್ನ ಬದುಕನ್ನು ಬಲಿ ಕೊಟ್ಟದ್ದು. ಇದು ಒಂದು ಘಟನೆ. ಮತ್ತೊಬ್ಬರಿಗೋಸ್ಕರ ತಮ್ಮ ಆಶಯಗಳನ್ನು, ಬದುಕನ್ನು ತ್ಯಾಗ ಮಾಡುವವರು ಒಂದು ವರ್ಗವಾದರೆ, ಜಗತ್ತಿನಲ್ಲಿ ಯಾರಿಗಾದರೂ ಒಳ್ಳೆಯದಾಗಲಿ ತಮಗೇ ಆದಂತೆ ಸಂತೋಷ ಪಡುವವರು ಇನ್ನೊಂದು ವರ್ಗ. ಈ ವರ್ಗದ ಜನ ತುಂಬ ಉದಾತ್ತವಾದ ಮನೋಧರ್ಮದವರು. ಎಲ್ಲವೂ ತಮಗೇ ದೊರೆಯಲಿ ಎಂಬ ಸ್ವಾರ್ಥ ಭಾವವನ್ನು ತೊರೆದು ಎಲ್ಲರ ಸುಖವೂ, ತಮ್ಮದೆಂಬಂತೆ ಸಂತೋಷಿಸುವವರು ಜ್ಞಾನಿಗಳು. ಯಾಕೆಂದರೆ ಸರ್ವವೂ, ಸರ್ವರೂ ಈಶ್ವರನ ಅಂಶವೆಂದು ಅರಿತ ಈ ಜನರು ಎಲ್ಲರಲ್ಲೂ ತಮ್ಮನ್ನು ಮತ್ತು ತಮ್ಮಲ್ಲಿ ಎಲ್ಲರನ್ನೂ ಕಾಣುವವರು.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಅಕ್ಟೋಬರ್ 19, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ನವಮಿ ಗಂ. 14-14, ನಕ್ಷತ್ರ: ಪುಷ್ಯ ಗಂ. 08-02 ಯೋಗ: ಸಾಧ್ಯ ಗಂ. 17-32, ಕರಣ: ಗರಜೆ ಗಂ. 14-14, ತುಲಾ ಮಾಸದ 01 ನೇ ದಿನ. ರಾಹುಕಾಲ : ಮಧ್ಯಾಹ್ನ 12-00 – 01:30,
ಸೂರ್ಯೋದಯ : 06-25 ಸೂರ್ಯಾಸ್ತ : 06-06
ಮುಸ್ಲಿಂ ದಿನಾಂಕ : 22 ರಬಿಉಲ್ಲಾವಲ್
ದಿನ ವಿಶೇಷ : ಸುಖ್ಖೋತ್ ಕೊನೆಯ ದಿನ (ಸಿಂಹತ್ ತೊರಾಹ್)
ಅದೃಷ್ಟ ಸಂಖ್ಯೆ : 6, 13

ಮೇಷ: ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವ ಸನ್ನಿವೇಶಗಳು ನಡೆಯುವುದು. ಖಾದಿ ಉದ್ಯಮದವರಿಗೆ ಸರಕಾರದಿಂದ ಸಹಾಯ ಸೌಲಭ್ಯ ದೊರೆಯಲಿದೆ. ಮಾಟ- ಮಂತ್ರದ ಭೀತಿ ಎದುರಾಗಲಿದೆ.

ವೃಷಭ: ಅನಗತ್ಯ ಮಾತನ್ನು ಆಡುವುದರಿಂದ ನೆಮ್ಮದಿಗೆ ಭಂಗ ಉಂಟಾಗುವುದು. ಪಾಲುದಾರಿಕೆ ವ್ಯವಹಾರದಲ್ಲಿ ನಷ್ಟವನ್ನು ಭರಿಸಬೇಕಾದ ಕ್ಲಿಷ್ಟ ಸಂದರ್ಭಗಳು ವ್ಯವಹಾರದಿಂದ ಹಿಂಬರುವ ಯೋಚನೆಗೆ ಕಾರಣ ಆಗುವುದು.

ಮಿಥುನ: ಅಧಿಕಾರದಲ್ಲಿ ಸ್ಥಾನಮಾನ ಪಡೆಯಲು ದೇವರ ಸೇವೆಯಂತಹ ಧಾರ್ಮಿಕ ಕಾರ್ಯಗಳನ್ನು ನಡೆಸುವುದು ಒಳ್ಳೆಯದು. ನಿಮ್ಮ ಮಾತುಗಳಿಗೆ ವಿರುದ್ಧವಾದ ಮಾತನ್ನು ನಿಮ್ಮ ಮಕ್ಕಳಿಂದ ಕೇಳಬೇಕಾಗಲಿದೆ.

ಕರ್ಕಾಟಕ: ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಒಂದು ಮಧುರ ಘಟನೆ ಈ ದಿನ ನಿಮ್ಮ ಮನೆಯಲ್ಲಿ ನಡೆಯಲಿದೆ. ಕುಟುಂಬದ ಮಾರ್ಗಸೂಚಕರ ಮಾರ್ಗಸೂಚಿಯಂತೆ ಕಳೆದು ಹೋಗಿದ್ದ ವಸ್ತುಗಳೂ ಸಹ ಪತ್ತೆಯಾಗುವುವು.

ಸಿಂಹ: ಸಂಪೂರ್ಣ ಮನಸ್ಸಿಟ್ಟು ಕೆಲಸ ಕಾರ್ಯಗಳನ್ನು ಮಾಡಿದ್ದಲ್ಲಿ ವ್ಯವಹಾರದಲ್ಲಿ ಹೆಚ್ಚಿನ ಲಾಭವನ್ನು ಗಳಿಸುವಿರಿ, ವಿದೇಶಿ ವ್ಯವಹಾರಗಳು ಲಭಿಸಬಹುದು. ಶ್ರೀ ಸಿದ್ಧಿ ವಿನಾಯಕನನ್ನು ಸ್ತುತಿಸುವುದರಿಂದ ಮಂಗಳವಾಗುವುದು.

ಕನ್ಯಾ: ಭೂ ಖರೀದಿ ಗೃಹ ನಿರ್ಮಾಣದಂತ ಕಾರ್ಯಗಳನ್ನು ಕೈಗೊಳ್ಳಲು ಉತ್ತಮ ಸಮಯ. ನ್ಯಾಯಾಲಯದ ಕೆಲಸ ಕಾರ್ಯಗಳಲ್ಲಿ ಮುನ್ನಡೆಗಾಗಿ ಓಡಾಟ ನಡೆಸಬೇಕಾಗುತ್ತದೆ. ಕೃಷಿ ಕೈಗಾರಿಕಾ ಕ್ಷೇತ್ರದಲ್ಲಿರುವವರಿಗೆ ಲಾಭ.

ತುಲಾ: ಪರೋಪಕಾರದ ಫಲ ತಕ್ಷಣದಲ್ಲಿಯೇ ಅನುಭವಕ್ಕೆ ಬರಲಿದೆ. ವಿದ್ಯಾರ್ಥಿಗಳಿಗೆ ಮೋಜು-ಮಸ್ತಿನ ಜೀವನದತ್ತ ಮನಸ್ಸು ಸೆಳೆಯುವುದು. ಅರ್ಥಪೂರ್ಣ ಮಾತುಕತೆಗಳಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ.

ವೃಶ್ಚಿಕ: ಸಹೋದ್ಯೋಗಿಗಳೊಡನೆ ಅಥವಾ ಆಪ್ತ ಸ್ನೇಹಿತರೊಡನೆ ಹಣಕಾಸಿನ ವ್ಯವಹಾರದಿಂದಾಗಿ ಸಂಬಂಧಕ್ಕೆ ಹುಳಿ ಹಿಂಡಿದಂತಾಗಲಿದೆ. ವಾಹನಗಳ ರಿಪೇರಿಯಂತಹ ಅಥವಾ ಯಂತ್ರಗಳ ರಿಪೇರಿಯಂತಹ ಕಾರಣದಿಂದ ಖರ್ಚು.

ಧನು: ಈ ದಿನ ನಿಮ್ಮ ವ್ಯವಹಾರದಲ್ಲಿ ವಿದೇಶಿ ಸಂಪರ್ಕಗಳು ಅಥವಾ ದೊಡ್ಡಮಟ್ಟದ ದೇಶಿಯ ವ್ಯವಹಾರ ಸಂಪರ್ಕಗಳು ಹೆಚ್ಚಲಿದೆ. ಅಜೀರ್ಣದ ಸಮಸ್ಯೆಯಿಂದ ಜೀವನ ಉತ್ಸಾಹವನ್ನು ಕಳೆದುಕೊಂಡು ಆಲಸ್ಯ ಹೊಂದುವಿರಿ.

ಮಕರ: ನಿಮ್ಮ ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ. ಅವಶ್ಯಕತೆಗಿಂತ ಹೆಚ್ಚಾಗಿ ಹಣ ಸಂಗ್ರಹವಾಗುವುದು. ನಾನಾ ಬಗೆಯ ಚಿಂತನೆಗಳು ನಿಮ್ಮನ್ನು ದಾರಿ ತಪ್ಪಿಸಲಿದೆ. ಪ್ರಯಾಣದಲ್ಲಿ.

ಕುಂಭ: ವಿದ್ಯಾರ್ಥಿಗಳು ಸ್ವಲ್ಪ ಶ್ರಮವಹಿಸಿ ಓದಿದರೆ ನಿರೀಕ್ಷೆಗಿಂತ ಹೆಚ್ಚಿನ ಯಶಸ್ಸು ಲಭ್ಯ. ಅಪೇಕ್ಷಿಸುತ್ತಿರುವ ವಸ್ತು ನಿಮ್ಮ ಕೈ ಸೇರುವುದು. ಯುವ ಕಲಾವಿದರಿಗೆ ಹೆಚ್ಚು ಪ್ರೋತ್ಸಾಹ ಅವಕಾಶಗಳು ಲಭಿಸುವುದು.

ಮೀನ: ಹಂಗಾಮಿ ವೃತ್ತಿಯವರಿಗೆ ಸಂಪಾದನೆಗೆ ಅಡೆತಡೆ ಉಂಟಾಗಬಹುದು. ರಾಜಕೀಯದವರಿಗೆ ನಿರೀಕ್ಷಿತ ಕಾರ್ಯ ಸಾಧನೆ ತೃಪ್ತಿ ತರುತ್ತದೆ. ವಿವಾಹ ಸಂಬಂಧ ವರಾನ್ವೇಷಣೆಗೆ ತೊಡಗುವುದಕ್ಕೆ ಸೂಕ್ತವಾದ ದಿನ,

---

ಪದಬಂಧ 5113
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಂದಿಗೆಲ್ಲಾ ತಿಳಿದಿರುವ ಪ್ರಸಿದ್ಧ ವಿಷಯ (5)
3.ನೂರರ ಮೊತ್ತ (3)
5.ನಿಯೋಗವಿದ್ದರೆ ಮಾತ್ರ ಒಳ್ಳೆಯದಕ್ಕೆ ವ್ಯಯ! (5)
7.ರೀತಿಯೊಡನೆ ಬರುವ ಜೋಡುನುಡಿ (3)
9.ತಟಾಕದ ದಿಕ್ಕಿನಲ್ಲಿ ತೆರೆದಿರುವ ಬಾಗಿಲು (3)
11.ನಾರಾಯಣಋಷಿ ತೊಡೆಯಿಂದ ಜನಿಸಿದ ಅಪ್ಸರೆ (3)
13.ಹೊಲದ ಸುತ್ತಲೂ ಹರಡಿರುವ ಕೆಟ್ಟವಾಸನೆ (5)
15.ಮುದ್ರಿತ ಹಾಳೆಗಳನ್ನೆಲ್ಲಾ ಸೇರಿಸಿ ಮಾಡಿದ ಗ್ರಂಥ (3)
16.ಕೆಟ್ಟ ಉದ್ದೇಶಕ್ಕೆ ಬಳಕೆಯಾಗಿರುವುದು (5)

ಮೇಲಿಂದ ಕೆಳಕ್ಕೆ
1.ಜರಿ ಸೀರೆಯಲ್ಲಿರುವುದು ತುಂಬಾ ಬೆಲೆಯುಳ್ಳ ಮಣಿ (4)
2.ಎಳೆದುಕೊಂಡಿರುವ ಉಸಿರನ್ನು ಹೊರಕ್ಕೆಬಿಡುವುದು (3)
4.ಅಂತರಂಗದ ಹೊಯ್ದಾಟದಲ್ಲಿ ಕಾಣಿಸಿರುವ ಅಲೆ (3)
6.ಕಟಕಟೆಯಲ್ಲಿ ನಿಂತಿರುವವ ಬಹಳ ಹತ್ತಿರದವನು (3)
8.ದಾವೆ ಹೂಡಿ ಬೆಳೆಸಿರುವ ನೆಂಟಸ್ತಿಕೆ! (2)
9.ಇನ್ನೂ ಕರು ಹಾಕದ ಮಣಕ (3)
10.ಪರ್ವತಾರೋಹಿಗೆ ಇದು ಸಂಕ್ರಮಣಕಾಲ! (2)
12.ಕಲ್ಲಿನ ಆಯುಧಗಳನ್ನು ಬಳಸುತ್ತಿದ್ದ ಕಾಲ (4)
13.ಪುಳಕಗೊಳ್ಳುವಂಥಾ ಕಾಂತಿ (3)
14.ತಂದೆ ತಾಯಿ ಇರುವ ಮನೆ (3)

5112ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಟೋಪ 3.ಪಟಾಲಂ
5.ದಾವಣಿ 6.ಅವಸರ
8.ತಡಬಡ 10.ಅಂತರ್ಧಾನ
12.ಜನ್ಯವರ್ಣ 13.ಕ್ಷತ್ರಿಯ
16.ಕ್ಷಣಿಕ 17.ಲಿಲಾವು

ಮೇಲಿಂದ ಕೆಳಕ್ಕೆ:
1.ಆಣಿ 2.ಪತ್ತೇದಾರ
3.ಪರಿಣಿತ 4.ಲಂಚ
7.ವಸಂತ 9.ಬಡವ
11ನಕ್ಷತ್ರಕ 12.ಜಯಶಾಲಿ
14.ರೂಕ್ಷ 15.ಕಾವು

ಸುಡೊಕು 5499

			7		2		8	6
						3		4
	7	8	3		9		1	
1		4			5		2	3
	2			3				
8		7	6					9
		3	9		6	5	4	8
5	4					1		
	8		5		4		3	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5498 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಪ್ರೀತಿಯ ಸವಿನೆನಪು



ಶ್ರೀ ಎಂ. ನರಸಿಂಹಯ್ಯನವರು

ನಿವೃತ್ತ ಕಂದಾಯ ಅಧಿಕಾರಿ, ಬಿ.ಬಿ.ಎಂ.ಪಿ.

06–10–1947 : 10–10–2022

"ನೀವು ಕಲಿಸಿದ ಮೌಲ್ಯಗಳೇ ನಮಗೆ ದಾರಿದೀಪ"

ವೈಕುಂಠ ಸಮಾರಾಧನೆ

ದಿ: 21–10–2022 ಶುಕ್ರವಾರ ಬೆಳಗ್ಗೆ 10:00 ಘಂಟೆಗೆ

ಸ್ಥಳ: 1199/2, 1ನೇ ಮೇನ್, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು–40

ಭೋಜನ: ಮಧ್ಯಾಹ್ನ 12:30ರ ನಂತರ

ಇಂತಿ ದುಃಖತಪ್ತರು:

ಶ್ರೀಮತಿ ಬಿ.ಎಸ್. ಸುಶೀಲ, ಡಾ॥ ಅನಿತಾ ಎನ್, ಶ್ರೀ ವೆಂಕಟೇಶ ಬಿ.ಎ. ಕು. ಮಂಜುಶ್ರೀ ಎನ್. ಐ.ಎ.ಎಸ್, ಶ್ರೀಮತಿ ಶಿಲ್ಪಾ, ಶ್ರೀ ಹರಿಪ್ರಸಾದ್ ಎನ್ ಮೊಮ್ಮಕ್ಕಳು, ಸಹೋದರ–ಸಹೋದರಿಯರು, ಹಾಗೂ ಬಂಧು– ಮಿತ್ರರು

OBITUARY

Sri. B. Ramaswamy

(S/O Late Sri. K. Byanna)

15-05-1954 to 12-10-2022

In ever loving memory of an extraordinary gentleman who touched many lives. He personified kindness, exuded warmth and lived life to the fullest.

A loving husband and a doting father, he was a pillar of strength and wisdom with his ever positive attitude and will be deeply missed.

Uttarakriya will be performed at our residence on 22-10-2022 from 8:30 am onwards.

Deeply mourned by:

his Wife (Lavanya Ramaswamy), Children (Priyanka & Praveen Ramaswamy), Daughter-in-Law(Anusha Cheluvagopal) Son-in-Law(Srirag Jayaraman), Family and Friends

ಗ್ಯಾಂಗ್‌ಸ್ಟರ್‌ಗಳ ಮನೆಗಳಲ್ಲಿ ಎನ್‌ಐಎ ಶೋಧ

ಗುರುಗ್ರಾಮ (ಪಿಟಿಐ): ಭಯೋತ್ಪಾದಕರು ಮತ್ತು ಮಾದಕವಸ್ತು ಸಾಗಣೆದಾರರ ಜೊತೆ ನಂಟು ಹೊಂದಿರುವ ಆರೋಪ ಎದುರಿಸುತ್ತಿರುವ ಮೂವರು ಗ್ಯಾಂಗ್‌ಸ್ಟರ್‌ಗಳ ಮನೆಗಳಲ್ಲಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಮಂಗಳವಾರ ಶೋಧ ನಡೆಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎನ್‌ಐಎ ತಂಡದ ಜೊತೆ ಸ್ಥಳೀಯ ಪೊಲೀಸರು ಕೂಡ ಶೋಧ ಕಾರ್ಯದಲ್ಲಿ ಭಾಗಿಯಾಗಿದ್ದಾರೆ ಎಂದೂ ಹೇಳಿವೆ.

ಗುರುಗ್ರಾಮದ ನಹರ್‌ಪುರ ರೂಪಾ ಪ್ರದೇಶದ ರಾಜೀವ್ ಕಾಲೊನಿಯಲ್ಲಿರುವ ಗ್ಯಾಂಗ್‌ಸ್ಟರ್‌ಗಳಾದ ಅಮಿತ್ ಡಾಗರ್ ಮತ್ತು ಆತನ ಸಹಚರ ಸಂದೀಪ್ ಎಂಬಾತನ ಸಹೋದರ ಅನಿಲ್ ಮತ್ತು ಕರ್ತಾರ್ ಸಿಂಗ್ ಎಂಬುವವರ ಮನೆಗಳಲ್ಲಿ ಹಾಗೂ ಮುಷ್ಠೆದ್‌ಪುರ ಗ್ರಾಮದ ಮಾಜಿ ಸರಪಂಚ್‌ನ ಮನೆಯಲ್ಲೂ ಶೋಧ ನಡೆದಿದೆ ಎಂದು ವಿವರಿಸಿವೆ.

ಪ್ರಕರಣಕ್ಕೆ ಸಂಬಂಧಿಸಿ ಪಂಜಾಬ್, ಉತ್ತರಪ್ರದೇಶದ ವಿವಿಧೆಡೆ ಎನ್‌ಐಎ ಅಧಿಕಾರಿಗಳು ಶೋಧ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಹೆಚ್ಚಲಿದೆ ಹಿರಿಯರ ಸಂಖ್ಯೆ'

ಕರ್ನಾಟಕದಲ್ಲಿ ಒಟ್ಟು ಫಲವಂತಿಕೆ ದರವು (1.7) ಕಡಿಮೆ ಇದ್ದು, 2030ರ ವೇಳೆಗೆ ಇದು 1.5ಕ್ಕೆ ಕುಸಿಯಲಿದೆ. ಇದರಿಂದಾಗಿ ದುಡಿಯುವ ವಯಸ್ಸಿನವರ ಸಂಖ್ಯೆ ಕಡಿಮೆಯಾಗಲಿದ್ದು, 60 ವರ್ಷ ಮೇಲ್ಪಟ್ಟವರ ಸಂಖ್ಯೆ ಹೆಚ್ಚಾಗಲಿದೆ ಎಂದು 'ಕರ್ನಾಟಕ: ಒಂದು ಲಕ್ಷ ಕೋಟಿ ಡಾಲರ್ ಜಿಡಿಪಿ ಮುನ್ನೋಟ' ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ. ಈ ವರದಿಯಲ್ಲಿನ ಅಂದಾಜಿನ ಪ್ರಕಾರ 2030ರ ವೇಳೆಗೆ 18–23 ವರ್ಷದವರ ಸಂಖ್ಯೆಯು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಲಿದೆ. ಅವಲಂಬಿತರ ಸಂಖ್ಯೆ ಹೆಚ್ಚಾಗಲಿದೆ ಎಂದು ಈ ವರದಿಯ ದತ್ತಾಂಶಗಳು ಹೇಳುತ್ತವೆ



- ಈಗ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ 18–23 ವರ್ಷದವರ ಪ್ರಮಾಣ ಶೇ 10.2ರಷ್ಟಿದೆ. ಫಲವಂತಿಕೆ ದರವು 1.5ಕ್ಕೆ ಕುಸಿಯುವ ಕಾರಣ, 2030ರ ವೇಳೆಗೆ ಈ ವಯಸ್ಸಿನವರ ಪ್ರಮಾಣವು ಶೇ 8.7ಕ್ಕೆ ಇಳಿಯಲಿದೆ
- ಈಗ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ 60 ವರ್ಷ ಮೇಲ್ಪಟ್ಟವರ ಪ್ರಮಾಣ ಶೇ 11.5ರಷ್ಟಿದೆ. ಮರಣ ಮತ್ತು ಜನನ ಪ್ರಮಾಣವು ಕಡಿಮೆಯಾಗುವ ಕಾರಣ, 2030ರ ವೇಳೆಗೆ ಈ ವಯಸ್ಸಿನವರ ಪ್ರಮಾಣವು ಶೇ 15ಕ್ಕೆ ಏರಿಕೆಯಾಗಲಿದೆ
- ಅವಲಂಬಿತರ ಸಂಖ್ಯೆ ಹೆಚ್ಚಾಗುವ ಕಾರಣ, ರಾಜ್ಯದ ಆರ್ಥಿಕತೆಯ ಮೇಲಿನ ಹೊರೆ ಹೆಚ್ಚಾಗಲಿದೆ

ಅಸಮಾನ ತಲಾ ಆದಾಯ

ಕರ್ನಾಟಕವು ದೇಶದಲ್ಲೇ ಗರಿಷ್ಠ ತಲಾದಾಯ ಹೊಂದಿದ್ದರೂ, ವಲಯವಾರು ತಲಾ ಆದಾಯದಲ್ಲಿ ಭಾರಿ ವ್ಯತ್ಯಾಸವಿದೆ. ಕೃಷಿ ವಲಯದಲ್ಲಿ ತೊಡಗಿರುವವರ ತಲಾ ಆದಾಯ ಅತ್ಯಂತ ಕನಿಷ್ಠ ಮಟ್ಟದಲ್ಲಿದೆ. ಸೇವಾ ವಲಯದಲ್ಲಿ ತೊಡಗಿರುವವರ ತಲಾ ಆದಾಯ ಅತ್ಯಂತ ಗರಿಷ್ಠ ಮಟ್ಟದಲ್ಲಿದೆ



ಪ್ರಜಾವಾಣಿ ಗ್ರಾಫಿಕ್ಸ್

ವರದಿ ಬಿಡುಗಡೆ

ಕರ್ನಾಟಕವು ಒಂದು ಲಕ್ಷ ಕೋಟಿ ಡಾಲರ್ ಆರ್ಥಿಕತೆಯಾಗಿ ಬೆಳೆಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ 'ಥ್ರೀಒನ್‌ಫೋರ್ ಕ್ಯಾಪಿಟಲ್' ಸಿದ್ಧಪಡಸಿರುವ ವರದಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದ್ದಾರೆ. ಸಂಸ್ಥೆಯ ಮುಖ್ಯಸ್ಥ ಟಿ.ವಿ.ಮೋಹನದಾಸ್ ಪೈ ಮತ್ತು ಸಂಶೋಧಕಿ ನಿಶಾ ಹೊಳ್ಳ ಅವರು ಸಿದ್ಧಪಡಿಸಿರುವ ಈ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ರಾಜ್ಯದ ಸದ್ಯದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯ ದತ್ತಾಂಶಗಳು ಮತ್ತು ಅವುಗಳ ವಿಶ್ಲೇಷಣೆಯನ್ನು ಈ ವರದಿ ಒಳಗೊಂಡಿದೆ. ದೇಶದ ಒಟ್ಟು ಉತ್ಪನ್ನದಲ್ಲಿ (ಜಿಡಿಪಿ) ಅತಿಹೆಚ್ಚು ಕೊಡುಗೆ ನೀಡುತ್ತಿರುವ ಮೊದಲ ಐದು ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಜಿಡಿಪಿ ಆಧಾರದಲ್ಲಿ ಕರ್ನಾಟಕವು ಗರಿಷ್ಠ ತಲಾಆದಾಯ (₹3.05 ಲಕ್ಷ) ಹೊಂದಿದೆ. ಕೈಗಾರಿಕೆ, ಕೃಷಿ ಮತ್ತು ಸೇವಾ ವಲಯದಲ್ಲಿ ಕರ್ನಾಟಕವು ಗಮನಾರ್ಹ ಬೆಳವಣಿಗೆಯನ್ನು ದಾಖಲಿಸಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಅಮ್ಮ ಚಾಕೊಲೇಟ್ ಕದ್ದಿದ್ದಾಳೆ, ಜೈಲಿಗೆ ಹಾಕಿ'

ಬುರ್ಹಾನಪುರ (ಮಧ್ಯಪ್ರದೇಶ) (ಪಿಟಿಐ): 'ಅಮ್ಮ ನನ್ನ ಚಾಕೊಲೇಟುಗಳನ್ನು ಕದ್ದಿದ್ದಾಳೆ. ಆಕೆಯನ್ನು ಜೈಲಿಗೆ ಹಾಕಿ' ಎಂದು ತನ್ನ ತಾಯಿಯ ಮೇಲೆ 'ಗಂಭೀರ' ಆರೋಪ ಹೊರಿಸಿ ಮೂರು ವರ್ಷದ ಬಾಲಕ ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾನೆ.

'ನನ್ನ ತಾಯಿ ನನಗೆ ಚಾಕೊಲೇಟು ಗಳನ್ನು ತಿನ್ನಲು ಬಿಡುವುದಿಲ್ಲ. ನನ್ನ ಕೆನ್ನೆಗೆ ಹೊಡೆದಿದ್ದಾಳೆ. ಆದ್ದರಿಂದ ಆಕೆಯನ್ನು ಜೈಲಿಗೆ ಹಾಕಿ' ಎಂದು ಬುರ್ಹಾನಪುರ ದೇಡ ತಲಾಯಿ ಪೊಲೀಸ್ ಠಾಣೆಯಲ್ಲಿ ಬಾಲಕ ಭಾನುವಾರ ದೂರು ನೀಡಿದ್ದಾನೆ.

ವಿಡಿಯೊ ವೈರಲ್: ಬಾಲಕ ಸದ್ದಾಂ, ಪೊಲೀಸರಿಗೆ ದೂರು ನೀಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಸಬ್ ಇನ್‌ಸ್ಪೆಕ್ಟರ್ ಪ್ರಿಯಾಂಕಾ, ಬಾಲಕನ ದೂರು ಬರೆದುಕೊಂಡಿದ್ದಾರೆ. ದೂರಿನ ಪ್ರತಿಗೆ ಸಹಿ ಹಾಕುವಂತೆ ಪ್ರಿಯಾಂಕಾ ಬಾಲಕನಲ್ಲಿ ಹೇಳಿದ್ದಾರೆ. ಅದಕ್ಕೆ ಆತ ದೂರಿನ ಪ್ರತಿಯ ಮೇಲೆ ಕೆಲವು ಗೆರೆಗಳನ್ನು ಎಳೆದಿರುವ ದೃಶ್ಯವು ವಿಡಿಯೊದಲ್ಲಿದೆ. ತಾಯಿಯನ್ನು ಕೂಡಲೇ ಬಂಧಿಸುವುದಾಗಿಯೂ ಪ್ರಿಯಾಂಕ ಭರವಸೆ ನೀಡಿದ್ದಾರೆ.

'ಚಾಕೊಲೇಟುಗಳನ್ನು ಕೊಡುವಂತೆ ಮಗ ಬಹಳ ಹಠ ಮಾಡುತ್ತಿದ್ದ. ಆದ್ದರಿಂದ ಮಗನ ಕೆನ್ನೆಗೆ ಪತ್ನಿಯು ಮೆತ್ತಗೆ ಹೊಡೆದಿದ್ದಾಳೆ. ಜೊತೆಗೆ, ಸ್ನಾನ ವಾದ ಬಳಿಕ ಹಣೆಗೆ 'ಟೀಕಾ' (ತಿಲಕ) ಇಟ್ಟುಕೊಳ್ಳಲು ಮಗ ಹಠಮಾಡಿದ. ಅದಕ್ಕಾಗಿಯೂ ನನ್ನ ಪತ್ನಿ ಬೈದಳು. ತಾಯಿಯ ವರ್ತನೆ ಯಿಂದ ಮಗ ಬಹಳ ಬೇಸರಗೊಂಡಿದ್ದ. ನಂತರ ಪೊಲೀಸ್ ಬಳಿ ಕರೆದುಕೊಂಡು ಹೋಗುವಂತೆ ಹಠ ಮಾಡಿದ. ಅದಕ್ಕಾಗಿ ಠಾಣೆಗೆ ಕರೆದುಕೊಂಡು ಹೋದೆ' ಎಂದು ಬಾಲಕನ ತಂದೆ ತಿಳಿಸಿದರು.

ಬಾಲಕನೊಂದಿಗೆ ಪ್ರಿಯಾಂಕ ಅವರು ನಡೆದುಕೊಂಡ ರೀತಿಯ ಬಗ್ಗೆ ಬುರ್ಹಾನಪುರ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಕುಮಾರ್ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಯಾವುದೇ ಭಯ ಇಲ್ಲದೆ ಯಾರು ಬೇಕಾದರು ಪೊಲೀಸ್ ಠಾಣೆಗೆ ಬರಬಹುದು ಎನ್ನುವುದನ್ನು ಈ ಘಟನೆ ಸಾಕ್ಷೀಕರಿಸಿದೆ ಎಂದಿದ್ದಾರೆ.

'ರಾಜ್ಯಪಾಲರಿಗೆ ಸಚಿವರನ್ನು ವಜಾಗೊಳಿಸುವ ಅಧಿಕಾರವಿಲ್ಲ'

ತಿರುವನಂತಪುರ (ಪಿಟಿಐ): 'ರಾಜ್ಯಪಾಲರಿಗೆ ಚುನಾಯಿತ ಸರ್ಕಾರದ ಸಚಿವರನ್ನು ವಜಾಗೊಳಿಸುವ ಅಧಿಕಾರ ವಿಲ್ಲ. ಆ ಅಧಿಕಾರ ಇರುವುದು ಮುಖ್ಯಮಂತ್ರಿಗೆ ಮಾತ್ರ' ಎಂದು ಕೇರಳ ಮುಖ್ಯ ಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ರಾಜಭವನದ ಘನತೆಗೆ ಧಕ್ಕೆ ಉಂಟುಮಾಡುವಂತಹ ಹೇಳಿಕೆಗಳನ್ನು ನೀಡಿದರೆ ಅಂಥ ಸಚಿವರನ್ನು ವಜಾ ಮಾಡಬೇಕಾಗುತ್ತದೆ ಎಂದು ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಎಚ್ಚರಿಕೆ ನೀಡಿದ್ದರು.

ಅವರ ಹೇಳಿಕೆಗೆ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಪಿಣರಾಯಿ, 'ಸಂವಿಧಾನವು ನಮಗೆ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದೆ. ಟೀಕೆ ಮಾಡುವ ಹಕ್ಕೂ ಕೊಟ್ಟಿದೆ. ಹೀಗಿರುವಾಗ ಟೀಕೆ ಮಾಡಬಾರದೆಂದು ನಿರ್ಬಂಧಿಸುವುದು ಸರಿಯಲ್ಲ' ಎಂದಿದ್ದಾರೆ.

ಕೃಷ್ಣಾ ನದಿ ನೀರು ಹಂಚಿಕೆ: ಹೊರಬೀಳದ ಅಂತಿಮ ತೀರ್ಪು

3.5 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಕಲ್ಪಿಸಲು ಅಡ್ಡಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕರ್ನಾಟಕ ಸರ್ಕಾರ ಸಲ್ಲಿಸಿರುವ ಮಧ್ಯಂತರ ಮನವಿಯ ವಿಚಾರಣೆ
- ರಾಜ್ಯದ ಪರವಕೀಲ ಮೋಹನ್ ಕಾತರಕಿ ವಾದ
- ವಿಚಾರಣೆ ಡಿಸೆಂಬರ್ 6ಕ್ಕೆ ಮುಂದೂಡಿಕೆ

ನವದೆಹಲಿ: ಕೃಷ್ಣಾ ನದಿ ನೀರು ಹಂಚಿಕೆ ವಿವಾದದ ಅಂತಿಮ ತೀರ್ಪು ಪ್ರಕಟಿಸದೇ ಇರುವುದರಿಂದ ಬರಪೀಡಿತ ಕಲ್ಯಾಣ ಕರ್ನಾಟಕಕ್ಕೆ ಕೃಷ್ಣಾ ಮೇಲ್ದಂಡೆ ಯೋಜನೆ-3ನೇ ಹಂತದಲ್ಲಿ 3.5 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಒದಗಿಸಲು ಸಾಧ್ಯವಾಗಿಲ್ಲ. ಇದರಿಂದ ರಾಜ್ಯಕ್ಕೆ ಭಾರಿ ನಷ್ಟ ಉಂಟಾಗಿದೆ ಎಂದು ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮಂಗಳವಾರ ತಿಳಿಸಿದೆ.

ನ್ಯಾಯಾಧಿಕರಣದ ಅಂತಿಮ ತೀರ್ಪನ್ನು ಶೀಘ್ರವಾಗಿ ಪ್ರಕಟಿಸು ವಂತೆ ಕರ್ನಾಟಕ ಸರ್ಕಾರ ಸಲ್ಲಿಸಿ ರುವ ಮಧ್ಯಂತರ ಮನವಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೆ.ಬಿ.ಪಾರ್ದಿವಾಲಾ ಅವರನ್ನೊಳಗೊಂಡ ದ್ವಿಸದಸ್ಯ ಪೀಠ ಮಂಗಳವಾರ ನಡೆಸಿತು.

ಕರ್ನಾಟಕ ಪರ ಹಿರಿಯ ವಕೀಲ ಮೋಹನ್ ಕಾತರಕಿ, 'ರಾಜ್ಯಕ್ಕೆ 174 ಟಿಎಂಸಿ ಹೆಚ್ಚುವರಿ ನೀರನ್ನು ಹಂಚಿಕೆ ಮಾಡಲಾಗಿತ್ತು. ಅದರಲ್ಲಿ 65 ಟಿಎಂಸಿಯನ್ನು ಬರಪೀಡಿತ ಪ್ರದೇಶಗಳಲ್ಲಿ 3.5 ಲಕ್ಷ ಹೆಕ್ಟೇರ್ ಭೂಮಿಗೆ ನೀರುಣಿಸಲು ಬಳಸಲು ಯೋಜಿಸಲಾಗಿದೆ. ಇದರಿಂದ ಕೆಳಭಾಗದ ರಾಜ್ಯಗಳಾದ ತೆಲಂಗಾಣ ಮತ್ತು ಆಂಧ್ರಪ್ರದೇಶಕ್ಕೆ ಯಾವುದೇ ತೊಂದರೆ ಉಂಟಾಗುವುದಿಲ್ಲ' ಎಂದರು.

ಈ ಮೇಲ್ಮನವಿಯನ್ನು ಸಂವಿಧಾನದ 136ನೇ ಪರಿಚ್ಛೇದದಡಿ ಸಲ್ಲಿಸಲಾಗಿದ್ದು, ನ್ಯಾಯಾಧಿಕರಣದ ತೀರ್ಪು ತನ್ನ ವ್ಯಾಪ್ತಿಯನ್ನು ಮೀರಿರುವುದರಿಂದ, ಅದರ ಕೆಲಭಾಗವನ್ನಷ್ಟೇ ಅಳವಡಿಸಲು ಸಾಧ್ಯ. ಕರ್ನಾಟಕಕ್ಕೆ 174 ಟಿಎಂಸಿ ನೀರು ಮಂಜೂರು ಮಾಡುವುದರಿಂದ ತೆಲಂಗಾಣ ಮತ್ತು ಆಂಧ್ರಪ್ರದೇಶದಿಂದ ಉಂಟಾಗಿರುವ ಸಮಸ್ಯೆ ಎದುರಿಸಲು ಸಾಧ್ಯವಾಗಬಹುದು ಎಂದರು.

ಕರ್ನಾಟಕದ ವಾದಕ್ಕೆ ಧ್ವನಿಗೂಡಿಸಿದ ಮಹಾರಾಷ್ಟ್ರ ಪರ ವಕೀಲ ದೀಪಕ್ ನರ್ಗೋಲ್ಕರ್, ತೆಲಂಗಾಣ ಮತ್ತು ಆಂಧ್ರಪ್ರದೇಶ ಸರ್ಕಾರಗಳು ಕಳೆದೊಂದು ದಶಕದಿಂದ ಒಂದಲ್ಲ ಒಂದು ಕಾರಣಕ್ಕೆ ಈ ವಿಷಯವನ್ನು ಎಳೆದಾಡುತ್ತಲೇ ಇವೆ ಎಂದು ಆರೋಪಿಸಿದರು. ನ್ಯಾಯಾಲಯ ಈ ಪ್ರಕರಣದ ವಿಚಾರಣೆಯನ್ನು ಡಿಸೆಂಬರ್ 6ಕ್ಕೆ ಮುಂದೂಡಿತು.

ತೆಲಂಗಾಣ ಪರ ಹಿರಿಯ ವಕೀಲರಾದ ಸಿ.ಎಸ್.ವೈದ್ಯನಾಥನ್ ಅವರು, ತೀರ್ಪು ಹೊರಬಿದ್ದು, ಮೇಲ್ಮನವಿ ವಿಚಾರಣೆ ಬಾಕಿ ಇರುವಾಗಲೇ ಶೇ 50ರಷ್ಟು ಪ್ರಮಾಣದ ನೀರನ್ನು ಹಂಚಿಕೆ ಮಾಡುವಂತೆ ಸೂಚನೆ ನೀಡಿದಲ್ಲಿ, ಕೆಳಹಂತದಲ್ಲಿರುವ ತೆಲಂಗಾಣಕ್ಕೆ ಭಾರಿ ನಷ್ಟವಾಗಲಿದೆ ಎಂದರು.

ತೆಲಂಗಾಣ ಪ್ರತ್ಯೇಕ ರಾಜ್ಯವಾಗಿ ಹೊರಹೊಮ್ಮಿದ ನಂತರ, ಕೃಷ್ಣಾ ನದಿ ನೀರು ಹಂಚಿಕೆಯನ್ನು ಮರು ಮಂಜೂರು ಮಾಡಬೇಕು ಎಂದು ಕೋರಿ ಈ ಹಿಂದೆ ತೆಲಂಗಾಣ ಅರ್ಜಿ ಸಲ್ಲಿಸಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಕರ್ನಾಟಕ, ಮೊದಲು ಇದು ಆಂಧ್ರಪ್ರದೇಶ ಪಾಲಿನ ಭಾಗವಾಗಿದ್ದರಿಂದ, ಅದರ ಪ್ರಮಾಣದ ನೀರನ್ನಷ್ಟೇ ತೆಲಂಗಾಣ ಹಾಗೂ ಆಂಧ್ರಪ್ರದೇಶಕ್ಕೆ ಹಂಚಿಕೆ ಮಾಡಬೇಕು ಎಂದು ವಾದ ಮಂಡಿಸಿತ್ತು.

ಗೋವಾ ಜಿ.ಪಂ ಉಪಚುನಾವಣೆ: ಬಿಜೆಪಿಗೆ ಗೆಲುವು

ಪಣಜಿ (ಪಿಟಿಐ): ಗೋವಾದ ಮೂರೂ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೆ ಇತ್ತೀಚೆಗೆ ನಡೆದಿದ್ದ ಉಪಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಾವೋರ್ಲಿಂ, ರೀಸ್ ಮೈಗೋಸ್ ಹಾಗೂ ಕಾರ್ತಲಿಂ ಕ್ಷೇತ್ರಗಳಿಗೆ ಭಾನುವಾರ ಉಪಚುನಾವಣೆಗಳು ನಡೆದಿದ್ದವು. ಮಂಗಳವಾರ ಅವುಗಳ ಫಲಿತಾಂಶವನ್ನು ಘೋಷಿಸಲಾಯಿತು.

ಬಿಜೆಪಿ ಅಭ್ಯರ್ಥಿಗಳಾದ ಪರೇಶ್ ನಾಯಕ್, ಸಂದೀಪ್ ಕಾಶಿ ನಾಥ್ ಬಂದೋಡ್ಕರ್ ಮತ್ತು ಬಿಜೆಪಿ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಮರ್ಸಿಯಾನಾ ಮೆಂಡೆಸ್ ಇ ವಾಜ್ ಅವರು ಗೆಲುವು ಸಾಧಿಸಿದ ಅಭ್ಯರ್ಥಿಗಳು ಎಂದು ಗೋವಾದ ರಾಜ್ಯ ಚುನಾವಣಾ ಆಯೋಗ ಹೇಳಿದೆ.

ಚಂಡಮಾರುತ ಸೃಷ್ಟಿ ಸಾಧ್ಯತೆ

ನವದೆಹಲಿ (ಪಿಟಿಐ): ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ ಹೊಂದಿಕೊಂಡಂತೆ ಬಂಗಾಳಕೊಲ್ಲಿಯಲ್ಲಿ ಮಂಗಳವಾರ ಕಡಿಮೆ ಒತ್ತಡ ಪ್ರದೇಶದಂಥ ವಿದ್ಯಮಾನ ಸೃಷ್ಟಿಯಾಗಿದ್ದು, ವಾರಾಂತ್ಯದ ವೇಳೆಗೆ ಅದು ತೀವ್ರ ಸ್ವರೂಪ ಪಡೆದು ಚಂಡಮಾರುತವಾಗಿ ಪರಿವರ್ತನೆಗೊಳ್ಳುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮಂಗಳವಾರ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಸಿಪಿಐ ಪ್ರಧಾನ ಕಾರ್ಯದರ್ಶಿಯಾಗಿ ಡಿ. ರಾಜಾ ಪುನರಾಯ್ಕೆ

ವಿಜಯವಾಡ (ಪಿಟಿಐ): ಭಾರತ ಕಮ್ಯುನಿಸ್ಟ್ ಪಕ್ಷದ (ಸಿಪಿಐ) ಪ್ರಧಾನ ಕಾರ್ಯದರ್ಶಿಯಾಗಿ ಎರಡನೇ ಅವಧಿಗೆ ತಮಿಳುನಾಡಿನ ಡಿ. ರಾಜಾ ಅವರು ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.

ಮಂಗಳವಾರ ಮುಕ್ತಾಯವಾದ ಸಿಪಿಐನ 24ನೇ ರಾಷ್ಟ್ರೀಯ ಸಮಾವೇಶದಲ್ಲಿ 11 ಸದಸ್ಯರ ಸಮಿತಿ ರಾಜಾ ಅವರನ್ನು ಆಯ್ಕೆ ಮಾಡಲಾಗಿದೆ. ಪಕ್ಷವು 30 ಸದಸ್ಯರ ರಾಷ್ಟ್ರೀಯ ಕಾರ್ಯಕಾರಿಣಿ ಹಾಗೂ 99 ಸದಸ್ಯರ ರಾಷ್ಟ್ರೀಯ ಮಂಡಳಿಯನ್ನೂ ಆಯ್ಕೆ ಮಾಡಿದೆ.

ತಮಿಳು ಮಾಧ್ಯಮದಲ್ಲಿ ವೈದ್ಯಕೀಯ ಕೋರ್ಸ್‌ಗೆ ಚಿಂತನೆ

ಪುದುಚೇರಿ (ಪಿಟಿಐ):: ತಮಿಳು ಮಾಧ್ಯಮದಲ್ಲಿ ಎಂಬಿಬಿಎಸ್ ಕೋರ್ಸ್ ಅನ್ನು ಬೋಧಿಸುವ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಆರಂಭಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್ ತಮಿಳಿಸೈ ಸೌಂದರರಾಜನ್ ಅವರು ಮಂಗಳವಾರ ಹೇಳಿದ್ದಾರೆ.

ಇಲ್ಲಿ ನಡೆದ ಹಿರಿಯ ನಾಗರಿಕರ ಸನ್ಮಾನ ಸಮಾರಂಭದಲ್ಲಿ ಪಾಲ್ಗೊಂಡ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳು ಮಾಧ್ಯಮದಲ್ಲಿ ಎಂಬಿಬಿಎಸ್ ಕೋರ್ಸ್ ಅನ್ನು ಬೋಧಿಸುವ ವೈದ್ಯಕೀಯ ಕಾಲೇಜು ಸ್ಥಾಪನೆ ಕುರಿತು ಮುಖ್ಯಮಂತ್ರಿ ರಂಗಸಾಮಿ ಅವರೊಂದಿಗೆ ಚರ್ಚಿಸಲಾಗುವುದು. ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ತಮಿಳು ಭಾಷೆಯಲ್ಲಿ ಪಠ್ಯಪುಸ್ತಕ ರೂಪಿಸಲು ಸಮಿತಿಯೊಂದನ್ನು ರಚಿಸಲಾಗುವುದು' ಎಂದು ತಿಳಿಸಿದರು.

ರಾಜೀವ್ ಗಾಂಧಿ ಹತ್ಯೆ ತನಿಖೆಗೆ ರಚಿಸಲಾದ ಸಂಸ್ಥೆ ರದ್ದು

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆಯ ಪಿತೂರಿ ಪ್ರಕರಣದ ತನಿಖೆಗಾಗಿ ರಚಿಸಲಾಗಿದ್ದ ಬಹುಶಿಸ್ತೀಯ ಮೇಲ್ವಿಚಾರಣಾ ಸಮಿತಿಯನ್ನು (ಎಂಡಿಎಂಎ) ಕೇಂದ್ರ ಸರ್ಕಾರ ರದ್ದುಪಡಿಸಿದೆ.

24 ವರ್ಷಗಳಿಂದ ಇದ್ದ ಈ ಸಮಿತಿಯು ಸಿಬಿಐ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿತ್ತು.

ಸಮಿತಿಯನ್ನು ವಿಸರ್ಜಿಸುವ ಆದೇಶವನ್ನು ಮೇ ತಿಂಗಳಲ್ಲಿ ಹೊರಡಿಸಲಾಗಿತ್ತು. ಬಾಕಿ ಉಳಿದಿರುವ ತನಿಖೆಯನ್ನು ಸಿಬಿಐನ ಬೇರೆ ಘಟಕಕ್ಕೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಭಾರತ್ ಜೋಡೊ ಯಾತ್ರೆ ದೊಡ್ಡದು'

ಜೈಪುರ (ಪಿಟಿಐ): 'ಭಾರತ್ ಜೋಡೊ ಯಾತ್ರೆಯನ್ನು ವಿಶಿಷ್ಟ ಮತ್ತು ಐತಿಹಾಸಿಕ ಚಳವಳಿ ಎಂದು ಬಣ್ಣಿಸಿರುವ ರಾಜಸ್ಥಾನದ ಆರೋಗ್ಯ ಸಚಿವ ಪರ್ಸಾದಿ ಲಾಲ್ ಮೀನಾ ಅವರು 'ಅಯೋಧ್ಯೆಯಿಂದ ಕಾಶ್ಮೀರದವರೆಗೆ ಕೈಗೊಂಡಿದ್ದ ರಾಮನ ಪಾದಯಾತ್ರೆಗಿಂತಲೂ ಭಾರತ್ ಜೋಡೊ ಯಾತ್ರೆ ದೊಡ್ಡದು' ಎಂದು ಹೇಳಿದ್ದಾರೆ.

ಪರ್ಸಾದಿ ಲಾಲ್ ಮೀನಾ ಅವರ ಹೇಳಿಕೆಗೆ ವ್ಯಂಗ್ಯವಾಗಿ ಪ್ರತಿಕ್ರಿಯಿಸಿರುವ ಬಿಜೆಪಿ, 'ಕಾಂಗ್ರೆಸ್ ನಾಯಕರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಮುಖಸ್ತುತಿಯ ಮೊರೆ ಹೋಗಿದ್ದಾರೆ' ಎಂದು ಹೇಳಿದೆ.

ಪರಿಷತ್: ಸನ್ನದು ಅಮಾನತು

ಬೆಂಗಳೂರು: ವೃತ್ತಿ ದುರ್ನಡತೆ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ವಕೀಲರ ಪರಿಷತ್ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಕೆ.ಬಿ.ನಾಯಕ್ ಅವರು ದೇಶದ ಯಾವುದೇ ನ್ಯಾಯಾಲಯದಲ್ಲಿ ವಕೀಲಿಕೆ ನಡೆಸದಂತೆ ಭಾರತೀಯ ವಕೀಲರ ಪರಿಷತ್ ಅವರ ಸನ್ನದನ್ನು ತಾತ್ಕಾಲಿಕವಾಗಿ ಅಮಾನತುಗೊಳಿಸಿದೆ.

ಬೆಳಗಾವಿಯ ವಕೀಲ ಬಸವರಾಜ ಜರಳಿ ಸಲ್ಲಿಸಿದ್ದ ಮರು ಪರಿಶೀಲನಾ ಅರ್ಜಿಯನ್ನು ಬಿಸಿಐನ ಮೂವರು ಸದಸ್ಯರ ಶಿಸ್ತುಪಾಲನಾ ಸಮಿತಿ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ. 'ಮರು ಪರಿಶೀಲನಾ ಅರ್ಜಿ ಇತ್ಯರ್ಥವಾಗುವವರೆಗೆ ನಾಯಕ್ ಅವರು ದೇಶದ ಯಾವುದೇ ಕೋರ್ಟ್‌ನಲ್ಲಿ ವಕಾಲತ್ತು ಸಲ್ಲಿಸುವಂತಿಲ್ಲ' ಎಂದು ಮಧ್ಯಂತರ ಆದೇಶದಲ್ಲಿ ತಿಳಿಸಿದ್ದು, 'ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ಕು ವಾರಗಳಲ್ಲಿ ಉತ್ತರಿಸಿ' ಎಂದು ಕೆಎಸ್‌ಬಿಸಿ ಹಾಗೂ ನಾಯಕ್ ಅವರಿಗೆ ನೋಟಿಸ್ ಜಾರಿಗೊಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಕೇರಳದ ಎರ್ನಾಕುಲಂನಲ್ಲಿರುವ ರೆಸ್ಟೋರೆಂಟ್‌ಗಾಗಿ ದೋಸೆ ಮತ್ತು ಥಟ್ಟು ಇಡ್ಲಿ ಮೇಕರ್‌ಅನುಭವವುಳ್ಳವರು ತಕ್ಷಣ ಬೇಕಾಗಿದ್ದಾರೆ ಆಕರ್ಷಕ ವೇತನ : 9895175800

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

Multiple Vacancy

WANTED SALES executives for Chalo Mobility. Interested candidates must speak Kannada. Please visit office no:77, Private bus stand near high school field, AVK college road, Davanagere between 10:30 AM- 01:00 PM during Monday- Saturday. Education: 10th Pass. Age: 18+. Salary: 17256 per month. Call: 9606818611

Wanted

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿ ಇದೆ.10,000- 15,000. 8951315839, 9880545002

ತಕ್ಷಣವೇ ಬೇಕಾಗಿದೆ: ಬೆಂಗಳೂರಿನಲ್ಲಿ ಆಫೀಸ್ ಕೆಲಸಕ್ಕೆH.R, ಟೆಲಿಕಾಲರ್ಗಳು, ರಿಸೆಪ್ಷನಿಸ್ಟ್ ಕೆಲಸಕ್ಕಾಗಿ ಯುವತಿಯರು ಬೇಕಾಗಿದ್ದಾರೆ. ವಸತಿಯೊಂದಿಗೆ 12,000 - 25,000/-. 8951951606

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆ ಮಾಡಿ: 9611225266/ 9611225388

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ವೈವಾಹಿಕ

Brides Wanted

Hindu

ಮದುವೆಯಾಗಲು ಹೆಣ್ಣು ಬೇಕಾಗಿದೆ. ಜಾತಿ ಕೇಳಲ್ಲ, ವೃತ್ತಿ ವ್ಯವಸಾಯ, ಅಪ್ಪ ಇಲ್ಲ, ಅಮ್ಮನಿಗೆ ವಯಸ್ಸಾಗಿದೆ. ತಂಗಿಗೆ ಮದುವೆಯಾಗಿ ಗಂಡನ ಮನೆ ವಾಸ, ವಿದ್ಯೆ ಪಿಯುಸಿ. 7411809894

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 9900510171

"ಕೆಲಸಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮಿತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Travel

16.11.2022 11.01.2023 15.02.2023 ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್ 7/11 ದಿನಗಳು. 06.11.2022 13.01.2023 08.02.2023 ದುಬೈ 5 ದಿನಗಳು. 10.11.2022 09.12.2022 17.01.2023 ಕಾಶಿ,ಗಯಾ,ಅಯೋಧ್ಯ 7 ದಿನಗಳು. 27.11.2022 13.12.2022 12.01.2023 ಗುಜರಾತ್ 8 ದಿನಗಳು. 18.11.2022 04.12.2022 ರಾಜಸ್ಥಾನ್ 9 ದಿನಗಳು. 04.12.2022 ರ್‍ರಾಮೇಶ್ವರ ಕನ್ಯಾಕುಮಾರ,ಮಧುರೈ 6 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು.3 9448402248 7022547922

ಹೆಸರಾಂತ ಪ್ರವಾಸಿ ಸಂಸ್ಥೆಯಾದ ಏಷ್ಯನ್ ಟ್ರಾವಲ್ ಏಜೆನ್ಸಿ ವತಿಯಿಂದ ಸಮಸ್ತ ನಾಡಿನ ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳೊಂದಿಗೆ ವಿಮಾನ/ A/C ಬಸ್ಸಿನಲ್ಲಿ 09.11.2022 ಸೋಮನಾಥ ಕಚ್-ಬುಜ್ ಓಂಕಾರೇಶ್ವರ್ ಮಂಹಾಕಾಳೇಶ್ವರ್ 11.11.2022 ಪಂಚರಾಮ ಸಮೇತ ಪ್ರವಾಸ 14.11.2022, 6 ದಿನಗಳ ಕಾಶಿ,ಅಲಹಾಬಾದ್‌ಅಯೋಧ್ಯ 18.11.2022 ಮುಕ್ತಿನಾಥ, ನೇಪಾಳ,ಪೋಕ್ರಾ 24.12.2022, 6 ದಿನಗಳ ಶಿರಡಿ ಮತ್ತು 9 ದಿನಗಳ ದಕ್ಷಿಣ ಭಾರತ ಪ್ರವಾಸ. ಸಂಪರ್ಕಿಸಿ. 26574131 26573421 8317446683

05.11.2022ರಿಂದ 13ದಿನಗಳು ಎಸಿ.ಬಸ್ಸು, ಎಸಿ.ರೂಂನೊಂದಿಗೆ ಪಂಚರಾಮಕ್ಷೇತ್ರ ಸಮೇತ ಭದ್ರಾಚಲಂ,ಅನ್ನಾವರಂ,ವಿಶಾಖಪಟ್ಟಣ,ವಾಸವಿಪೆನ್ನಗೊಂಡ ದ್ವಾರಕಾ,ತಿರುಮಲ`ಇತ್ಯಾದಿ. 27.11.2022ರಿಂದ 8ದಿನಗಳು ವಿಮಾನ, ಎಸಿ.ರೂಂ,`ಎಸಿ.ಬಸ್ಸುನೊಂದಿಗೆ`ಕಾಶಿ,ಗಯಾ, ನೈಮಿಷಾರಣ್ಯ,ಅಯೋಧ್ಯ ಅಹಮದಾಬಾದ್` ಏಷ್ಯನ್`ಟ್ರಾವೆಲ್`ಲೈನ್ಸ್ #164/3`ಆರ್.ವಿ.ರಸ್ತೆ, ಬೆಂಗಳೂರು.ಸಂಪರ್ಕಿಸಿ: 8105657052/ 9480182865

ಕಾರ್ತಿಕ ಮಾಸದ ವಿಶೇಷ ಪ್ರವಾಸ: ವಿಮಾನ/A/C ಬಸ್ಸಿನಲ್ಲಿ 18.11.2022 ರಿಂದ 16 ದಿನಗಳ ಅಷ್ಟ ಜ್ಯೋತಿರ್ಲಿಂಗ ಗುಜರಾತ್ ಮಧ್ಯಪ್ರದೇಶ ಮಹಾರಾಷ್ಟ್ರ ಮೌಂಟ್‌ಅಬು ಇತ್ಯಾದಿ. ಊಟ,ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289 9686721196

10.11.2022 ಅಷ್ಟಜ್ಯೋತಿರ್ಲಿಂಗ ಪ್ರವಾಸ 03.12.2022 11ದಿನ ಆಂಧ್ರ ಪ್ರವಾಸ. 24.12.2022 ರಾಜಸ್ಥಾನ್ ಪ್ರವಾಸ. 25.12.2022 ತಮಿಳುನಾಡು,ಕೇರಳ ಪ್ರವಾಸ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ 9342287551 8050629305

★12.12.2022 21ದಿನಗಳು★ ಪಂಚದ್ವಾರಕ 8ಜ್ಯೋತಿರ್ಲಿಂಗ ಪ್ರವಾಸ,6ದಿನಗಳು ರಾಜಸ್ಥಾನ್ ಪ್ರವಾಸ.18.12.2022 10ದಿನಗಳು ಗುಜರಾತ್, ಮಧ್ಯಪ್ರದೇಶಪ್ರವಾಸ. ಆರ್.ಗಾಂಧಿ ಟೂರ್ಸ್. 9945445809 9902433500 6363416487

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 3.11.2022, ಕಾಶಿ, ಗಯಾ,ಪ್ರಯಾಗ್ ರಾಜ್,ಅಯೋಧ್ಯ, 14.11.2022, ಗುಜರಾತ್,ದ್ವಾರಕ, ನಾಗನಾಥ್, ಸೋಮನಾಥ ಇತ್ಯಾದಿ. 9591017782, 9964527782

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ಪ್ರಜಾವಾಣಿ

ರಿಯಲ್ ಎಸ್ಟೇಟ್

BOOK YOUR PROPERTY AD IN PRAJAVANI ALL KARNATAKA ON FRIDAY + SATURDAY + SUNDAY

@ 2100/-*
FOR 15 WORDS

conditions apply*

ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9731810277 | 9901641752
9845114560 | 9886213331
080- 45557163 | 45557164

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಮೂರ್ತಿ, ಎನ್‌ಆರ್‌. ಕಾಲೊನಿ, ಬೆಂಗಳೂರು

● **ಪ್ರಶ್ನೆ:** ನಾನು ರಾಜ್ಯ ಸರ್ಕಾರದ ಅಬಕಾರಿ ಇಲಾಖೆಯಲ್ಲಿ ಸುಮಾರು 36 ವರ್ಷ ಕಾರ್ಯನಿರ್ವಹಿಸಿ ನಿವೃತ್ತನಾಗಿರುತ್ತೇನೆ. ನನಗೆ ಈಗ 85 ವರ್ಷ ವಯಸ್ಸು. ನಿವೃತ್ತಿಯ ನಂತರ ಸರ್ಕಾರದಿಂದ ಬಂದ ಹಣದಿಂದ ಹಾಗೂ ನನ್ನ ಉಳಿತಾಯದ ಹಣದಿಂದ ಎಲ್‌ಐಸಿ ಹಾಗೂ ಅಂಚೆ ಕಚೇರಿಯಲ್ಲಿ ಎಫ್‌.ಡಿ. ಮಾಡಿರುತ್ತೇನೆ. ಈ ಹೂಡಿಕೆ ಸುಮಾರು ₹ 6-7 ಲಕ್ಷ ಆಗಿರುತ್ತದೆ. ಇದಕ್ಕೆ ನಾನು ತೆರಿಗೆ ಕೊಡಬೇಕೇ? ನನಗೆ ತೆರಿಗೆ ವಿನಾಯಿತಿ ಇದೆಯೇ?

ಉತ್ತರ: ನಿಮಗೆ 85 ವರ್ಷ ವಯಸ್ಸಾಗಿರುವ ಕಾರಣ ನೀವು ಅತಿ ಹಿರಿಯ ನಾಗರಿಕರ ವರ್ಗದಲ್ಲಿ ಬರುತ್ತೀರಿ. ಆದಾಯ ತೆರಿಗೆ ನಿಯಮದಂತೆ ನಿಮಗೆ ₹ 5 ಲಕ್ಷದವರೆಗೆ ತೆರಿಗೆ ವಿನಾಯಿತಿ ಇದೆ. ಆದಾಯವು ಇದಕ್ಕಿಂತ ಹೆಚ್ಚಿಗೆ ಇದ್ದರೆ ತೆರಿಗೆ ವಿವರ ಸಲ್ಲಿಸಬೇಕಾಗುತ್ತದೆ. ನಿಮ್ಮ ಪಿಂಚಣಿ ಹಾಗೂ ಬಡ್ಡಿ ಆದಾಯ ಒಟ್ಟು ಸೇರಿಸಿದಾಗ ₹ 5 ಲಕ್ಷಕ್ಕಿಂತ ಹೆಚ್ಚಿದ್ದರೆ ನೀವು ತೆರಿಗೆ ವ್ಯಾಪ್ತಿಗೆ ಬರುತ್ತೀರಿ, ಆಗ ನೀವು ತೆರಿಗೆ ವಿವರ ಸಲ್ಲಿಸಬೇಕು. ಆದರೆ ಒಟ್ಟು ಆದಾಯದಲ್ಲಿ ನಿಮಗೆ ಮೂಲ ಆದಾಯ ಕಡಿತ ₹ 50,000 ಹಾಗೂ ಪ್ರಸ್ತುತ ನಿಮ್ಮ ಅಂಚೆ ಕಚೇರಿಯ ಎಫ್‌.ಡಿ ಹೂಡಿಕೆಗೆ ಸಿಗುವ ಬಡ್ಡಿ ಆದಾಯಕ್ಕೆ ₹ 50,000ದವರೆಗೆ ತೆರಿಗೆ ವಿನಾಯಿತಿ ಇದೆ.

75 ವರ್ಷ ವಯಸ್ಸು ಮೀರಿದ ವ್ಯಕ್ತಿಗಳಿಗೆ ತೆರಿಗೆ ವಿವರ ಸಲ್ಲಿಸುವುದಕ್ಕೆ ಇರುವ ವಿನಾಯಿತಿ ಬಗ್ಗೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 194ಪಿ ವಿವರಿಸುತ್ತದೆ. ಇದರ ಪ್ರಯೋಜನ ಪಡೆಯಲು, ತೆರಿಗೆದಾರ ನಿವಾಸಿ ಭಾರತೀಯನಾಗಿರಬೇಕು. ಅವರು ಪಿಂಚಣಿ ಪಡೆಯುತ್ತಿರಬೇಕು ಮತ್ತು ಬಡ್ಡಿ ಆದಾಯವಿದ್ದರೆ ಪಿಂಚಣಿ ಪಡೆಯುವ ಬ್ಯಾಂಕ್‌ನಿಂದ ಬಡ್ಡಿ ಆದಾಯ ಪಡೆಯುತ್ತಿರಬೇಕು. ಆದರೆ, ನೀವು ಪಿಂಚಣಿ ಜೊತೆ ಬಡ್ಡಿ ಆದಾಯವನ್ನೂ ಗಳಿಸುತ್ತಿರುವ ಕಾರಣ, ಒಟ್ಟಾರೆ ಆದಾಯ ₹ 5 ಲಕ್ಷಕ್ಕಿಂತ ಮೀರಿರದ ಪಕ್ಷದಲ್ಲಷ್ಟೇ ತೆರಿಗೆ ವಿವರ ಸಲ್ಲಿಸದಿರಲು ಅವಕಾಶವಿದೆ.

ಸುರೇಂದ್ರನಾಥ್, ಬೆಂಗಳೂರು

● **ಪ್ರಶ್ನೆ:** ನಾನು ಷೇರು ಮಾರುಕಟ್ಟೆಯಲ್ಲಿ ಕೆಲವು ವರ್ಷಗಳಿಂದ ವ್ಯವಹರಿಸುತ್ತಿದ್ದೇನೆ. ದೀರ್ಘಾವಧಿಯಲ್ಲಿ ಉತ್ತಮ ಲಾಭ ನಿರೀಕ್ಷಿಸುತ್ತಿದ್ದೇನೆ. ಇದಕ್ಕಾಗಿ ಹಂತ ಹಂತವಾಗಿ ಹೂಡಿಕೆ ಮಾಡುತ್ತಿದ್ದೇನೆ. ಆದರೆ ಕೆಲವು ತಪ್ಪು ನಿರ್ಧಾರಗಳಿಂದಾಗಿ ಐ.ಟಿ. ಷೇರುಗಳಲ್ಲಿನ ನನ್ನ ಹೂಡಿಕೆ ನಷ್ಟದಲ್ಲಿದೆ. ಮುಂದಿನ ಲಾಭಕ್ಕೆ ಸಂಬಂಧಿಸಿದಂತೆ ತೆರಿಗೆ ನಿಭಾಯಿಸುವುದು ಹೇಗೆ? ಇರುವ ಷೇರುಗಳಿಂದ ನಷ್ಟದಲ್ಲಿ ಹೊರಬರಲೇ? ಇದು ತೆರಿಗೆ ಉಳಿತಾಯದ ದೃಷ್ಟಿಯಲ್ಲಿ ಸರಿಯೇ?

ಉತ್ತರ: ಪ್ರತಿ ಹೂಡಿಕೆದಾರನ ನಿರೀಕ್ಷೆ ಹಾಗೂ ಹೂಡಿಕೆ ಅವಧಿ ಬೇರೆ ಬೇರೆ. ಅಲ್ಪಾವಧಿಯಲ್ಲಿ ಒಂದಷ್ಟು ಲಾಭ ಬಂದಾಗ ದೀರ್ಘಾವಧಿ ಹೂಡಿಕೆದಾರನಾಗಲು ಕೆಲವರು ಮುಂದಾಗುವುದು ಇದೆ. ಇನ್ನು ಕೆಲವರು ಬಂದ ಲಾಭದಲ್ಲಿ ಸಂತೃಪ್ತರಾಗಿ ಹೂಡಿಕೆಯಿಂದ ಹೊರಬರುವುದು ಇದೆ. ಅಲ್ಪಾವಧಿ ಹೂಡಿಕೆದಾರರಲ್ಲಿ ಕೆಲವರು ಮಾರುಕಟ್ಟೆ ಪ್ರತಿಕೂಲವಾಗಿ ಚಲಿಸಿದಾಗ ಆಗುವ ನಷ್ಟವನ್ನು ನೋಡಿಕೊಂಡು, ಇರುವ ಹೂಡಿಕೆ ಮೊತ್ತವನ್ನೂ ಸಮರ್ಪಕವಾಗಿ ನಿಭಾಯಿಸಲು ಆಗದ ಸ್ಥಿತಿ ತಲುಪುವುದು ಕೂಡ ಇದೆ.

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೊಂದು ಇದೆ. ಹೂಡಿಕೆ ಮಾಡುವ ಮೊದಲು ಹಣಕಾಸಿನ ಸಮರ್ಪಕ ಯೋಜನೆ ಮಾಡಿಕೊಂಡರೆ ಯಾವುದೇ ಆತಂಕ ಹಾಗೂ ಭೀತಿಗೆ ಒಳಗಾಗಿ ಆತುರದ ನಿರ್ಧಾರ ಕೈಗೊಳ್ಳುವ ಪ್ರಮೇಯ ಬರುವುದಿಲ್ಲ. ಯಾವುದೇ ಹೂಡಿಕೆಗೆ ಮುನ್ನ ನೀವು ಆಯ್ಕೆ ಮಾಡಿದ ಕ್ಷೇತ್ರ ಸರಿಯಾಗಿ ಇದೆಯೇ, ನಿಮ್ಮ ಒಟ್ಟಾರೆ ಹೂಡಿಕೆ ಮೊತ್ತದಲ್ಲಿ ಅತಿ ಹೆಚ್ಚಿನ ಮೊತ್ತವನ್ನು ಆ ಕ್ಷೇತ್ರದಲ್ಲಿ ನೀವು ತೊಡಗಿಸಲು ಬಯಸಿದ್ದೀರಾ ಎಂಬ ಬಗ್ಗೆ ಆಲೋಚಿಸಿಕೊಳ್ಳಿ. ನೀವು ಆಯ್ಕೆ ಮಾಡಿದ ಕಂಪನಿ ಷೇರುಗಳು ಹಾಗೂ ಆ ಕಂಪನಿಯ ಕಾರ್ಯಕ್ಷೇತ್ರ ಭವಿಷ್ಯದಲ್ಲಿ ಉತ್ತಮ ಲಾಭ ತರುವ ಸಾಧ್ಯತೆ ಇದೆ ಎಂದಾದರೆ, ಆ ರೀತಿಯ ಅಂದಾಜು ಮಾಡಿರುವುದಕ್ಕೆ ಕಾರಣ ಏನು ಎಂಬುದನ್ನೂ ದಾಖಲಿಸಿಡಿ. ಇದು, ಮುಂದೆ ಹೂಡಿಕೆಗಳಲ್ಲಿ ಕೈಗೊಳ್ಳಬಹುದಾದ ತಪ್ಪು ನಿರ್ಧಾರಗಳನ್ನು ಸರಿ ಮಾಡಲು ನೆರವಾಗುತ್ತದೆ.

ಐ.ಟಿ. ಷೇರುಗಳಲ್ಲಿನ ನಿಮ್ಮ ಹೂಡಿಕೆ ನಷ್ಟದಲ್ಲಿದೆ ಎಂಬ ವಿಚಾರ ಗಮನಿಸೋಣ. ನೀವು ದೀರ್ಘಾವಧಿ ಹೂಡಿಕೆಯಲ್ಲಿ ಲಾಭ ನಿರೀಕ್ಷಿಸುವವರು ಹಾಗೂ ಇದಕ್ಕಾಗಿ ಹಂತ ಹಂತಗಳಲ್ಲಿ ಹೂಡಿಕೆ ಮಾಡುತ್ತಿರುವವರು. ಉತ್ತಮ ಕಂಪನಿಗಳಲ್ಲಿನ ಷೇರುಗಳೂ ಜಾಗತಿಕ ಹಾಗೂ ದೇಶಿ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಕೆಲವೊಮ್ಮೆ ಏರಿಳಿತ ಕಾಣಬಹುದು. ಆದರೆ, ದೀರ್ಘಾವಧಿಯಲ್ಲಿ ನಿಮ್ಮ ಯೋಜನೆಗೆ ಪ್ರತಿಕೂಲ ಪರಿಸ್ಥಿತಿ ಇದ್ದಾಗ ಮಾತ್ರ ನಷ್ಟವಾದರೂ ಹೂಡಿಕೆಯಿಂದ ಹೊರ ಬರುವುದು ಉತ್ತಮ ನಿರ್ಧಾರ. ಇದಕ್ಕೆ ಕಂಪನಿಯ ಇತ್ತೀಚಿನ ಕೆಲವು ತ್ರೈಮಾಸಿಕಗಳ ಫಲಿತಾಂಶ ಹಾಗೂ ಕಂಪನಿಯ ಆಡಳಿತ ಮಂಡಳಿಯ ಯೋಜನೆ, ದಕ್ಷತೆಯ ಗುಣಮಟ್ಟ ಅವಲೋಕಿಸಿ ನಿರ್ಧರಿಸಿ.

ಷೇರುಗಳಲ್ಲಿನ ದೀರ್ಘಾವಧಿ ಹೂಡಿಕೆಯಿಂದ ಸಿಗುವ ಲಾಭ ₹ 1 ಲಕ್ಷದವರೆಗೆ ಇದ್ದರೆ, ಅದು ತೆರಿಗೆಯಿಂದ ಮುಕ್ತವಾಗಿದೆ. ಇದಕ್ಕಿಂತ ಹೆಚ್ಚಿನ ಲಾಭದ ಮೊತ್ತವು ಶೇ 10 ಅಥವಾ ಶೇ 20ರ ಮೂಲ ದರದಲ್ಲಿ ತೆರಿಗೆಗೊಳಪಡುತ್ತದೆ. ಖರೀದಿ ದಿನದಿಂದ ಹನ್ನೆರಡು ತಿಂಗಳಿಗಿಂತ ಹೆಚ್ಚಿನ ಅವಧಿಗೆ ಹೊಂದಿದ ಷೇರುಗಳು ದೀರ್ಘಾವಧಿ ಹೂಡಿಕೆಗಳಾಗಿ ಪರಿಗಣಿತವಾಗುತ್ತವೆ. ಇವುಗಳಲ್ಲಿ ನಷ್ಟ ಆದಲ್ಲಿ, ಅದನ್ನು ದೀರ್ಘಾವಧಿ ಬಂಡವಾಳ ಲಾಭದೊಡನೆ ಮುಂದಿನ 8 ವರ್ಷಗಳಲ್ಲಿ ವಜಾ ಮಾಡುವ ಅವಕಾಶವಿದೆ. ಅಲ್ಪಾವಧಿ ಹೂಡಿಕೆಗಳಲ್ಲೂ (12 ತಿಂಗಳಿಗಿಂತ ಕಡಿಮೆ ಅವಧಿಯ ಹೂಡಿಕೆ) ತಾತ್ಕಾಲಿಕ ಅವಧಿಗೆ ನಷ್ಟದೊಂದಿಗೆ ಹೊರಬಂದು, ಕೆಲವು ದಿನಗಳ ಅಂತರದಲ್ಲಿ ನೀವು ಉತ್ತಮ ಲಾಭ ನಿರೀಕ್ಷಿಸುವುದಿದ್ದರೆ, ಅದೇ ಷೇರುಗಳನ್ನು ಮರು ಖರೀದಿ ಮಾಡಬಹುದು. ಇಲ್ಲೂ ನಷ್ಟ ವಜಾ ಮಾಡುವ ಅವಕಾಶವಿದೆ. ಆದರೆ, ಇಂತಹ ತೆರಿಗೆ ಕೇಂದ್ರಿತ, ನಷ್ಟದಲ್ಲಿ ಹೊರಬರುವ ಗಟ್ಟಿ ನಿರ್ಧಾರ ಕೈಗೊಳ್ಳಲು, ಮುಂದೆ ಆರ್ಥಿಕವಾಗಿ ಸುದೃಢ ಕಂಪನಿಗಳ ಷೇರುಗಳಲ್ಲಿ ವ್ಯವಹರಿಸುವುದರಿಂದ ಮಾತ್ರ ಸಾಧ್ಯ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,311
ಇಂದಿನ ಅಂತ್ಯ	17,486
▲	175
ದಿನದ ಕನಿಷ್ಠ	17,527

ವಿನಿಮಯ ದರ

$ ಡಾಲರ್	82.4
£ ಪೌಂಡ್	92.83
€ ಯುರೊ	80.99
¥ ಯೆನ್ (100ಕ್ಕೆ)	55.2

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹1300 (1272)
ಸೂರ್ಯಕಾಂತಿ (ರಿಫೈನ್ಡ್)	₹1530 (1500)
ಪಾಮೋಲಿನ್	₹957 (927)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹200-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹140
ಆರ್‌ಎಸ್‌ಎಸ್-5	₹150
ಗುಡ್ ಲಾಟ್	₹136

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹260-603
ದ್ವಿತಳಿ (ಬಿ.ವಿ)	₹200-768

ಕೊಬ್ಬರಿ ಧಾರಣೆ

ಅರಸೀಕೆರೆ	₹12000-13760
ತುರುವೇಕೆರೆ	₹13700-13700
ಪುತ್ತೂರು (ಇತರ)	₹4500-9000

ಬೆಂಬಲ ಬೆಲೆ ಹೆಚ್ಚಿಸಿದ ಕೇಂದ್ರ

ನವದೆಹಲಿ (ಪಿಟಿಐ): ಹಿಂಗಾರು ಹಂಗಾಮಿನ ಆರು ಬೆಳೆಗಳ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಕೇಂದ್ರ ಸರ್ಕಾರವು ಗರಿಷ್ಠ ಶೇಕಡ 9ರವರೆಗೆ ಹೆಚ್ಚಿಸಿದೆ. ದೇಶಿ ಉತ್ಪಾದನೆ ಹೆಚ್ಚಿಸುವುದು ಹಾಗೂ ರೈತರ ಆದಾಯ ಹೆಚ್ಚಿಸುವುದು ಕೂಡ ಈ ತೀರ್ಮಾನದ ಹಿಂದಿನ ಉದ್ದೇಶ.

ಗೋಧಿಗೆ ನೀಡುವ ಬೆಂಬಲ ಬೆಲೆಯನ್ನು ಕ್ವಿಂಟಲ್‌ಗೆ ₹ 110ರಷ್ಟು ಹೆಚ್ಚಿಸಲಾಗಿದೆ. ಈಗ ಗೋಧಿಗೆ ಕ್ವಿಂಟಲ್‌ಗೆ ₹ 2,125 ಬೆಂಬಲ ಬೆಲೆ ಸಿಗಲಿದೆ.

ಬೆಳೆ	ಈಗಿನ ಬೆಂಬಲ ಬೆಲೆ	ಹೆಚ್ಚಳ
ಬಾರ್ಲಿ	1,635	100
ಕಡಲೆ	5,230	105
ಮಸೂರ ಅವರೆ	6,000	500
ಸಾಸಿವೆ ಬೀಜ	5,450	400
ಕುಸುಂಬೆ	5,650	209

(ಬೆಲೆ ವಿವರ ₹ಗಳಲ್ಲಿ ಇದೆ)

ಈ ಹೆಚ್ಚಳವು 2023-24ನೇ ಮಾರುಕಟ್ಟೆ ವರ್ಷದ ಹಿಂಗಾರು ಬೆಳೆಗಳಿಗೆ ಅನ್ವಯಿಸಲಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಸಂಪುಟ ಸಮಿತಿಯು ಈ ತೀರ್ಮಾನ ಕೈಗೊಂಡಿದೆ.

ಸಂಪುಟದ ತೀರ್ಮಾನವನ್ನು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಸುದ್ದಿಗಾರರಿಗೆ ತಿಳಿಸಿದರು. ಬೆಂಬಲ ಬೆಲೆ ಹೆಚ್ಚಳದಿಂದ ಆಹಾರ ಹಣದುಬ್ಬರ ಹೆಚ್ಚಾಗಬಹುದೇ ಎಂಬ ಪ್ರಶ್ನೆಗೆ ಅವರು, ದೇಶದಲ್ಲಿ ಹಣದುಬ್ಬರ ಪ್ರಮಾಣವು ಇತರ ದೇಶಗಳಿಗೆ ಹೋಲಿಸಿದರೆ ಕಡಿಮೆ ಇದೆ ಎಂದು ಉತ್ತರಿಸಿದರು.

ಸ್ಥಿರ ದೂರವಾಣಿ: ಮೊದಲ ಸ್ಥಾನದಲ್ಲಿ ಜಿಯೊ

ನವದೆಹಲಿ (ಪಿಟಿಐ): ರಿಲಯನ್ಸ್ ಜಿಯೊ ಕಂಪನಿಯು ಸ್ಥಿರ ದೂರವಾಣಿ ಸೇವೆ ಒದಗಿಸುವ ಕಂಪನಿಗಳ ಸಾಲಿನಲ್ಲಿ ದೇಶದಲ್ಲಿ ಮೊದಲ ಸ್ಥಾನಕ್ಕೆ ಬಂದಿದೆ. ಬಿಎಸ್‌ಎನ್‌ಎಲ್ ಕಂಪನಿಯು ಎರಡನೆಯ ಸ್ಥಾನಕ್ಕೆ ಕುಸಿದಿದೆ.

ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಮಂಗಳವಾರ ಬಿಡುಗಡೆ ಮಾಡಿರುವ ಅಂಕಿ-ಅಂಶಗಳಲ್ಲಿ ಈ ವಿವರ ಇದೆ. ಸ್ಥಿರ ದೂರವಾಣಿ ಸೇವೆ ಒದಗಿಸುವಲ್ಲಿ ಖಾಸಗಿ ಕಂಪನಿಯೊಂದು ದೇಶದಲ್ಲಿ ಮೊದಲ ಸ್ಥಾನಕ್ಕೆ ಬಂದಿರುವುದು ಇದೇ ಮೊದಲು.

ಆಗಸ್ಟ್‌ನಲ್ಲಿ ಜಿಯೊ 73.52 ಲಕ್ಷ ಸ್ಥಿರ ದೂರವಾಣಿ ಸಂಪರ್ಕಗಳನ್ನು, ಬಿಎಸ್‌ಎನ್‌ಎಲ್ 71.32 ಲಕ್ಷ ಸಂಪರ್ಕಗಳನ್ನು ಹೊಂದಿದ್ದವು ಎಂದು ಟ್ರಾಯ್ ಹೇಳಿದೆ.

ಬಿಎಸ್‌ಎನ್‌ಎಲ್ ಕಂಪನಿಯು 22 ವರ್ಷಗಳಿಂದ ಸ್ಥಿರ ದೂರವಾಣಿ ಸೇವೆ ಒದಗಿಸುತ್ತಿದೆ, ಜಿಯೊ ಮೂರು ವರ್ಷಗಳಿಂದ ಈ ಸೇವೆ ನೀಡುತ್ತಿದೆ.

ಆಗಸ್ಟ್‌ನಲ್ಲಿ ಜಿಯೊ ಹೊಸದಾಗಿ 2.62 ಲಕ್ಷ ಚಂದಾದಾರರನ್ನು ಪಡೆದುಕೊಂಡಿದೆ. ಬಿಎಸ್‌ಎನ್‌ಎಲ್ 15,734 ಚಂದಾದಾರರನ್ನು ಕಳೆದುಕೊಂಡಿದೆ.

ಉಮರ್ ಖಾಲಿದ್ ಜಾಮೀನು ಅರ್ಜಿ ವಜಾ

ನವದೆಹಲಿ (ಪಿಟಿಐ): 'ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ ಕಳೆದ 2 ವರ್ಷದಿಂದ ಜೈಲಿನಲ್ಲಿರುವ ಜೆಎನ್‌ಯುನ ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಅವರಿಗೆ ಜಾಮೀನು ದೆಹಲಿ ಹೈಕೋರ್ಟ್ ಮಂಗಳವಾರ ನಿರಾಕರಿಸಿದೆ.

'ಜಾಮೀನು ಅರ್ಜಿಯಲ್ಲಿ ಹುರುಳಿಲ್ಲ. ಆದ್ದರಿಂದ ಅರ್ಜಿಯನ್ನು ವಜಾ ಮಾಡಲಾಗಿದೆ' ಎಂದು ನ್ಯಾಯಮೂರ್ತಿಗಳಾದ ಸಿದ್ಧಾರ್ಥ್ ಮೃದುಲ್ ಮತ್ತು ರಜನೀಶ್ ಭಾಟ್ನಗರ್ ಹೇಳಿದರು.

ಮಾರ್ಚ್ 24ರಂದು ವಿಚಾರಣಾ ನ್ಯಾಯಾಲಯವು ಖಾಲಿದ್ ಅವರ ಜಾಮೀನು ಅರ್ಜಿಯನ್ನು ವಜಾ ಮಾಡಿತ್ತು. ಈ ಕುರಿತು ದೆಹಲಿ ಹೈಕೋರ್ಟ್‌ಗೆ ಖಾಲಿದ್ ಮೇಲ್ಮನವಿ ಸಲ್ಲಿಸಿದ್ದರು.

ಶಬರಿಮಲೆ ದೇಗುಲದ ಮುಖ್ಯ ಅರ್ಚಕರಾಗಿ ಜಯರಾಮನ್ ಆಯ್ಕೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಶಬರಿಮಲೆ ಅಯ್ಯಪ್ಪ ದೇವಾಲಯದ ಮುಖ್ಯ ಅರ್ಚಕರಾಗಿ (ಮೇಲ್‌ಶಾಂತಿ) ಕಣ್ಣೂರು ಮಲಪಟ್ಟಂನ ಜಯರಾಮನ್ ನಂಬೂದಿರಿ ಕೆ. ಅವರನ್ನು ಆಯ್ಕೆ ಮಾಡಲಾಗಿದೆ.

ಶಬರಿಮಲೆ ಮಾಳಿಕಪುರಂ ದೇವಾಲಯದ ಮುಖ್ಯ ಅರ್ಚಕರಾಗಿ ಕೋಟಯಂ ಜಿಲ್ಲೆಯ ವೈಕಂನ ಹರಿಹರನ್ ನಂಬೂದಿರಿ ಆಯ್ಕೆಯಾಗಿದ್ದಾರೆ. ಒಂದು ವರ್ಷದ ಅವಧಿಗೆ ಇವರನ್ನು ಆಯ್ಕೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮುಂಬೈ ಧಾರಣೆ

ಶೇಂಗಾ

18-10-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10250-10350
ದಪ್ಪ ಗುಜರಾತ್(ಹೊಸ)	10750-10850

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1210 (1187)
ಪಾಮ್ ವಾರದ ಡೆಲಿವರಿ	955 (925)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1400)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,150 (50,200)
ಬೆಳ್ಳಿ ಕೆ.ಜಿ 56,000 (55,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಶ್ರೀ ಜಗದಂಬಾ ವಿದ್ಯಾವರ್ಧಕ ಸಂಘ ತಾಂಬಾ

ದೇವರಹಿಪ್ಪರಗಿ ರೋಡ್ ತಾಂಬಾ-586215 ತಾ. ಇಂಡಿ ಜಿ. ವಿಜಾಪೂರ ಮೊ: 9845521092, 9448646800

ಕ್ರ.ಸಂ. ಜವಿವಿಎಸ್/ಖಾಹುತು/ತಿದ್ದುಪಡಿ/2022-23/118 **ತಿದ್ದುಪಡಿ** ದಿನಾಂಕ: 18-10-2022

ದಿನಾಂಕ: 08-10-2022 ರಂದು ಪ್ರಜಾವಾಣಿ ಪತ್ರಿಕೆಯ ಪುಟ ಸಂಖ್ಯೆ 02 ರಲ್ಲಿ ಪ್ರಕಟಗೊಂಡ ಪ್ರಕಟಣೆಯಲ್ಲಿ ಕ್ರ.ಸಂಖ್ಯೆ 03 ಶ್ರೀ ಜಗದಂಬಾ ಪ್ರೌಢಶಾಲೆ ಮಿಂಚನಾಳ ತಾಂಡಾ ತಾ.ಜಿ. ವಿಜಯಪುರ ದೈಹಿಕ ಶಿಕ್ಷಕರ ವಿದ್ಯಾರ್ಹತೆ ಬಿ.ಎ.ಬಿ.ಎಡ್‌ಎಂದು ತಪ್ಪಾಗಿ ಪ್ರಕಟಗೊಂಡಿದ್ದು ಅದನ್ನು ಬಿ.ಎ. ಬಿ.ಪಿ.ಎಡ್. ಎಂದು ಓದಿಕೊಳ್ಳಬೇಕು ಎಂದು ತಿಳಿಸಿದೆ.

ಸಹಿ/- ಕಾರ್ಯದರ್ಶಿ
ಶ್ರೀ ಜಗದಂಬಾ ವಿದ್ಯಾವರ್ಧಕ ಸಂಘ ತಾಂಬಾ
ತಾ. ಇಂಡಿ. ಜಿ. ವಿಜಯಪುರ

ಪ್ರಧಾನಿ ಮೋದಿ ಸುಳ್ಳುಪತ್ತೆ ಪರೀಕ್ಷೆಗೆ ಒಳಗಾಗಲಿ: ಆಮ್ ಆದ್ಮಿ ಪಕ್ಷ

ನವದೆಹಲಿ: 'ಪ್ರಧಾನಿ ನರೇಂದ್ರ ಮೋದಿ ಅವರು ಸುಳ್ಳುಪತ್ತೆ ಪರೀಕ್ಷೆಗೆ ಒಳಗಾಗಿ ಸಿಬಿಐ ಮತ್ತು ಜಾರಿ ನಿರ್ದೇಶನಾಲಯವು (ಇ.ಡಿ) ಸ್ವತಂತ್ರ ಸಂಸ್ಥೆಗಳು ಎಂದು ಹೇಳಲಿ' ಎಂದು ಎಎಪಿ ವಕ್ತಾರ ಸೌರಭ್ ಭಾರದ್ವಾಜ್ ಮಂಗಳವಾರ ಹೇಳಿದ್ದಾರೆ.

ಪ್ರಧಾನಿ ಸುಳ್ಳುಪತ್ತೆ ಪರೀಕ್ಷೆಗೆ ಒಳಗಾಗಲಿ ಎಂದು ಬಿಜೆಪಿ ಸೂಚಿಸಬೇಕು ಎಂದೂ ಹೇಳಿದ್ದಾರೆ.

ದೆಹಲಿಯ ಉಪಮುಖ್ಯ ಮಂತ್ರಿ ಮನೀಷ್ ಸಿಸೋಡಿಯಾ ಅವರು ಸುಳ್ಳುಪತ್ತೆ ಪರೀಕ್ಷೆಗೆ ಒಳಗಾಗಬೇಕು ಎಂದು ಬಿಜೆಪಿ ಮುಖಂಡ ಕಪಿಲ್ ಮಿಶ್ರಾ ಹೇಳಿರುವುದಕ್ಕೆ ಎಎಪಿ ಈ ಪ್ರತಿಕ್ರಿಯೆ ನೀಡಿದೆ. ಎಎಪಿ ತೊರೆಯುವಂತೆ ಸಿಬಿಐ ತನ್ನ ಮೇಲೆ ಒತ್ತಡ ಹೇರಿದೆ ಎಂದು ಸಿಸೋಡಿಯಾ ಆರೋಪಿಸಿದ್ದರು.

ಪೌಷ್ಟಿಕ ಆಹಾರ ಸೇವಿಸಿ

ಷೇರುಪೇಟೆ: ಸತತ 3ನೇ ದಿನ ತೇಜಿ ವಹಿವಾಟು

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಮೂರನೆಯ ದಿನವೂ ತೇಜಿ ವಹಿವಾಟು ಕಂಡುಬಂತು. ಜಾಗತಿಕ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿದ್ದು ಹಾಗೂ ಇಂಧನ, ಬ್ಯಾಂಕಿಂಗ್ ಮತ್ತು ಎಫ್‌ಎಂಸಿಜಿ ವಲಯಗಳ ಷೇರುಗಳಲ್ಲಿ ಹೂಡಿಕೆ ಹೆಚ್ಚಿದ್ದುದು ಸೂಚ್ಯಂಕಗಳ ಏರಿಕೆಗೆ ನೆರವಾದವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 549 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 175 ಅಂಶ ಏರಿಕೆ ಕಂಡವು. 'ಹಣದುಬ್ಬರ ಪ್ರಮಾಣವು ಸೆಪ್ಟೆಂಬರ್‌ನಲ್ಲಿ ಗರಿಷ್ಠ ಮಟ್ಟ ತಲುಪಿಯಾಗಿದೆ. ಅದು ಮುಂದಿನ ದಿನಗಳಲ್ಲಿ ಕಡಿಮೆ ಆಗುತ್ತದೆ ಎಂದು ಆರ್‌ಬಿಐ ವಿಶ್ವಾಸ ವ್ಯಕ್ತಪಡಿಸಿರುವುದು ಹೂಡಿಕೆದಾರರಿಗೆ ಸಂತಸ ತಂದಿದೆ. ಇದರಿಂದಾಗಿ ಬ್ಯಾಂಕಿಂಗ್ ವಲಯದ ಷೇರುಗಳಲ್ಲಿ ಹೂಡಿಕೆ ಹೆಚ್ಚಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕ ಶೇ 1.06ರಷ್ಟು ಏರಿಕೆ ಕಂಡಿದೆ, ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 0.71ರಷ್ಟು ಏರಿಕೆ ಕಂಡಿದೆ. ಬಂಡವಾಳ ಸರಕು (ಶೇ 1.97), ರಿಯಾಲ್ಟಿ (ಶೇ 1.76), ಆಟೊ (ಶೇ 1.50), ಎಫ್‌ಎಂಸಿಜಿ (ಶೇ 1.22), ಇಂಧನ (ಶೇ 1.13) ವಲಯಗಳು ಕೂಡ ಏರಿಕೆ ದಾಖಲಿಸಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇ 0.65ರಷ್ಟು ಕಡಿಮೆ ಆಗಿ, ಪ್ರತಿ ಬ್ಯಾರೆಲ್‌ಗೆ 91.02 ಡಾಲರ್‌ಗೆ ತಲುಪಿದೆ. ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 153 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	480

ಅಡಿಕೆ

ಬಂಟ್ವಾಳ	
ಕೋಕ	12500-25000
ಹಳತು	48000-56000
ಕಾರ್ಕಳ	
ಹೊಸತು	20000-38000
ಹಳತು	40000-48500
ಪುತ್ತೂರು	
ಕೋಕ	11000-26000
ಹೊಸತು	35500-48500
ಸಾಗರ	
ಬಿಳಿಗೋಟು	27899-33099
ಚಾಲಿ	38399-39599
ಕೋಕ	32989-33499
ಕೆಂಪುಗೋಟು	35139-35419
ರಾಶಿ	41009-49299
ಸಿಪ್ಪೆಗೋಟು	4890-21400
ಶಿವಮೊಗ್ಗ	
ಗೊರಬಲು	17300-37669
ಹೊಸತು	47399-49400
ರಾಶಿ	45699-50509
ಸರಕು	55010-80240
ಸಿದ್ದಾಪುರ	
ಬಿಳಿಗೋಟು	27009-33599
ಚಾಲಿ	37219-41519
ಕೋಕ	25699-33699
ಕೆಂಪುಗೋಟು	28199-34309
ರಾಶಿ	47109-49539
ತಟ್ಟಿಬೆಟ್ಟೆ	39269-48169
ಶಿರಸಿ	
ಬೆಟ್ಟೆ	30599-47189
ಬಿಳಿಗೋಟು	24709-36399
ಚಾಲಿ	35419-43219
ಕೆಂಪುಗೋಟು	17099-29402
ರಾಶಿ	32099-49009
ಸೊರಬ	
ರಾಶಿ	49300-49300
ಯಲ್ಲಾಪುರ	
ಬಿಳಿಗೋಟು	26899-35000
ಚಾಲಿ	36131-42499
ಕೋಕ	18899-32619
ಕೆಂಪುಗೋಟು	30819-36219
ರಾಶಿ	47118-53499
ತಟ್ಟಿಬೆಟ್ಟೆ	37119-46790

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,750	15700	16100	202.15 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9800	9800	9800	ಲಂಡನ್
ಆರ್‌ಸಿ	4800	4500	4750	2099 ಡಾಲರ್ಸ್

ಉದ್ಯೋಗ ವಾಣಿ

ಕರ್ನಾಟಕ ಲೋಕಸೇವಾ ಆಯೋಗ

''ಉದ್ಯೋಗ ಸೌಧ'', ಬೆಂಗಳೂರು - 560 001

ಸಂ: ಪಿಎಸ್‌ಸಿ 306 ಆರ್ ಟಿಬಿ(2)/2022-23/2734 ದಿನಾಂಕ: 17.10.2022

ಸಂಕ್ಷಿಪ್ತ ಅಧಿಸೂಚನೆ

ಆಯೋಗವು ಜಲ ಸಂಪನ್ಮೂಲ ಇಲಾಖೆಯಲ್ಲಿನ ಹೈದರಾಬಾದ್ ಕರ್ನಾಟಕ ವೃಂದದ ಈ ಕೆಳಕಂಡ ಗ್ರೂಪ್ "ಸಿ" ಹುದ್ದೆಗಳನ್ನು ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ಮತ್ತು ತಿದ್ದುಪಡಿ ನಿಯಮ 2022ರನ್ವಯ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲು ಅಧಿಸೂಚನೆ ಹೊರಡಿಸಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಇಲಾಖೆಯ ಹೆಸರು/ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
	ಜಲ ಸಂಪನ್ಮೂಲ ಇಲಾಖೆಯಲ್ಲಿನ ಹೈದರಾಬಾದ್ ಕರ್ನಾಟಕ ವೃಂದದ (ಗ್ರೂಪ್ "ಸಿ" ಹುದ್ದೆಗಳು)	
01.	ಕಿರಿಯ ಇಂಜಿನಿಯರ್ (ಸಿವಿಲ್)	166
02.	ಕಿರಿಯ ಇಂಜಿನಿಯರ್ (ಮೆಕ್ಯಾನಿಕಲ್)	03

ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮೊದಲು ಹಾಗೂ ಶುಲ್ಕ ಪಾವತಿಸುವ ಬಗ್ಗೆ NOTIFICATION ನಲ್ಲಿ ಲಭ್ಯವಿರುವ ಮಾಹಿತಿಗಳನ್ನು ಓದಿಕೊಳ್ಳತಕ್ಕದ್ದು.

- Online ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: **19.10.2022.**
- Online ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **17.11.2022 (ರಾತ್ರಿ 11-45 ಘಂಟೆಯೊಳಗೆ)**
- ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: **18.11.2022.**

ಇನ್ನೂ ಹೆಚ್ಚಿನ ವಿವರಗಳಿಗೆ ಆಯೋಗದ ದಿನಾಂಕ: **14.10.2022ರ** ಅಧಿಸೂಚನೆಯನ್ನು ಆಯೋಗದ ವೆಬ್‌ಸೈಟ್ **"http://kpsc.kar.nic.in/Notification"** ರಲ್ಲಿ ನೋಡಬಹುದಾಗಿದೆ.

ಸಹಿ/-
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ.

ಕರ್ನಾಟಕ ಲೋಕಸೇವಾ ಆಯೋಗ

''ಉದ್ಯೋಗ ಸೌಧ'', ಬೆಂಗಳೂರು - 560 001

ಸಂ: ಪಿಎಸ್‌ಸಿ 244 ಆರ್ ಟಿಬಿ(2)/2022-23/2735 ದಿನಾಂಕ: 17.10.2022

ಸಂಕ್ಷಿಪ್ತ ಅಧಿಸೂಚನೆ

ಆಯೋಗವು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ ಉಳಿಕ ಮೂಲ ವೃಂದದ ಸಹಾಯಕ ಸಾಂಖ್ಯಿಕ ಅಧಿಕಾರಿ ಗ್ರೂಪ್‌'ಸಿ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ) (ನೇಮಕಾತಿ) ನಿಯಮಗಳು 2009 ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ಮತ್ತು ತಿದ್ದುಪಡಿ ನಿಯಮ 2022ರನ್ವಯ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲು ಅಧಿಸೂಚನೆ ಹೊರಡಿಸಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಇಲಾಖೆಯ ಹೆಸರು/ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
	ಉಳಿಕೆ ಮೂಲ ವೃಂದದ (ಗ್ರೂಪ್ "ಸಿ" ಹುದ್ದೆಗಳು)	
01.	ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿನ ಸಹಾಯಕ ಸಾಂಖ್ಯಿಕ ಅಧಿಕಾರಿ	55+03 (ಬ್ಯಾಲಾ)

ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮೊದಲು ಹಾಗೂ ಶುಲ್ಕ ಪಾವತಿಸುವ ಬಗ್ಗೆ NOTIFICATION ನಲ್ಲಿ ಲಭ್ಯವಿರುವ ಮಾಹಿತಿಗಳನ್ನು ಓದಿಕೊಳ್ಳತಕ್ಕದ್ದು.

- Online ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: **20.10.2022.**
- Online ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **18.11.2022 (ರಾತ್ರಿ 11-45 ಘಂಟೆಯೊಳಗೆ)**
- ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: **19.11.2022.**

ಇನ್ನೂ ಹೆಚ್ಚಿನ ವಿವರಗಳಿಗೆ ಆಯೋಗದ ದಿನಾಂಕ: **14.10.2022ರ** ಅಧಿಸೂಚನೆಯನ್ನು ಆಯೋಗದ ವೆಬ್‌ಸೈಟ್ **"http://kpsc.kar.nic.in/Notification"** ರಲ್ಲಿ ನೋಡಬಹುದಾಗಿದೆ.

ಸಹಿ/-
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ.



EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಒಂದು ಒಲೆಯ ಕಥೆ

ಮೊದಲು ತಯಾರಾದ ಮೈಕ್ರೋವೇವ್ ಓವನ್ನು ಸುಮಾರು ಮುನ್ನೂರ ನಲುವತ್ತು ಕೆಜಿ ಭಾರವಿತ್ತಂತೆ. ಬೆಲೆಯೂ ಭಯಂಕರ ತುಟ್ಟಿ...

ಶರತ್ ಭಟ್ ಸೇರಾಜೆ

ಬೆಳಿಗ್ಗೆ ಎದ್ದು ಸ್ನಾನ ಮಾಡುವಾಗಲೂ ವಿಜ್ಞಾನದ ಬಗ್ಗೆಯೇ ಯೋಚಿಸಿ, ಚಿಂತನೆಯ ಚಕ್ರಸುಳಿಯಲ್ಲಿ ಮುಳುಗೇಳುತ್ತಾ ಪ್ರಯೋಗಾಲಯಕ್ಕೆ ತಲುಪಿ, ಬೆರಗುಗಣ್ಣುಗಳನ್ನು ನೆಟ್ಟು ಕೂತು, ಜ್ಞಾನೋದಯದ ದಿವ್ಯಗಳಿಗೆಗೆ ಕಾದು, ಹೊಸ ಹೊಳಪೊಂದರ ಮುಖಾಮುಖಿಗೆ ಸನ್ನದ್ಧನಾಗಿ ತಪಸ್ಸು ಮಾಡುತ್ತಾ ಕುಳಿತ ವಿಜ್ಞಾನಿಯ ಬೊಗಸೆಗೆ ಮಾತ್ರ ಯಾವುದಾದರೂ ಸಂಶೋಧನೆ ಬಂದು ಬೀಳುತ್ತದೆ ಎಂಬ ಕಲ್ಪನೆ ನಮಗೆಲ್ಲ; ಅಥವಾ ಕೆಲವರಿಗಾದರೂ ಇಂಥ ಕಲ್ಪನೆ ಇರುತ್ತದೆ. ಆದರೆ ವಾಸ್ತವ ಹಾಗೇನೂ ಇಲ್ಲ. ಏನೋ ಮಾಡಲು ಹೋಗಿ ಏನೋ ಆಗುವುದು, ಜೀವನದಂತೆ ವಿಜ್ಞಾನದ ಕ್ಷೇತ್ರದಲ್ಲಿಯೂ ಮಾಮೂಲಿಯೇ. 'The difference between fiction and nonfiction is that fiction must be absolutely believable' ಎಂಬ ಮಾರ್ಕ್ ಟ್ವೇನನ ಮಾತು ವಿಜ್ಞಾನದ ಪ್ರಸಂಗಗಳಲ್ಲಿ ಎಷ್ಟೋ ಸಲ ನಿಜವಾಗುವುದಿದೆ. ಸುಮ್ಮನೆ ಕಡಲ ಕಿನಾರೆಯಲ್ಲಿ ನಡೆಯುತ್ತಿದ್ದವನ ಕೈಯಲ್ಲಿಯೇ ಬಂದು ಕುಳಿತ ಪುಟ್ಟ ಪಾತರಗಿತ್ತಿಯ ರೆಕ್ಕೆ ಮುಟ್ಟಿ ಸಂಭ್ರಮ ಪಡುವಂತೆ ವಿಜ್ಞಾನಿಗಳಿಗೂ ಆಗುವುದಿದೆ. ಹಾಗೆ ಅನಿರೀಕ್ಷಿತವಾಗಿ ಏನನ್ನೋ ಕಂಡುಕೊಂಡ ವಿಜ್ಞಾನಿಗಳ ಕಥೆಗಳು ಬೇಕಾದಷ್ಟು ಸಿಗುತ್ತವೆ.

ಉದಾಹರಣೆಗೆ, 1856ರಲ್ಲಿ ವಿಲಿಯಂ ಹೆನ್ರಿ ಪರ್ಕಿನ್ ಎಂಬ ವಿಜ್ಞಾನಿ ಮಲೇರಿಯಾಕ್ಕೆ ಔಷಧಿಯಾದ 'ಕ್ವಿನೈನ್' ಅನ್ನು ರಾಸಾಯನಿಕ ಮಿಶ್ರಣಗಳ ಸಂಯೋಜನೆಯಿಂದ ತಯಾರಿಸ ಹೊರಟಿದ್ದ. ಆದರೆ ಕ್ವಿನೈನು ಉತ್ಪತ್ತಿಯಾಗಲಿಲ್ಲ. ಅವನ ಬೀಕರಿನಲ್ಲಿ ಉಳಿದದ್ದು ಕಂದುಬಣ್ಣದ ಅನುಪಯುಕ್ತವಾದ ರಾಡಿ. ಸರಿ, ಇದನ್ನು ತೊಳೆದು ಕೈತೊಳೆದುಕೊಳ್ಳೋಣ ಎಂದು ಬೀಕರಿಗೆ ಆಲ್ಕೋಹಾಲು ಹಾಕಿ ತೊಳೆದರೆ, ನೋಡ ನೋಡುತ್ತಿದ್ದಂತೆ ಒಳಗಿದ್ದದ್ದು ನೇರಳೆಬಣ್ಣಕ್ಕೆ ತಿರುಗಿ ಲಕ ಲಕಿಸತೊಡಗಿತು! ಈಗಿನ ಕೈಗಾರಿಕೆಗಳಿಗೆ ಆಗುವಂತೆ ಬಣ್ಣಗಳನ್ನು ದೊಡ್ಡಮಟ್ಟದಲ್ಲಿ ಕೃತಕವಾಗಿ, ರಾಸಾಯನಿಕವಾಗಿ ತಯಾರಿಸುವ ವಿಧಾನ ಅಲ್ಲಿಂದಲೇ ಬಂದದ್ದು. ಅದಕ್ಕೂ ಮೊದಲು ಸಸ್ಯಗಳಿಂದ, ಪ್ರಾಣಿಗಳಿಂದ, ಖನಿಜಗಳಿಂದ ವರ್ಣಗಳನ್ನು ಸೃಷ್ಟಿಸಲಾಗುತ್ತಿತ್ತು. ಪ್ರಯೋಗವೇ ಊಸರವಳ್ಳಿಯಂತೆ ಬಣ್ಣ ಬದಲಾಯಿಸಿ(!), ವರ್ಣದ್ರವ್ಯವನ್ನು ಕೊಟ್ಟ ಕಥೆಯಿದು. ಇದು ಹೀಗಾದರೆ, ಕೃತಕವಾದ ಬಣ್ಣಕ್ಕೆ ಅಂತಲೇ ತಯಾರಾಗಿ ಕಡೆಗೆ ಬೇರೆಯೇ ರೀತಿ ಬಳಕೆಯಾದದ್ದು ಟಿ.ಎನ್.ಟಿ. ಜೋಸೆಫ್ ವಿಲ್ಬ್ರಾಂಡ್ ಎಂಬ ಜರ್ಮನ್ ವಿಜ್ಞಾನಿಯೊಬ್ಬ ಕೃತಕವಾಗಿ ಹಳದಿರಂಗನ್ನು ತಯಾರಿಸುವ ವಿಧಾನವಾಗಿ ಟಿ.ಎನ್.ಟಿ.ಯನ್ನು ಬಳಸಿದ್ದ. ಅದು ಭಯಾನಕ ಸಿಡಿಮದ್ದಾಗಿ ಯುದ್ಧಗಳಲ್ಲಿ ಬಳಕೆಯಾದದ್ದು ಕೆಲವು ದಶಕಗಳ ಅನಂತರವೇ. ಈಗ ಅದರ ಬಿಸಿಯಿಲ್ಲದಿದ್ದರೆ ಅಡುಗೆ ಮಾಡುವವರ ತಲೆಯೇ ಬಿಸಿಯಾಗುತ್ತದೆ ಎಂಬಂತಿರುವ ಮೈಕ್ರೋವೇವ್ ಓವನ್ನಿನದ್ದೂ ಅಂಥದ್ದೇ ಒಂದು ವೃತ್ತಾಂತ.

ಅದು ಎರಡನೇ ಮಹಾಯುದ್ಧದ ಕಾಲದಲ್ಲಿ ನಡೆದ ಪ್ರಸಂಗ. ಅಮೆರಿಕ ಮತ್ತದರ ಮಿತ್ರಪಕ್ಷಗಳಿಗೆ ಯುದ್ಧಸಾಮಗ್ರಿಗಳನ್ನು ರೇಥಿಯೋನ್ ಎಂಬ ಸಂಸ್ಥೆ ಮಾಡಿಕೊಡುತ್ತಿತ್ತು. ಅದರಲ್ಲಿ ಒಳ್ಳೆಯ ಕೆಲಸಗಾರ ಎಂಬ ಹೆಸರು ಗಳಿಸಿ, ಹೊಸ ಹೊಸ ಉತ್ಪನ್ನಗಳನ್ನು ರೂಪಿಸಿ ಪೇಟೆಂಟಿನ ಮೇಲೆ ಪೇಟೆಂಟುಗಳನ್ನು ಗುಡ್ಡೆ ಹಾಕುತ್ತಿದ್ದವನು ಪರ್ಸಿ ಸ್ಪೆನ್ಸರ್ ಎಂಬ ಎಂಜಿನಿಯರು. ಆಗಿನ ಯುದ್ಧಗಳಲ್ಲಿ ರಾಡಾರ್ ತಂತ್ರಜ್ಞಾನ ಸೈನ್ಯಗಳಿಗೆ ತುಂಬ ಸಹಾಯ ಮಾಡುತ್ತಿತ್ತು. ಈ ರಾಡಾರಿನ ಕ್ಷೇತ್ರದಲ್ಲಿ ಏನಾದರೂ ಕಡಿದು ಕಟ್ಟೆ ಹಾಕಬೇಕೆಂದು ಹೊರಟವನು ನಮ್ಮ ಸ್ಪೆನ್ಸರ್. ಅವನು ಕೆಲಸ ಮಾಡುತ್ತಿದ್ದದ್ದು ಮ್ಯಾಗ್ನೆಟ್ರಾನ್ ಎಂಬ ಯಂತ್ರದ ಮೇಲೆ. ರಾಡಾರುಗಳಿಗೆ ಬೇಕಾದ ರೇಡಿಯೋ ಸಿಗ್ನಲ್ಲುಗಳನ್ನು ಹೊರಡಿಸುತ್ತಿದ್ದ ಯಂತ್ರ ಅದು. ಈ ಸ್ಪೆನ್ಸರನಿಗೆ ಅಳಿಲುಗಳು ಅಂದರೆ ಅಚ್ಚುಮೆಚ್ಚು. ಅವುಗಳಿಗೆ ಮಧ್ಯಾಹ್ನ ಊಟದ ಹೊತ್ತಿನಲ್ಲಿ ತಿನ್ನಿಸಲಿಕ್ಕೆ ಅಂತ (ನಮ್ಮಲ್ಲಿ ಕಡಲೆ ಮತ್ತು ಬೆಲ್ಲ ಸೇರಿಸಿ ಮಾಡುವ ಚಿಕ್ಕಿಯನ್ನು ಹೋಲುವ) 'ಪೀನಟ್ ಕ್ಲಸ್ಟರ್ ಬಾರ್'(peanut cluster bar)ಅನ್ನು ಕಿಸೆಯಲ್ಲಿಟ್ಟುಕೊಂಡಿದ್ದನಂತೆ. ಈ ಮ್ಯಾಗ್ನೆಟ್ರಾನುಗಳ ಹತ್ತಿರ ಒಂದಷ್ಟು ಹೊತ್ತು ಕಳೆದು ಇನ್ನೇನು ಊಟಕ್ಕೆ ಹೊರಡಬೇಕು, ಪುಟ್ಟ ಅಳಿಲುಗಳಿಗೆ ಕಡ್ಲೆ ಚಾಕಲೇಟು ತಿನ್ನಿಸಬೇಕು ಎಂದು ಪ್ಯಾಂಟಿನ ಕಿಸೆಗೆ ಕೈ ಹಾಕಿದರೆ, ಅರೆ! ಚಾಕಲೇಟು ಕರಗಿ ಪ್ಯಾಂಟಿಗೆ ಮೆತ್ತಿಕೊಂಡಿದೆ!! ಇದೊಳ್ಳೆ ಇರುಸು ಮುರುಸಾಯ್ತಲ್ಲ, ಪ್ಯಾಂಟು ತೊಳೆಯುವ ತಾಪತ್ರಯವಾಯಿತಲ್ಲ ಎಂದು ರೇಗುವ ಬದಲಿಗೆ ಅವನ ಒಳಗಿದ್ದ ಸಂಶೋಧಕ ಎದ್ದು ನಿಂತ.

ಮರುದಿನ ಮೊಟ್ಟೆಯಿಂದನ್ನು ತಂದು ಅದೇ ಮ್ಯಾಗ್ನೆಟ್ರಾನಿನ ಕೆಳಗೆ ಹಿಡಿದು ನೋಡಿದ, ಯಾಕಾದರೂ ಇಂಥ ಎಡವಟ್ಟು ಪ್ರಯೋಗ ಮಾಡಿದೆನಪ್ಪ ಎಂದು ಕೈ ಹಿಸುಕಿಕೊಂಡನೋ ಎಂಬುದು ನಿಮ್ಮ ಊಹೆಗೆ ಬಿಟ್ಟ ವಿಚಾರ; ಯಾಕೆಂದರೆ ಆ ಮೊಟ್ಟೆ ಢಮೀಲನೆ ಸಿಡಿದು, ಮುಸುಡಿಗೆ ಪೋಕರಿ ಗೆಳೆಯರು ಹೋಳಿಯ ದಿನ ಅಭಿಷೇಕ ಮಾಡಿದಂತೆ ಆಗಿತ್ತು. ವಿಷಯವನ್ನು ಇಷ್ಟಾದ ಮೇಲೂ ಕೈಬಿಡಲಿಲ್ಲ ಈ ಆಸಾಮಿ. ಮರುದಿನ ಪಾಪ್ ಕಾರ್ನನ್ನು ತಂದು ಮತ್ತದೇ ಮ್ಯಾಗ್ನೆಟ್ರಾನಿನ ಹತ್ತಿರ ಹಿಡಿದು ನೋಡಿದ, ಪಾಪ್ ಕಾರ್ನು ಥಕ ಥಕ ಕುಣಿದು, ಸಿಡಿದು ಚೆಲ್ಲಾಪಿಲ್ಲಿಯಾಗಿ ಚೆಲ್ಲಿತು. ಆ ಕಂಪೆನಿಯಲ್ಲಿ ಕಸಗುಡಿಸುವವರು ಈ ವಿಜ್ಞಾನಿಗೆ ಯಾರಾದರೂ ಕೆಲಸ ಕೊಟ್ಟರೋ ಎಂದು ಶಾಪ ಹಾಕಿರಬೇಕು! ಅಂತೂ ಆದದ್ದಕ್ಕೆಲ್ಲ ಥಳಕು ಹಾಕಿ ನೋಡಿದಾಗ, ಆಹಾರಪದಾರ್ಥಗಳು ಬೇಯಲಿಕ್ಕೆ ಬೆಂಕಿಯೇ ಬೇಕಾಗಿಲ್ಲ ಎಂಬ ಅರಿವು ಮೂಡಿತು. ಎಲ್ಲಿಯ ಯುದ್ಧ, ಎಲ್ಲಿಯ ರಾಡಾರು, ಎಲ್ಲಿಯ ಮ್ಯಾಗ್ನೆಟ್ರಾನು, ಎಲ್ಲಿಯ ಅಡುಗೆ ಒಲೆ! ಅಂತೂ ಆ ಒಂದು ದಿನ ಅಳಿಲುಗಳಿಗೆ ಕಡಲೆಯ ಚಾಕಲೇಟು ತಿನ್ನುವ ಭಾಗ್ಯವಿರಲಿಲ್ಲ, ಇದೂ ಒಂದು ತರದ ಅಳಿಲುಸೇವೆಯೇ!

ಇದೆಲ್ಲ ಆಗಿ ಒಂದು ವರ್ಷಕ್ಕೇ ಮೈಕ್ರೋವೇವಿನ ಒಲೆ ಮಾರುಕಟ್ಟೆಗೆ ಬಂತು. ಆ ಮೈಕ್ರೋವೇವು ಓವನ್ನು ಸುಮಾರು ಮುನ್ನೂರ ನಲುವತ್ತು ಕೆ.ಜಿ ಭಾರವಿತ್ತಂತೆ. ಅದರ ಬೆಲೆಯೂ ಭಯಂಕರ ತುಟ್ಟಿ ಎಂಬಂತಿತ್ತು. ಇದಾಗಿ ಇಪ್ಪತ್ತು ವರ್ಷಗಳಾದ ಮೇಲೆಯೇ ಚೆನ್ನಾಗಿ ಮಾರಾಟವಾದ, ಮನೆಯಲ್ಲಿ ಉಪಯೋಗಿಸಲು ಯೋಗ್ಯವಾದ ಮೈಕ್ರೋವೇವಿನ ಒಲೆ ಬಂದದ್ದು.

ಹೀಗೆ ಬಾಳೆಯ ಗಿಡವನ್ನು ನೆಟ್ಟು ಮಾವಿನಹಣ್ಣನ್ನು ಕೊಯ್ಯುವ ಕೆಲಸ ಮಾಡಿದ ವಿಜ್ಞಾನಿಗಳನ್ನು ನೋಡಿದರೆ, 'ಯಾವುದೋ ಬರ್ಫಿ ಮಾಡಹೊರಟು, ಬೇರೆ ಯಾವುದೋ ಹೊಸ ಪಾಕದ ಸಿಹಿತಿಂಡಿ ಆಗಿಹೋಯಿತು' ಎಂದು ಪೆಚ್ಚು ನಗೆ ನಗುವವರ ನೆನಪಾಗುತ್ತದೆ. ❖

ಸೋಲಾರ್ ರೂಫ್ – 'ಪಾಲಿ ಸೋಲಾರ್ ಟೆಕ್ನಾಲಜಿ' ಸಂಸ್ಥೆಯು ಉತ್ಪಾದಿಸಿರುವ 'ಫೋಟೋವೋಲ್ಟಾಯಿಕ್ ಗ್ಲೇಜ್' ತಂತ್ರಜ್ಞಾನವುಳ್ಳ ಪಾರದರ್ಶಕ ಸೌರ ಗಾಜು ಬಳಸಿಕೊಂಡು ಚಾವಣಿ ನಿರ್ಮಿಸಿರುವುದು.

ತನ್ನ ವಿದ್ಯುತ್ ತನ್ನಿಂದಲೇ!

ನೇಸರ ಕಾಡನಕುಪ್ಪೆ

ನಿಮ್ಮ ಮನೆಯ ವಿದ್ಯುತ್ ಬಿಲ್ ಹೆಚ್ಚಾಗುತ್ತಿದೆಯೇ? ಸೋಲಾರ್ ವಿದ್ಯುತ್ ಇತ್ಯಾದಿ ಪರಿಸರಸ್ನೇಹಿ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡರೂ ಪ್ರಯೋಜನವಿಲ್ಲವೇ? ಇದಕ್ಕೊಂದು ಸರಳ ಪರಿಹಾರ ಇದೀಗ ಸಿಕ್ಕಿದೆ. ಮನೆಯೇ ತನಗೆ ತಾನೇ ವಿದ್ಯುತ್ ಉತ್ಪಾದಿಸಿಕೊಳ್ಳುವ ತಂತ್ರಜ್ಞಾನವನ್ನು ಇದೀಗ ಅಭಿವೃದ್ಧಿಪಡಿಸಲಾಗಿದೆ.

ವಿದ್ಯುತ್ ಉಳಿತಾಯಕ್ಕಾಗಿ ಈಗ ಸಾಮಾನ್ಯವಾಗಿ ಎಲ್ಲರೂ ಲೈಟ್ ಎಮಿಟಿಂಗ್ ಡಯೋಡ್ (ಎಲ್‌ಇಡಿ) ದೀಪಗಳನ್ನು ಬಳಸುತ್ತಿರಬಹುದು. '5 ಸ್ಟಾರ್' ಪ್ರಮಾಣಪತ್ರವಿರುವ ಎಲೆಕ್ಟ್ರಾನಿಕ್ ಸಲಕರಣೆಗಳು ಮನೆಯಲ್ಲಿ ಇರಬಹುದು. ಇವೆಲ್ಲಾ ವಿದ್ಯುತ್ ಬಳಕೆಯ ಪ್ರಮಾಣವನ್ನು ಕಡಿಮೆಗೊಳಿಸಬಹುದೇ ಹೊರತು, ವಿದ್ಯುತ್ ಬಳಕೆಯನ್ನು ಶೂನ್ಯವಾಗಿಸಲಾರವು. ಹಣಕೊಟ್ಟು ಬಾಹ್ಯಮೂಲಗಳಿಂದ ವಿದ್ಯುತ್ ಖರೀದಿಸುವುದು ಅನಿವಾರ್ಯ. ಇದಕ್ಕೆ ಪರ್ಯಾಯವಾಗಿ ನಮ್ಮ ವಿದ್ಯುತ್ತನ್ನು ನಾವೇ ಬಳಸಿಕೊಳ್ಳುವುದು ಜಾಣ್ಮೆ ಎನ್ನುವುದು ಈಗಿನ ವಿಜ್ಞಾನಿಗಳ ಅಭಿಮತ. ಇಂಥದ್ದೇ ಒಂದು ತಂತ್ರಜ್ಞಾನದ ಅಳವಡಿಕೆಯ ಪ್ರಯತ್ನ ಇದೀಗ ಆಗಿದೆ.

ಮನೆಗಳ ಚಾವಣಿಯ ಮೇಲೆ ಸೌರಫಲಕ ಅಥವಾ ಗಾಳಿಯಂತ್ರಗಳನ್ನು ಅಳವಡಿಸುವುದು, ಕೊಂಚ ಮಟ್ಟಿಗೆ ಸ್ವಾವಲಂಬಿ ವಿದ್ಯುತ್ ಉತ್ಪಾದನೆಯನ್ನು ಮಾಡಬಲ್ಲದು. ಈ ರೀತಿಯ ಸಾಧನಗಳ ಸಾಲಿಗೆ ಕೆಲವೊಂದು ಹೊಸ ಸೇರ್ಪಡೆಗಳಾಗಿವೆ. ಈ ರೀತಿಯ ತಂತ್ರಜ್ಞಾನ ಹಾಗೂ ಸಾಧನಗಳನ್ನು ಅಳವಡಿಸಿರುವ ಮನೆಗಳನ್ನು ಈಗ 'ಜಾಣ ಮನೆಗಳು' ಎಂದೇ ಕರೆಯಲಾಗುತ್ತಿದೆ.

ಏನವು ಹೊಸ ತಂತ್ರಜ್ಞಾನ?

ಇವನ್ನು ಹೊಸ ಆವಿಷ್ಕಾರ ಎಂದು ಹೇಳುವುದಕ್ಕಿಂತ, ಹಲವು ಆವಿಷ್ಕಾರಗಳ ಅಳವಡಿಕೆ ಎಂದು ಕರೆಯುವುದು ಸೂಕ್ತವಾದೀತು. 'ಫೋಟೋವೋಲ್ಟಾಯಿಕ್ ಗ್ಲೇಜ್', 'ಕೈನೆಟಿಕ್ ಫುಟ್ ಫಾಲ್' ಹಾಗೂ 'ಕೈನೆಟಿಕ್ ರೋಡ್' ಎಂಬ ಮೂರು ವಿಭಿನ್ನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಮನೆಯೊಂದಕ್ಕೆ ಸಾಕಾಗುವಷ್ಟು ವಿದ್ಯುತ್ತನ್ನು ತಯಾರಿಸಬಹುದಾಗಿದೆ. ಈಗಾಗಲೇ ಭಾರತವೂ ಸೇರಿದಂತೆ ವಿಶ್ವದ ಮುಂಚೂಣಿ ಗೃಹ ನಿರ್ಮಾಣ ಸಂಸ್ಥೆಗಳು ಇವನ್ನು ಅಳವಡಿಸಿಕೊಳ್ಳಲು ಶುರು ಮಾಡಿವೆ.

ಇಂಗ್ಲೆಂಡ್‌ನ ಕೇಂಬ್ರಿಜ್ ಮೂಲದ 'ಪಾಲಿ ಸೋಲಾರ್ ಟೆಕ್ನಾಲಜಿ' ಸಂಸ್ಥೆಯು 'ಫೋಟೋವೋಲ್ಟಾಯಿಕ್ ಗ್ಲೇಜ್' ತಂತ್ರಜ್ಞಾನವನ್ನು ಸುಧಾರಿಸಿ ಅದನ್ನು ಉದ್ಯಮವಾಗಿ ಪರಿವರ್ತಿಸಿದೆ. ಮುಖ್ಯವಾಗಿ ಮನೆಯ ಬಾಹ್ಯ ಗೋಡೆ ಹಾಗೂ ಚಾವಣಿಗೆ ಸೌರಶಕ್ತಿ ಉತ್ಪಾದಿಸುವ ಬಣ್ಣ ಹಾಗೂ ಉತ್ಪತ್ತಿಯಾಗುವ ವಿದ್ಯುತ್ತನ್ನು ಬ್ಯಾಟರಿಗಳಿಗೆ ರವಾನೆ ಮಾಡುವ ಹಾಗೂ ಸಂಗ್ರಹಿಸುವ ಇತರ ಎಲೆಕ್ಟ್ರಾನಿಕ್ ಹಾಗೂ ಕಂಪ್ಯೂಟರ್ ಸಾಧನಗಳನ್ನು ಈ ಸಂಸ್ಥೆ ಅಭಿವೃದ್ಧಿಪಡಿಸಿದೆ. ಕೇವಲ ಬಣ್ಣ ಮಾತ್ರವೇ ಅಲ್ಲದೇ, ಮನೆಗಳಿಗೆ ಬಳಕೆಯಾಗುವ ಕಿಟಕಿಯ ಗಾಜು, ಹೆಂಚುಗಳು– ಹೀಗೆ ಪ್ರತಿಯೊಂದರಲ್ಲೂ 'ಫೋಟೋವೋಲ್ಟಾಯಿಕ್' ತಂತ್ರಜ್ಞಾನವನ್ನು ಅಳವಡಿಸಿರುವುದು ಇಲ್ಲಿನ ವಿಶೇಷ.

ಇದರ ಕಾರ್ಯವೈಖರಿಯೂ ಸರಳವಾಗಿದೆ. ಗೋಡೆಗಳ ಮೇಲೆ ಬೀಳುವ ಬೆಳಕು ವಿದ್ಯುತ್ತಾಗಿ ಪರಿವರ್ತನೆಯಾಗುತ್ತದೆ. ಬಳಿಕ ಅದು ಬ್ಯಾಟರಿಗಳಿಗೆ ರವಾನೆಯಾಗುತ್ತದೆ. ಕೇವಲ ಮನೆ ಮಾತ್ರವಲ್ಲದೇ ಮನೆಯ ಅಂಗಳ, ತೋಟ – ಅಕ್ಷರಶಃ ಎಲ್ಲಿ ಬೇಕಾದರೂ ವಿದ್ಯುತ್ ತಯಾರಿಸುವ ಅವಕಾಶ ಇದರಲ್ಲಿದೆ.

ಇದಕ್ಕಿಂತ ವಿಶೇಷವಾದ ತಂತ್ರಜ್ಞಾನ ಅಳವಡಿಕೆಯೆಂದರೆ, ಅದು 'ಕೈನೆಟಿಕ್ ಫುಟ್ ಫಾಲ್'. ಮನೆಯ ಸದಸ್ಯರು ಮನೆಯೊಳಗೆ ಹಾಗೂ ಹೊರಗೆ ನಡೆದಾಡುವುದು ವ್ಯರ್ಥವಾದರೆ ಹೇಗೆ? ಹೆಜ್ಜೆಗಳನ್ನೇ ವಿದ್ಯುತ್ತಾಗಿ ಪರಿವರ್ತಿಸುವ ತಂತ್ರಜ್ಞಾನವಿದು. ಪ್ರತಿ ಹೆಜ್ಜೆ ಇಡುವಾಗಲೂ ದೇಹದ ತೂಕ ನೆಲದ ಮೇಲೆ ಬೀಳುತ್ತದೆ. ಆ ತೂಕವನ್ನೇ ವಿದ್ಯುತ್ತಾಗಿ ಪರಿವರ್ತಿಸುವ ವಿಧಾನವಿದು. ಇಂಗ್ಲೆಂಡ್‌ನ ಲಂಡನ್ ಮೂಲದ 'ಪೇವ್‌ಜೆನ್' ಎಂಬ ಸಂಸ್ಥೆಯು ಈ ತಂತ್ರಜ್ಞಾನವನ್ನು ವಾಣಿಜ್ಯೀಕರಿಸಿದೆ.

ಸಂಶೋಧಕರಾದ ಲಾರೆನ್ಸ್ ಕಿಂಬಲ್ – ಕುಕ್ ಇದರ ಬೆನ್ನೆಲುಬು. ಇವರದೇ ಆವಿಷ್ಕಾರವಿದು. ಭಾರತದಲ್ಲೂ ಇದು ಈಗಾಗಲೇ ಲಭ್ಯವಿದೆ. ನಮ್ಮ ನೆಲದ ಮೇಲೆ ಹಾಸುವ ಟೈಲ್‌ಗಳಂತೆಯೇ ಇವು ಇರುತ್ತದೆ. ಆದರೆ, ಸದ್ಯಕ್ಕಂತೂ ಭಾರತೀಯರಿಗೆ ಇದು ಬಲು ದುಬಾರಿ – ಒಂದು ಚದರ ಅಡಿ ಟೈಲ್ 75 ಡಾಲರ್ ಆರಂಭಿಕ ಬೆಲೆಯಿದೆ. ಆದರೂ, ಭಾರತದ ಹಲವರು ತಮ್ಮ ಮನೆಗಳಲ್ಲಿ ಇದನ್ನು ಅಳವಡಿಸಿಕೊಂಡಿದ್ದಾರೆ.

ಇದರ ಜೊತೆಗೆ, ಇಟಲಿಯ ಮಿಲನ್‌ನಲ್ಲಿರುವ ಪಾಲಿಟೆಕ್ನಿಕ್ ಯೂನಿವರ್ಸಿಟಿ ವಿಜ್ಞಾನಿಗಳು 'ಕೈನೆಟಿಕ್ ರೋಡ್' ಎಂಬ ಸಂಶೋಧನೆ ಮಾಡಿದ್ದಾರೆ. ರಸ್ತೆಗಳ ಮೇಲೆ ಸಂಚರಿಸುವ ವಾಹನಗಳ ತೂಕವನ್ನು ವಿದ್ಯುತ್ತಾಗಿ ಪರಿವರ್ತಿಸುವ ವಿಧಾನವಿದು. ಬಹುತೇಕ 'ಕೈನೆಟಿಕ್ ಫುಟ್ ಫಾಲ್'ನಂತೆಯೇ ಕಾರ್ಯವೈಖರಿ. ಇದನ್ನು ಮನೆಯ ಸುತ್ತಲಿನ ಜಾಗದಲ್ಲಿ ಅಳವಡಿಸಿಕೊಳ್ಳಲೂಬಹುದು.

'ಪೇವ್‌ಜೆನ್' ಸಂಸ್ಥಾಪಕ ಕಿಂಬಲ್ ಸ್ವಚ್ಛ ಪರಿಸರದ ಕನಸು ಕಂಡವರು. ಅವರ ಪ್ರಕಾರ 'ಈ ಮೂರೂ ತಂತ್ರಜ್ಞಾನಗಳು ಪರಿಪೂರ್ಣವಾಗಿ ಮನೆಗಳನ್ನು ವಿದ್ಯುತ್ ಸ್ವಾಬಲಂಬಿಯಾಗಿ ಮಾಡಬಲ್ಲವು. ವಿದ್ಯುತ್ ಪರಿಸರದ ಉಚಿತ ಕೊಡುಗೆ. ಅದನ್ನು ಹಣ ಕೊಟ್ಟು ಕೊಳ್ಳಬೇಕಾಗಿಲ್ಲ. ಈ ಸಾಧನಗಳನ್ನು ಜನಸಾಮಾನ್ಯರು ತಯಾರಿಸಿಕೊಳ್ಳಲು ಸಾಧ್ಯವಾಗದ ಕಾರಣ, ಮೊದಲ ಬಾರಿಗೆ ಕೊಳ್ಳಬೇಕಷ್ಟೇ. ಅಲ್ಲದೇ, ಕೊಳ್ಳುವವರ ಸಂಖ್ಯೆ ಹೆಚ್ಚಾದಂತೆ, ಇವುಗಳ ಬೆಲೆಯೂ ಕಡಿಮೆಯಾಗುತ್ತದೆ. ಇದು ಭವಿಷ್ಯದಲ್ಲಿ ಸ್ವಚ್ಛ ಪರಿಸರ ಸ್ಥಾಪನೆಗೂ ಮುನ್ನುಡಿ ಹಾಕಲಿದೆ' ಎಂದು ಹೇಳಿದ್ದಾರೆ.

ಸೋಲಾರ್ ಗ್ಲಾಸ್ – 'ಪಾಲಿ ಸೋಲಾರ್ ಟೆಕ್ನಾಲಜಿ' ಸಂಸ್ಥೆಯು ಉತ್ಪಾದಿಸಿರುವ 'ಫೋಟೋವೋಲ್ಟಾಯಿಕ್ ಗ್ಲೇಜ್' ತಂತ್ರಜ್ಞಾನವುಳ್ಳ ಪಾರದರ್ಶಕ ಸೌರ ಗಾಜು.

ದೀಪಾವಳಿ: ದಿವಾಳಿಯಾಗದಿರಲಿ

ಹಬ್ಬಗಳು ಬಂದಿತೆಂದರೆ ನಮಗೆ ಖರೀದಿಯ ಉತ್ಸಾಹ. ಧಾವಂತದ ಬದುಕಿನಲ್ಲಿ ನಮ್ಮೆಲ್ಲರ ವ್ಯಾಪಾರಗಳ ಮೂಲ ಇಂದು ಆನ್‌ಲೈನ್ ಆಗಿರುವುದು ಸುಳ್ಳಲ್ಲ. ಆದರೆ ಆನ್‌ಲೈನ್ ಖರೀದಿಗೂ ಮೊದಲು ನಾವು ಎಚ್ಚರಿಕೆ ವಹಿಸದಿದ್ದರೆ ನಮ್ಮ ಹಣವನ್ನು ಕಳೆದುಕೊಳ್ಳುವ ಸಂಭವವೇ ಹೆಚ್ಚು. ಯಾರೋ ಹಬ್ಬಕ್ಕೆ ಶುಭಾಶಯ ಹೇಳಿದ್ದಾರೆ – ಎಂದು ಯಾವುದಾದರೂ ಲಿಂಕನ್ನು ಕ್ಲಿಕ್ ಮಾಡಿದರೂ ಅನಾಹುತಗಳಾಗುವ ಸಾಧ್ಯತೆಗಳುಂಟು. ನಿಮ್ಮ ಮಾಹಿತಿಯನ್ನು ಕದಿಯಲು ಅಂತರ್ಜಾಲಚೋರರು ಹಲವು ಹುನ್ನಾರಗಳನ್ನು ಮಾಡುತ್ತಿರುತ್ತಾರೆ. ಹೀಗಾಗಿ ನಿಮ್ಮ ಆನ್‌ಲೈನ್ ವ್ಯವಹಾರಗಳ ಸಮಯದಲ್ಲಿ ಸಾಕಷ್ಟು ಎಚ್ಚರವಾಗಿರುವುದು ಒಳ್ಳೆಯದು.

ಅವಿನಾಶ್ ಬಿ.

ಇದು ಹಬ್ಬದ ಸೀಸನ್. ಮಳಿಗೆಗಳಿಗೆ ಹೋಗಿವಸ್ತುಗಳನ್ನು ಕೊಂಡುಕೊಳ್ಳಲು ಸಮಯದ ಅಭಾವ. ಆನ್‌ಲೈನ್ ಶಾಪಿಂಗ್ ತಾಣಗಳಲ್ಲಾದರೆ ಕುಳಿತಲ್ಲೇ ಶಾಪಿಂಗ್ ಮಾಡಬಹುದು; ಭರ್ಜರಿ ಕೊಡುಗೆಗಳೂ ಇರುತ್ತವೆ ಎಂಬ ಯೋಚನೆಯಿದ್ದಲ್ಲಿ, ಸ್ವಲ್ಪ ಎಚ್ಚರಿಕೆ ವಹಿಸಿ. ವಂಚಕರ ಸುಳಿಗೆ ಸಿಲುಕಿ ಸಾವಿರ, ಲಕ್ಷಾಂತರವೂ ಅಲ್ಲ, ಕೋಟ್ಯಂತರ ರೂಪಾಯಿ ಕಳೆದುಕೊಂಡವರ ಸುದ್ದಿಗಳನ್ನು ಕೇಳುತ್ತಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಹಬ್ಬದ ಸೀಸನ್‌ನಲ್ಲಿ ಮಿಕವನ್ನು ಬೇಟೆಯಾಡಲು ಸೈಬರ್ ವಂಚಕರೂ ಕಾದು ಕುಳಿತಿರುತ್ತಾರೆ.

ಸ್ನೇಹಿತನ ಪ್ರಕಾಶನ ಅನುಭವ. ಅವನ ಮಿತ್ರರೊಬ್ಬರು ವಾಟ್ಸ್‌ಆ್ಯಪ್ ಮೂಲಕ ಒಂದು ಲಿಂಕ್ ಕಳುಹಿಸಿದ್ದರು. ಇದು 'Forwarded Many Times' ಎಂಬ ಗುರುತು ಇದ್ದ ಸಂದೇಶ. ಈತ ಅದನ್ನು ಗಮನಿಸಿಲ್ಲವೋ, ಮಿತ್ರ ಕಳುಹಿಸಿದ್ದಲ್ಲಾ ಎಂದು ನಿರ್ಲಕ್ಷ್ಯ ತಾಳಿದನೋ... ಫ್ಲಿಪ್‌ಕಾರ್ಟ್, ಅಮೆಜಾನ್‌ನಲ್ಲಿ ಆನ್‌ಲೈನ್‌ನಲ್ಲಿ ಶೇ. 60 ರಿಯಾಯಿತಿ ಕೂಪನ್ ಪಡೆಯಲು ಕ್ಲಿಕ್ ಮಾಡಿ ಎಂದಿತ್ತು. ಕ್ಲಿಕ್ ಮಾಡಿದ. ತೆರೆದುಕೊಂಡ ಪುಟದಲ್ಲಿ ತನ್ನ ವಿವರವನ್ನೆಲ್ಲ ತುಂಬುತ್ತಾ ಹೋದ, ಸಬ್‌ಮಿಟ್ ಬಟನ್ ಒತ್ತಿದ.

ಕೆಲವು ಕ್ಷಣಗಳು ಕಳೆದಾಗ ಈತನಿಗೊಂದು ಫೋನ್ ಕರೆ ಬಂತು. 'ಸರ್, ನೀವೀಗ ಕೂಪನ್‌ಗಾಗಿ ಅಪ್ಲೈ ಮಾಡಿದ್ದೀರಿ, ಅದನ್ನು ಅಪ್ರೂವ್ ಮಾಡಲು ಒಟಿಪಿ ಕಳುಹಿಸಿದ್ದೇವೆ. ಅದನ್ನು ಹೇಳಿ' ಅಂತ ಅತ್ತಲಿಂದ ಯುವತಿಯೊಬ್ಬಳು ಉಲಿದಳು. ಇವ ಒಟಿಪಿ ಸಂಖ್ಯೆ ಹೇಳಿದ. ಕೆಲವು ನಿಮಿಷ ಕಳೆಯುತ್ತಿದ್ದಂತೆಯೇ, 'ನಿಮ್ಮ ಬ್ಯಾಂಕ್ ಖಾತೆಯಿಂದ 20 ಸಾವಿರ ರೂ. ವರ್ಗಾವಣೆಯಾಗಿದೆ' ಎಂಬ ಎಸ್ಸೆಮ್ಮೆಸ್ ಬಂದಾಗ ಹೌಹಾರಿದ. ತಾನು ಮೊಬೈಲ್ ಬ್ಯಾಂಕಿಂಗ್‌ಗೆ ಎರಡು ಹಂತದ ಪರಿಶೀಲನಾ ವ್ಯವಸ್ಥೆ (ಟು ಸ್ಟೆಪ್ ವೆರಿಫಿಕೇಶನ್) ಬಳಸಿದರೂ ಹೀಗಾಯಿತಲ್ಲ ಎಂಬುದು ಈತನ ಆಘಾತಕ್ಕೆ ಕಾರಣ.

ಮತ್ತೊಂದು ಘಟನೆ. ಸ್ನೇಹಿತೆಯೊಬ್ಬರು ಹಠ ಹಿಡಿಯುತ್ತಿದ್ದ ಮಗುವನ್ನು ಸಾಗಹಾಕಲು ಮೊಬೈಲ್ ಕೊಟ್ಟುಬಿಟ್ಟಿದ್ದರು. ಇಂಟರ್ನೆಟ್ ಆನ್ ಇತ್ತು. ಮಗು ಯೂಟ್ಯೂಬ್ ವಿಡಿಯೊ ನೋಡುತ್ತಿದ್ದಾಗ, ಅದೇನೋ ವಿಂಡೋ ಪಾಪ್-ಅಪ್ ಆಗಿ ಕಾಣಿಸಿಕೊಂಡಿತು. ಆಕರ್ಷಕ ಬಣ್ಣ ಬಣ್ಣದ ಚಿತ್ರವೂ ಇತ್ತು. ಆ ಹುಡುಗಿ ಏನೆಂದು ತಿಳಿಯದೆ ಕ್ಲಿಕ್ ಮಾಡಿಬಿಟ್ಟಳು. ಇನ್ನೂ ಒಂದು ವಿಂಡೋ ಕಾಣಿಸಿಕೊಂಡಿತು. ಓದದೆಯೇ ಕ್ಲಿಕ್ ಮಾಡಿದಳು. ಅದ್ಯಾವುದೋ ಆ್ಯಪ್ ತಾನಾಗಿಯೇ ಡೌನ್‌ಲೋಡ್ ಆಗಿ ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಆಯಿತು. ಹುಡುಗಿಗೆ ತಿಳಿಯಲಿಲ್ಲ. ಆದರೆ, ಆ ಮೊಬೈಲ್‌ನಲ್ಲಿ ನಡೆಯುತ್ತಿದ್ದ ಎಲ್ಲ ಬೆರಳಚ್ಚಿಸುವಿಕೆಯನ್ನೂ ಈ ಆ್ಯಪ್ ಟ್ರ್ಯಾಕ್ ಮಾಡುತ್ತಿತ್ತು. ನಂತರ ಸ್ನೇಹಿತೆಯು ಬ್ಯಾಂಕಿಂಗ್ ವಹಿವಾಟು ನಡೆಸಿದಾಗ ಬಳಕೆದಾರ ಐಡಿ, ಪಾಸ್‌ವರ್ಡ್‌ಗಳು ಈ ಕುತಂತ್ರಾಂಶದ ಮೂಲಕ ರೆಕಾರ್ಡ್ ಆಗಿ, ಮಾಹಿತಿಯು ಸೈಬರ್ ವಂಚಕರಿಗೆ ರವಾನೆಯಾಯಿತು. ಕೆಲವೇ ಕ್ಷಣಗಳಲ್ಲಿ ಈಕೆಯ ಬ್ಯಾಂಕ್ ಖಾತೆಯಿಂದಲೂ ಹಣ ಹೋಯಿತು.

ಇವೆಲ್ಲವೂ ಧಾವಂತದ ಬದುಕಿನಲ್ಲಿ ಆನ್‌ಲೈನ್ ಆಗಿರುವುದರ ಹಿಂದಿರುವ ಕರಾಳ ಮುಖಗಳು. ಎಚ್ಚರಿಕೆ ವಹಿಸದಿದ್ದರೆ ಹಣ ಕಳೆದುಕೊಳ್ಳುತ್ತೇವೆ. ಹೇಗಿದ್ದರೂ ಹಬ್ಬಗಳ ಸಾಲು ಬಂದಿದೆ, ಖರೀದಿ ಉತ್ಸಾಹವಿದೆ. ಶುಭಾಶಯಗಳ ವಿನಿಮಯವೂ ಆಗುತ್ತಿದೆ. ಎಲ್ಲವೂ ಅಂತರ್ಜಾಲ ಬಳಸಿ ಮೊಬೈಲ್ ಮೂಲಕವೇ. ಹೇಗೂ ಕುಳಿತಲ್ಲೇ ಆಗುತ್ತದೆಯಲ್ಲಾ! ನಿಮಗೂ ಬಂದಿರಬಹುದು ಇಂಥ ವಾಟ್ಸ್‌ಆ್ಯಪ್ ಸಂದೇಶಗಳು - 'ನಿಮ್ಮ ಸ್ನೇಹಿತ XYZ ನಿಮಗೆ ಶುಭಾಶಯ ಕೋರಿದ್ದಾರೆ, ಅದನ್ನು ನೋಡಲು ಕ್ಲಿಕ್ ಮಾಡಿ'. ಸ್ನೇಹಿತ ಏನು ವಿಶ್ ಮಾಡಿದ್ದಾರೆ ಎಂದು ಕ್ಲಿಕ್ ಮಾಡಿದರೆ ಕೆಡುವ ಅಪಾಯವೇ ಹೆಚ್ಚು. ನಿಮ್ಮ ಮಾಹಿತಿಯನ್ನು ಕದಿಯುವ ಹುನ್ನಾರಗಳಿವು ಎಂಬುದು ಅರ್ಥವಾಗುವಾಗ ಕಾಲ ಮಿಂಚಿರುತ್ತದೆ.

ಏನು ಎಚ್ಚರಿಕೆ ವಹಿಸಬೇಕು?

- ಈಗಾಗಲೇ ಜನಜನಿತವಾಗಿರುವ ಶಾಪಿಂಗ್ ತಾಣಗಳನ್ನೇ ಬಳಸಿ. ಆದರೆ, ಅದನ್ನೇ ಹೋಲುವ ತಾಣಗಳು ನಿಮ್ಮ ಕಣ್ಣುಗಳಿಗೆ ಮಣ್ಣೆರಚಬಹುದು, ಎಚ್ಚರ ವಹಿಸಿ.
- ಯಾವುದೇ ಅಪರಿಚಿತ ಲಿಂಕ್ ಕ್ಲಿಕ್ ಮಾಡಲು ಹೋಗಬೇಡಿ.
- ಲಕ್ಷ ಬೆಲೆ ಬಾಳುವ ಫೋನ್ ಶೇ.70 ರಿಯಾಯಿತಿಯಲ್ಲಿ ಸಿಗುತ್ತದೆ, ತಕ್ಷಣ ಖರೀದಿಸಿ ಎಂಬ ಆಮಿಷವಿರುವ ಹೊಸ ಶಾಪಿಂಗ್ ತಾಣಗಳ ಬಗ್ಗೆ ಎಚ್ಚರ ವಹಿಸಿ.
- ಡೆಬಿಟ್-ಕ್ರೆಡಿಟ್ ಕಾರ್ಡ್ ಮಾಹಿತಿಯನ್ನು ಸಾಧ್ಯವಿದ್ದಷ್ಟೂ ಹಂಚಿಕೊಳ್ಳಬೇಡಿ. ಬಳಸಿದರೂ, ಆ್ಯಪ್‌ನಲ್ಲಿ ಅಥವಾ ಬ್ರೌಸರ್‌ನಲ್ಲಿ, ಅಥವಾ ಆಯಾ ತಾಣಗಳಲ್ಲಿ ಸೇವ್ ಆಗದಂತೆ ನೋಡಿಕೊಳ್ಳಿ. 16 ಅಂಕಿ ಮರಳಿ ಟೈಪ್ ಮಾಡುವುದಕ್ಕೆ ಉದಾಸೀನ ತೋರಿದರೆ, ಅಪಾಯ ಕಟ್ಟಿಟ್ಟ ಬುತ್ತಿ.
- ವ್ಯಾಲೆಟ್‌ಗಳ ಬಳಕೆ ಒಂದಿಷ್ಟು ಸುರಕ್ಷಿತ. ಯಾಕೆಂದರೆ, ಅದರಲ್ಲಿ ನಿರ್ದಿಷ್ಟ ಮೊತ್ತದ ಹಣವನ್ನು ಮಾತ್ರ ಇರಿಸಿದಲ್ಲಿ ಹ್ಯಾಕ್ ಆದರೂ ದೊಡ್ಡ ಸಮಸ್ಯೆಯಾಗಲಾರದು.
- ಬ್ಯಾಂಕಿಂಗ್ ವಹಿವಾಟಿಗೆ ಎರಡು ಹಂತದ ಪರಿಶೀಲನೆ (ಟು ಸ್ಟೆಪ್ ವೆರಿಫಿಕೇಶನ್) ಎನೇಬಲ್ ಮಾಡಿಕೊಳ್ಳಿ. ಇದು ಸ್ವಲ್ಪ ಮಟ್ಟಿಗೆ ಸುರಕ್ಷತೆ ನೀಡುತ್ತದೆ.
- ಆ್ಯಪ್ ಸ್ಟೋರ್‌ನಿಂದ ಮಾತ್ರವೇ ಯಾವುದೇ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ.
- ಹಣ ಪಾವತಿಸುವುದರ ಬದಲಾಗಿ, ಸಿಒಡಿ (ಕ್ಯಾಶ್ ಆನ್ ಡೆಲಿವರಿ - ಸರಕು ಕೈಸೇರಿದಾಗ ಹಣ ಪಾವತಿ) ವ್ಯವಸ್ಥೆಯಿದ್ದರೆ ಅದನ್ನೇ ಆಯ್ಕೆ ಮಾಡಿಕೊಳ್ಳಿ.
- ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್‌ಗಳ ಪಾಸ್‌ವರ್ಡ್/ಪಿನ್ ಅನ್ನು ಆಗಾಗ್ಗೆ ಬದಲಿಸುತ್ತಿರಿ, ಊಹಿಸಲಾಗದ ಪಾಸ್‌ವರ್ಡ್ ಇರಲಿ.
- ಮೊಬೈಲ್ ಫೋನ್‌ನ ತಂತ್ರಾಂಶಕ್ಕಾಗಿ ಕಾಲಕಾಲಕ್ಕೆ ಬರುವ ಅಪ್‌ಡೇಟನ್ನು ಅಳವಡಿಸಿಕೊಳ್ಳಿ. ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬೇಡಿ.
- ಪ್ರಮುಖ ಮೊಬೈಲ್ ತಯಾರಕ ಕಂಪನಿಗಳೇ ಒದಗಿಸುವ ಆ್ಯಂಟಿ-ವೈರಸ್ ತಂತ್ರಾಂಶ ಮೂಲಕ ಸ್ಕ್ಯಾನ್ ಮಾಡುತ್ತಾ ಇರಿ.
- ಹಣಕಾಸು ವಹಿವಾಟು ಮಾಡುವಾಗ ಯಾವುದೇ ಕಾರಣಕ್ಕೂ ಸಾರ್ವಜನಿಕವಾಗಿ ಲಭ್ಯ ಇರುವ, ವಿಶೇಷತಃ ಉಚಿತವಾಗಿ ಲಭ್ಯವಿರುವ ವೈಫೈ ಬಳಸಬೇಡಿ.
- ಉಚಿತ ವೈಫೈ ಸಿಗುತ್ತದೆ ಎಂಬ ಕಾರಣಕ್ಕೆ ಪರಿಚಿತವಲ್ಲದ ಅಥವಾ ನಕಲಿ (ಉದಾಹರಣೆಗೆ, ನೀವು ರೈಲ್ವೇ ಸ್ಟೇಶನ್‌ನಲ್ಲಿದ್ದರೆ, ಇಂಡಿಯನ್ ರೈಲ್ವೇ ಎಂಬ ಹೆಸರಲ್ಲೇ ನಕಲಿ ವೈಫೈ ಹಾಟ್‌ಸ್ಪಾಟ್ ಕಾಣಿಸಬಹುದು) ವೈಫೈಗೆ ಸಂಪರ್ಕಿಸಲೇಬೇಡಿ.
- ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ. ಗೊತ್ತಿಲ್ಲದೆ ಧುತ್ತನೇ ಬರುವ ಲಿಂಕ್ ಒತ್ತಿ, ಕುತಂತ್ರಾಂಶಗಳು (ಮಾಲ್‌ವೇರ್) ಇರುವ ಆ್ಯಪ್‌ಗಳು ಸ್ವಯಂಚಾಲಿತವಾಗಿ ಇನ್‌ಸ್ಟಾಲ್ ಆಗಿ, ಸೇವ್ ಆಗಿರುವ ಬ್ಯಾಂಕಿಂಗ್ ಮಾಹಿತಿಯನ್ನು (ಲಾಗಿನ್ ಐಡಿ, ಟೈಪ್ ಮಾಡುವ ಪಾಸ್‌ವರ್ಡ್ ಮುಂತಾದವು) ತಮ್ಮನ್ನು ಕಳುಹಿಸಿದ ಒಡೆಯನಿಗೆ ರವಾನಿಸಬಲ್ಲವು. ಬ್ಯಾಂಕ್ ಖಾತೆಯಲ್ಲಿದ್ದ ಹಣ ಖಾಲಿಯಾಗುವುದು ಸುಲಭ.
- ಒಟಿಪಿ ಯಾರ ಜೊತೆಗೂ ಹಂಚಿಕೊಳ್ಳಲೇಬಾರದು.
- ಸೈಬರ್ ಸೆಂಟರ್‌ಗಳಲ್ಲಿರುವ ಕಂಪ್ಯೂಟರಿನಲ್ಲಿ ಆನ್‌ಲೈನ್ ಹಣಕಾಸು ವಹಿವಾಟು ಮಾಡದಿರಿ. ❖

ರಷ್ಯಾ ಯುದ್ಧ ವಿಮಾನ ಪತನ: 14 ಮಂದಿ ಸಾವು

ಮುಖ್ಯಾಂಶಗಳು
- ಒಂಬತ್ತು ಅಂತಸ್ತಿನ ಕಟ್ಟಡದ ಮೇಲೆ ಪತನ
- ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಅವಘಡ

ಮಾಸ್ಕೊ (ಎಪಿ): ಎಂಜಿನ್ ವೈಫಲ್ಯದಿಂದಾಗಿ ರಷ್ಯಾದ ಯುದ್ಧ ವಿಮಾನ ಯೇಸ್ಕ್ ನಗರದ ವಸತಿ ಪ್ರದೇಶದಲ್ಲಿರುವ ಒಂಬತ್ತು ಅಂತಸ್ತಿನ ಕಟ್ಟಡದ ಮೇಲೆ ಸೋಮವಾರ ಪತನವಾಗಿದೆ.

ಈ ಅವಘಡ ಸಂಭವಿಸಿದಾಗ ಕಟ್ಟಡದಲ್ಲಿದ್ದ 14 ಜನರು ಮೃತಪಟ್ಟಿದ್ದಾರೆ.

'ಸುಖೋಯ್– 34 ಯುದ್ಧ ವಿಮಾನವು ತರಬೇತಿ ನಿರತವಾಗಿತ್ತು. ಯೇಸ್ಕ್ ನಗರದಿಂದ ವಿಮಾನವು ಟೇಕ್‌ಆಫ್ ಆದ ಕೆಲವೇ ಹೊತ್ತಿನಲ್ಲಿ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಪತನವಾಯಿತು' ಎಂದು ರಷ್ಯಾ ರಕ್ಷಣಾ ಸಚಿವರು ಹೇಳಿದರು.

'ವಿಮಾನದ ಪೈಲಟ್‌ಗಳು ಸುರಕ್ಷಿತವಾಗಿ ವಿಮಾನದಿಂದ ಹೊರಹಾರಿದ್ದಾರೆ. ಆದರೆ, ವಿಮಾನವು ವಸತಿ ಕಟ್ಟಡದ ಮೇಲೆ ಎರಗಿದ್ದರಿಂದ ಇಂಧನ ಸ್ಫೋಟಗೊಂಡಿದ್ದರಿಂದ ಭಾರಿ ಬೆಂಕಿ ಹೊತ್ತಿಕೊಂಡಿತು. ಬೆಂಕಿಯ ಕೆನ್ನಾಲಗೆಯಿಂದ ಹಲವರು ಮೃತಪಟ್ಟರು. ಬೆಂಕಿಯಿಂದ ತಪ್ಪಿಸಿಕೊಳ್ಳಲು ಕಟ್ಟಡದಿಂದ ಹೊರಕ್ಕೆ ಹಾರಿದ ಇತರ ಮೂವರು ಮೃತಪಟ್ಟರು' ಎಂದರು.

'ಕಟ್ಟಡದ ಅವಶೇಷಗಳ ಮಧ್ಯೆ 14 ನಿವಾಸಿಗಳ ಮೃತದೇಹಗಳು ಸಿಕ್ಕಿವೆ. ಇದರಲ್ಲಿ ಮೂವರು ಮಕ್ಕಳೂ ಸೇರಿದ್ದಾರೆ. 19 ಮಂದಿ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಕಟ್ಟಡದಲ್ಲಿದ್ದ 500 ನಿವಾಸಿಗಳನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ' ಎಂದರು.

ಫೆಬ್ರುವರಿ 24ರಂದು ಉಕ್ರೇನ್ ಮೇಲೆ ಸೇನಾ ಕಾರ್ಯಾಚರಣೆ ಆರಂಭಿಸಿದ ಬಳಿಕ ಯುದ್ಧ ಹೊರತಾದ ಅಪಘಾತಗಳಲ್ಲಿ ರಷ್ಯಾದ 10 ಯುದ್ಧ ವಿಮಾನಗಳು ನಾಶವಾಗಿವೆ.

ರಷ್ಯಾದ ಯುದ್ಧವಿಮಾನ ಪತನಗೊಂಡು ಸ್ಫೋಟಿಸಿದ್ದರಿಂದ ಬೆಂಕಿಯ ಚೆಂಡು ಆವರಿಸಿರುವುದು –ಎಪಿ/ಪಿಟಿಐ ಚಿತ್ರ

ಯುದ್ಧಕಾಲವಲ್ಲ–ಮಾತಿಗೆ ಬೆಂಬಲ

ವಿಶ್ವಸಂಸ್ಥೆ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಜತೆಗೆ ಉಕ್ರೇನ್ ಬಿಕ್ಕಟ್ಟು ಕುರಿತ ಮಾತುಕತೆ ವೇಳೆ 'ಇದು ಯುದ್ಧಕಾಲವಲ್ಲ'ವೆಂದು ನೀಡಿದ ಕಿವಿಮಾತಿಗೆ ನಮ್ಮ ಸಂಪೂರ್ಣ ಬೆಂಬಲವಿದೆ ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಹೇಳಿದ್ದಾರೆ. ಭಾರತಕ್ಕೆ ಮೂರು ದಿನಗಳ ಭೇಟಿ ಕೈಗೊಂಡಿರುವ ಅವರು, ವಿಶ್ವಸಂಸ್ಥೆಯ ಚಾರ್ಟರ್ ಮತ್ತು ಅಂತರರಾಷ್ಟ್ರೀಯ ಕಾನೂನುಗಳಿಗೆ ಅನುಗುಣವಾಗಿ ಉಕ್ರೇನ್ ಬಿಕ್ಕಟ್ಟಿಗೆ ಪರಿಹಾರ ಒದಗಿಸುವ ಎಲ್ಲ ಪ್ರಯತ್ನಗಳನ್ನು ಸ್ವಾಗತಿಸುವುದಾಗಿ ಹೇಳಿದರು.

ಶೆಹಾನ್ ಕರುಣಾತಿಲಕಗೆ ಬುಕರ್ ಪ್ರಶಸ್ತಿ

ಲಂಡನ್ (ಪಿಟಿಐ): ಶ್ರೀಲಂಕಾದ ಲೇಖಕ ಶೆಹಾನ್ ಕರುಣಾತಿಲಕ (47) ಅವರ ಎರಡನೇ ಕಾದಂಬರಿ 'ದಿ ಸೆವೆನ್ ಮೂನ್ಸ್ ಆಫ್ ಮಾಲಿ ಅಲ್ಮೇಡಾ' ಕೃತಿಗೆ 2022ನೇ ಸಾಲಿನ ಪ್ರತಿಷ್ಠಿತ ಬುಕರ್ ಪ್ರಶಸ್ತಿ ದೊರೆತಿದೆ.

ಕರುಣಾತಿಲಕ ಅವರ ಈ ಕಾದಂಬರಿಯು 1990ರ ದಶಕದಲ್ಲಿ ಶ್ರೀಲಂಕಾ ಕಂಡ ಅತ್ಯಂತ ಕ್ರೂರ ಅಂತರಿಕ ಯುದ್ಧದಲ್ಲಿ ಕೊಲೆಯಾದ ಛಾಯಾಗ್ರಾಹಕ ಮಾಲಿ ಅಲ್ಮೇಡಾ ಅವರ ಕುರಿತಾಗಿ, ಮಾಲಿ ಕೊಲೆಯ ನಂತರದ ತನಿಖೆಯ ರೋಚಕ ಕಥಾವಸ್ತುವನ್ನು ತೆರೆದಿಡುತ್ತದೆ. 'ದಿ ಸೆವೆನ್ ಮೂನ್ಸ್ ಆಫ್ ಮಾಲಿ ಅಲ್ಮೇಡಾ' ಕಾದಂಬರಿಯನ್ನು ಇಂಡಿಪೆಂಡೆಂಟ್ ಪ್ರೆಸ್ ಸಾರ್ಟ್ ಆಫ್ ಬುಕ್ಸ್ ಪ್ರಕಾಶಿಸಿದೆ.

ಸೋಮವಾರ ರಾತ್ರಿ ಲಂಡನ್‌ನಲ್ಲಿ ನಡೆದ ಸಮಾರಂಭದಲ್ಲಿ ಕರುಣಾತಿಲಕ ಅವರು 50 ಸಾವಿರ ಪೌಂಡ್ (₹ 46.50 ಲಕ್ಷ) ನಗದು ಒಳಗೊಂಡ ಪ್ರಶಸ್ತಿ ಸ್ವೀಕರಿಸಿದರು. ಶ್ರೀಲಂಕಾ ಮೂಲದ ಎರಡನೇ ಕಾದಂಬರಿಕಾರ ಎನಿಸಿಕೊಂಡರು. ಲಂಕಾ ಮೂಲದ ಕಾದಂಬರಿಕಾರ ಮೈಕಲ್ ಒಂಡಾಚ್ಜೆ ಅವರ 'ದಿ ಇಂಗ್ಲಿಷ್ ಪೇಷಂಟ್' ಕಾದಂಬರಿಗೆ 1992ರಲ್ಲಿ ಬುಕರ್ ಪ್ರಶಸ್ತಿ ಒಲಿದಿತ್ತು.

ಗಗನಯಾನಿ ಜೇಮ್ಸ್ ಮೆಕ್‌ಡಿವಿಟ್ ನಿಧನ

ವಾಷಿಂಗ್ಟನ್ (ಎಪಿ): ಅಮೆರಿಕದ ಗಗನಯಾನಿ ಹಾಗೂ ಚಂದ್ರನ ಮೇಲೆ ಕಾಲಿಡುವುದಕ್ಕೂ ಮೊದಲಿನ ಪರೀಕ್ಷೆಗೆ ಒಳಪಡಿಸಿದ ಅಪೊಲೊ 9 ಗಗನನೌಕೆಯ ಕಮಾಂಡರ್ ಆಗಿದ್ದ ಜೇಮ್ಸ್ ಎ.ಮೆಕ್‌ಡಿವಿಟ್ (93) ಅರಿಜೋನಾದ ಟಕ್ಸನ್‌ನಲ್ಲಿ ನಿಧನರಾಗಿದ್ದಾರೆ ಎಂದು 'ನಾಸಾ' ತಿಳಿಸಿದೆ.

ಮೆಕ್‌ಡಿವಿಟ್ ಅವರು 1965ರ ಜೆಮಿನಿ 4 ವ್ಯೋಮನೌಕೆಯ ಕಮಾಂಡರ್ ಸಹ ಆಗಿದ್ದರು. ಆಗ ಅವರ ಜತೆಗಾರ ಎಡ್ ವೈಟ್ ಅವರು ಮೊದಲ ಬಾರಿಗೆ ಬಾಹ್ಯಾಕಾಶ ನಡಿಗೆ ಮಾಡಿದ್ದರು. ಈ ದೃಶ್ಯವನ್ನು ಮೆಕ್‌ಡಿವಿಟ್ ತಮ್ಮ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದರು. ಅಮೆರಿಕದ ವ್ಯೋಮಯಾನಿ ನಡೆಸಿದ ಪ್ರಥಮ ಬಾಹ್ಯಾಕಾಶ ನಡಿಗೆಯ ಚಿತ್ರ ಎಂದು ಐತಿಹಾಸಿಕ ಚಿತ್ರವಾಗಿ ಇತಿಹಾಸದಲ್ಲಿ ದಾಖಲಾಗಿದೆ.

ಕೀವ್‌ನಲ್ಲಿ ಕಗ್ಗತ್ತಲು

ಕೀವ್ (ಎಪಿ): ಉಕ್ರೇನ್ ರಾಜಧಾನಿ ಕೀವ್ ಮತ್ತು ಸುತ್ತಲಿನ ನಗರಗಳ ಮೇಲೆ ರಷ್ಯಾ ಮಂಗಳವಾರ ಕೂಡ ಕ್ಷಿಪಣಿ ಮತ್ತು ಆತ್ಮಹತ್ಯಾ ಡ್ರೋನ್‌ಗಳ ದಾಳಿ ನಡೆಸಿದ್ದು, ಪ್ರಮುಖ ಮೂಲಸೌಕರ್ಯಗಳು ಧ್ವಂಸಗೊಂಡಿವೆ.

ಪ್ರಮುಖ ಮೂಲಸೌಕರ್ಯಗಳನ್ನೇ ಗುರಿಯಾಗಿಸಿ ರಷ್ಯಾ ನಡೆಸಿದ ವೈಮಾನಿಕ ದಾಳಿ, ಕ್ಷಿಪಣಿ ಹಾಗೂ ಆತ್ಮಾಹುತಿ ಡ್ರೋನ್ ದಾಳಿಯಿಂದಾಗಿ ಕೀವ್, ಡ್ನಿಪ್ರೊ, ಝಿಟೊಮಿರ್, ಝಪೊರಿಝಿಯಾ, ಮೈಕೊಲೈವ್, ಖಾರ್ಕಿವ್ ಪ್ರದೇಶಗಳಲ್ಲಿ ವಿದ್ಯುತ್ ಮತ್ತು ನೀರಿನ ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿದೆ. ಜನವಸತಿ ಕಟ್ಟಡಗಳು ಧ್ವಂಸಗೊಂಡಿವೆ.

'ದೇಶದ ಜನತೆಯನ್ನು ತೀವ್ರ ಮತ್ತು ಕತ್ತಲೆಗೆ ದೂಡಲು, ಶಾಂತಿಮಾತುಕತೆ ಅಸಾಧ್ಯಗೊಳಿಸಲು ರಷ್ಯಾ ನಡೆಸುತ್ತಿರುವ ತೀವ್ರ ದಾಳಿ ಖಂಡನೀಯ' ಅಧ್ಯಕ್ಷ ಝೆಲೆನ್‌ಸ್ಕಿ ಟ್ವೀಟ್ ಮಾಡಿದ್ದಾರೆ.

ವಾರದಲ್ಲಿ ನಡೆದ ದಾಳಿಯಿಂದ ಉಕ್ರೇನಿನ ಮೂರನೇ ಒಂದರಷ್ಟು ವಿದ್ಯುತ್ ಸ್ಥಾವರಗಳು ನಾಶವಾಗಿವೆ. ಕಗ್ಗತ್ತಲು ಕವಿದಿದೆ. ಪುಟಿನ್ ಜತೆ ಶಾಂತಿಮಾತುಕತೆ ಅಸಾಧ್ಯ ಎಂದರು.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು–575004
ದೂರವಾಣಿ: 0824-2885795 CIN: U40109 KA 2002 SGC 030425
ಕ್ರಮ ಸಂಖ್ಯೆ: MESCOM-PROC/PURC/110/2022-PROC ದಿನಾಂಕ: 15.10.2022
ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)
ಮ.ವಿ.ಸ.ಕಂಯು ಈ ಕೆಳಗಿನ ಸಾಮಾಗ್ರಿಗಳ ತಯಾರಿಕೆ ಹಾಗೂ ಸರಬರಾಜಿಗಾಗಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸುತ್ತದೆ.

ಟೆಂಡರು ಸಂಖ್ಯೆ	ಖರೀದಿಸಲು ಉದ್ದೇಶಿಸಿರುವ ಸಾಮಾಗ್ರಿಯ ವಿವರ	ಪ್ರಮಾಣ
MESCOM/2022-23/IND833/CALL-2	8 ಎಸ್.ಡಬ್ಲ್ಯೂಜಿ ಜಿಐ ವಯರ್	70 ಮೆ.ಟನ್.

ಆಸಕ್ತ ಅರ್ಹ ಬಿಡ್ಡುದಾರರು ದಿನಾಂಕ 19.10.2022 ಅಥವಾ ನಂತರ ವೆಬ್‌ಸೈಟ್ www.eproc.karnataka.gov.inಗೆ ಲಾಗಾನ್ ಮಾಡಬಹುದು.
ಸಹಿ/– ಅಧೀಕ್ಷಕ ಇಂಜಿನಿಯರ್ (ವಿ) (ಖರೀದಿ), ಕಾರ್ಪೊರೇಟ್ ಕಚೇರಿ
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ–583231 ದೂರವಾಣಿ ಸಂಖ್ಯೆ:08539:220054
ಇ.ಮೇಲ್: eemidnkst@rediffmail.com
ಸಂಖ್ಯೆ:ಕಾನಿಇಂ/ಸನೀ&ಅಂಅವಿ/ಕೊಪ್ಪಳ/ಶಾಶಾ–2/2022–23/2752 ದಿನಾಂಕ : 15–10–2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ರಾಯಚೂರು ಜಿಲ್ಲೆಯ 02 ಪ್ಯಾಕೇಜ್ ಕಾಮಗಾರಿಗಳಿಗೆ ಲೆಕ್ಕ ಶೀರ್ಷಿಕೆ 4702 ವಿಶೇಷ ಘಟಕ ಯೋಜನೆ ಮತ್ತು 4702 ಗಿರಿಜನ ಉಪ ಯೋಜನೆ ಅಡಿಯಲ್ಲಿ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. 4702 ವಿಶೇಷ ಘಟಕ ಯೋಜನೆಯ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ. 14.67ಲಕ್ಷ ಮತ್ತು 4702 ಗಿರಿಜನ ಉಪ ಯೋಜನೆಯ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ. 35.48 ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: 15–10–2022 ರಿಂದ ದಿನಾಂಕ: 27–10–2022 ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ಡನ್ನು ದಿನಾಂಕ: 29–10–2022ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಕಾಮಗಾರಿ ವಿವರ ಇತ್ಯಾದಿಗಳನ್ನು "ಇ–ಪ್ರಕ್ಯೂರ್‌ಮೆಂಟ್" ಹೆಲ್ಪ್‌ಡೆಸ್ಕ್‌ನಿಂದ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತುಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ವಾ.ಸಾ.ಇ./ಕೊಪ್ಪಳ/384/2022–23/ದೇಶಪಾಂಡೆ ಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಆಯುಕ್ತರವರ ಕಛೇರಿ, ಬಳ್ಳಾರಿ ಮಹಾನಗರಪಾಲಿಕೆ,
ಬಳ್ಳಾರಿ ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101.
ದೂರವಾಣಿ ಸಂಖ್ಯೆ : 08392–273479/278168 ಫ್ಯಾಕ್ಸ್: 08392–273477
ವೆಬ್‌ಸೈಟ್ : www.ballaricity.mrc.gov.in ಇ–ಮೇಲ್: bellarycommissioner@yahoo.co.in
ಸಂಖ್ಯೆ: ಮನಪಾಬ/ತಾಂ/ಕೆ.ಕೆ.ಆರ್.ಡಿ.ಬಿ/01/2022–23 ದಿನಾಂಕ:17.10.2022
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಬಳ್ಳಾರಿ ಮಹಾನಗರಪಾಲಿಕೆವತಿಯಿಂದ 2022–23ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮ್ಯಾಕ್ರೋ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಯ ರೂ.85.00 ಲಕ್ಷಗಳು, INDENT No-140000, ಟೆಂಡರ್ ಸಲ್ಲಿಸಲು ದಿನಾಂಕ:27.10.2022 ರಿಂದ 10.11.2022 ರ 16.30 ಗಂಟೆಯೊಳಗಾಗಿ ಡೌನ್‌ಲೋಡ್ ಮಾಡಿಕೊಂಡು, ದಿನಾಂಕ:10.11.2022 ರಂದು 17.30 ಗಂಟೆಯೊಳಗಾಗಿ ಸಲ್ಲಿಸಬಹುದು, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:14.11.2022 ಬೆಳಿಗ್ಗೆ 11.00 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ:17.11.2022 ಬೆಳಿಗ್ಗೆ 11.00 ಗಂಟೆಗೆ ಕಾಮಗಾರಿಯ ಎಲ್ಲಾ ವಿವರಗಳಿಗಾಗಿ ಹಾಗೂ ಯಾವುದೇ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್: http://eproc.karnataka.gov.in ಅನ್ನು ಮತ್ತು www.ballaricity.mrc.gov.in ಅನ್ನು ಗಮನಸಲು ಹಾಗೂ ಬಳ್ಳಾರಿ ಮಹಾನಗರಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.
ಸಹಿ/–ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ
ಡಿಐಪಿಆರ್/ಬಳ್ಳಾರಿ/560/ಎಂಸಿಎ/2022–23

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
CIN:U02001KA1971SGC001999
'ವನ ವಿಕಾಸ', 5ನೇ ಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು -560 003.
ದೂ.ಸಂ. 080-23345199 ಇ-ಮೇಲ್: dmkfdclbd@gmail.com
ಸಂಖ್ಯೆ: ಕಅಅನಿನಿ/ವಿವ್ಯ/ಬೆಂ.ವಿ/ನಿ.ಕೋ/2022-23/972 ದಿನಾಂಕ : 18.10.2022
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
ಈ ಮೂಲಕ ಸಾರ್ವಜನಿಕ/ನೊಂದಾಯಿತ ಗುತ್ತಿಗೆದಾರರಿಗೆ ತಿಳಿಸುವುದೇನೆಂದರೆ, ಬೆಂಗಳೂರು ವಿಭಾಗದ, 2023ನೇ ಸಾಲಿನ ಮಳೆಗಾಲದಲ್ಲಿ ಹೊಸದಾಗಿ ನೆಡುತೋಪು ಬೆಳೆಸಲು ಉದ್ದೇಶಿಸಿರುವ ಪ್ರದೇಶಗಳಲ್ಲಿ ಒಟ್ಟು ಅಂದಾಜಿಸಿರುವ 2658 ಎಂ.ಟಿ.ಗಳನ್ನು ನೀಲಗಿರಿ ಬುಡಗಳನ್ನು/ಕೂಳೆಗಳನ್ನು ಕಿತ್ತು ಸ್ವಂತ ಖರ್ಚಿನಲ್ಲಿ ಪಡೆದುಕೊಳ್ಳಲು ಆಸಕ್ತ ಗುತ್ತಿಗೆದಾರರಿಗೆ/ಸಾರ್ವಜನಿಕರಿಗೆ https://www.eproc.karnataka.gov.in ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತರು ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 05.11.2022 ರ 17.30 ಗಂಟೆ ಒಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ:080-23345199 (ರಜಾ ದಿನಗಳನ್ನು ಹೊರತುಪಡಿಸಿ) ಈ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/- ವಿಭಾಗೀಯ ವ್ಯವಸ್ಥಾಪಕರು, ಕಅಅನಿನಿ, ಬೆಂಗಳೂರು ವಿಭಾಗ

ಐಡಿಬಿಐ ಬ್ಯಾಂಕ್
CIN:L65190MH2004GOI148838
ಐಡಿಬಿಐ ಹೌಸ್, ನಂ. 58, 3ನೇ ಮಹಡಿ, ಮಿಷನ್ ರಸ್ತೆ, ಬೆಂಗಳೂರು – 560 027.
ಫೋನ್ : 080–61451322/24/25,
ಇ–ಮೇಲ್: recovery.bangalore@idbi.co.in
ಐಡಿಬಿಐ ಬ್ಯಾಂಕ್ ಲಿಮಿಟೆಡ್‌ನ ಸುರಕ್ಷಿತ ಠೇವಣಿ ಲಾಕರ್ ಹೊಂದಿರುವವರಿಗೆ ಸೂಚನೆ
ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಾರ್ಗಸೂಚಿಗಳ ಪ್ರಕಾರ, ಬ್ಯಾಂಕುಗಳ ಎಲ್ಲಾ ಸುರಕ್ಷಿತ ಠೇವಣಿ ಲಾಕರ್ (ಎಸ್‌ಡಿಎಲ್) ಹೊಂದಿರುವವರು ಹೊಸ ಲಾಕರ್ ಒಪ್ಪಂದವನ್ನು ಕಾರ್ಯಗತಗೊಳಿಸಬೇಕಾಗುತ್ತದೆ. ಅದರಂತೆ, ಐಡಿಬಿಐ ಬ್ಯಾಂಕ್ ಲಿಮಿಟೆಡ್ ನಲ್ಲಿ ಸುರಕ್ಷಿತ ಠೇವಣಿ ಲಾಕರ್ ಸೌಲಭ್ಯವನ್ನು ಪಡೆದುಕೊಂಡಿರುವ ತನ್ನ ಎಲ್ಲಾ ಗೌರವಾನ್ವಿತ ಗ್ರಾಹಕರಿಗೆ ಇತ್ತೀಚಿನ 2 ಪಾಸ್ ಪೋರ್ಟ್ ಗಾತ್ರದ ಫೋಟೋಗಳೊಂದಿಗೆ ತಮ್ಮ ಹೋಮ್ ಬ್ರಾಂಚ್ ಅನ್ನು ಸಂಪರ್ಕಿಸಲು ವಿನಂತಿಸಲಾಗಿದೆ. ಒಂದು ವೇಳೆ ಜಂಟಿ ಲಾಕರ್ ಹೊಂದಿರುವವರಾದಲ್ಲಿ ಎಲ್ಲಾ ಜಂಟಿ ಮಾಲೀಕರು ತಮ್ಮ ಇತ್ತೀಚಿನ ಪಾಸ್ ಪೋರ್ಟ್ ಗಾತ್ರದ ಫೋಟೋ ಗಳೊಂದಿಗೆ ಹೋಂ ಬ್ರಾಂಚ್ ಗೆ ಶೀಘ್ರವಾಗಿ ಭೇಟಿ ನೀಡುವಂತೆ ಮತ್ತು ಆರ್ ಬಿ ಐ ನಿರ್ದೇಶನದಂತೆ ಹೊಸ ಲಾಕರ್ ಒಪ್ಪಂದವನ್ನು ಕಾರ್ಯಗತಗೊಳಿಸುವಂತೆ ವಿನಂತಿಸಲಾಗಿದೆ. ಈ ವಿಷಯದಲ್ಲಿ ನಾವು ನಮ್ಮ ಎಲ್ಲಾ ಗ್ರಾಹಕರಿಂದ ಸಹಕಾರವನ್ನು ಕೋರುತ್ತೇವೆ.
ದಿನಾಂಕ : 18.10.2022 ಸಹಿ/– ಅಧಿಕೃತ ಅಧಿಕಾರಿಗಳು
ಸ್ಥಳ : ಬೆಂಗಳೂರು ಐಡಿಬಿಐ ಬ್ಯಾಂಕ್ ಲಿ.

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ತಾಲ್ಲೂಕು ಪಂಚಾಯತ್ ಕುಂದಾಪುರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಕುಂದಾಪುರ
ಪಿ.ಡಬ್ಲ್ಯೂ.ಡಿ ಕಛೇರಿ ಹಿಂದುಗಡೆ, ಎನ್.ಹೆಚ್–66 – 576201
Email:cdpoofficekundapur@yahoo.in ದೂ.ಸಂಖ್ಯೆ: 08254–230807
ಸಂ:ಶಿಅಯೋಕು:ಕೋ.ಮೊ.ಖ/ಇಮಟೆಪ್ರ/2022–23 ದಿನಾಂಕ: 18.10.2022
ಮರು ಇ–ಟೆಂಡರ್ ಪ್ರಕಟಣೆ
ಕುಂದಾಪುರ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ 412 ಅಂಗನವಾಡಿ ಕೇಂದ್ರಗಳಲ್ಲಿನ 6 ತಿಂಗಳಿನಿಂದ 6 ವರ್ಷದವರೆಗಿನ ಮಕ್ಕಳಿಗೆ ಹಾಗೂ ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಕೋಳಿ ಮೊಟ್ಟೆ ಖರೀದಿಸಲು ಅರ್ಹ ನೋಂದಾಯಿತ ಸಂಸ್ಥೆಗಳಿಂದ ಭಾಗವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಮರು ಇ–ಟೆಂಡರ್ ಕರೆಯಲಾಗಿದೆ. ಮರು ಟೆಂಡರ್‌ಗೆ ಸಂಬಂಧಿಸಿದಂತೆ ಆರ್ಥಿಕ ಲಕೋಟೆ ಮತ್ತು ತಾಂತ್ರಿಕ ಲಕೋಟೆಗಳನ್ನು https://eproc.karnataka.gov.in ವೆಬ್‌ಸೈಟ್‌ನಲ್ಲಿ ನಿಗದಿತ ದಿನಾಂಕದೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02.11.2022, ಇ–ಟೆಂಡರ್ ತೆರೆಯುವ ದಿನಾಂಕ: 04.11.2022, ಸಮಯ ಪೂರ್ವಾಹ್ನ 11.00 ಗಂಟೆ.
ಹೆಚ್ಚಿನ ಮಾಹಿತಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಇವರಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕುಂದಾಪುರ
ವಾಸಾಇ/ಸನಿಉ/ಎಂಸಿಎ/523/22–23 ದಿ: 18.10.2022

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, ಎ ಬ್ಲಾಕ್, ಬಿಎಂಟಿಸಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–27. ಫ್ಯಾಕ್ಸ್: 080–2248 3645 ದೂರವಾಣಿ ಸಂಖ್ಯೆ: 2248 3641
No:KSBCL/ED(F&A)/E-Pro/2022-23/21/2 Dated: 17/10/2022
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವು ನೋಂದಾಯಿತ 3ನೇ ದರ್ಜೆ ಹಾಗೂ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು/ಸಂಸ್ಥೆಗಳಿಂದ ಈ ಕೆಳಕಂಡ ಕಾಮಗಾರಿಗೆ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
1) ಗೋಕಾಕ್‌ನ ಕಚೇರಿಗೆ ಅಲ್ಯೂಮಿನಿಯಂ ಪಾರ್ಟಿಷನ್ ಒದಗಿಸುವುದು ಹಾಗೂ ಗೋಡೌನ್‌ನಲ್ಲಿ ಒಳಾಂಗಣ ವಿದ್ಯುತ್ ಕಾಮಗಾರಿಗಳು. (2ನೇ ಕರೆ). ಟೆಂಡರಿಗಿಟ್ಟ ಮೊತ್ತ: 11,53,000/–. ಇ.ಎಂ.ಡಿ: ರೂ.28,825/–. ಕಾಮಗಾರಿ ಪೂರ್ಣಗೊಳಿಸುವ ಅವಧಿ: 1 ತಿಂಗಳು.
1) ಟೆಂಡರ್ ವಿಚಾರಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: 25.10.2022 ರ ಮಧ್ಯಾಹ್ನ 12:00 ಗಂಟೆಯವರೆಗೆ. 2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 03.11.2022 ರ ಸಂಜೆ 4:00 ಗಂಟೆಯವರೆಗೆ 3) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 07.11.2022 ರ ಸಂಜೆ 4:00 ಗಂಟೆಗೆ. 4) ಬಿಡ್ಡುದಾರರು ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ : https://eproc.karnataka.gov.in
ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು (ಹ & ಆ).
DIPR/CP/RO2642/AAPL/2022-23

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ,
ಆರೋಗ್ಯ ಸೌಧ, ಮಾಗಡಿ ರಸ್ತೆ, 1ನೇ ಕ್ರಾಸ್, ಬೆಂಗಳೂರು–560023.
Ph: +91 9449843427, e-mail: karnppcd@gmail.com
ಅಧಿಸೂಚನೆ ನಂ. ಡಿಹೆಚ್‌ಎಫ್‌ಡಬ್ಲ್ಯೂಎಸ್/2022–23/ಐಎನ್‌ಡಿ5929ಇಎನ್‌ಟಿ ದಿನಾಂಕ: 18.10.2022
ಅಲ್ಪಾವಧಿ ಟೆಂಡರ್
ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆಯಂತೆ ಆಡಿಯೋಲಾಜಿ ಉಪಕರಣಗಳನ್ನು ಸರಬರಾಜು ಮಾಡುವ ಕುರಿತು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ ಕಛೇರಿಯಲ್ಲಿ ಟೆಂಡರ್ ಮೂಲಕ ಸರಬರಾಜು ಮಾಡಲು ಪೂರೈಕೆದಾರರು ಅಗತ್ಯ ದಾಖಲೆಯೊಂದಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.eproc.karnataka.gov.in ನಲ್ಲಿ ದೊರೆಯುತ್ತದೆ. ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ 18.10.2022 ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಹತೆಯುಳ್ಳ ಪೂರೈಕೆದಾರರು ಟೆಂಡರ್ ದಾಖಲಾತಿಗಳನ್ನು ದಿನಾಂಕ 08.11.2022, 17.00 ಗಂಟೆಯೊಳಗೆ ಅಪ್ಲೋಡ್ ಮಾಡಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ ರವರ ಕಛೇರಿ ಸಮಯ 10.00 ರಿಂದ 17.30 ಗಂಟೆಯೊಳಗೆ ಪಡೆಯ ಬಹುದಾಗಿರುತ್ತದೆ.
ಸಹಿ/– ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
DIPR/CP/2665/Zenkar/2022-23

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಯಾದಗಿರಿ ಜಿಲ್ಲೆ, ಯಾದಗಿರಿ
(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂರವಾಣಿ: 08473 253288 ಫ್ಯಾಕ್ಸ್: 08473 253701 E-mail:itstaff_dudc_yadgiri@yahoo.com : dudc_yadgiri@yahoo.com
ಕಡತ ಸಂಖ್ಯೆ/ಜಿನಕೋ/ಯೋಜನೆ/ನಗರೋತ್ಥಾನ ಹಂತ–04/ /2021–22 ದಿನಾಂಕ: 15.10.2022
~: ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ :~
1) ಕಾಮಗಾರಿ ಹೆಸರು Construction of Road and Drain at Shorapur CMC limits Yadgir District under Chief Minister's Amrut Nagarothana(Municipality) Phase-4. 2) ಇಂಡೆಂಟ್ ಸಂಖ್ಯೆ DMA/2022–23/RD/WORK_INDENT133499/CALL-2 3) ಲೆಕ್ಕ ಶೀರ್ಷಿಕೆ ನಗರೋತ್ಥಾನ ಹಂತ–04 4) ಟೆಂಡರ್‌ಗಿಟ್ಟ ಮೊತ್ತ ರೂ. 881.09 ಲಕ್ಷಗಳು 5) ಗುತ್ತಿಗೆದಾರರ ಅರ್ಹತೆ ಕಂಪನಿಯ ನೊಂದಣಿ ಪ್ರಮಾಣ ಪತ್ರ 6) ಪೂರ್ವಭಾವಿ ಸಭೆಯ ದಿನಾಂಕ: 27.10.2022 ರಂದು ಬೆಳಿಗ್ಗೆ 11:00 ಗೆ ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಯಾದಗಿರಿ. 7) ಟೆಂಡರ್‌ಗಾಗಿ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ 29.10.2022 ಸಾಯಂಕಾಲ 5:30 ಗಂಟೆವರೆಗೆ 8) ಟೆಂಡರ್ ಅರ್ಜಿ ಬೆಲೆ ಮತ್ತು ಇಎಂ.ಡಿ ಮೊತ್ತ ಟೆಂಡರ್ ಫಾರಂ ಬೆಲೆ As per e-portal & EMD ಮೊತ್ತ 13,25,000/– 9) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ 31.10.2022 ಬೆಳಿಗ್ಗೆ 11:00 ಗಂಟೆಗೆ 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಯಾದಗಿರಿ 11ಅಂತರಜಾಲ ತಾಣದ ವಿಳಾಸ www.eproc.karnataka.gov.in
ಸಹಿ/– ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/280/ಎಂ.ಸಿ.&ಎ/2022–23

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
ಕಾರ್ಯಪಾಲಕ ಇಂಜನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ
ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್) – ಕೆ.ಡಬ್ಲ್ಯೂ–4
ಐ.ಎಫ್.ಟಿ. ಸಂ: 19/2022-23 ದಿನಾಂಕ : 14.10.2022
ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗರವರ ಕಛೇರಿಯಿಂದ ಸ್ಟಾಂಡರ್ಡ್ ಟೆಂಡರ್ ಕೆ.ಡಬ್ಲ್ಯೂ–4ರ ಅನ್ವಯ ಶಿಕಾರಿಪುರ ಉಪವಿಭಾಗ ವ್ಯಾಪ್ತಿಯ 2 ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಮೊತ್ತ ರೂ. 128.00 ರಿಂದ 232.00 ಲಕ್ಷಗಳು. ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: http://eproc.karnataka.gov.in ನಲ್ಲಿ ದಿನಾಂಕ: 14.10.2022 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ: 29.10.2022. ಇನ್ನುಳಿದಂತೆ ವೈಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ಸಂ 91-10 ಝೇಂಕಾರ್/2022-23

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560023
ದೂರವಾಣಿ: 080–23113584, ಇ–ಮೇಲ್: pdrch-hfws@karnataka.gov.in
ಸಂಖ್ಯೆ: DD/SSU/BPHU/IT-Eqpt/73/2021-22 ದಿನಾಂಕ: 17.10.2022
NRHM/2022-23/IND 287/Call-2
ಟೆಂಡರ್ ಅಧಿಸೂಚನೆ
Tender for Supply and Commissioning of IT-Equipment's for BPHU Bengaluru
ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ, ರಾಜ್ಯ ಕಣ್ಗಾವಲು ಘಟಕ, ಬಿ.ಪಿ.ಹೆಚ್.ಯು ಬೆಂಗಳೂರು ಇಲ್ಲಿಗೆ ಐಟಿ ಉಪಕರಣಗಳನ್ನು ಖರೀದಿ ಪ್ರಕ್ರಿಯೆ ಕುರಿತು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಸರಬರಾಜು ಮಾಡಲು ಉತ್ಪಾದಕರು ಹಾಗೂ ಅಧಿಕೃತ ಸರಬರಾಜುದಾರರಿಂದ ಅಗತ್ಯ ದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.
ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯುಮೆಂಟ್‌ಗಳನ್ನು ದಿನಾಂಕ: 17.10.2022 ರಂದು ಬೆಳಿಗ್ಗೆ 11.00 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಡಾಕ್ಯುಮೆಂಟ್‌ಗಳನ್ನು ದಿನಾಂಕ: 07.11.2022 ರಂದು ಸಂಜೆ 5.30 ಗಂಟೆಯೊಳಗೆ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಸಹಿದಾರರಿಂದ ಕಚೇರಿ ಸಮಯ ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 5.30 ಗಂಟೆಯೊಳಗೆ ಪಡೆದುಕೊಳ್ಳಬಹುದಾಗಿದೆ.
ಸಹಿ/– ಯೋಜನಾ ನಿರ್ದೇಶಕರು (ಆರ್‌ಸಿಹೆಚ್)
DIPR/CP/2662/BPCL/2022-23

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಹಿರೇಮಗಳೂರು ವಸತಿ ಬಡಾವಣೆ, ಒಂದನೇ ಹಂತ, ಹಿರೇಮಗಳೂರು ಕಡೂರು ಬೈಪಾಸ್ ರಸ್ತೆ, ಕಲ್ಯಾಣ ನಗರ, ಚಿಕ್ಕಮಗಳೂರು – 577102.
Phone : 08262-295712, Website : chikmagalur.uda.gov.in, E-mail : cmr_cudackm@yahoo.in
ಕ್ರ.ಸಂ.ನಅಪಾಚಿ/ಎ.ಬಿ.ವಾ.ವ.ಬ/ವಿದ್ಯುತ್/01/2022–23 ದಿನಾಂಕ : 17.10.2022
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಅರ್ಹ ದರ್ಜೆಯ ಎಲೆಕ್ಟ್ರಿಕಲ್ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಡಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ಷರತ್ತುಗಳಿಗೊಳಪಟ್ಟು ಟೆಂಡರ್ ಸಲ್ಲಿಸಬಹುದಾಗಿದೆ.

ಕ್ರ.ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)
1	UDD/2022-23/EL/WORK_INDENT1767	63.01	1,10,640/–

ಟೆಂಡರ್ ಫಾರಂ ಬೆಲೆ –ಇ–ಪ್ರೊಕ್ಯೂರ್ ಮೆಂಟ್ ನಂತೆ ಕಾಲಾವಧಿ : 03 ತಿಂಗಳು(ಮಳೆಗಾಲ ಹೊರತುಪಡಿಸಿ)
1. ಬಿಡ್ ಪೂರ್ವಭಾವಿ ಸಭೆ ದಿನಾಂಕ: 21.10.2022ರಂದು 16.00 ಗಂಟೆಗೆ ಸ್ಥಳ: ಆಯುಕ್ತರು, ನಗರಾಭಿವೃದ್ಧಿಪ್ರಾಧಿಕಾರ, ಚಿಕ್ಕಮಗಳೂರು ರವರ ಕಛೇರಿಯಲ್ಲಿ.
2. ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25.10.2022ರ 17.30 ಗಂಟೆಯವರೆಗೆ
3. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.10.2022 ರ 11.00 ಗಂಟೆಗೆ
4. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: 31.10.2022 ರ 11.00 ಗಂಟೆಗೆ
ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/– ಆನಂದ್ ಸಿ, ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು
ಸಹಿ/– ಆರ್ ಕೃಷ್ಣಮೂರ್ತಿ, ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ
ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(43ಇ/41ಇ):2022–23:ಜೆಇ–2 ದಿನಾಂಕ: 17.10.2022
ಟೆಂಡರ್ ಪ್ರಕಟಣೆ /2ನೇ ಕರೆ / 3ನೇ ಕರೆ /5ನೇ ಕರೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)
ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸಾರ್ವಜನಿಕ ಇ–ಪ್ರೊಕ್ಯುರ್‌ಮೆಂಟ್ ಮೂಲಕ ಲೆಕ್ಕಶೀರ್ಷಿಕೆ:- 5054–(ಯೋಜನೆ) ಜಿಲ್ಲಾ ಮತ್ತು ಇತರೆ ರಸ್ತೆ ಸುಧಾರಣೆಗಳುರಡಿ ಇಂಡೆಂಟ್ ನಂ. 159499 ಮತ್ತು ಇಂಡೆಂಟ್ ನಂ. 155605 ಈ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 03.11.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ
ಲೆಕ್ಕಶೀರ್ಷಿಕೆ:-5054-(ಯೋಜನೆ) ಜಿಲ್ಲಾ ಮತ್ತು ಇತರೆ ರಸ್ತೆಗಳು (ಅಪೆಂಡಿಕ್ಸ್–ಇ)ರಡಿ ಇಂಡೆಂಟ್ ನಂ. 152407, 152439, 152441 152295, 152362 ಈ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 19.11.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.
ಲೆಕ್ಕಶೀರ್ಷಿಕೆ:- 5054–ಜಿಲ್ಲಾ ಮತ್ತು ಇತರೆ ರಸ್ತೆಗಳು – ಸುಧಾರಣೆ ರಡಿ ಇಂಡೆಂಟ್ ನಂ. 156608, 156609, 156610, 156202, 156611, 155105, 155101, 156801, 155196, 155139, 155245, 156589, 156604, 157925, 156605, 156606, 156607, 158808, 156544, 154595, 156646, 156531 ಈ ಕಾಮಗಾರಿಗಳಿಗೆ 2ನೇ ಕರೆಯಾಗಿ ಟೆಂಡರ್ ಕರೆಯಲಾಗಿದೆ ಮತ್ತು ಇಂಡೆಂಟ್ ನಂ. 156129, 156021 ಈ ಕಾಮಗಾರಿಗಳಿಗೆ 3ನೇ ಕರೆಯಾಗಿ ಟೆಂಡರ್ ಕರೆಯಲಾಗಿದೆ ಹಾಗೂ ಇಂಡೆಂಟ್ ನಂ. 155289 ಕಾಮಗಾರಿಗೆ 5ನೇ ಕರೆಯಾಗಿ ಟೆಂಡರ್ ಕರೆಯಲಾಗಿದ್ದು, ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 28.10.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.
ಈ ಕಾಮಗಾರಿಗಳ ಗರಿಷ್ಠ ಅಂದಾಜು ಮೊತ್ತ ರೂ. 500.00 ಲಕ್ಷ, ಕನಿಷ್ಠ ಅಂದಾಜು ಮೊತ್ತ ರೂ. 43.00 ಲಕ್ಷ ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ https://eproc.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
DIPR / MNG / 738/ MPL / 22-23

ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ
ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಮತ್ತು ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಗೇಟ್ ನಂ. 4, ಬಹುಮಹಡಿಗಳ ಕಟ್ಟಡ, 4ನೇ ಹಂತ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–01
ದೂರವಾಣಿ: 0+91–8046010000, +91–8068948777 ಇ–ಮೇಲ್:jdtpstpb@karnataka.gov.in
ವೆಬ್‌ಸೈಟ್: www.kstpb.dtcp.gov.in
ಸಂಖ್ಯೆ: KSTPB/05/Tender-Vehicles with Drivers/2022-23 ದಿನಾಂಕ:18.10.2022
ಟೆಂಡರ್ ಆಹ್ವಾನ ಪ್ರಕಟಣೆ (2ನೇ ಕರೆ)
ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಗೇಟ್ ನಂ: 04, ಅಂಬೇಡ್ಕರ್ ವೀಧಿ, ಎಮ್. ಎಸ್. ಬಿಲ್ಡಿಂಗ್, ಬೆಂಗಳೂರು–560001 ಕಛೇರಿ ಬಳಕೆಗಾಗಿ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಜೊತೆಗೆ ವಾಹನ ಚಾಲಕರನ್ನು ಪೂರೈಸಲು ಸಂಬಂಧಿಸಿದ ಅನುಭವ ಹೊಂದಿರುವ ಸಂಸ್ಥೆಗಳಿಂದ ಮೊಹರು ಮಾಡಿದ ಲಕೋಟೆಗಳನ್ನು ಇ–ಸಂಗ್ರಹಣಾ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ದಿನಾಂಕ : 19.10.2022ರಂದು ಬೆಳಿಗ್ಗೆ 11.00 ಗಂಟೆಗೆ ಇ–ಸಂಗ್ರಹಣಾ ಕೋಶದಲ್ಲಿ ಟೆಂಡರನ್ನು ಪ್ರಕಟಿಸಲಾಗುವುದು. ದಿನಾಂಕ : 04.11.2022ರಂದು ಸಂಜೆ 5.30 ಗಂಟೆಯೊಳಗೆ ಬಿಡ್ ಸಲ್ಲಿಸುವುದು. ದಿನಾಂಕ : 05.11.2022ರಂದು ಬೆಳಿಗ್ಗೆ 10.30 ಗಂಟೆಗೆ. ತಾಂತ್ರಿಕ ಬಿಡ್ ತೆರೆಯಲಾಗುವುದು. ದಿನಾಂಕ: 07.11.2022ರಂದು ಬೆಳಿಗ್ಗೆ11.00 ಗಂಟೆಗೆ ಹಣಕಾಸು ಬಿಡ್ ತೆರೆಯಲಾಗುವುದು.
ನಿಗದಿತ ಟೆಂಡರ್ ನಮೂನೆ ಹಾಗೂ ಟೆಂಡರ್ ಆಹ್ವಾನಿಸುವ ಸೂಚನಾ ಪತ್ರ ಮತ್ತು ನಿಯಮ ಮತ್ತು ಷರತ್ತುಗಳು ಇತ್ಯಾದಿ ಇವುಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್ ಪೋರ್ಟಲ್ https://www.eproc.karnataka.gov.in ಇದರಲ್ಲಿ ಪಡೆದುಕೊಂಡು ಸಲ್ಲಿಸಬಹುದಾಗಿದೆ.
ಸಹಿ/– ಉಪ ನಿರ್ದೇಶಕರು
ವಾಸಾಸಂಇ/ವಾಪ್ರ/ಜೆಎ/2660/2022–23

ಪುರಸಭೆ ಕಾರ್ಯಾಲಯ, ಬೈಲಹೊಂಗಲ (ಜಿಲ್ಲೆ: ಬೆಳಗಾವಿ)
ಕ್ರ.ಸಂ. ಪುಸಬೈ:ಸಿಬ್ಬಂದಿ:2022–23/802 ದಿನಾಂಕ: 17–10–2022
ಪ್ರಕಟಣೆ
ಬೈಲಹೊಂಗಲ ಪುರಸಭೆ ಅಧೀನದಲ್ಲಿ ಜರುಗುತ್ತಿರುವ ಅನುದಾನಿತ ಪುರಸಭೆ ಕಿತ್ತೂರ ಚನ್ನಮ್ಮಾ ರಾಣಿ ಬಾಲಕೀಯರ ಪ್ರೌಢ ಶಾಲೆ ಹಾಗೂ ಅನುದಾನಿತ ಪುರಸಭೆ ಶೂರ ಸಂಗೊಳ್ಳಿ ರಾಯಣ್ಣ ಪ್ರೌಢ ಶಾಲೆ ಬೈಲಹೊಂಗಲ (ಜಿಲ್ಲೆ: ಬೆಳಗಾವಿ) ಈ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡಲು ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ಇವರ ಆದೇಶ ಸಂಖ್ಯೆ: ಜಿ:5ಶಾಸಿಅ.ಹುತುಅ:ಪುರಸಭೆ:ಬೈ:17/2022–23/2486 ದಿ: 11–10–2022 ರ ಪ್ರಕಾರ ಈ ಕೆಳಕಂಡ ಸಹ ಶಿಕ್ಷಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಶಾಲೆಯ ಹೆಸರು	ಹುದ್ದೆಯ ವಿವರ	ಬೋಧನಾ ವಿಷಯ	ವಿದ್ಯಾರ್ಹತೆ	ಮೀಸಲಾತಿ ಸೂಚ್ಯಾಂಕ	ಸಮತಲ ಮೀಸಲಾತಿ ವಿವರ	ಹುದ್ದೆಗಳ ಸಂಖ್ಯೆ	ಶಾಲಾ ಮಾಧ್ಯಮ	ವೇತನ ಶ್ರೇಣಿ (ರೂ.)
1	ಪುರಸಭೆ ಕಿತ್ತೂರ ಚನ್ನಮ್ಮಾ ರಾಣಿ ಬಾಲಕೀಯರ ಪ್ರೌಢಶಾಲೆ ಬೈಲಹೊಂಗಲ ಜಿಲ್ಲೆ: ಬೆಳಗಾವಿ	ಸಹ ಶಿಕ್ಷಕರು	ಹಿಂದಿ ಭಾಷೆ	BA. Bed	05	ಪ್ರವರ್ಗ–1	01	ಕನ್ನಡ	33450–62600
2	ಪುರಸಭೆ ಶೂರ ಸಂಗೊಳ್ಳಿ ರಾಯಣ್ಣ ಪ್ರೌಢ ಶಾಲೆ ಬೈಲಹೊಂಗಲ ಜಿಲ್ಲೆ: ಬೆಳಗಾವಿ	ಸಹ ಶಿಕ್ಷಕರು	ಸಮಾಜ ವಿಜ್ಞಾನ ಭಾಷೆ	BA. Bed	06	ಸಾಮಾನ್ಯ	01	ಕನ್ನಡ	33450–62600

ಈ ಮೇಲ್ಕಾಣಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಅಗತ್ಯ ದಾಖಲಾತಿಗಳೊಂದಿಗೆ ಈ ಪ್ರಕಟಣೆ ಪ್ರಕಟಗೊಂಡ ದಿನಾಂಕದಿಂದ 21 ದಿನಗಳ ಒಳಗಾಗಿ ಶೈಕ್ಷಣಿಕ ಪ್ರಮಾಣ ಪತ್ರದ ನಕಲು ಪ್ರತಿಗಳನ್ನು ದೃಢೀಕರಣಗಳೊಂದಿಗೆ ತಮ್ಮ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಯೊಂದಿಗೆ ಸಾಮಾನ್ಯ ಅಭ್ಯರ್ಥಿಗಳು ರೂ. 1,000/–, ಪ್ರವರ್ಗ–1 ರೂ.500/– ಗಳ ಡಿ.ಡಿ. ಯನ್ನು ಮಾನ್ಯ ಮುಖ್ಯಾಧಿಕಾರಿ ಪುರಸಭೆ ಬೈಲಹೊಂಗಲ ಇವರ ಹೆಸರಿನಲ್ಲಿ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಒಂದು ಅರ್ಜಿಯನ್ನು ಅಧ್ಯಕ್ಷರು ಪುರಸಭೆ ಬೈಲಹೊಂಗಲ ಇವರಿಗೆ ಹಾಗೂ ಅದರ ಒಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ (ದ) ಇವರಿಗೆ ಸಲ್ಲಿಸಬೇಕು. ಸಂದರ್ಶನದ ದಿನಾಂಕವನ್ನು ನಂತರ ಅಂಚೆ ಮೂಲಕ ತಿಳಿಸಲಾಗುವುದು. ಅಭ್ಯರ್ಥಿಗಳು ತಮ್ಮ ಸ್ವ–ವಿಳಾಸವುಳ್ಳ ಲಕೋಟೆಯನ್ನು ಸ್ಟ್ಯಾಂಪ್ (ಅಂಚೆಚೀಟಿ) ದೊಂದಿಗೆ ಅರ್ಜಿಯ ಜೊತೆಗೆ ಲಗತ್ತಿಸಬೇಕು. ಲಕೋಟೆ ಮೇಲೆ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗೆ ವಿಷಯ ಹಾಗೂ ಮೀಸಲಾತಿ ಕಡ್ಡಾಯವಾಗಿ ನಮೂದಿಸಬೇಕು.
ಸಹಿ/– ವೆಂಕಟೇಶ ನಾಗನೂರ, ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ–1, ಪುರಸಭೆ ಬೈಲಹೊಂಗಲ
ಸಹಿ/– ಲಕ್ಷ್ಮೀ ಅಶೋಕ ಬಡ್ಲಿ, ಉಪಾಧ್ಯಕ್ಷರು, ಪುರಸಭೆ ಬೈಲಹೊಂಗಲ
ಸಹಿ/– ಬಸವರಾಜ (ರಾಜು) ಮಲ್ಲಪ್ಪ ಜನ್ನಟ್ಟಿ, ಅಧ್ಯಕ್ಷರು, ಪುರಸಭೆ ಬೈಲಹೊಂಗಲ
DIPO/RO No. 1035/2022-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No : 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗಲೋಇ:ಪಿಬಿ–:ವಿವಿಧ: 2022–23/3441 ದಿನಾಂಕ : 17–10–2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು 560.55 ಲಕ್ಷ ಮೊತ್ತದಲ್ಲಿ ಒಟ್ಟು 35 ಕಾಮಗಾರಿಗಳಿಗೆ (ಕನಿಷ್ಠ ಮೊತ್ತ ರೂ: 0.86 ಲಕ್ಷ ಗರಿಷ್ಠ ಮೊತ್ತ ರೂ: 98.86 ಲಕ್ಷ) ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಇ– ಪ್ರೊಕ್ಯೂರಮೆಂಟ್ (E-Procurement) ಸ್ಟಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ–1, 2 ಮತ್ತು 3 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.eproc.karnataka.gov.in/ ದಲ್ಲಿ ನೋಡಿಕೊಳ್ಳಬಹುದು.
Work Indent No :- 159415, 158526-SC, 159326, 158555, 158538-SC, 157742 -SC, 158580-SC, 158556-SC, 157754-SC, 158569-SC, 158752 -SC, 158753, 158754, 157180, 157184, 157186-SC, 157187, 157188-SC, 157189, 157190, 157191, 157449-ST, 157192-SC, 157196, 157197, 157200, 158755, 158758-ST, 158757, 158756, 135104, 135103, 87548, 78168, 159475,
ಮೇಲಿನ ಕಾಮಗಾರಿಯ ಟೆಂಡರ ವಿವರ ಪಶ್ನೋತ್ತರ ದಿನಾಂಕ : 25–10–2022, ಟೆಂಡರ್ ಸಲ್ಲಿಸುವ ದಿನಾಂಕ : 28–10–2022 ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ : 29–10–2022 ಆರ್ಥಿಕ ಬಿಡ್ ತೆರೆಯುವ ದಿನಾಂಕ : 31–10–2022
ಜಿಎಸ್‌ಟಿ ಮೊತ್ತವನ್ನು ಚಾಲ್ತಿಯಲ್ಲಿರುವ ಸರ್ಕಾರದ ಆದೇಶದಂತೆ ಪಾವತಿಸಲಾಗುವುದು. ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರ ವಿಳಂಬದಿಂದ ವಿಸ್ತರಿಸಿದಲ್ಲಿ ವಿಸ್ತೃತ ಗುತ್ತಿಗೆ ಅವಧಿಯಲ್ಲಿ ಆಗುವ ಜಿಎಸ್‌ಟಿ ಹೆಚ್ಚಳವನ್ನು ಗುತ್ತಿಗೆದಾರರೆ ಭರಿಸತಕ್ಕದ್ದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗದಗ ವಿಭಾಗ, ಗದಗ
ವಾಸಾಸಂಇ/ಗದಗ/ಎಂ.ಸಿ.ಎ/381/2022–23

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2278480, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂಖ್ಯೆ:ತುಮಪಾ/ಸಿಬ್ಬಂದಿ/ಸಿಆರ್–572022–23 ದಿನಾಂಕ 14.10.2022
ಸಾರ್ವಜನಿಕ ಪ್ರಕಟಣೆ
ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಇವರ ಸುತ್ತೋಲೆ ಸಂಖ್ಯೆ: 788264/ಡಿಎಂಎ/ಇಎಸ್‌ಟಿ3/ಸಿಸಿ1/68/2022 ದಿನಾಂಕ: 08.07.2022 ರಂತೆ ಮಹಾನಗರ ಪಾಲಿಕೆಗಳ ಅಧಿಕಾರಿ ಹಾಗೂ ನೌಕರರ ವೃಂದ ಮತ್ತು ನೇಮಕಾತಿ ನಿಯಮ 2011ರ ರೀತ್ಯಾ ಮಹಾನಗರ ಪಾಲಿಕೆಗಳಿಗೆ ಕಾನೂನು ಅಧಿಕಾರಿ ಹಾಗೂ ಸಹಾಯಕ ಕಾನೂನು ಅಧಿಕಾರಿ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ನಿರ್ದೇಶನ ನೀಡಿದ್ದು, ಅದರಂತೆ ಕಾನೂನು ಅಧಿಕಾರಿ ಹಾಗೂ ಸಹಾಯಕ ಕಾನೂನು ಅಧಿಕಾರಿ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಈ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.
ಆಸಕ್ತ ಅರ್ಹ ಅಭ್ಯರ್ಥಿಗಳು ಈ ಕಚೇರಿಯ ಆಡಳಿತ ಶಾಖೆಯಲ್ಲಿ ಪೂರ್ಣ ಮಾಹಿತಿಯನ್ನು ಪಡೆದುಕೊಂಡು ಈ ಪ್ರಕಟಣೆ ಪ್ರಚುರಗೊಂಡ 30 ದಿನಗಳೊಳಗಾಗಿ ಈ ಕೆಳ ಸಹಿದಾರರಿಗೆ ವಿವರಗಳೊಂದಿಗೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು, ಅವಧಿ ಮೀರಿ ಬಂದಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
1) ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ: ಕಾನೂನು ಅಧಿಕಾರಿ(67,550–1,04,600) ಹುದ್ದೆಗಳ ಸಂಖ್ಯೆ:01. ಅರ್ಹತೆ: ಎಲ್ ಎಲ್ ಎಂ ಪದವಿ ಹೊಂದಿರಬೇಕು, ಕನಿಷ್ಟ 10 ವರ್ಷದ ಅನುಭವ ಹೊಂದಿರಬೇಕು /ಉಚ್ಚ ನ್ಯಾಯಾಲಯ/ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರಬೇಕು.
2) ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ: ಸಹಾಯಕ ಕಾನೂನು ಅಧಿಕಾರಿ(43,100–83,900), ಹುದ್ದೆಗಳ ಸಂಖ್ಯೆ: 01 ಅರ್ಹತೆ: ಎಲ್.ಎಲ್.ಎಂ ಪದವಿ ಹೊಂದಿರಬೇಕು, ಕನಿಷ್ಟ 5 ವರ್ಷ ನ್ಯಾಯವಾದಿಗಳಾಗಿ ಸೇವೆ ಸಲ್ಲಿಸಿರಬೇಕು.
ಸಹಿ/– ಆಯುಕ್ತರು, ತುಮಕೂರು ಮಹಾನಗರಪಾಲಿಕೆ, ತುಮಕೂರು
DIPR/TUM/596/MCA/2022-23

ಬಿಸಿಸಿಐ ನೂತನ ಅಧ್ಯಕ್ಷರಾಗಿ ಬಿನ್ನಿ; ಕಾರ್ಯದರ್ಶಿಯಾಗಿ ಜಯ್ ಶಾ ಮುಂದುವರಿಕೆ

ಆಟಗಾರರ ಗಾಯದ ಸಮಸ್ಯೆಗೆ ಪರಿಹಾರ

ಮುಂಬೈ (ಪಿಟಿಐ): ನಿರೀಕ್ಷೆಯಂತೆಯೇ ರೋಜರ್ ಮೈಕೆಲ್ ಹಂಪ್ರಿ ಬಿನ್ನಿ ಮಂಗಳವಾರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.

ಇಲ್ಲಿ ನಡೆದ ಬಿಸಿಸಿಐ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಬಿನ್ನಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಮಂಡಳಿಗೆ 36ನೇ ಅಧ್ಯಕ್ಷರಾಗಿರುವ ಬಿನ್ನಿ, ಕರ್ನಾಟಕದಿಂದ ಈ ಸ್ಥಾನಕ್ಕೇರಿದ ಎರಡನೇಯವರು.

ಕಾರ್ಯದರ್ಶಿಯಾಗಿ ಜಯ್ ಶಾ ಎರಡನೇ ಅವಧಿಗೆ ಆಯ್ಕೆಯಾದರು. ರಾಜೀವ್ ಶುಕ್ಲಾ (ಉಪಾಧ್ಯಕ್ಷ), ಆಶಿಶ್ ಶೆಲಾರ್ (ಖಜಾಂಚಿ) ಮತ್ತು ದೇವಜಿತ್ ಸೈಕಿಯಾ (ಜಂಟಿ ಕಾರ್ಯದರ್ಶಿ) ಕೂಡ ಅವಿರೋಧವಾಗಿ ಆಯ್ಕೆಯಾದರು.

ಗಾಯದ ಸಮಸ್ಯೆ ಪರಿಹಾರಕ್ಕೆ ಚಿತ್ತ

ಅಧಿಕಾರ ವಹಿಸಿಕೊಂಡ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರೋಜರ್ ಬಿನ್ನಿ, 'ಭಾರತ ಕ್ರಿಕೆಟ್ ತಂಡದ ಆಟಗಾರರಲ್ಲಿ ಹೆಚ್ಚಿರುವ ಗಾಯದ ಸಮಸ್ಯೆಗೆ ಉತ್ತಮ ಪರಿಹಾರ ಕಂಡುಕೊಳ್ಳಲು ಆದ್ಯತೆ ನೀಡಲಾಗುವುದು. ಆಟಗಾರರು ಪದೇ ಪದೇ ಗಾಯಗೊಳ್ಳುತ್ತಿರುವುದು ಗಂಭೀರ ವಿಷಯವಾಗಿದೆ. ಜೂನಿಯರ್ ಹಂತದಿಂದಲೇ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು. ಆಟಗಾರರ ಫಿಟ್‌ನೆಸ್ ಉತ್ತಮಪಡಿಸಲು ಸೂಕ್ತ ರೀತಿಯ ವೈದ್ಯಕೀಯ ಸೌಲಭ್ಯಗಳ ಅಭಿವೃದ್ಧಿಗೆ ಒತ್ತು ನೀಡಲಾಗುವುದು. ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಯಲ್ಲಿ ಶ್ರೇಷ್ಠ ವೈದ್ಯರು ಹಾಗೂ ತರಬೇತುದಾರರು ಇದ್ದಾರೆ' ಎಂದರು.

ಬಿಸಿಸಿಐ ಕಾರ್ಯದರ್ಶಿ ಜಯ್ ಶಾ, ನೂತನ ಅಧ್ಯಕ್ಷ ರೋಜರ್ ಬಿನ್ನಿ ಹಾಗೂ ಉಪಾಧ್ಯಕ್ಷ ರಾಜೀವ್ ಶುಕ್ಲಾ ಸಮಾಲೋಚನೆ –ಪಿಟಿಐ ಚಿತ್ರ

2022ರಲ್ಲಿ ಭಾರತ ತಂಡವು ವಿವಿಧ ಮಾದರಿಗಳಲ್ಲಿ ಒಟ್ಟು 40 ಆಟಗಾರರನ್ನು ಕಣಕ್ಕಿಳಿಸಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಆಟಗಾರರು ಗಾಯಗೊಂಡು ತಂಡದಿಂದ ಹೊರಗುಳಿಯುತ್ತಿರುವುದು. ಪ್ರಮುಖ ವೇಗಿ ಜಸ್‌ಪ್ರೀತ್ ಬೂಮ್ರಾ ಹಾಗೂ ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಗಂಭೀರವಾಗಿ ಗಾಯಗೊಂಡಿದ್ದರಿಂದ ಇದೇ ತಿಂಗಳು ನಡೆಯುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿಲ್ಲ.

'ಭಾರತದಲ್ಲಿಯೂ ಪಿಚ್‌ಗಳ ಗುಣಮಟ್ಟವನ್ನು ಹೆಚ್ಚಿಸಬೇಕಿದೆ. ವಿದೇಶಗಳಲ್ಲಿ ಆಡಲು ಹೋದಾಗ ಕೂಡಲೇ ಹೊಂದಿಕೊಳ್ಳಲು ಅನುಕೂಲವಾಗುವಂತೆ ಸ್ವದೇಶದಲ್ಲಿಯೂ ಪಿಚ್‌ಗಳ ಮಟ್ಟವನ್ನು ಹೆಚ್ಚಿಸಬೇಕು. ವೇಗ ಹಾಗೂ ಬೌನ್ಸ್‌ಗಳಿಗೆ ನೆರವು ನೀಡುವಂತಿರಬೇಕು' ಎಂದು ಬಿನ್ನಿ ಅಭಿಪ್ರಾಯಪಟ್ಟರು.

ಸರ್ವಸದಸ್ಯರ ಸಭೆಯಲ್ಲಿ ನಿಕಟಪೂರ್ವ ಅಧ್ಯಕ್ಷ ಸೌರವ್ ಗಂಗೂಲಿ ಬಂಗಾಳ ಕ್ರಿಕೆಟ್ ತಂಡದ ಪ್ರತಿನಿಧಿಯಾಗಿ ಹಾಜರಿದ್ದರು.

ಮಹಿಳೆಯರ ಐಪಿಎಲ್‌ಗೆ ಅಸ್ತು:

ಮುಂದಿನ ವರ್ಷ ಮಹಿಳೆಯರ ಐಪಿಎಲ್ ಆಯೋಜಿಸಲು ಎಜಿಎಂನಲ್ಲಿ ಅನುಮೋದನೆ ನೀಡಲಾಯಿತು.

ಮುಂದಿನ ವರ್ಷದ ಮಾರ್ಚ್‌ನಲ್ಲಿ ಟೂರ್ನಿ ನಡೆಯಲಿದೆ. ಪುರುಷರ ಐಪಿಎಲ್‌ಗೂ ಮುನ್ನ ಟೂರ್ನಿಯ ವೇಳಾಪಟ್ಟಿ ರಚಿಸಲಾಗುವುದು. ಐದು ತಂಡಗಳು ಆಡಲಿವೆ ಎಂದು ಮೂಲಗಳು ತಿಳಿಸಿವೆ.

ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಮುಖ್ಯಸ್ಥರ ಸ್ಥಾನಕ್ಕೆ ಬಿಸಿಸಿಐ ಅಭ್ಯರ್ಥಿಯನ್ನು ನಾಮನಿರ್ದೇಶನ ಮಾಡುವ ಕುರಿತು ಚರ್ಚೆ ನಡೆಯಲಿಲ್ಲ. ಮುಂದಿನ ತಿಂಗಳು ಮೆಲ್ಬರ್ನ್‌ನಲ್ಲಿ ಐಸಿಸಿ ಚೇರಮನ್ ಆಯ್ಕೆ ಗೆ ಚುನಾವಣೆ ನಡೆಯಲಿದೆ.

'ಭಾರತದ ಪ್ರತಿನಿಧಿ ಆಯ್ಕೆಯ ಕುರಿತು ಪದಾಧಿಕಾರಿಗಳು ನಿರ್ಣಯ ಕೈಗೊಳ್ಳಲಿದ್ದಾರೆ. ಶೀಘ್ರವೇ ಈ ಬಗ್ಗೆ ಸಭೆ ನಡೆಯಲಿದೆ' ಎಂದೂ ಮೂಲಗಳು ತಿಳಿಸಿವೆ.

ಬೆಂಗಳೂರಿನಿಂದ ಬಿಸಿಸಿಐ ಅಧ್ಯಕ್ಷ ಗಾದಿಯವರೆಗೆ...

ಬೆಂಗಳೂರು: ಭಾರತದ ಕ್ರಿಕೆಟ್ ಕ್ಷೇತ್ರದ ಚಹರೆಯನ್ನೇ ಬದಲಿಸಿದ್ದು 1983ರ ವಿಶ್ವಕಪ್ ವಿಜಯ. ಆ ಸಾಧನೆಯ ರೂವಾರಿಗಳಲ್ಲಿ ಆಲ್‌ರೌಂಡರ್ ರೋಜರ್ ಬಿನ್ನಿ ಕಾಣಿಕೆಯೂ ಮಹತ್ವದ್ದು.

ಬೆಂಗಳೂರು ಯುನೈಟೆಡ್ ಕ್ರಿಕೆಟ್ ಕ್ಲಬ್ ನಿಂದ ಶುರುವಾದ ಬಿನ್ನಿ ಕ್ರಿಕೆಟ್ ಜೀವನಕ್ಕೆ ಈಗ ಅತ್ಯುನ್ನತ ಹುದ್ದೆಯ ಗೌರವ ಲಭಿಸಿದೆ. ವಿಶ್ವದ ಶ್ರೀಮಂತ ಕ್ರೀಡಾಸಂಸ್ಥೆಗಳಲ್ಲಿ ಒಂದಾದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷರಾಗಿ ಮಂಗಳವಾರ ಬಿನ್ನಿ ಅವಿರೋಧ ಆಯ್ಕೆಯಾಗಿದ್ದಾರೆ. ಹುದ್ದೆಗೆ 42 ವರ್ಷಗಳ ನಂತರ ಕರ್ನಾಟಕದಿಂದ ಆಯ್ಕೆಯಾದ ಹೆಗ್ಗಳಿಕೆಯೂ ಬಿನ್ನಿಯವರದ್ದು.

1977ರಿಂದ 1980ರವರೆಗೆ ಮಂಡಳಿಯ ಅಧ್ಯಕ್ಷರಾಗಿದ್ದ ಎಂ. ಚಿನ್ನಸ್ವಾಮಿಯವರು ಕರ್ನಾಟಕ ಹಾಗೂ ದೇಶದ ಕ್ರಿಕೆಟ್‌ಗೆ ಕೊಟ್ಟ ಕೊಡುಗೆ ಇವತ್ತಿಗೂ ಅವಿಸ್ಮರಣೀಯ. ಕಳೆದ ನಾಲ್ಕು ದಶಕಗಳ ಅವಧಿಯಲ್ಲಿ ಕ್ರಿಕೆಟ್ ಬೆಳೆದ ರೀತಿ ಅಗಾಧವಾಗಿದೆ. 1983ರ ವಿಶ್ವಕಪ್ ಟೂರ್ನಿಯಲ್ಲಿ 18 ವಿಕೆಟ್‌ಗಳನ್ನು ಗಳಿಸಿದ್ದ ಮಧ್ಯಮವೇಗಿ ಬಿನ್ನಿ ಬ್ಯಾಟಿಂಗ್‌ನಲ್ಲಿಯೂ ಕಾಣಿಕೆ ನೀಡಿದ್ದರು. ರಾಜ್ಯ ಕ್ರಿಕೆಟ್ ತಂಡಕ್ಕೂ ಮಹತ್ವದ ಕಾಣಿಕೆಗಳನ್ನು ಕೊಟ್ಟವರು.

ಕರ್ನಾಟಕದ ಖ್ಯಾತನಾಮ ಕ್ರಿಕೆಟಿಗರ ಪಟ್ಟಿಯಲ್ಲಿರುವ ಪ್ರಮುಖರೂ ಹೌದು. ಬ್ಯಾಟಿಂಗ್‌ನಲ್ಲಿ ಜಿ.ಆರ್. ವಿಶ್ವನಾಥ್, ರಾಹುಲ್ ದ್ರಾವಿಡ್, ಸ್ಪಿನ್ನರ್‌ಗಳಲ್ಲಿ ಬಿ.ಎಸ್. ಚಂದ್ರಶೇಖರ್, ಯರಪಳ್ಳಿ ಪ್ರಸನ್ನ, ಅನಿಲ್ ಕುಂಬ್ಳೆ, ಸುನಿಲ್ ಜೋಶಿ, ವೇಗಿಗಳಲ್ಲಿ ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್, ದೊಡ್ಡಗಣೇಶ್, ಡೇವಿಡ್ ಜಾನ್ಸನ್ ಹಾಗೂ ವಿಕೆಟ್‌ಕೀಪಿಂಗ್‌ನಲ್ಲಿ ಸೈಯದ್ ಕಿರ್ಮಾನಿ, ಸದಾನಂದ ವಿಶ್ವನಾಥ್ ತಮ್ಮದೇ ಆದ ಛಾಪು ಮೂಡಿಸಿದವರು. ಅದೇ ರೀತಿ ಆಲ್‌ರೌಂಡರ್‌ಗಳಲ್ಲಿ ರೋಜರ್ ಪ್ರಮುಖರು. ಆಡಳಿತದಲ್ಲಿ ಚಿನ್ನಸ್ವಾಮಿ ಹಾಗೂ ಐಪಿಎಲ್ ಸಮಿತಿಯ ನಿಕಟಪೂರ್ವ ಮುಖ್ಯಸ್ಥ ಬ್ರಿಜೇಶ್ ಪಟೇಲ್ ಅವರದ್ದು ವಿಶೇಷ ಹೆಜ್ಜೆಗುರುತುಗಳಿವೆ.

ಮೂರು ವರ್ಷಗಳ ಹಿಂದೆ ಬಿಸಿಸಿಐನ ನೂತನ ನಿಯಮಾವಳಿಯ ಪ್ರಕಾರ ಕೆಎಸ್‌ಸಿಎಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ರೋಜರ್ ಆಯ್ಕೆಯಾಗಿದ್ದರು. ಆದರೆ ಹೋದ ವಾರ ಬಿಸಿಸಿಐ ಅಧ್ಯಕ್ಷ ಸ್ಥಾನಕ್ಕೆ ಅವರ ಹೆಸರು ಕೇಳಿಬಂದಾಗ ಕ್ರಿಕೆಟ್ ವಲಯದಲ್ಲಿ ಅಚ್ಚರಿ ಮೂಡಿತ್ತು.

ಸದ್ಯ ಆಯ್ಕೆಯಾಗಿರುವ ಆಡಳಿತ ಸಮಿತಿಯಲ್ಲಿರುವವರಲ್ಲಿ ಪೂರ್ಣಪ್ರಮಾಣದ ಕ್ರಿಕೆಟಿಗರೆಂದರೆ ರೋಜರ್ ಮಾತ್ರ. ಸುಮಾರು ಐದು ದಶಕಗಳಿಂದ ಕ್ರಿಕೆಟ್‌ನಲ್ಲಿ ಆಟಗಾರನಾಗಿ, ಆಯ್ಕೆ ಸಮಿತಿಯ ಸದಸ್ಯರಾಗಿ, ಮಾರ್ಗದರ್ಶಕರಾಗಿ ಮತ್ತು ಪದಾಧಿಕಾರಿಯಾಗಿ ದುಡಿದ ಅನುಭವ ಇದೆ. ಎಲ್ಲಕ್ಕಿಂತ ಮಿಗಿಲಾಗಿ ಕ್ರಿಕೆಟ್ ವಲಯದಲ್ಲಿ 'ಅಜಾತಶತ್ರು' ಎಂಬ ಅಗ್ಗಳಿಕೆಯೂ ಅವರದ್ದು.

ಜಾವೆಲಿನ್ ಥ್ರೋನಲ್ಲಿ ಚಿನ್ನ ಗೆದ್ದ ಡಿ.ಪಿ.ಮನು –ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಮನು, ಅಭಿನಯಾಗೆ ಚಿನ್ನ

ಅಥ್ಲೆಟಿಕ್ಸ್: ಜಾವೆಲಿನ್ ಥ್ರೋನಲ್ಲಿ ಸರ್ವಿಸಸ್ ಸ್ಪರ್ಧಿ ಸಾಧನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮನು 81.23 ಮೀ. ಸಾಧನೆ
- 800 ಮೀ. ಓಟ: ರೈಲ್ವೇಸ್ ಪ್ರಾಬಲ್ಯ
- ಸರ್ವಿಸಸ್‌ನ ಕೃಷ್ಣಕುಮಾರ್‌ಗೆ ಅಗ್ರಸ್ಥಾನ

ಬೆಂಗಳೂರು: ರೈಲ್ವೇಸ್‌ನ ಅಭಿನಯಾ ಎಸ್.ಶೆಟ್ಟಿ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಹೈಜಂಪ್‌ನಲ್ಲಿ ಚಿನ್ನ ಗೆದ್ದರು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಸ್ಪರ್ಧೆಯಲ್ಲಿ ಅವರು 1.78 ಮೀ. ಎತ್ತರ ಜಿಗಿದು ಮೊದಲ ಸ್ಥಾನ ಪಡೆದರು.

ತಮಿಳುನಾಡಿನ ಕೆವಿನಾ ಅಶ್ವಿನ್ ಅನ್ನವಿ (1.76 ಮೀ.) ಬೆಳ್ಳಿ ಗೆದ್ದುಕೊಂಡರೆ, ರೈಲ್ವೇಸ್‌ನ ರುಬಿನಾ ಯಾದವ್ (1.74 ಮೀ.) ಕಂಚು ಪಡೆದರು.

ಕೃಷ್ಣಕುಮಾರ್‌ಗೆ ಅಗ್ರಸ್ಥಾನ: ಸರ್ವಿಸಸ್‌ನ ಕೃಷ್ಣಕುಮಾರ್ ಅವರು ಪುರುಷರ 800 ಮೀ. ಓಟದಲ್ಲಿ 1 ನಿ. 48.80 ಸೆ.ಗಳಲ್ಲಿ ಗುರಿ ತಲುಪಿ ಚಿನ್ನ ಜಯಿಸಿದರು. ಅವರಿಗೆ ಪ್ರಬಲ ಪೈಪೋಟಿ ನೀಡಿದ ಮಧ್ಯ ಪ್ರದೇಶದ ಅಭಿಷೇಕ್ ಸಿಂಗ್ ಠಾಕೂರ್ (1ನಿ. 48. 82 ಸೆ.) ಬೆಳ್ಳಿ ಗೆದ್ದರೆ, ಸರ್ವಿಸಸ್‌ನ ಪ್ರಕಾಶ್ ಬಾಲು (1 ನಿ. 48.98ಸೆ.) ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ 800 ಮೀ. ಓಟದ ಮೂರೂ ಪದಕಗಳನ್ನು ರೈಲ್ವೇಸ್ ಸ್ಪರ್ಧಿಗಳು ತಮ್ಮದಾಗಿಸಿಕೊಂಡರು.

ಚಂದಾ ಅವರು 2 ನಿ. 02.49 ಸೆ.ಗಳಲ್ಲಿ ಗುರಿ ತಲುಪಿ ಚಿನ್ನ ತಮ್ಮದಾಗಿಸಿಕೊಂಡರೆ, ಪೂಜಾ (2 ನಿ. 05.92 ಸೆ.) ಮತ್ತು ಟ್ವಿಂಕಲ್ (2ನಿ. 06.44 ಸೆ.) ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದರು.

ಮನು ಮಿಂಚು: ಸರ್ವಿಸಸ್ ತಂಡವನ್ನು ಪ್ರತಿನಿಧಿಸುವ ಕರ್ನಾಟಕದ ಡಿ.ಪಿ. ಮನು ಅವರು ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಮಿಂಚಿನ ಪ್ರದರ್ಶನ ನೀಡಿ ಚಿನ್ನ ಜಯಿಸಿದರು.

ತಮ್ಮ ಕೊನೆಯ ಪ್ರಯತ್ನದಲ್ಲಿ ಅವರು 81.23 ಮೀ. ಸಾಧನೆಯೊಂದಿಗೆ ಅಗ್ರಸ್ಥಾನದಲ್ಲಿ ಕಾಣಿಸಿಕೊಂಡರು. ರೈಲ್ವೇಸ್‌ನ ರೋಹಿತ್ ಯಾದವ್ (79.80 ಮೀ.) ಮತ್ತು ಒಡಿಶಾದ ಕಿಶೋರ್ ಕುಮಾರ್ (78.05 ಮೀ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ತಮ್ಮದಾಗಿಸಿಕೊಂಡರು.

ಮಹಿಳೆಯರ ಟ್ರಿಪಲ್ ಜಂಪ್‌ನಲ್ಲಿ ಮಹಾರಾಷ್ಟ್ರದ ಪೂರ್ವಾ ಹಿತೇಶ್ ಸಾವಂತ್ (13.18 ಮೀ.) ಚಿನ್ನ ಗೆದ್ದರು. ಕೇರಳದ ಎನ್.ವಿ.ಶೀನಾ (13.07 ಮೀ.) ಹಾಗೂ ರೈಲ್ವೇಸ್‌ನ ಕಾರ್ತಿಕಾ (13.00 ಮೀ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ವಿಶ್ವಕಪ್‌ನಿಂದ ಹಿಂದೆ ಸರಿಯುವುದಾಗಿ ಪಿಸಿಬಿ ಬೆದರಿಕೆ

ಪಾಕಿಸ್ತಾನಕ್ಕೆ ಹೋಗಲ್ಲ: ಜಯ್ ಶಾ

ಮುಂಬೈ (ಪಿಟಿಐ): 'ಮುಂಬರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ ಪಾಕಿಸ್ತಾನದ ಬದಲು ತಟಸ್ಥ ತಾಣದಲ್ಲಿ ನಡೆಯಲಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿಕೆ ನೀಡಿದ ಬೆನ್ನಲ್ಲೇ ಎರಡೂ ದೇಶಗಳ ಕ್ರಿಕೆಟ್ ಸಂಸ್ಥೆಗಳ ನಡುವೆ 'ಸಂಘರ್ಷ' ಏರ್ಪಟ್ಟಿದೆ.

'ಮುಂದಿನ ವರ್ಷ ತಟಸ್ಥ ತಾಣದಲ್ಲಿ ನಡೆಯುವ ಏಷ್ಯಾಕಪ್ ಟೂರ್ನಿಯ ಪಂದ್ಯದಲ್ಲಿ ಭಾರತವು ಪಾಕಿಸ್ತಾನವನ್ನು ಎದುರಿಸಲಿದೆ' ಎಂದು ಜಯ್ ಶಾ ಸ್ಪಷ್ಟಪಡಿಸಿದರು.

2023ರಲ್ಲಿ ಏಕದಿನ ಮಾದರಿಯ ಏಷ್ಯಾಕಪ್ ಟೂರ್ನಿಗೆ ಪಾಕ್ ಆತಿಥ್ಯ ವಹಿಸಲಿದೆ. ಆದರೆ ರಾಜತಾಂತ್ರಿಕ ಕಾರಣಗಳಿಂದಾಗಿ ಭಾರತ ತಂಡವು 2008ರಿಂದ ಇಲ್ಲಿಯವರೆಗೆ ಪಾಕಿಸ್ತಾನಕ್ಕೆ ಕ್ರಿಕೆಟ್ ಆಡಲು ತೆರಳಿಲ್ಲ. 2012ರಲ್ಲಿ ಕೊನೆಯ ಬಾರಿಗೆ ಭಾರತವು ಪಾಕ್ ತಂಡಕ್ಕೆ ದ್ವಿಪಕ್ಷೀಯ ಸರಣಿಗೆ ಆತಿಥ್ಯ ವಹಿಸಿತ್ತು. ಕೇವಲ ಐಸಿಸಿ ಟೂರ್ನಿಗಳಲ್ಲಿ ಮುಖಾಮುಖಿಯಾಗಿವೆ.

ಮಂಗಳವಾರ ನಡೆದ ಮಂಡಳಿಯ ಎಜಿಎಂ ನಂತರ ಸುದ್ದಿಗಾರರಿಗೆ ಈ ಕುರಿತು ಪ್ರತಿಕ್ರಿಯಿಸಿದ ಜಯ್ ಶಾ, 'ನಮ್ಮ ತಂಡ ಪಾಕಿಸ್ತಾನದಲ್ಲಿ ಆಡುವುದಿಲ್ಲ. ಆದ್ದರಿಂದ ಏಷ್ಯಾ ಕಪ್ ಟೂರ್ನಿಯನ್ನು ತಟಸ್ಥ ತಾಣದಲ್ಲಿ ನಡೆಸಲು ನಿರ್ಧರಿಸಲಾಗಿದೆ' ಎಂದರು. ಶಾ ಅವರು ಏಷ್ಯಾ ಕ್ರಿಕೆಟ್ ಕೌನ್ಸಿಲ್ ಮುಖ್ಯಸ್ಥರೂ ಹೌದು.

ಈಚೆಗೆ ಶ್ರೀಲಂಕಾದ ಆತಿಥ್ಯದಲ್ಲಿ ನಡೆಯಬೇಕಿದ್ದ ಏಷ್ಯಾ ಟಿ20 ಟೂರ್ನಿಯು ಯುಎಇಯಲ್ಲಿ ನಡೆದಿತ್ತು. ಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟು ತಲೆದೋರಿದ್ದರಿಂದ ಟೂರ್ನಿಯು ತಟಸ್ಥ ತಾಣದಲ್ಲಿ ಜರುಗಿತ್ತು.

ಆದರೆ ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಮುಂದಿನ ವರ್ಷದ ಏಷ್ಯಾಕಪ್ ಟೂರ್ನಿಯನ್ನು ತನ್ನ ತವರಿನಲ್ಲಿಯೇ ಆಯೋಜಿಸಲು ಸಿದ್ಧತೆಗಳನ್ನು ಆರಂಭಿಸಿದೆ. ಶಾ ಅವರ ಹೇಳಿಕೆ ಪಿಸಿಬಿ ಸಹಜವಾಗಿ ಕೋಪ ತರಿಸಿದೆ.

ಎಸಿಸಿ ಸದಸ್ಯ ಸ್ಥಾನ ತ್ಯಜಿಸುವ ಬಗ್ಗೆಯೂ ಪಾಕ್ ಕ್ರಿಕೆಟ್ ಮಂಡಳಿ ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಪಾಕ್ ಅಸಮಾಧಾನ (ಕರಾಚಿ ವರದಿ): ಪಾಕ್‌ನಲ್ಲಿ ಭಾರತ ತಂಡವು ಆಡಲು ತೆರಳುವುದಿಲ್ಲವೆಂಬ ಬಿಸಿಸಿಐ ನಿಲುವಿಗೆ ಪಿಸಿಬಿ ಅಸಮಾಧಾನ ವ್ಯಕ್ತಪಡಿಸಿದೆ. ಶಾ ಹೇಳಿಕೆಗೆ ಪಿಸಿಬಿ ಅಧಿಕೃತವಾಗಿ ಪ್ರತಿಕ್ರಿಯೆ ನೀಡಿಲ್ಲ. ಆದರೆ ಮುಂದಿನ ವರ್ಷ ಭಾರತದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಿಂದ ಪಾಕಿಸ್ತಾನ ಹಿಂದೆ ಸರಿಯುವ ಸಾಧ್ಯತೆ ಇದೆ ಎನ್ನಲಾಗಿದೆ.

'ಪಿಸಿಬಿಯು ಈಗ ಕಠಿಣ ನಿರ್ಧಾರ ಕೈಗೊಳ್ಳುವ ಕಾಲ ಬಂದಿದೆ. ಭಾರತ–ಪಾಕಿಸ್ತಾನಗಳು ಮುಖಾಮುಖಿಯಾಗದಿದ್ದರೆ ಐಸಿಸಿಗೆ ಆದಾಯ ನಷ್ಟವಾಗುತ್ತದೆ' ಎಂದು ಪಿಸಿಬಿ ಮೂಲಗಳು ಹೇಳಿವೆ.

'ಈಗಿನ ಪರಿಸ್ಥಿತಿಯಲ್ಲಿ ನಮಗೆ ಏನೂ ಹೇಳಲಾಗದು. ಆದರೆ ಈ ವಿಷಯವನ್ನು ಮುಂದಿನ ತಿಂಗಳು ಮೆಲ್ಬರ್ನ್‌ನಲ್ಲಿ ನಡೆಯಲಿರುವ ಐಸಿಸಿ ಮಂಡಳಿ ಸಭೆಯಲ್ಲಿ ಪ್ರಸ್ತಾಪಿಸುವೆವು' ಎಂದು ಪಿಸಿಬಿಯ ವಕ್ತಾರರೊಬ್ಬರು ಹೇಳಿದ್ದಾರೆ.

'ಜಯ್ ಶಾ ಹೇಳಿರುವುದು ಪಿಸಿಬಿಗೆ ಅಚ್ಚರಿ ಉಂಟುಮಾಡಿದೆ. ಏಕೆಂದರೆ ಆತಿಥ್ಯದ ಹಕ್ಕನ್ನು ಎಸಿಸಿಯ ಕಾರ್ಯಕಾರಿ ಸಮಿತಿಯು ನಮಗೆ ನೀಡಿದೆಯೇ ಹೊರತು, ಎಸಿಸಿ ಅಧ್ಯಕ್ಷರು ಅಲ್ಲ' ಎಂದು ಪಿಸಿಬಿ ಮೂಲಗಳು ತಿಳಿಸಿವೆ.

ಪುಣೇರಿ ಪಲ್ಟನ್ ಹಾಗೂ ತೆಲುಗು ಟೈಟನ್ಸ್ ಆಟಗಾರರ ಸೆಣಸಾಟ

ಪಲ್ಟನ್‌ಗೆ ರೋಚಕ ಜಯ

ಬೆಂಗಳೂರು: ರೋಚಕತೆಯ ತುತ್ತತುದಿ ತಲುಪಿದ್ದ ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡವು ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪ್ರೊ ಕಬಡ್ಡಿ ಪಂದ್ಯದಲ್ಲಿ ತೆಲುಗು ಟೈಟನ್ಸ್ ವಿರುದ್ಧ ಜಯಿಸಿತು.

ಮಿಂಚಿನ ದಾಳಿ ನಡೆಸಿದ ಮೋಹಿತ್ ಗೋಯತ್ ಹಾಗೂ ನಾಯಕ ಫಜಲ್ ಅತ್ರಾಚಲಿ ಅವರ ರಕ್ಷಣಾತ್ಮಕ ಆಟದ ಬಲದಿಂದ ಪುಣೇರಿ ತಂಡವು 26–25ರಿಂದ ಟೈಟನ್ ವಿರುದ್ಧ ಗೆದ್ದಿತು.

ಪಂದ್ಯದ ಆರಂಭದಿಂದಲೂ ಪಂದ್ಯ ಕುತೂಹಲ ಕೆರಳಿಸಿತ್ತು. ಪ್ರಥಮಾರ್ಧದ ವಿರಾಮದ ಕಾಲಕ್ಕೆ ಪುಣೇರಿ ತಂಡವು 10–9ರ ಮುನ್ನಡೆಯಲಿತ್ತು. ವಿರಾಮದ ನಂತರದ ಆಟದಲ್ಲಿ ಉಭಯ ತಂಡಗಳ ಹೋರಾಟ ಸಮಬಲದ್ದಾಗಿತ್ತು. ಕ್ಷಣಕ್ಷಣಕ್ಕೂ ಪಂದ್ಯ ಕುತೂಹಲ ಕೆರಳಿಸಿತ್ತು. ಈ ಅವಧಿಯಲ್ಲಿ 15–15ರ ಸಮಬಲವಾಯಿತು. ಆದರೆ ಮೊದಲಾರ್ಧದಲ್ಲಿ ಪುಣೇರಿ ಗಳಿಸಿದ ಒಂದಂಕದ ಅಂತರ ಗೆಲುವಿಗೆ ಕಾರಣವಾಯಿತು.

ಟೈಟನ್ಸ್ ತಂಡದ ರೇಡರ್ ವಿನಯ್ (6) ಹಾಗೂ ಸಿದ್ಧಾರ್ಥ್ ದೇಸಾಯಿ (8) ಮಿಂಚಿದರು.

ದಿನದ ಇನ್ನೊಂದು ಪಂದ್ಯದಲ್ಲಿ; ಜೈಪುರ್ ಪಿಂಕ್ ಪ್ಯಾಂಥರ್ಸ್ ತಂಡವು 39–24ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಜಯಗಳಿಸಿತು.

ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್: 10 ವಿಕೆಟ್ ಜಯ

ಕರ್ನಾಟಕಕ್ಕೆ ಸಾಟಿಯಾಗದ ಅರುಣಾಚಲ

ಚಂಡೀಗಡ (ಪಿಟಿಐ): ಕರ್ನಾಟಕ ತಂಡದವರು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಅರುಣಾಚಲ ಪ್ರದೇಶ ವಿರುದ್ಧ 10 ವಿಕೆಟ್‌ಗಳ ಭರ್ಜರಿ ಗೆಲುವು ಪಡೆದರು.

ಮೊಹಾಲಿಯಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಅರುಣಾಚಲ ಪ್ರದೇಶ 19.2 ಓವರ್‌ಗಳಲ್ಲಿ 75 ರನ್‌ಗಳಿಗೆ ಆಲೌಟಾಯಿತು.

ವೇಗದ ಬೌಲರ್‌ಗಳಾದ ವಿ.ಕೌಶಿಕ್ (5ಕ್ಕೆ 3) ಮತ್ತು ವಿದ್ವತ್ ಕಾವೇರಪ್ಪ (22ಕ್ಕೆ3) ಅವರ ಮೊಚನಾದ ದಾಳಿಗೆ ಅರುಣಾಚಲ ಬ್ಯಾಟರ್‌ಗಳು ಪರದಾಡಿದರು. ಸ್ಪಿನ್ನರ್‌ಗಳಾದ ಜೆ.ಸುಚಿತ್ ಮತ್ತು ಕೆ.ಗೌತಮ್ (12ಕ್ಕೆ 1) ಅವರೂ ಕೈಚಳಕ ತೋರಿದರು. ಎದುರಾಳಿ ತಂಡದ ಮೂವರು ಮಾತ್ರ ಎರಡಂಕಿಯ ಮೊತ್ತ ತಲುಪಿದರು.

ಗೆಲುವಿಗೆ 76 ರನ್‌ಗಳ ಗುರಿ ಕರ್ನಾಟಕಕ್ಕೆ ಸವಾಲಾಗಲೇ ಇಲ್ಲ.

ವಿ.ಕೌಶಿಕ್

ಮಯಂಕ್ ಅಗರವಾಲ್ (ಔಟಾಗದೆ 47, 21 ಎ., 4X5, 6X3) ಮತ್ತು ದೇವದತ್ತ ಪಡಿಕ್ಕಲ್ (ಔಟಾಗದೆ 28, 20 ಎ., 4X5) ಅವರು ಕೇವಲ 6.5 ಓವರ್‌ಗಳಲ್ಲಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು.

ಐದು ಪಂದ್ಯಗಳಲ್ಲಿ ನಾಲ್ಕನೇ ಗೆಲುವು ಪಡೆದ ಮಯಂಕ್ ಅಗರವಾಲ್ ಬಳಗ, 16 ಪಾಯಿಂಟ್ಸ್‌ಗಳೊಂದಿಗೆ 'ಸಿ' ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ಹರಿಯಾಣ ಮತ್ತು ಸರ್ವಿಸಸ್ ಬಳಿಕದ ಸ್ಥಾನಗಳಲ್ಲಿವೆ.

ಸಂಕ್ಷಿಪ್ತ ಸ್ಕೋರ್: ಅರುಣಾಚಲ ಪ್ರದೇಶ 19.2 ಓವರ್‌ಗಳಲ್ಲಿ 75 (ರೋಹನ್ ಶರ್ಮಾ 18, ವಿ.ಕೌಶಿಕ್ 5ಕ್ಕೆ 3, ವಿದ್ವತ್ ಕಾವೇರಪ್ಪ 22ಕ್ಕೆ 3, ಜೆ.ಸುಚಿತ್ 15ಕ್ಕೆ 2, ಕೆ.ಗೌತಮ್ 12ಕ್ಕೆ 1, ವೈಶಾಖ್ ವಿಜಯಕುಮಾರ್ 17ಕ್ಕೆ 1)

ಕರ್ನಾಟಕ 6.5 ಓವರ್‌ಗಳಲ್ಲಿ 76 (ಮಯಂಕ್ ಅಗರವಾಲ್ ಔಟಾಗದೆ 47, ದೇವದತ್ತ ಪಡಿಕ್ಕಲ್ ಔಟಾಗದೆ 28) ಫಲಿತಾಂಶ: ಕರ್ನಾಟಕಕ್ಕೆ 10 ವಿಕೆಟ್ ಗೆಲುವು

ಬ್ಯಾಡ್ಮಿಂಟನ್: ಶ್ರೀಕಾಂತ್ ಶುಭಾರಂಭ

ಒಡೆನ್ಸ್, ಡೆನ್ಮಾರ್ಕ್ (ಪಿಟಿಐ): ಸೊಗಸಾದ ಆಟವಾಡಿದ ಭಾರತದ ಕಿದಂಬಿ ಶ್ರೀಕಾಂತ್, ಡೆನ್ಮಾರ್ಕ್ ಓಪನ್ ಸೂಪರ್–750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಅವರು 17-21, 21-14, 21-12 ರಲ್ಲಿ ಹಾಂಕಾಂಗ್‌ನ ಎಂಗ್ ಕಾ ಲಾಂಗ್ ಆ್ಯಂಗಸ್ ಅವರನ್ನು ಮಣಿಸಿದರು.

ಶ್ರೀಕಾಂತ್, ವಿಶ್ವದ 14ನೇ ರ‍್ಯಾಂಕ್‌ನ ಆಟಗಾರನನ್ನು ಮಣಿಸಲು 56 ನಿಮಿಷಗಳನ್ನು ತೆಗೆದುಕೊಂಡರು. ಈ ಪಂದ್ಯಕ್ಕೂ ಮುನ್ನ ಉಭಯ ಆಟಗಾರರು ಆರು ಪಂದ್ಯಗಳನ್ನು ಆಡಿದ್ದು, 3–3 ರಲ್ಲಿ ಸಮಬಲ ಸಾಧಿಸಿದ್ದರು.

ಮೊದಲ ಗೇಮ್‌ನಲ್ಲಿ ಸೋತರೂ ತಿರುಗೇಟು ನೀಡಿದ ಶ್ರೀಕಾಂತ್, ಗೆಲುವು ದಕ್ಕಿಸಿಕೊಂಡರು. ಎರಡನೇ ಗೇಮ್‌ನಲ್ಲಿ ಶಿಸ್ತಿನ ಆಟವಾಡಿದ ಅವರು 6–3 ರಲ್ಲಿ ಮುನ್ನಡೆ ಸಾಧಿಸಿದರು. ತಿರುಗೇಟು ನೀಡಿದ ಆ್ಯಂಗಸ್ 10–8 ರಲ್ಲಿ ಮೇಲುಗೈ ಪಡೆದರು. ಮತ್ತೆ ಲಯ ಕಂಡುಕೊಂಡ ಭಾರತದ ಆಟಗಾರ ಚಾಣಾಕ್ಷ ಹೊಡೆತಗಳ ಮೂಲಕ ಪಾಯಿಂಟ್ ಕಲೆಹಾಕಿ 16–10 ರಲ್ಲಿ ಮುನ್ನಡೆ ಸಾಧಿಸಿದರು. ಆ ಬಳಿಕ ಒತ್ತಡಕ್ಕೆ ಒಳಗಾಗದೆ ಗೇಮ್ ಗೆದ್ದರು.

ಭಾರತದ ಕಿದಂಬಿ ಶ್ರೀಕಾಂತ್ ಆಟದ ವೈಖರಿ

ನಿರ್ಣಾಯಕ ಗೇಮ್‌ನಲ್ಲಿ ಶ್ರೀಕಾಂತ್ ಆಟಕ್ಕೆ ಎದುರಾಳಿ ತಬ್ಬಿಬ್ಬಾದರು. 11–4 ರಲ್ಲಿ ಮುನ್ನಡೆ ಸಾಧಿಸಿದ ಅವರು ಕೊನೆಯವರೆಗೂ ಮುನ್ನಡೆ ಕಾಪಾಡಿಕೊಂಡು ಪಂದ್ಯ ಜಯಿಸಿದರು.

ತ್ರಿಶಾ– ಗಾಯತ್ರಿಗೆ ಗೆಲುವು: ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಕಣದಲ್ಲಿರುವ ತ್ರಿಶಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ 21–15, 21–15 ರಲ್ಲಿ ಆತಿಥೇಯ ದೇಶದ ಅಲೆಕ್ಸಾಂಡ್ರಾ ಬೋಯೆ– ಅಮೇಲಿ ಮೆಗ್‌ಲುಂಗ್ ಅವರನ್ನು ಮಣಿಸಿ ಎರಡನೇ ಸುತ್ತು ಪ್ರವೇಶಿಸಿದರು.

ಆಸ್ಟ್ರೇಲಿಯಾ ಮಣಿಸಿದ ಭಾರತ

ಸಾಂಟಾಂಡೆರ್, ಸ್ಪೇನ್ (ಪಿಟಿಐ): ಭಾರತ ತಂಡದವರು ಇಲ್ಲಿ ನಡೆಯುತ್ತಿರುವ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಿಶ್ರ ತಂಡ ವಿಭಾಗದ 'ಬಿ' ಗುಂಪಿನ ಪಂದ್ಯದಲ್ಲಿ 3–2 ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಗೆದ್ದರು.

ಯುವ ಆಟಗಾರ್ತಿ ಉನ್ನತಿ ಹೂಡಾ ಅವರ ಉತ್ತಮ ಆಟ ಭಾರತದ ಗೆಲುವಿಗೆ ಹಾದಿಯೊದಗಿಸಿತು. ಆರಂಭದಲ್ಲಿ ನಡೆದ ಪುರುಷರ ಡಬಲ್ಸ್ ವಿಭಾಗದ ಪಂದ್ಯದಲ್ಲಿ ಭಾರತದ ಅರ್ಶ್ ಮೊಹಮ್ಮದ್ ಮತ್ತು ಅಭಿನವ್ ಠಾಕೂರ್ 12–21, 17–21 ರಲ್ಲಿ ರಿಕಿ ಟಾಂಗ್– ಒಟ್ಟೊ ಕ್ವಿಂಗ್ ಜಾವೊ ಎದುರು ಸೋತರು.

ಎರಡನೇ ಪಂದ್ಯದಲ್ಲಿ ಕಣಕ್ಕಿಳಿದ ಉನ್ನತಿ, ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ 21–6, 21–9 ರಲ್ಲಿ ಸಿಡ್ನಿ ಗೋ ಅವರನ್ನು ಮಣಿಸಿ ಭಾರತಕ್ಕೆ 1–1 ರಲ್ಲಿ ಸಮಬಲ ತಂದಿತ್ತರು.

ಆದರೆ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಭರತ್ ರಾಘವ್ 19–21, 21–16, 15–21 ರಲ್ಲಿ ಜಾಕ್ ಯು ಎದುರು ಸೋತದ್ದರಿಂದ ಆಸ್ಟ್ರೇಲಿಯಾ 2–1 ರಲ್ಲಿ ಮುನ್ನಡೆ ಸಾಧಿಸಿತು.

ಮಹಿಳೆಯರ ಡಬಲ್ಸ್‌ನಲ್ಲಿ ಆಡಿದ ಇಶಾರಾಣಿ ಬರುವಾ ಮತ್ತು ದೇವಿಕಾ ಸಿಹಾಗ್ 21–8, 21–8 ರಲ್ಲಿ ಡೇನಿಯಾ ಎಂಗೊರೊ– ಕ್ಯಾಥರಿನಾ ಚಿಯಾ ಯು ತಾನ್ ಅವರನ್ನು ಮಣಿಸಿ ಪಂದ್ಯವನ್ನು ಮತ್ತೆ ಸಮಸ್ಥಿತಿಗೆ ತಂದರು. ಇದರಿಂದ ಫಲಿತಾಂಶ ನಿರ್ಣಯಿಸಲು ಮಿಶ್ರ ಡಬಲ್ಸ್ ಪಂದ್ಯ ನಿರ್ಣಾಯಕ ಎನಿಸಿತು.

ಭಾರತದ ಉನ್ನತಿ ಹೂಡಾ –ಸಂಗ್ರಹ ಚಿತ್ರ

ಭಾರತದ ವಿಘ್ನೇಶ್ ತತಿನೇನಿ ಮತ್ತು ಶ್ರೀನಿಧಿ ನಾರಾಯಣನ್ 21–12, 21–16 ರಲ್ಲಿ ಒಟ್ಟೊ ಕ್ವಿಂಗ್ ಜಾವೊ– ಯೂಲಿನ್ ಜಾಂಗ್ ಅವರನ್ನು ಮಣಿಸಿ ಗೆಲುವಿಗೆ ಕಾರಣರಾದರು.

ಮೊದಲ ಪಂದ್ಯದಲ್ಲಿ ಭಾರತ ಐಸ್‌ಲ್ಯಾಂಡ್ ತಂಡವನ್ನು 5–0 ರಲ್ಲಿ ಮಣಿಸಿತ್ತು.

ಟಿ20 ವಿಶ್ವಕಪ್: ಗೆಲುವಿನ ಹಾದಿಗೆ ಮರಳಿದ ಲಂಕಾ

ಗೀಲಾಂಗ್ (ಎಎಫ್‌ಪಿ): ಕಾರ್ತಿಕ್ ಮೇಯಪ್ಪನ್ ಅವರ 'ಹ್ಯಾಟ್ರಿಕ್' ಸಾಧನೆಯ ಹೊರತಾಗಿಯೂ ಶ್ರೀಲಂಕಾ ತಂಡ ಟಿ20 ವಿಶ್ವಕಪ್ ಟೂರ್ನಿಯ ಅರ್ಹತಾ ಸುತ್ತಿನಲ್ಲಿ ಯುಎಇ ವಿರುದ್ಧ 79 ರನ್‌ಗಳ ಗೆಲುವು ಪಡೆಯಿತು.

ಗೀಲಾಂಗ್‌ನಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಶ್ರೀಲಂಕಾ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 152 ರನ್ ಗಳಿಸಿತು. ಪಥುಮ್ ನಿಸಾಂಕ (74) ಅವರು ತಂಡಕ್ಕೆ ನೆರವಾದರು. ಯುಎಇ ತಂಡದ ಮೇಯಪ್ಪನ್ (19ಕ್ಕೆ 3) ಹ್ಯಾಟ್ರಿಕ್ ವಿಕೆಟ್ ಪಡೆದರು.

ಸಾಧಾರಣ ಗುರಿ ಬೆನ್ನಟ್ಟಿದ ಯುಎಇ ತಂಡ, ದುಷ್ಮಂತ ಚಮೀರ (15ಕ್ಕೆ 3) ಮತ್ತು ವಣಿಂದು ಹಸರಂಗ (8ಕ್ಕೆ 3) ಅವರ ಪ್ರಭಾವಿ ಬೌಲಿಂಗ್‌ಗೆ ನಲುಗಿ 17.1 ಓವರ್‌ಗಳಲ್ಲಿ 73 ರನ್‌ಗಳಿಗೆ ಆಲೌಟಾಯಿತು.

ದಿನದ ಇನ್ನೊಂದು ಪಂದ್ಯದಲ್ಲಿ ನೆದರ್ಲೆಂಡ್ಸ್ ಐದು ವಿಕೆಟ್‌ಗಳಿಂದ ನಮೀಬಿಯ ವಿರುದ್ಧ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ನಮೀಬಿಯ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 121 ರನ್ ಪೇರಿಸಿತು.

ನೆದರ್ಲೆಂಡ್ಸ್ 19.3 ಓವರ್‌ಗಳಲ್ಲಿ 5 ವಿಕೆಟ್‌ಗೆ 122 ರನ್ ಗಳಿಸಿ ಜಯಿಸಿತು. ಮ್ಯಾಕ್ಸ್ ಒಡೊವ್ಡ್ (35) ಮತ್ತು ವಿಕ್ರಮ್‌ಜೀತ್ ಸಿಂಗ್ (39) ಗೆಲುವಿಗೆ ಕಾರಣರಾದರು.

ಬುಧವಾರ ನಡೆಯುವ ಪಂದ್ಯಗಳಲ್ಲಿ ಐರ್ಲೆಂಡ್– ಸ್ಕಾಟ್ಲೆಂಡ್ ಮತ್ತು ವೆಸ್ಟ್ ಇಂಡೀಸ್– ಜಿಂಬಾಬ್ವೆ ತಂಡಗಳು ಎದುರಾಗಲಿವೆ. ಮೊದಲ ಪಂದ್ಯದಲ್ಲಿ ಸೋತಿದ್ದ ವಿಂಡೀಸ್‌ಗೆ ಪ್ರಧಾನ ಹಂತ ಪ್ರವೇಶಿಸಲು ಈ ಪಂದ್ಯದಲ್ಲಿ ಗೆಲುವು ಅನಿವಾರ್ಯ.

ಕಿತ್ತೂರು ಉತ್ಸವದಲ್ಲಿ ಪಾಯಿಂಟ್ ಕುಸ್ತಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಈ ಬಾರಿಯ ಕಿತ್ತೂರು ಉತ್ಸವದಲ್ಲಿ ಪಾಯಿಂಟ್ ಕುಸ್ತಿಗಳನ್ನು ನಡೆಸಲು ನಿರ್ಧರಿಸಲಾಗಿದೆ. ಈ ಕುಸ್ತಿಗಳು ಕೂಡ ಮಣ್ಣಿನ ಅಖಾಡದಲ್ಲೇ ನಡೆಯಲಿರುವುದು ವಿಶೇಷ. ಅಕ್ಟೋಬರ್ 24 ಹಾಗೂ 25ರಂದು ಪೈಲ್ವಾನರು ಪಟ್ಟು ಹಾಕಲಿದ್ದಾರೆ.

ಇದೇ ಮೊದಲ ಬಾರಿಗೆ ಉತ್ಸವ ರಾಜ್ಯಮಟ್ಟದಲ್ಲಿ ನಡೆಯಲಿದೆ. ಇದರ ಶೋಭೆ ಹೆಚ್ಚಿಸಲು ಜಿಲ್ಲಾಡಳಿತ ವಿನೂತನ ಪ್ರಯೋಗಗಳಿಗೆ ಕೈಹಾಕಿದೆ. ಅದರಲ್ಲಿ ಜಂಗೀ ನಿಕಾಲಿ ಕುಸ್ತಿಯ ಬದಲಾಗಿ, ಪಾಯಿಂಟ್ ಕುಸ್ತಿ ಆಡಿಸುವುದೂ ಒಂದು. ಆದರೆ, ಈ ನೆಲದ ಸಾಂಪ್ರದಾಯಿಕ ಕುಸ್ತಿ ಪದ್ಧತಿ ಉಳಿಯಬೇಕು ಎನ್ನುವ ಕಾರಣಕ್ಕೆ, ಮ್ಯಾಟ್ ಬಳಸುತ್ತಿಲ್ಲ.

ಜಂಗೀ ಕುಸ್ತಿಗಳಲ್ಲಿ ಬೆರಳೆಣಿಕೆಯಷ್ಟು ಪೈಲ್ವಾನರು ಮಾತ್ರ ಬರುತ್ತಾರೆ. ಹಲವು ಬಾರಿ ಯಾರೊಬ್ಬರೂ ಗೆಲ್ಲದೇ, ಬಹುಮಾನವನ್ನು ಹಂಚುವುದು ಅನಿವಾರ್ಯವಾಗುತ್ತದೆ. ಹಿಂದೆ ಕೆಲವು ಪೈಲ್ವಾನರು 'ಫಿಕ್ಸಿಂಗ್' ಮಾಡಿಕೊಂಡ ಬಗ್ಗೆ ದೂರುಗಳೂ ಬಂದಿವೆ. ಇದೆಲ್ಲ ಪರಿಗಣಿಸಿ ಪಾಯಿಂಟ್ ಕುಸ್ತಿ ಆಡಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಪ್ರತಿವರ್ಷ ಸುಮಾರು 40 ಜೋಡಿ ಕುಸ್ತಿ ನಡೆಯುತ್ತವೆ. ಪಾಯಿಂಟ್ ಕುಸ್ತಿಗೆ ದೇಶದ ವಿವಿಧೆಡೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪೈಲ್ವಾನರು ಬರುತ್ತಾರೆ.

ಹಳೇ ಪದ್ಧತಿಯೇ ಬೇಕು: 'ಜಂಗೀ ನಿಕಾಲಿ ಕುಸ್ತಿಗಳು ನಮ್ಮ ಗ್ರಾಮೀಣ ಪೈಲ್ವಾನರಿಗೆ ಅಚ್ಚುಮೆಚ್ಚು. ಉತ್ಸವದಲ್ಲಿ ಇದನ್ನೇ ಮುಂದುವರಿಸಬೇಕು. ಪಾಯಿಂಟ್ ಆಧರಿತ ಕುಸ್ತಿಗಳು ಬಹಳ ಜನರಿಗೆ ತಿಳಿದಿಲ್ಲ. ಅದಕ್ಕಾಗಿ ಸಾಕಷ್ಟು ವೇದಿಕೆಗಳಿವೆ. ಆದರೆ, ಜಂಗೀ ನಿಕಾಲಿಗೆ ಇರುವುದು ನಾಡಹಬ್ಬಗಳು ಮಾತ್ರ' ಎನ್ನುವುದು ಕರ್ನಾಟಕ ರಾಜ್ಯ ಭಾರತೀಯ ಶೈಲಿ ಕುಸ್ತಿ ಸಂಘಟನೆ ಅಧ್ಯಕ್ಷ ರತನಕುಮಾರ್ ಮಠಪತಿ ಅವರ ಆಗ್ರಹ.

ಮಹಿಳೆಯರ ವಿಭಾಗದಲ್ಲಿ ಅಲೆಕ್ಸಿಯಾಗೆ ಒಲಿದ ಗೌರವ

ಬೆಂಜೆಮಾಗೆ 'ಬ್ಯಾಲನ್ ಡಿ ಓರ್' ಪ್ರಶಸ್ತಿ

ಪ್ಯಾರಿಸ್ (ಎಎಫ್‌ಪಿ): ಫ್ರಾನ್ಸ್‌ನ ಕರೀಂ ಬೆಂಜೆಮಾ ಅವರು ವಿಶ್ವದ ಶ್ರೇಷ್ಠ ಫುಟ್‌ಬಾಲ್ ಆಟಗಾರನಿಗೆ ನೀಡುವ ಪ್ರತಿಷ್ಠಿತ ಬ್ಯಾಲನ್ ಡಿಓರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಸ್ಪೇನ್‌ನ ಅಲೆಕ್ಸಿಯಾ ಪ್ಯುಟೆಯಾಸ್ ಸತತ ಎರಡನೇ ಬಾರಿ ಈ ಗೌರವ ಪಡೆದುಕೊಂಡರು. ಸೋಮವಾರ ರಾತ್ರಿ ಪ್ಯಾರಿಸ್‌ನಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜಿನೆಡಿನ್ ಜಿಡಾನ್ ಬಳಿಕ ಈ ಪ್ರಶಸ್ತಿ ಪಡೆದ ಫ್ರಾನ್ಸ್‌ನ ಮೊದಲ ಆಟಗಾರ ಎಂಬ ಗೌರವ ಬೆಂಜೆಮಾಗೆ ದೊರೆತಿದೆ. ಜಿಡಾನ್ ಅವರಿಗೆ 1998 ರಲ್ಲಿ ಬ್ಯಾಲನ್ ಡಿಓರ್ ಗೌರವ ಲಭಿಸಿತ್ತು.

ರಿಯಲ್ ಮ್ಯಾಡ್ರಿಡ್ ಕ್ಲಬ್ ಪರ ಕಳೆದ ಋತುವಿನಲ್ಲಿ ತೋರಿದ ಉತ್ತಮ ಪ್ರದರ್ಶನವು ಬೆಂಜೆಮಾ ಅವರಿಗೆ ಈ ಪ್ರಶಸ್ತಿ ದಕ್ಕುವಂತೆ ಮಾಡಿದೆ.

ಕರೀಂ ಬೆಂಜೆಮಾ (ಎಡ) ಮತ್ತು ಅಲೆಕ್ಸಿಯಾ ಪ್ಯುಟೆಯಾಸ್ –ಎಎಫ್‌ಪಿ ಚಿತ್ರಗಳು

ಕಳೆದ ಋತುವಿನಲ್ಲಿ ಅವರು 46 ಪಂದ್ಯಗಳಲ್ಲಿ 44 ಗೋಲುಗಳನ್ನು ಗಳಿಸಿದ್ದರು. ರಿಯಲ್ ಮ್ಯಾಡ್ರಿಡ್ ಕ್ಲಬ್, ಚಾಂಪಿಯನ್ಸ್ ಲೀಗ್ ಮತ್ತು ಲಾ ಲಿಗಾ ಟ್ರೋಫಿ ಗೆಲ್ಲುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು.

'ಬ್ಯಾಲನ್ ಡಿಓರ್ ವೈಯಕ್ತಿಕ ಗೌರವ ಆಗಿರಬಹುದು. ಆದರೆ ಇದು ಎಲ್ಲ ಜನರಿಗೆ ದೊರೆತ ಗೌರವ' ಎಂದು ಪ್ರತಿಕ್ರಿಯಿಸಿರುವ 34 ವರ್ಷದ ಬೆಂಜೆಮಾ, ಪ್ರಶಸ್ತಿಯನ್ನು ತಮ್ಮ ಅಭಿಮಾನಿಗಳಿಗೆ ಅರ್ಪಿಸಿದ್ದಾರೆ.

'ಒಂದಲ್ಲಾ ಒಂದು ದಿನ ಈ ಟ್ರೋಫಿ ಗೆಲ್ಲಬೇಕು ಎಂದು ಹಂಬಲಿಸುತ್ತಾ ಇದ್ದೆ' ಎಂದು ಸಂತಸ ಹಂಚಿಕೊಂಡರು.

ಸೆನೆಗಲ್‌ನ ಸಾದಿಯೊ ಮಾನೆ ಮತ್ತು ಬೆಲ್ಜಿಯಂನ ಕೆವಿನ್ ಡಿ ಬ್ರುಯ್ನ್ ಅವರನ್ನು ಹಿಂದಿಕ್ಕಿ ಅವರು ಈ ಗೌರವ ಪಡೆದರು. 2021ರಲ್ಲಿ ಈ ಗೌರವ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಪಾಲಾಗಿತ್ತು. ಮೆಸ್ಸಿ ದಾಖಲೆಯ ಏಳು ಬಾರಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಬಾರ್ಸಿಲೋನಾ ಕ್ಲಬ್‌ಗೆ ಆಡುವ ಅಲೆಕ್ಸಿಯಾ ಅವರಿಗೆ ಸತತ ಎರಡನೇ ಬಾರಿ ಈ ಪ್ರಶಸ್ತಿ ದೊರೆತಿದೆ. ಮಹಿಳೆಯರ ಚಾಂಪಿಯನ್ಸ್ ಲೀಗ್‌ನಲ್ಲಿ ಕಳೆದ ಋತುವಿನಲ್ಲಿ ಅವರು ಅತ್ಯಧಿಕ ಗೋಲು ಗಳಿಸಿದ್ದರು.

ಪುರುಷರ ವಿಭಾಗದಲ್ಲಿ 1956 ರಿಂದ ಹಾಗೂ ಮಹಿಳೆಯರ ವಿಭಾಗದಲ್ಲಿ 2018 ರಿಂದ 'ಬ್ಯಾಲನ್ ಡಿಓರ್' ಪ್ರಶಸ್ತಿ ನೀಡಲಾಗುತ್ತಿದೆ.

ಹಿಜಾಬ್ ಧರಿಸದ ಕ್ರೀಡಾಪಟುವಿಗೆ ಬಂಧನ ಭೀತಿ

ಸೋಲ್ (ಎಪಿ): ದಕ್ಷಿಣ ಕೊರಿಯಾದ ರಾಜಧಾನಿ ಸೋಲ್‌ನಲ್ಲಿ ನಡೆದ ಗೋಡೆ ಏರುವ ಸ್ಪರ್ಧೆಯಲ್ಲಿ ಹಿಜಾಬ್ ಧರಿಸದೆ ಪಾಲ್ಗೊಂಡ ಇರಾನ್‌ನ ಅಥ್ಲೀಟ್ ಎಲೆನಾಜ್ ರೆಕಬಿ ಅವರು ಟೆಹರಾನ್‌ನತ್ತ ಹೊರಟಿದ್ದು, ಇರಾನ್‌ನಲ್ಲಿ ಅವರ ಬಂಧನ ಆಗುವ ಸಾಧ್ಯತೆ ಇದೆ ಎಂದು ಕೆಲವು ಮಾಧ್ಯಮಗಳು ಆತಂಕ ವ್ಯಕ್ತಪಡಿಸಿವೆ.

ಇರಾನ್ ಇಂತಹ ವರದಿಗಳಿಗೆ ಕ್ಷಿಪ್ರವಾಗಿ ಪ್ರತಿಕ್ರಿಯಿಸಿದ್ದು, ರೆಕಬಿ ಕುರಿತು ಸುಳ್ಳು ಸುದ್ದಿಗಳು ಹರಡುಲಾಗುತ್ತಿದೆ ಎಂದು ಹೇಳಿದೆ. ಸೋಲ್‌ನಲ್ಲಿರುವ ಇರಾನ್ ರಾಯಭಾರ ಕಚೇರಿ ಈ ಪ್ರತಿಕ್ರಿಯೆ ನೀಡುವ ವೇಳೆ ಈ ಹಿಂದೆ ಹಿಜಾಬ್ ಧರಿಸಿ ರೆಕಬಿ ಅವರು ಸ್ಪರ್ಧೆಯಲ್ಲಿ ಪಾಲ್ಗೊಂಡ ಫೋಟೊವನ್ನು ಮಾತ್ರ ಲಗತ್ತಿಸಿದೆ. ಐಎಫ್‌ಎಸ್‌ಸಿ ಈ ಸ್ಪರ್ಧೆಯನ್ನು ಹಮ್ಮಿಕೊಂಡಿತ್ತು.

ಚೆಸ್: ಕ್ವಾರ್ಟರ್‌ಗೆ ಗುಕೇಶ್, ಅರ್ಜುನ್

ಚೆನ್ನೈ (ಪಿಟಿಐ): ಭಾರತದ ಡಿ.ಗುಕೇಶ್, ಅರ್ಜುನ್ ಎರಿಗೈಸಿ ಮತ್ತು ವಿದಿತ್ ಸಂತೋಷ್ ಗುಜರಾತಿ ಅವರು ಆನ್‌ಲೈನ್ ಮೂಲಕ ನಡೆಯುತ್ತಿರುವ ಏಮ್‌ಚೆಸ್ ರ‍್ಯಾಪಿಡ್ ಚೆಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್‌ಗೆ ಆಘಾತ ನೀಡಿದ್ದ ಗುಕೇಶ್ ಮತ್ತು ಅರ್ಜುನ್ ಅವರು ಪ್ರಿಲಿಮಿನರಿ ಹಂತದಲ್ಲಿ ಕ್ರಮವಾಗಿ ಎರಡು ಹಾಗೂ ನಾಲ್ಕನೇ ಸ್ಥಾನ ಗಳಿಸಿದರು. ವಿದಿತ್ ಗುಜರಾತಿ ಎಂಟನೇ ಸ್ಥಾನ ಪಡೆದರು.

ನಾಕೌಟ್ ಹಂತದಲ್ಲಿ ಅರ್ಜುನ್ ಅವರು ಕಾರ್ಲ್‌ಸನ್ ಜತೆ ಪೈಪೋಟಿ ನಡೆಸಲಿದ್ದಾರೆ. ಗುಕೇಶ್ ಅವರು ಹಂಗರಿಯ ರಿಚರ್ಡ್ ರಾಪೋರ್ಟ್ ಎದುರು ಹಾಗೂ ವಿದಿತ್, ಪೋಲೆಂಡ್‌ನ ಜಾನ್ ಕ್ರಿಸ್ಟಾಫ್ ದುಡಾ ವಿರುದ್ಧ ಸೆಣಸಾಡಲಿದ್ದಾರೆ.

ಪ್ರಿಲಿಮಿನರಿ ಹಂತದಲ್ಲಿ ದುಡಾ ಅವರು 28 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದರು. ಗುಕೇಶ್, ಶಕ್ರಿಯಾರ್ ಮಮೆದ್ಯರೊವ್ ಮತ್ತು ಅರ್ಜುನ್ ತಲಾ 27 ಪಾಯಿಂಟ್ಸ್ ಸಂಗ್ರಹಿಸಿದರು. 26 ಪಾಯಿಂಟ್ಸ್ ಪಡೆದ ಕಾರ್ಲ್‌ಸನ್ ಐದನೇ ಸ್ಥಾನ ತಮ್ಮದಾಗಿಸಿಕೊಂಡರು.

ಮಂಗಳವಾರ ನಡೆದ ಕೊನೆಯ ಸುತ್ತಿನಲ್ಲಿ ಭಾರತದ ಮೂವರೂ ಗೆಲುವು ಪಡೆದರು. ಗುಕೇಶ್ ಅವರು ರಾಪೋರ್ಟ್ ವಿರುದ್ಧ ಗೆದ್ದರೆ, ಅರ್ಜುನ್, ನೆದರ್ಲೆಂಡ್ಸ್‌ನ ಅನೀಶ್ ಗಿರಿ ಎದುರು ಜಯಿಸಿದರು. ವಿದಿತ್, ಸ್ಪೇನ್‌ನ ಡೇವಿಡ್ ಆ್ಯಂಟನ್ ಗ್ಯುಜಾರೊ ಅವರನ್ನು ಮಣಿಸಿದರು. ಕೊನೆಯ ಮೂರು ಸುತ್ತುಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದರಿಂದ ವಿದಿತ್ ನಾಕೌಟ್ ಹಂತ ಪ್ರವೇಶಿಸಿದ್ದಾರೆ.

ಕಣದಲ್ಲಿದ್ದ ಭಾರತದ ಇತರ ಇಬ್ಬರು ಸ್ಪರ್ಧಿಗಳಾದ ಪಿ.ಹರಿಕೃಷ್ಣ ಮತ್ತು ಆದಿತ್ಯ ಮಿತ್ತಲ್ ಅವರು ಪ್ರಿಲಿಮಿನರಿ ಹಂತದಲ್ಲಿ ಕ್ರಮವಾಗಿ 13 ಹಾಗೂ 15ನೇ ಸ್ಥಾನ ಪಡೆದು ನಾಕೌಟ್ ಹಂತ ಪ್ರವೇಶಿಸಲು ವಿಫಲರಾದರು.

ಭಾರತದ ಸ್ಪರ್ಧಿ ಅನರ್ಹ

ಚೆನ್ನೈ: ಇಟಲಿಯಲ್ಲಿ ನಡೆಯುತ್ತಿರುವ ವಿಶ್ವ ಜೂನಿಯರ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿರುವ ಭಾರತದ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಪ್ರಿಯಾಂಕಾ ನೂಟಕ್ಕಿ ಅವರನ್ನು ಫಿಡೆ ಅನರ್ಹಗೊಳಿಸಿದೆ.

20 ವರ್ಷದ ಪ್ರಿಯಾಂಕಾ ಅವರು ಧರಿಸಿದ್ದ ಜಾಕೆಟ್‌ನ ಜೇಬಲ್ಲಿ ಇಯರ್ ಬಡ್‌ಗಳು ಸಿಕ್ಕಿದ ಕಾರಣ ಅವರ ಮೇಲೆ ಕ್ರಮಕೈಗೊಳ್ಳಲಾಗಿದೆ ಎಂದು ಫಿಡೆ ಹೇಳಿದೆ.

‘ಪ್ರಿಯಾಂಕಾ ಮೋಸದಾಟದಲ್ಲಿ ಪಾಲ್ಗೊಂಡಿಲ್ಲ. ಆಟದ ತಾಣಕ್ಕೆ ಇಯರ್ ಬಡ್ಸ್ ತರುವುದಕ್ಕೆ ನಿರ್ಬಂಧವಿರುವುದರಿಂದ ಅವರು ಆಟದ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಆದ್ದರಿಂದ ಟೂರ್ನಿಯಿಂದ ಅವರನ್ನು ಹೊರಹಾಕಲಾಗಿದೆ’ ಎಂದಿದೆ.

ಬ್ಯಾಸ್ಕೆಟ್‌ಬಾಲ್: ವಿಶ್ವಕಪ್‌ಗೆ ಭಾರತ ಅರ್ಹತೆ

ಬೆಂಗಳೂರು: ಭಾರತ 3X3 ಬ್ಯಾಸ್ಕೆಟ್‌ಬಾಲ್ ತಂಡ 2023ರಲ್ಲಿ ನಡೆಯಲಿರುವ ಫಿಫಾ 18 ವರ್ಷದೊಳಗಿನವರ 3X3 ವಿಶ್ವಕಪ್‌ಗೆ ಅರ್ಹತೆ ಪಡೆದುಕೊಂಡಿತು.

ಕ್ವಾಲಾಲಂಪುರದಲ್ಲಿ ನಡೆದ ಫಿಬಾ 17 ವರ್ಷದೊಳಗಿನ ಏಷ್ಯಾಕಪ್‌ನಲ್ಲಿ ಎರಡನೇ ಸ್ಥಾನ ಪಡೆದು ಈ ಸಾಧನೆ ಮಾಡಿದೆ. ಭಾರತ ತಂಡ 3X3 ಬ್ಯಾಸ್ಕೆಟ್‌ಬಾಲ್ ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆದುಕೊಂಡದ್ದು ಇದೇ ಮೊದಲು.

ಏಷ್ಯಾ ಕಪ್ ಫೈನಲ್‌ನಲ್ಲಿ ಭಾರತ 17–21 ರಲ್ಲಿ ಜಪಾನ್ ತಂಡದ ಎದುರು ಪರಾಭವಗೊಂಡಿತು. ಇದಕ್ಕೂ ಮುನ್ನ ನಡೆದಿದ್ದ ಸೆಮಿಫೈನಲ್‌ನಲ್ಲಿ ಭಾರತ 21–20 ರಲ್ಲಿ ಪ್ರಬಲ ಚೀನಾ ತೈಪೆ ತಂಡವನ್ನು ಮಣಿಸಿತ್ತು.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; Website: www.honda2wheelersindia.com; Customer Care: customercare@honda2wheelersindia.com

#ಪ್ರಸ್ತಾಪಿಸಿದ ಕ್ಯಾಶ್‌ಬ್ಯಾಕ್ ರೂ. 30000 ವಹಿವಾಟಿನ ಮೇಲೆ ರೂ. 5000 ವರೆಗೆ 5% ಕ್ಯಾಶ್‌ಬ್ಯಾಕ್ ಆಗಿದ್ದು (ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗೆ ರೂ. 40000) ಕೊಡುಗೆ ಅವಧಿಯಲ್ಲಿ ಒಮ್ಮೆ ಪ್ರತಿ ಕಾರ್ಡ್‌ಗೆ ಕಾರ್ಡ್ ವಿತರಕರು/ಬ್ಯಾಂಕ್‌ಗಳ ನೀತಿ ಪ್ರಕಾರ ಆಯ್ದ ಕ್ರೆಡಿಟ್ ಕಾರ್ಡ್‌ಗಳ ಮೂಲಕ EMI ವಹಿವಾಟಿನ ಮೇಲೆ ಮಾತ್ರ ಅನ್ವಯಿಸುತ್ತದೆ. ಕೊಡುಗೆ ಅವಧಿಯು 1 ಜುಲೈ 2022ರಿಂದ 31 ಅಕ್ಟೋಬರ್ 2022ರ ವರೆಗೆ ಮಾತ್ರ ಇರುತ್ತದೆ. *ಹಣಕಾಸು ಸ್ಕೀಮ್‌ಗಳು ಆಯ್ದ ಮಾಡೆಲ್‌ಗಳ ಮೇಲೆ ಆಯ್ದ ಗ್ರಾಹಕರ ಪ್ರೊಫೈಲ್‌ಗಳಿಗೆ ಆಯ್ದ ಹಣಕಾಸು ಪಾಲುದಾರರ ಮೂಲಕ ಅವರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟು ಅನ್ವಯಿಸುತ್ತದೆ ಮತ್ತು ನಿಜವಾದ ಡೌನ್ ಪೇಮೆಂಟ್ ಹಣಕಾಸು ಕಂಪನಿ ನೀತಿಗೆ ಬದಲಾಗಬಹುದು. ಹಣಕಾಸು ಸ್ಕೀಮ್‌ಗಳು 31 ಅಕ್ಟೋಬರ್ 2022 ರ ವರೆಗೆ ಆಯ್ದ ಡೀಲರ್‌ಶಿಪ್‌ಗಳಲ್ಲಿ ಮಾತ್ರ ಲಭ್ಯವಿದೆ ಮತ್ತು ಯಾವುದೇ ಪೂರ್ವ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಹಿಂಪಡೆಯಬಹುದಾಗಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಉತ್ಪನ್ನದಲ್ಲಿ ಕಾಣಿಸುವ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ.

Honda Exclusive Authorised Dealerships: Ananda Honda - BOMMANAHALLI: 9738074162; HEBBAGODI: 9738074162; SARJAPUR RD: 9738074162; JIGANI: 9738066600; HOSA ROAD: 9738066600; Anekal Honda - ANEKAL: 080-27830234, 9880417779; City Honda - ST. JOHNS ROAD: 08025139199, 9480812350; H.R.B.R: 41614777, 9845941305; FRAZER TOWN: 9480812353; LALBAGH: 9480812397; Haiku Honda - DOMLUR: 49656565, 9342432156; INDIRANAGAR: 9343796289, 080 - 41133737; Dhruvdesh Honda - MEKHRI CIRCLE: 40500700, 9972237311; THANISANDRA (NAGAWARA): 7353030333; YELAHANKA: 40551122, 9343968407; VIDYARANYAPURA: 8150866333, 8152866333; Planet Honda - RAJAJINAGAR: 08068898888, 9980927735; PEENYA: 08068898888, 9980927730; SUNKADAKATTE: 08068898888, 9980927728; BASAWESHWAR NAGAR: 08068898888, 9980927726; Raja Honda - KORAMANGALA: 08067329000,9035310055; Prime Honda - VIJAYNAGAR: : 080 - 23010300, 8050503111; NAGARBHAVI: 080-23010700, 8095778000; KAMAKSHIPALYA: 080-23019700, 7829900444; Silicon Honda - RV ROAD: 26574467/68, 9844502222; BANSHANKARI: 9844502444, 8722279009; R.R. NAGAR: 9964388333, 9071174800; MONOTYPE: 7353744400, JAYANAGAR: 8722801626; Saphire Honda - JP NAGAR: 7026000002; BG ROAD: 8553004004; KKP ROAD: 8553004002; PUTTENHALLI: 7353251007; GOTTIGERE: 8553004009; BTM: 7353252007; VFM Honda - KR PURAM: 49499299, 9071858885, 9071858881; HENNUR ROAD: 9108989817, 9108989818; Tansi Honda - HOODI: 080-45510000, 7259030091; MARTHAHALLI: 080-67166600, 7259030093; VARTHUR RD: 8105597877, 9686573013; GUNJUR: 9606450642, 9606450641; Turbo Honda - DODDABALLAPURA: 7022620885; NELAMANAGALA: 080-27722333, 7022008894; Wings Honda - HOSKOTE: 7676907272; MALUR: 7676155600; TC PALYA: 9590815959; Sri Kausthub Honda - KOLAR: 9900018515, 9900018516;; KGF: 08153-266606, 9900092115; MULBAGAL: 9008941044; SRINIVASAPUR: 8495956515; Namma Honda - CHIKKABALLAPUR: 9606060610, 9900071211; CHINTAMANI: 9606060620, 9606060690; BAGEPALLI: 9611596112, 9611596110; Shankar Honda - GOWRIBIDANUR: 9900007422/33; SLN Honda - SHIDLAGATTA: 9986160961; Century Honda - TUMKUR: 08162261939, 9620263388; SIRA: 9620267057, 9538392767; GUBBI: 9620267051; Shantinath Honda - TUMKUR: 08162279969, 9449334359; KUNIGAL: 7022276603; KUNIGAL ROAD: 9844351599, 9844351399; KORATAGERE: 9606955149; Honey Honda - PAVAGADA: 9535941215; Annapoorna Honda - MADHUGIRI: 9886627429; Vignesh Honda - TIPTUR: 9886711161; TURUVEKERE: 9448214014; Sri Srinivasa Honda - CHIKKANAYAKANAHALLI: 8722522221; Prestige Honda - RAMNAGARA: 9606490030; KANAKAPURA: 9606036053; ART Honda - BIDADI: 9945966771, 9164871007; Springs Honda - KENGERI: 9513771114; Nideesh Honda - DEVANAHALLI: 9108871999, 9686608579; VIJAYAPURA: 9108871999, 9731414444.
For Bulk/Institutional enquiries, please write us at: institutionalsales@honda2wheelersindia.com